duplicate

S. M. Bhoi
B. A. III

BL-C-22

ಸಟೀಕ

# ಶೂನ್ಯ ಸಂಪಾದನೆ.

೩ ನೇ ೧೦ ನೇ ಉಪದೇಶಗಳು

ಲಿಂಗಾಯತ ಸಂಶೋಧನ ಕೇಂದ್ರ
ಒಳವೇ ಗುರು
ಕ್ರಮಾಂಕ
ಶಿವಬಸವ ನಗರ
ಬೆಳಗಾವಿ

೧೯೩೬

841
1577

ಕಿಂ. ರೂ. ೪ ಆ.

ಫ. ಗು. ಹಳಕಟ್ಟಿ,
ಸಂಪಾದಕ

ಸಟೀಕ

# ಶೂನ್ಯ ಸಂಪಾದನೆ.

೯ ನೇ ೧೦ ನೇ ಉಪದೇಶಗಳು

ಕ್ರಮಾಂಕ
ಶಿವಬಸವ ನಗರ
ಬೆಳಗಾವಿ
೧೯೫೬
841
1577

ಫ. ಗು. ಹಳಕಟ್ಟಿ,
ಸಂಪಾದಕ

... ೪ ಆ.

ಇದರಲ್ಲಿ

ತಿರುಮಲಾಂಬಾದೇವಿಯವರ ರಗಳೆ ಮಾತ್ರ ಅಡಕವಾಗಿವೆ.

Page 1 – 8

ಶ್ರೀ ಶಿವಬಸವ ಸ್ವಾಮಿಗಳು ರುದ್ರಾಕ್ಷಿಮಠ
ನಾಗನೂರ ತಾ. ಬೈಲಹೊಂಗಲ

S M Bhoj

1577

ನಾಗನೂರ ಶ್ರೀ ಶಿವಬಸವ ಸ್ವಾಮಿಗಳು ಎಜ್ಯುಕೇಶನಲ್
ಟ್ರಸ್ಟ, ವಾರದ ಗಲ್ಲಿ ಬೆಳಗಾಂವ ಇವರ ಟ್ರಸ್ಟಿ

ಸಟೀಕ

# ಶೂನ್ಯ ಸಂಪಾದನೆ

( ೩ನೇ ೧೦ನೇ ಉಪದೇಶಗಳು )

---

ಸಂಪಾದಕರು
ರಾ॥ ಬ॥ ಫ. ಗು. ಹಳಕಟ್ಟಿ,
ಬಿ. ಎ. ಎಲ್. ಎಲ್ ಬಿ.
ವಿಜಾಪುರ

ಲಿಂಗಾಯತ ಸಂಶೋಧನ ಕೇಂದ್ರ ಗ್ರಂಥಾಲಯ
ಅರಿವೇ ಗುರು
ಕ್ರಮಾಂಕ

೧೯೫೬

ಮುದ್ರಕರು
ಫ. ಗು. ಹಳಕಟ್ಟಿ,
ಹಿತಚಿಂತಕ ಪ್ರಿಂಟಿಂಗ ಪ್ರೆಸ್,
ವಿಜಾಪುರ

811
1574

ಫ. ಗು. ಹಳಕಟ್ಟಿ,
ಸಂಪಾದಕರು.

1577

1577

ಪ್ರಕಟನೆಯು ಸ್ಥಳ
ವಿಜಾಪುರ.
ಉಪಲೀಬುರುಜ ಹತ್ತಿರ ಇರುವ
ಹಿತಚಿಂತಕ ಪ್ರಿಂಟಿಂಗ ಪ್ರೆಸ್,

# ಪ್ರಸ್ತಾವನೆ

ಶೂನ್ಯ-ಸಂಪಾದನೆ ಈ ಗ್ರಂಥವು ಕನ್ನಡದಲ್ಲಿ ಬಹು ಮಹತ್ವವಾದದ್ದು ಇದೆ. ಅದರಲ್ಲಿಯ ೩ ನೇ ಮತ್ತು ೧೦ ನೇ ಉಪದೇಶಗಳನ್ನು ನಾವು ಇಲ್ಲಿ ಪ್ರಸಿದ್ಧಿಸಿದ್ದೇವೆ.

ವಿಜಾಪುರ
೧೫—೬—೫೬

ಫ. ಗು. ಹಳಕಟ್ಟಿ
ಬಿ. ಎ., ಎಲ್. ಎಲ್. ಬಿ.
ಸಂಪಾದಕ

ಈ ಗ್ರಂಥದ ಸ್ವಾಮಿತ್ವವನ್ನು ಇದರ ಸಂಪಾದಕರು ತಮ್ಮ ಕಡೆಗೆ ಕಾಯ್ದಿರಿಸಿ ಕೊಂಡಿದ್ದಾರೆ.

ತಾ॥ ೧೫-೬-೫೬

ಫ. ಗು. ಹಳಕಟ್ಟಿ,
ಸಂಪಾದಕ.

# ಅನುಕ್ರಮಣಿಕೆ.


(೧) ತೃತೀಯೋಪದೇಶ— — ೧—೬೨

(೨) ದಶಮೋಪದೇಶ— — ೧—೬೭



ಸಂಶೋಧನ ಕೇಂದ್ರ ಗ್ರಂಥಾಲಯ

ಕ್ರಮಾಂಕ

# ಸಟೀಕ ಶೂನ್ಯ ಸಂಪಾದನೆ.

## ಸಿದ್ಧರಾಮಯ್ಯ ದೇವರ ಸಂಪಾದನೆ.

( ತೃತೀಯೋಪದೇಶ. )

|| ಕಂದ || ಗುಡಿ ಗೋಪುರ ಕೆರೆಯಾರವೆ । ಗಡಣಗಳಂ ಬಿಡಿಸಿ ಯಲ್ಲಮ ಪ್ರಭುರಾಯನು ॥ ಮೃಡ ಸಿದ್ಧರಾಮಗೊಲವಿಂ । ಸಡಗರದಿ ನಿಜ ವನಿತ್ತುದೆಂತೆನೆ ಪೇಳ್ವೆಂ ॥೧॥

ಅದೆಂತೆಂದೊಡಾ ಪ್ರಭುದೇವರು ಮುಕ್ತಾಯಕ್ಕಗಳ ಪ್ರಲಾಪಮಂ ನಿಲಿಸಿ. ಮಹಾನುಭಾವಮಂ ಬೋಧಿಸಿ, ಅಜಗಣ್ಣದೇವರ ನಿಲವನು ಆಕೆಯ ಸರ್ವಾಂಗದೊಳು ಪ್ರತಿಷ್ಠಿಸಿ, ತೋರಿ, ನಿರವಯಲ ಸಮಾಧಿಯೊಳು ನಿಲಿಸಿ, ಅಲ್ಲಿಂ ಸೊನ್ನಲಿಗೆಯ ಪುರಕ್ಕೆ ಅಭಿಮುಖವಾಗಿ ಬರುತಿರಲತ್ತ ಕೈಲಾಸದಲ್ಲಿ ಪರಮೇಶ್ವರನ ಶುದ್ಧ ಸಾತ್ವಿಕವೇ ಜಗಹಿತಾರ್ಥವಾಗಿ ಬರುತ್ತ, ಮರ್ತ್ಯಕ್ಕೆ ಅವತರಿಸಿ, ಸಿದ್ಧರಾಮೇಶ್ವರನೆಂಬಭಿಧಾನದಿಂದೆ ಕೆರೆ ಅರವಟಿಗೆ ಗುಡಿ ಗೋಪುರಂಗಳಂ ರಚಿಸುತ್ತಿರಲು, ಅಲ್ಲಿಗೆ ಪ್ರಭುದೇವರು ಬಂದು ಆ ಪುರದ ಜನ ಪದದ ನೆರವಿಯಂ ಕಂಡು, ವಿಡಂಬಿಸುವ ಪ್ರಸ್ತಾವದ ವಚನ.

ಧರೆಯ ಮೇಲೊಂದು ಪಿರಿದಪ್ಪ ಸಂತೆಯು ನೆರವಿಗೆ ಬಂದವರ ನೇನೆಂಬೆನು? ಪರಿಪರಿಯ ಭಂಡದ ವ್ಯವಹಾರದೊಳಗೆ ಕೊಡಲಿಲ್ಲ ಕೊಳಲಿಲ್ಲ. ವೃಥಾ ವಿಲಾಸವಿದೇನೋ? ಅರಿ ಮರುಳೆಂಬ ಶಿವನು ನೆರೆ ಮರುಳೆಂಬ ಜಗವ ಹುಟ್ಟಿಸಿದ ಪರಿಯ ಕಂಡು ಬೆರಗಾದೆ ಗುಹೇಶ್ವರಾ. ॥೧॥

ಮತ್ತಂ, ಸಾಗರದೊಳಗಿಪ್ಪ ಪ್ರಾಣಿಗಳು ಮತ್ತೊಂದೆಡೆಯಲ್ಲಿ ಇರಬಲ್ಲವೇ? ಭವಸಾಗರದೊಳಗಿಪ್ಪ ಜೀವಿಗಳಿಗೆ ಅದೇ ಗತಿಯಲ್ಲದೆ, ಬೇರೆ ಮತ್ತೊಂದೆಡೆಯುಂಟೆ? ಗುಹೇಶ್ವರನ ಲೀಲೆ ಜಗನ್ಮಯವಾದಡೆ ನಾನು ಬೆರಗಾದೆನು. ॥೨॥

ಇಂತು ಪುರಜನಂಗಳಂ ನೋಡಿ ವಿಡಂಬಿಸುತ್ತ ಬರಲು, ಮುಂದೆ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶಿವಾಲಯಗಳಂ ಮಾಡುತಿಪ್ಪರಂ ಕಂಡು, ವಿಡಂಬಿಸುವ ಪ್ರಸ್ತಾವದ ವಚನ.

ಕಲ್ಲ ದೇವರ ಮಾಡಿ, ಕಲ್ಲ ಮನೆಯ ಮಾಡಿ, ಆ ಕಲ್ಲು ಕಲ್ಲ ಮೇಲೆ ಕೆಡೆದರೆ, ದೇವರೆತ್ತ ಹೋದರೋ? ಲಿಂಗ ಪ್ರತಿಷ್ಠೆಯ ಮಾಡುವ ವರಿಗೆ ನಾಯಕ ನರಕ ತಪ್ಪದು ಗುಹೇಶ್ವರಾ ॥೩॥

ಮತ್ತಂ, ದೇಹವೇ ದೇಗುಲವಾಗಿರಲು, ಬೇರೆ ಮತ್ತೆ ದೇಗುಲವೇಕಯ್ಯ? ಪ್ರಾಣವೇ ಲಿಂಗವಾಗಿರಲು, ಬೇರೆ ಮತ್ತೆ ಲಿಂಗವೇಕಯ್ಯ? ಹೇಳಲಿಲ್ಲ ಕೇಳಲಿಲ್ಲ. ಗುಹೇಶ್ವರ ನೀನು ಕಲ್ಲಾದರೆ ನಾನೇನಪ್ಪೆನಯ್ಯ? ॥೪॥

ಇಂತು ಶಿವಾಲಯ ಪ್ರತಿಷ್ಠೆಯಂ ನೋಡಿ ಹಾಸ್ಯಮಂ ಮಾಡುತ್ತ ಬರಲು ಮುಂದೆ ಕೆರೆಯ ಕಟ್ಟಿಸುವವರ ಕಂಡು ವಿಡಂಬಿಸುವ ಪ್ರಸ್ತಾವದ ವಚನ.

ಅನ್ನವನಿಕ್ಕಿ ನನ್ನಿಯ ನುಡಿದು, ಅರವಟಿಗೆಯನಿಕ್ಕಿ ಕೆರೆಯ ಕಟ್ಟಿಸಿ ದರೆ, ಮರಣದಿಂದ ಮೇಲೆ ಸ್ವರ್ಗ ಉಂಟಲ್ಲದೆ, ಶಿವನ ನಿಜವು ಸಾಧ್ಯವಾ ಗದು. ಗುಹೇಶ್ವರನ ಅರಿದ ಶರಣಂಗೆ ಆವ ಫಲವು ಇಲ್ಲ. ॥೫॥

ಸಿದ್ಧರಾಮಯ್ಯ ದೇವರು ಕೆರೆಯ ಕಟ್ಟಿಸುವದನು ವಿಡಂಬಿಸಿ ನಾನೊಂದು ಕೆರೆಯ ಕಟ್ಟಿಸಿದೆನೆಂದು ಪರಮಾರ್ಥ ಸೂಚಕವಾಗಿ ನಿರೂಪಿಸಿದ ಪ್ರಸ್ತಾ ವದ ವಚನ.

ತನುವೆಂಬ ಏರಿಗೆ ಮನವೆಂಬ ಕಟ್ಟೆ, ಆಚಾರವೆಂಬ ಸೋಪಾನ, ಪರಮಾನಂದವೆಂಬ ಜಲವ ತುಂಬಿ, ಕೆರೆಯ ಕಟ್ಟಬಲ್ಲವರನಾರನು ಕಾಣೆ. ನಾನು ಕಟ್ಟಿದ ಕೆರೆ ಸ್ಥಿರವಾಯಿತ್ತು ಗುಹೇಶ್ವರ ನಿಮ್ಮಾಣೆ ॥೬॥

ಮತ್ತಂ, ವಿಡಂಬನ ಕೆರೆಯ ಕಟ್ಟಿಸುವ ಒಡ್ಡನ ಪ್ರತಾಪವನೇನೆಂಬೆ ನಯ್ಯ? ನೆಲವನಗಿದು ಜಲವ ತೆಗೆದೆನೆಂಬ ಬಳಲಿಕೆಯ ನೋಡಾ! ಒಂದ ಕಲ್ಲ ಕಡಿದು ಮತ್ತೊಂದು ಕಲ್ಲಿಗೆ ಭೋಗವ ಕೊಟ್ಟೆಹೆನೆಂಬ ಅಜ್ಞಾನ ವಿದೇನೋ, ಗುಹೇಶ್ವರಾ? ಈ ಇರವಿನ ಪರಿಗೆ ಬೆರಗಾದೆನು ॥೭॥

ಇಂತು ಕೆರೆಯ ಕಟ್ಟಿಸುವದನು ವಿಡಂಬಿಸುತ್ತಿರಲು, ಆ ಕೆರೆಯ ಕಟ್ಟುವ ಒಡ್ಡರುಗಳೊಡನೆ ಒಡ್ಡರಾಮಯ್ಯನಿದ್ದಹನೆ ಎಂದು ಬೆಸಗೊಂಬ ಪ್ರಸ್ತಾವದ ವಚನ.

ಒಳಗೆ ತೊಳೆದು ಜಲವ ತುಂಬಲರಿಯದ ಅರಿಮರುಳನೇನಾಪ ಹೇಳಿ. ಜಲದ ಸಂಗವ ತೊಳೆಯಲರಿಯದೆ, ಜಲವ ಬಯಸುವನೆಂತಿರ್ದಹ ಹೇಳಿರೆ? ನೆಲನ ಶೋಧಿಸಿ, ನೆಲೆಯನರಿಯದೆ ಕೆರೆಯ ಕಟ್ಟಿಸುವ ಒಡ್ಡ ರಾಮಯ್ಯನ ಇರವೆಂತು ಹೇಳಿರೆ? ನಮ್ಮ ಗುಹೇಶ್ವರನ ನಿಲವನರಿಯದ ಸಿದ್ಧರಾಮ ನೆಂತಿರ್ದಹ ಹೇಳಿರೆ? ॥೮॥

ಇಂತು ಒಡ್ಡ ರಾಮಯ್ಯನೇನಾಗಿರ್ದಪನೆಂದು ಪ್ರಭುದೇವರು ಕೆರೆಯ ಕಟ್ಟಿಸುವಂತಹ ಗುಡ್ಡರುಗಳ ಬೆಸಗೊಳಲು, ಅವರೆಲ್ಲರು ಗುರುನಿಂದೆಯ ಕೇಳಿ ಸುಮ್ಮನಿರಬಾರದೆಂದು ಕಲ್ಲು ಗುಂಡು ಬಡಿಗೆಗಳಿಂದಿಟ್ಟು ನೋಯಿಸಲು ಆ ಪ್ರಭುದೇವರ ತಾಗಿದಂತಹ ಗಾಯಗಳೆಲ್ಲವು ಮರಳಿ ಗುಡ್ಡಗುಗಳನೆ ತಾಗಲು, ಆ ಪ್ರಸ್ತಾವಕ್ಕೆ ಪ್ರಭುದೇವರು ಪೇಳಿದ ವಚನ.

ಗುರುವೆಂದರಿಯರು, ಹಿರಿಯರೆಂದರಿಯರು, ದೇವರೆಂದರಿಯರು, ಭಕ್ತ ರೆಂದರಿಯರು, ಲಿಂಗವೆಂದರಿಯರು, ಜಂಗಮವೆಂದರಿಯರು, ಬಂದವರನರಿ ಯರು, ನಿಂದವರ ನಿಲವನರಿಯರು- ಶಿವಶರಣರ ನೋಯಿಸುವ ಪಾತಕರ ನೇನೆಂಬೆ? ಗುಹೇಶ್ವರ ನಿಮ್ಮ ಮನ ನೊಂದ ನೋವು ಬರಿದೆ ಹೋಗದು ॥೯॥

ಮತ್ತಂ, ಸಹಜವ ನುಡಿದರೆ ಸೇರುವರಿಲ್ಲ ಕಾಣಿರಣ್ಣಾ. ಅಸಹಜಕ್ಕ ಲ್ಲದೆ ಲೋಕ ಭಜಿಸದು. ಕೆರೆಯ ಕಟ್ಟಿಸುವವನ ಕಂಡು, ಒಡ್ಡ ರಾಮಯ್ಯ ನೆಂದರೆ ಮುಳಿಸಿಂದ ಲಿಂಗತನುವ ನೋಯಿಸುವರೆ? ನಮ್ಮ ಗುಹೇಶ್ವರ ಲಿಂಗವು ಜಗದೊಳಗೆ ಪರಿಪೂರ್ಣವಾದ ಕಾರಣ ಶರಣನ ನೋವು ಮರಳಿ ಪಾತಕರ ತಾಗಿದರೆ, ಅಲ್ಲಯ್ಯ ನೋಡಿ ನಗುತಿರ್ದನು ॥೧೦॥

ಮತ್ತಂ, ತಾಯಿಗಾದ ಸುಖ ದುಃಖಂಗಳು ಬಸಿರ ಶಿಸುವಿಂಗೆ ನೋಡಯ್ಯ! ಶಿವಶರಣರಿಗೆ ಮಾಡಿದ ಸುಖ ದುಃಖಂಗಳು ಶಿವನ ತಾಗು ವವು. ಕರಣವುಳ್ಳವರು ಮರಣವಿಲ್ಲದವಂಗೆ ಮುನಿದರೆ ತನುವುಳ್ಳವರ ಮುಟ್ಟುವದಲ್ಲದೆ, ಒಡಲಿಲ್ಲದಾತನ ಮುಟ್ಟಬಲ್ಲುದೆ? ಗುಹೇಶ್ವರ, ಕೆಂಡವ ಗೊರಲೆ ಮುಟ್ಟಬಲ್ಲುದೇ? ॥೧೧॥

ಇಂತಪ್ಪ ಅಜ್ಞಾನಿಗಳಿಗೆ ಉಪದೇಶವ ಮಾಡಿದ ಸಿದ್ಧರಾಮಯ್ಯನನು ಆ ಶಿಷ್ಯರು ಮಾಡಿದ ಪಾಪ ತಾಗುವದೆಂದು ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ.

ಜಗದ ಜನವ ಹಿಡಿದುಕೊಂಡು, ಒಂದು ಉಪದೇಶವ ಮಾಡಿದ ಗುರುವಿಂಗೆ ಆ ಉಪದೇಶವ ಕೊಟ್ಟು ಕೊಂಡ ಮಾರಿಂಗೆ ಹೋಹುದಲ್ಲದೆ, ಅಲ್ಲಿ ನಿಜವಳವಡದು. ತೆರನರಿಯದ ಸಂಸಾರ ಜೀವಿಗಳು ಮಾಡಿದ ದೋಷ ತಮ್ಮ ನುಂಗಿ, ಆ ಗುರುವಿಂಗೆ ಉಪಹತಿಯ ಮಾಡುವುದು ನೋಡಾ! ಗುಹೇಶ್ವರ ತಾನಿಟ್ಟ ಬೇತಾಳ ತನ್ನನೆ ತಿಂದರೆ ಬೇಕು ಬೇಡೆನಲುಂಟೆ? ॥೧೨॥

ಇಂತು ಪ್ರಭುದೇವರ ನೋಯಿಸಿದ ನೋವು ಆ ಗುಡ್ಡಗಳನೆ ಮರಳಿ ತಾಗಲು, ಆ ಗಾಯಂಗಳ ವೇದನೆಯಿಂ ಗೋಳಿಡುತ್ತ, ಓಡಿ ಬಂದು ಸಿದ್ಧರಾಮಯ್ಯ ದೇವರಿಗೆ ಮೊರೆ ಇಟ್ಟು ದೂರಿ, ದೇವ ಆವನೋ ಓರ್ವ ಇಂದ್ರಜಾಲಕನು ನಿಮ್ಮನು ಬಾಯಿಗೆ ಬಂದಂತೆ ನಿಂದಿಸುತ್ತಿರಲು, ನಾವೆಲ್ಲರು ಗುರುನಿಂದೆಯಂ ಕೇಳಿ ಸುಮ್ಮನೆ ಇರಬಾರದೆಂದು ಕಲ್ಲು ಗುಂಡುಗಳನಿಟ್ಟು ನೋಯಿಸಲು, ಆತನ ತಾಗಿದಂತ ಗಾಯಗಳೆಲ್ಲವು ನಮ್ಮನೆ ತಾಗಿ ದೆಸೆದೆಸೆಯಿಂದೆಲ್ಲರು ನೊಂದು ಗಾಸಿಯಾದೆವೆಂದು ಬಿನ್ನೈಸಲು, ಸಿದ್ಧರಾಮ ತಂದೆಗಳು ಬಂದು, ಈತನು ಪ್ರಭುದೇವರೆಂದು ವಿಚಾರಿಸಿ ನೋಡದೆ, ಕ್ರೋಧಕ್ಕೆ ಮನವನೆಡೆಗೊಟ್ಟು, ಆ ಗುಡ್ಡರುಗಳ ನೋವೆ ತನ್ನ ನೋವಾಗಿ, ಕೈಕೊಂಡು ನುಡಿದ ಪ್ರಸ್ತಾವದ ವಚನ.

ಎಲೆ ಅಯ್ಯ, ನಿಮ್ಮವರ ನೋವೆ ಎನ್ನ ನೋವು ನೋಡಾ. ಕಂಡು ಕಂಡು ಸೈರಿಸಲಾರದೆ ನೊಂದೆನಯ್ಯ! ನಿಮ್ಮವರೊಡನೆ ವರಸೊರಸಾಗಿಪ್ಪವರ ಕಂಡರೆ ನಾನವರಿಂಗೆ ಮುನಿವೆ ನೋಡಾ, ಕಪಿಲಸಿದ್ಧಮಲ್ಲಿನಾಥ ನೀನವರಲ್ಲಿಪ್ಪೆಯಾಗಿ ॥೧೩॥

ಇಂತು ಕ್ರೋಧಿಸಿ ಸಿದ್ಧರಾಮಯ್ಯ ದೇವರು ನೊಸಲ ಕಣ್ಣ ತೆಗೆವ ಪ್ರಸ್ತಾವದ ವಚನ-

ಯಕ್ಕೆ ವಿಂಡುಗಳೆಂಬವರು ಮುಕ್ಕಣ್ಣ ನಿಮ್ಮ ಗಣಂಗಳು ಬತ್ತಿದ ಕೆರೆಗೆ ಬಾಯ ಬಿಟ್ಟಂತೆ ಮೊರೆ ಇಟ್ಟು ಬರಲು, ಹೊತ್ತಿದ ಅಂಗಾಲ ಕಿಚ್ಚು ನೆತ್ತಿಗೆ ಮುಟ್ಟಿದರೆ ಚಕ್ಕನೆ ಕಪಿಲಸಿದ್ಧಮಲ್ಲಿನಾಥ ನೊಸಲ ಕಣ್ಣ ತೆರೆದನು. ॥೧೪॥

ಇಂತು ನೊಸಲ ಕಣ್ಣ ತೆರೆದ ಸಿದ್ಧರಾಮಯ್ಯದೇವರು ಆ ನೊಸಲ ಕಣ್ಣಿಗೆ ಬೆಸನಿತ್ತ ಪ್ರಸ್ತಾವದ ವಚನ.

ಬ್ರಹ್ಮನಾದಡಾಗಲಿ, ವಿಷ್ಣುವಾದಡಾಗಲಿ, ಇಂದ್ರನಾದಡಾಗಲಿ, ಚಂದ್ರನಾದಡಾಗಲಿ, ಎಮ್ಮ ಶಿವಶರಣರ ನೋವು ಎಮ್ಮ ನೋವು ನೋಡಾ! ಅವರನೊರಸುವೆನುರುಹುವೆನೆಂದು ಕಪಿಲಸಿದ್ಧಮಲ್ಲಿಕಾರ್ಜುನ ತನ್ನ ನೊಸಲ ಕಣ್ಣಿಂಗೆ ಬೆಸನನಿತ್ತರೆ ನಿಲಬಲ್ಲ ಗುರುಪರನಾರನು ಕಾಣೆ. ||೧೫||

ಇಂತು ನೊಸಲಗಣ್ಣಿನ ಕಿಚ್ಚಿಂಗೆ ಬೆಸನನಿತ್ತ ಸಿದ್ಧರಾಮಯ್ಯದೇವರು ಆ ನೊಸಲ ಕಣ್ಣಿನ ಮಹಾ ಜ್ವಾಲೆಯು ನೋಡಿ ನೋಡಿ, ಆಶ್ಚರ್ಯಮಂ ಬಡುತಿರ್ದ ಪ್ರಸ್ತಾವದ ವಚನ.

ಅಯ್ಯ, ನಿಮ್ಮ ಮೂರ್ತಿಯ ನೋಡಿಹೆನೆಂದರ ದೃಷ್ಟಿಯಾವುದು. ನಿಮ್ಮ ತೇಜವನಾರು ನೋಡಲಮ್ಮರಯ್ಯ! ನಿಮ್ಮ ತೇಜವ ನೋಡುವ ವರಿಗೆಯುಪಮಿಸಬಾರದು. ನೀವು ಮುನಿದು ನೊಸಲಕಣ್ಣ ತೆರೆದರೆ ಅದಕ್ಕೆ ಇದಿರಪ್ಪರು ಇನ್ನಾರು ಹೇಳಯ್ಯ? ಕಪಿಲಸಿದ್ಧಮಲ್ಲಿಕಾರ್ಜುನ ನಿಮ್ಮ ತೇಜ ಮೂರು ಲೋಕವ ನುಂಗಿದರೆ, ನಾನು ನೋಡಿ ಕಣ್ಣ ಮುಚ್ಚುತಿರ್ದೆನು. ||೧೬||

ಇಂತು ಸಿದ್ಧರಾಮಯ್ಯದೇವರ ನೊಸಲ ಕಣ್ಣಿನ ಮಹಾಜ್ವಾಲೆಯ ದಾಳಿ ಬ್ರಹ್ಮಾಂಡಮಂಡಲಮಂ ಮುಸುಕುತ ಬಪ್ಪುದಂ ಕಂಡು, ಅಲ್ಲಮಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ.

ಕಾಡುಗಿಚ್ಚೆದ್ದರೆ ಅಡವಿಯೆ ಗುರಿ. ನೀರುಗಿಚ್ಚೆದ್ದರೆ ಸಮುದ್ರವೆ ಗುರಿ. ಒಡಲಗಿಚ್ಚೆದ್ದರೆ ಆ ತನುವೇ ಗುರಿ. ಕಾಲಾಗ್ನಿ ಎದ್ದರೆ ಆ ಲೋಕಂಗಳೆ ಗುರಿ. ಶಿವಶರಣರ ಮನದಲ್ಲಿ ಕೋಪಾಗ್ನಿ ಎದ್ದರೆ ನಿಂದಕರೆ ಗುರಿ. ಗುಹೇಶ್ವರ ನಿಮ್ಮ ಮಾಯೆಯ ಹೊಡೆಗಿಚ್ಚಿಂಗೆ ನಾನು ಗುರಿಯಲ್ಲ ನೋಡಾ ||೧೭||

ಇಂತು ಭೂಮಿಯಾಕಾಶ ಮಂಡಲಮಂ ತುಡುಂಕುತಂ ಬಪ್ಪ ಮಹಾಜ್ವಾಲೆಯನು ಇದೆಲ್ಲಿಯದೆಂದು ತಿಳಿದು ನೋಡಿ, ಸಿದ್ಧರಾಮಯ್ಯದೇವರ ನೊಸಲಗಣ್ಣ ಕಿಚ್ಚಿಂದರಿದ ಪ್ರಸ್ತಾವದ ವಚನ.

ಕಾಯ ಗುಣವಳಿದು, ಮಾಯೆಯ ಮದವ ಮುರಿದು, ಕ್ರೋಧಂಗಳೆಲ್ಲವು ಹೆರೆಹಿಂಗಿ ಹೋದವು. ಅಂಗವೆಲ್ಲವು ಲಿಂಗಲೀಯ್ಯವಾಗಿ, ಕಂಗಳ ಕಳೆಯ ಬೆಳಗಳಿದು, ಗುಹೇಶ್ವರನ ವಿರಹದುರಿಯೊಳಗೆ ಬೆಂದವರ ಮರಳಿ ಸುಟ್ಟೆಹೆನೆಂಬ ಸಿದ್ಧರಾಮಯ್ಯ ಮರುಳ ನೋಡಾ. ||೧೮||

ಮತ್ತಂ, ತಾಪತ್ರಯದಲ್ಲಿ ಬೆಂದ ಒಡಲ ಹಿಡಿದು ತಂದು, ಜ್ಞಾನವೆಂಬ ಉರಿಗೆ ಆಹುತಿಯ ಕೊಟ್ಟವನ ಜ್ಞಾನವೆಂಬ ಕಾಯುವ ಹಿಡಿದು, ನಿಃಶೂನ್ಯವೆಂಬ ತೇಜದಲ್ಲಿ ಸುಟ್ಟವನ, ನಿಃಶೂನ್ಯವೆಂಬ ಶಬ್ದವ ಸುಟ್ಟು ಭಸ್ಮವ ಧರಿಸಿದ ಲಿಂಗೈಕ್ಯನ, ಲೋಕದ ಸ್ಥಿತಿಗತಿಯ ಮರೆದು ನಿರ್ವಾಣದಲ್ಲಿ ನಿಂದವನ, ಗುಹೇಶ್ವರ ಲಿಂಗದಲ್ಲಿ ತನ್ನ ಮರೆದ ಅಲ್ಲಯ್ಯನ ಕೋಪದ ಕಿಚ್ಚಿನಲ್ಲಿ ಸುಟ್ಟಹೆನೆಂಬ ಸಿದ್ಧರಾಮಯ್ಯನನೇನೆಂಬೆನು ? ॥೧೯॥

ಇಂತು ತನ್ನ ಮಹಾತ್ಮೆಯ ನಿರೂಪಿಸುತ್ತಿರ್ದ ಪ್ರಭುದೇವರು ಸಿದ್ಧರಾಮಯ್ಯದೇವರ ಗರ್ವಮಂ ಮುರಿದು, ನೊಸಲಗಣ್ಣಿನ ಮಹಾಜ್ವಾಲೆಯಂ ತಮ್ಮ ಶ್ರೀಪಾದದೊಳಗಡಗಿಸಿಕೊಂಡ ಪ್ರಸ್ತಾವದ ವಚನ.

ನಿಮ್ಮ ಶಕ್ತಿ ಜಗದೊಳಗಿಪ್ಪುದು. ಜಗದ ಶಕ್ತಿ ನಿಮ್ಮೊಳಗಿಪ್ಪುದು. ಜಗಕ್ಕೆ ನಿನಗೆ ಭೇದವಾದುದಕ್ಕೆ ಬೆರಗಾದೆನು. ಅಂದೊಮ್ಮೆ ತ್ರಿಪುರವ ಸುಟ್ಟಲ್ಲಿ ನಾಚಿತ್ತು ಎನ್ನ ಮನವು. ಕಾಮನನುರುಹಿ ಕರ್ಮಹರನೆನಿಸಿಕೊಂಡರೆ ನಿನ್ನ ಅಹಂಕಾರವ ನೋಡಿ, ಹೇಸಿತ್ತು ಎನ್ನ ಮನವು. ಕಾಲನ ಸುಟ್ಟು ಬೊಟ್ಟನಿಟ್ಟರೆ, ಎನಗೆ ನಗೆಗೆಡೆಯಾಯಿತ್ತು. ನಿಮ್ಮ ಘನವೆನಗೆ ಗುಹೇಶ್ವರ ನೀ ಮುನಿದು ನೊಸಲಗಣ್ಣ ತೆರೆದರೆ, ಎನ್ನಂಗಾಲೊಳಗಡಗಿತ್ತಯ್ಯ ನಿಮ್ಮ ಕೋಪ. ॥೨೦॥

ಇಂತು ನೊಸಲಗಣ್ಣಿನ ಮಹಾಜ್ವಾಲೆಯನು ಪ್ರಭುದೇವರು ತಮ್ಮಂಗಾಲೊಳಗೆ ಅಡಗಿಸಿಕೊಂಡು ಸಿದ್ಧರಾಮಯ್ಯದೇವರ ಶಕ್ತಿಯ ನೋಡಬೇಕೆಂದು ತಾವು ತಮ್ಮ ಅಂಗಾಲೊಳಗೆ ಉರಿಗಣ್ಣ ತೆಗೆವಿಹೆನೆಂದು ಉದ್ಯೋಗಿಸಿದ ಪ್ರಸ್ತಾವದ ವಚನ.

ಹರನ ಕರುಣವ ಪಡೆದ ಸಾಮರ್ಥ್ಯದ ಬಲದಿಂದ ಶಿವಶರಣರೊಡನೆ ಸೆಣಸಿದರೆ ಲೇಸುಂಟೆ ? ಅಘಟಿತಘಟಿತರಿಗೆ ಅಘಟಿತರುಂಟು ನೋಡಾ! ನೊಸಲಲೊಬ್ಬರು ಕಣ್ಣ ತೆರೆದರೆ ಅಂಗಾಲಲೊಬ್ಬರು ಕಣ್ಣ ತೆರೆವರು. ಗುಹೇಶ್ವರನ ಶರಣರು ಉಪಮಾತೀತರು. ॥೨೧॥

ಈ ಹೀಗೆಂದು ಪ್ರಭುದೇವರು ಅಂಗಾಲ ಕಣ್ದೆರೆದ ಪ್ರಸ್ತಾವದ ವಚನ.

ಎರಡು ಕಣ್ಣುಳ್ಳರೆ ಚತುರ್ಭುಜನೆಂಬೆನು. ಮೂರು ಕಣ್ಣುಳ್ಳರೆ ಮಹೇಶ್ವರನೆಂಬೆನು. ಮೈ ಎಲ್ಲ ಕಣ್ಣಾದರೆ ಸದಾಶಿವನೆಂಬೆನು. ಗುಹೇಶ್ವರ ನಿಮ್ಮ

ಶರಣಂಗೆ ಅಂಗಾಲ ಕಣ್ಣು ಮೂಡಿದರೆ, ನಿರುಪಮ ಮಹಿಮ ಅಲ್ಲಯ್ಯ ನೆಂಬೆನು. ॥೨೨॥

ಇಂತು ಅಂಗಾಲೊಳಗೆ ಮೂಡಿದ ಕಂಗಳ ತೇಜವ ನೋಡಿ ಪ್ರಭು ದೇವರು ಕೊಂಡಾಡುತಿರ್ದ ಪ್ರಸ್ತಾವದ ವಚನ.

ನಿಮ್ಮ ತೇಜವ ನೋಡಲೆಂದು ಹೆರೆಸಾರಿ ನೋಡುತ್ತಿರಲು, ಶತಕೋಟಿ ಸೂರ್ಯರು ಮೂಡಿದಂತಿರ್ದುದಯ್ಯಾ ! ಮಿಂಚಿನ ಬಳ್ಳಿಯ ಸಂಚವ ಕಂಡೆ, ಎನಗಿದು ಸೋಜಿಗವಾಯಿತ್ತು. ಗುಹೇಶ್ವರ ನೀನು ಜ್ಯೋತಿರ್ಲಿಂಗನಾದರೆ ಉಪಮಿಸಿ ನೋಡಬಲ್ಲವರಿಲ್ಲಯ್ಯಾ. ॥೨೩॥

ಇಂತಪ್ಪ ಅಂಗಾಲ ಕಣ್ಣಿನ ಮಹಾಜ್ವಾಲೆಯಂ ಪ್ರಭುದೇವರು ಸಿದ್ಧ ರಾಮಯ್ಯದೇವರ ಬಳಿಗೆ ಹೋಗೆಂದು ಬೆಸಸಿ ಕಳುಹುವ ಪ್ರಸ್ತಾವದ ವಚನ.

ಕಾಲಾಗ್ನಿ ಎಂಬ ಕಾಡಗಿಚ್ಚೆದ್ದು ಲೋಕವ ಸುಟ್ಟಿತ್ತೆಂದರೆ, ಶಿವಶರಣರಂಜರು. ಶಶಿಧರ ಮುನಿದು ಬಿಸಿಗಣ್ಣ ತೆರೆದರೆ ಶಿವಶರಣರದನು ಮನಸಿಂಗೆ ತಾರರು. ಅಸಮಾಕ್ಷ ಲಿಂಗವ ತಮ್ಮ ವಶಕ್ಕೆ ತಂದ ಶರಣರು ಮುನಿದು ಉರಿಗಣ್ಣ ತೆರೆದರೆ, ಚತುರ್ದಶ ಭುವನದೊಳಗೆ ಆರು ಗುರಿ ಇಲ್ಲ. ಗುಹೇಶ್ವರ ನಿಮ್ಮ ಅರುಹಿನ ಬೆಳಗು ಬಿಸಿಯಾದರೆ ಸಿದ್ಧರಾಮಯ್ಯದೇವರೆಂಬ ಶಿವಯೋಗಿಯ ಹೃದಯವೆ ಗುರಿ ಎಂದು ಬೆಸಸಿದನಲ್ಲಮಯ್ಯನು. ॥೨೪॥

ಇಂತು ತೇಜೋಮಯವಾಗಿ ಅಷ್ಟದಿಕ್ಕುಗಳನಾಲಿಂಗಿಸುತ್ತ, ಧರೆಯಾಕಾಶವನಾಗುಳಿಸಿ ನುಂಗುತ್ತ, ಸಚರಾಚರಂಗಳ ನುಃಪೆಂದು ಊದುತ್ತ, ಸಪ್ತಸಮುದ್ರಂಗಳನಾಪೋಷಣಂಗೈವುತ್ತ, ಭುಗಿಲ್ ಭುಗಿಲೆಂಬ ಮಹಾರಭಸಕ್ಕೆ ಬ್ರಹ್ಮಾಂಡಕಟಾಹಂ ಬಿರಿಯುತ್ತ, ಚತುರ್ದಶ ಭುವನವೆಲ್ಲಂ ಪ್ರಳಯಕಾಲ ತುಂಬದ ಮುನ್ನವೆ ಮಹಾಪ್ರಳಯ ಬಂದಿತ್ತೆಂದು ಜಗ್ಗನೆ ಉರಿವುತ್ತ, ಹರಿ ವಿರಿಂಚಿ ಮೊದಲಾದ ಸಮಸ್ತ ದೇವರ್ಕಳೆಲ್ಲ ಶಿವಧೋ ಎಂದು ಕೈಲಾಸ ದತ್ತಲೋಡುತ್ತಮಿರಲನಂತಮುಖ ಒಂದೇ ಮುಖವಾಗಿ, ಒಂದೆ ಮುಖ ಅನಂತ ಮುಖವಾಗಿ ಬಪ್ಪ ಮಹಾತೇಜೋರಾಶಿಯಂ ಕಂಡು, ಸಿದ್ಧರಾಮ ತಂದೆಗಳು ಇದೆಲ್ಲಿಯ ಮಹಾಜ್ವಾಲೆಯೆಂದು, ವಿವೇಕದಿಂ ತಿಳಿದು, ಈತನು ಶಿವನಲಾ ಎಂದು ಅರಿದು, ಅನುತಾಪಿಸುತ್ತಿರ್ದ ಪ್ರಸ್ತಾವದ ವಚನ.

ಯುಗ ಜುಗ ಮಡಿವಂದು ಧಿಗಿಲು ಭುಗಿಲೆಂದು ಮುಸುಕಿದ ಮಹಾ ಜ್ವಾಲೆ ಇದೇನೋ ? ಇದೆನ್ನ ಕಂಗೆ ಗೋಚರವಾಯಿತ್ತಲೆಯಯ್ಯ ! ನೀವೆಂದ ರಿಯೆನಯ್ಯ ! ನಾ ಎನ್ನ ಕಾಯದ ಕಳವಳದಲ್ಲಿ ಇದ್ದೆನಲ್ಲದೆ ನೀವೆಂಬ ಬಗೆ ದೋರದೆ ಕಟ್ಟಿನೆಲೆಯಯ್ಯ ! ಆಳ್ದನೊಡನೆ ಆಳು ಮುನಿದರೆ ಆರು ಕೆಡು ವರು ಹೇಳಾ ಕಪಿಲಸಿದ್ಧಮಲ್ಲಿಕಾರ್ಜುನಾ ? ॥೨೫॥

ಮತ್ತಂ, ಅರಿಯಬಾರದ ಘನವನರಿದು ಸಾಧಿಸಿ ಗೆದ್ದ ಘನವುಹಿವು ಶರಣರ ಮುಂದೆ ಎನ್ನ ಪ್ರತಾಪ ನಿಲುಕುವೆ ಅರಿವಪ್ಪರು. ಲಿಂಗದ ಪ್ರಭೆ ಯೊಳಗೆ ನಾನಿಪ್ಪೆನು. ಅಹಂಕಾರದ ಪಂಜರದೊಳಗೆ ಎನ್ನ ನೊಸಲಗಣ್ಣಿನ ಕಿಚ್ಚುಡಿಗಿ, ಉಜ್ಜಿತನಾಗಿ ಮರಳಿ ಮರಳಿ ಬಂದೆನ್ನ ಸುತ್ತಿ ಮುತ್ತಿಬಂದಿತ್ತು. ನಾನು ಶರಣೆಂಬ ಗುರುವಚನವಿವಿರಿದ್ದು ಕೊಲುವರೆ ಕಪಿಲಸಿದ್ಧಮಲ್ಲಿನಾಥ ನೊಳಗೆ ಅಳಿದೆನಲ್ಲದೆ ಉಳಿವನಲ್ಲ. ॥೨೬॥

ಮತ್ತಂ, ಅನುತಾಪಗೈದ ಪ್ರಸ್ತಾವದ ವಚನ.

ಕಾಲವೇಕೆ ಬಾರದಯ್ಯ ! ಇಂದಿನ ಅವಸ್ಥೆಗೆ ಲಿಖಿತವೇಕೆ ತೊಡೆಯ ದಯ್ಯ ! ಇಂದಿನ ಅವಸ್ಥೆಗೆ ಇನಿತು ಲೇಸು ಬಾರದೇಕಯ್ಯ ! ಎನ್ನ ದೇವ ಕಪಿಲಸಿದ್ಧಮಲ್ಲಿಕಾರ್ಜುನ ನಿಮಗೆ ಕೂರ್ತ ಅವಸ್ಥೆಯೊಳಗೆ ಲಿಖಿತ ತೊಡೆ ಯದು, ಪ್ರಾಣ ಬಿಡದು. ಇಂತಿರಿಸದಿರಾ ಎನ್ನ ದೇವರ ದೇವಾ ॥೨೭॥

ಮತ್ತಂ, ಕಳವಳದ ಕಂದೆರವೆಗೊಳಗುಮಾಡಿದೆ. ಹಾ ! ಹಾ ! ಎಲೆ ಅಯ್ಯ, ಎನ್ನ ವಿಕಾರದಲ್ಲಿ ಗುರಿಮಾಡಿದಿರಯ್ಯ. ಕೋಪದ ಕಾಡಗಿಚ್ಚಿಗೆ ಅಡವಿಯ ಗುರಿಮಾಡಿದಿರಯ್ಯ ಎನ್ನ ಕಪಿಲಸಿದ್ಧಮಲ್ಲಿಕಾರ್ಜುನ ॥೨೮॥

ಇಂತು ಅನುತಾಪವಂ ಸಂತೈಸಿಕೊಂಡು, ಪ್ರಭುದೇವರ ಶ್ರೀಪಾದ ದಲ್ಲಿಗೆ ಅರಿಸಿಕೊಂಡು ಬರುತ್ತಿರ್ಪ ಪ್ರಸ್ತಾವದ ವಚನ.

ನಟ್ಟಡವಿಯೊಳಗೆ ಇರುಳು ಹಗಲೆನ್ನದೆ ನಾನು ಅಪ್ಪಾ ಅಯ್ಯ ಎಂದು ಅರಸುತ್ತ ಹೋದರೆ, ನಾನಿದ್ದೇನೆ ಬಾ ಮಗನೆ ಎಂದು ಕರೆದೆನ್ನ ಕಂಬನಿ ತೊಡೆದು ನಿಜವ ತೋರಿದ ದೇವನ ಪಾದವಿಂದೆನ್ನಲ್ಲಿಗೆ ನಡೆದು ಬಂದರೆ, ನಾನರಿಯದೆ ಮರುಳುಗೊಂಡೆನೆಂದು ಎನ್ನ ಮನದೊಳಗೆಚ್ಚರ ಮಾಡಿದ ಅತನ ನರಿಸಿಕೊಂಡು ಬಂದೆನ್ನ ಹೃದಯದಲ್ಲಿ ಇಂಬಿಟ್ಟುಕೊಂಬೆ ಎನ್ನ ಕಪಿಲಸಿದ್ಧ ಮಲ್ಲಿಕಾರ್ಜುನಾ ॥೨೯॥

ಮತ್ತಂ, ತನ್ನನರಸಿ ಬಪ್ಪವರ ತಾನರಸಿ ಬಪ್ಪ ನೋಡಾ! ಎನ್ನ ದೇವನೆಲ್ಲಿದ್ದನಲ್ಲಿಗೆ ಹೋಗಿ ಬಾರಾ ಎಂದು ಮನದೊಳಗೆ ಅಚ್ಚೊತ್ತಿಕೊಂಬೆನೆನ್ನ ಕಪಿಲಸಿದ್ಧಮಲ್ಲಿಕಾರ್ಜುನಾ. ॥೩೦॥

ಇಂತು ಪ್ರಭುದೇವರನರಸಿಕೊಂಡು ಬರುತ್ತಿಪ್ಪ ಸಿದ್ಧರಾಮಯ್ಯದೇವರೊಡನೆ ಗುಡ್ಡರುಗಳು—ದೇವಾ ಆತನು ನಿಂದಿರೆ ನೆಳಲಿಲ್ಲ, ನಡೆದರೆ ಹೆಜ್ಜೆ ಇಲ್ಲ. ಕಾಯವಿದ್ದು ಕಾಯವಿಲ್ಲ. ನೀವಿನ್ನು ಆವ ಪರಿಯಲ್ಲಿ ಮುನಿಸ ತಿಳುಹಿತಿಪ್ಪಿರಿ ಎಂದೆನೆ, ಆ ಗುಡ್ಡರುಗಳೊಡನೆ ನುಡಿವ ಪ್ರಸ್ತಾವದ ವಚನ.

ಅವನನಾದ ಗತಿಯು ನಾನಪ್ಪೆ. ಅವನ ನಿಂದ ನಿಲವ ನಿಲುವೆನು. ಆತ ಬಿಟ್ಟುದ ನಾ ಬಿಡುವೆನು. ಅವನ ಬೆಂಬಳಿಯಲ್ಲಿ ಸಲಿಸುವೆ. ಎನ್ನ ಮನಃಪ್ರಾಣನವನ ಮೇಲಿಕ್ಕಿ ನೆರೆವೆ, ಕಪಿಲಸಿದ್ಧಮಲ್ಲಿಕಾರ್ಜುನ ॥೩೧॥

ಮತ್ತಂ, ಮದಹಸ್ತಿ ಮದಹಸ್ತಿಯ ಹಿಡಿವುದಲ್ಲದೆ, ಮತ್ತೊಂದ ಹಿಡಿಯದು. ಅರೂಪು ಅರೂಪ ಹಿಡಿವುದಲ್ಲದೆ, ಮತ್ತೊಂದ ರೂಪ ಹಿಡಿಯದು. ರೂಪಿಲ್ಲದಾತನ ರೂಪಿಸಿ ಹಿಡಿವೆನು ಕಪಿಲಸಿದ್ಧಮಲ್ಲಿಕಾರ್ಜುನ. ॥೩೨॥

ಹರಿದು ಹತ್ತುವೆನವನ. ಹತ್ತಿ ಮನವುಟ್ಟಿ ಹಿಡಿವೆನವನ. ಮಹಾಪ್ರಚಂಡ ಮನದಿಂದೆ ಕಪಿಲಸಿದ್ಧಮಲ್ಲಿಕಾರ್ಜುನನ ಹಿಡಿದೆನು. ॥೩೩॥

ಹೀಗೆಂದು ನುಡಿವ ಸಿದ್ಧರಾಮಯ್ಯಗಳೊಡನೆ, ಆ ಗುಡ್ಡರುಗಳು- ದೇವಾ ಆತನ ಕೋಪಾರೂಢಿಯಿಂದೊಗೆದ ಅಂಗಾಲ ಕಣ್ಣಿನ ಜ್ವಾಲೆಯ ನಿಲಿಸುವ ಪರಿ ಎಂತೆನೆ, ಅವರಿಗೆ ಕೊಟ್ಟ ಪ್ರತ್ಯುತ್ತರ.

ಅಂಗಾಲ ಕೋಪವ ಮನಕ್ಕೆ ತಂದಿಪ್ಪವನ, ಮನದ ಕೋಪವ ಹೃದಯದಲ್ಲಿ ಇಟ್ಟುಕೊಂಡಿಪ್ಪವನ, ಅವನ ಪಾದಕ್ಕೆ ಎನ್ನ ನೊಸಲ ತಂಪು ತಂದು ತಳಿವೆ. ಎನ್ನ ನೊಸಲ ಅಮೃತದಿಂದೆ ಅವನ ತಿಳುಹುವೆನು ಕಪಿಲಸಿದ್ಧಮಲ್ಲಿಕಾರ್ಜುನಾ. ॥೩೪॥

ಇಂತು ಗುಡ್ಡರುಗಳೊಡನೆ ಪ್ರಸಂಗಿಸುತ್ತ ಬಂದು ಸಿದ್ಧರಾಮಯ್ಯದೇವರು ಪ್ರಭುದೇವರ ದರುಶನವಾಗಿ ಅವರ ಶ್ರೀಮೂರ್ತಿಯ ನೋಡಿ ನೋಡಿ, ಹರುಷಾಶ್ರುಗಳೊಳಗೆ ಓಲಾಡುತ್ತಿರ್ದ ಪ್ರಸ್ತಾವದ ವಚನ.

ಅರಲುಗೊಂಡ ಕೆರೆಗೆ ತೊರೆ ಬಂದು ಹಾಯ್ದಂತೆ, ಎಲೆ ಅಯ್ಯ, ನಿಮ್ಮ ಕಂಡು ಕಂಗಳು ಕಡೆಗೋಡಿವರಿದವಯ್ಯ! ಎನ್ನ ಮನಕ್ಕೆ ಮನವೇದ್ಯವಾ

ದರೆ, ಕೈಮುರಿದೆನೆಲೆ ಹಾ ಅಯ್ಯ. ಕಪಿಲಸಿದ್ಧಮಲ್ಲಿನಾಥನ ಕಂಡ ಸುಖವು ಆರಿಗೆಯು ಇಲ್ಲ. ॥೩೫॥

ಮತ್ತಂ, ಅಯ್ಯ ನಿಮ್ಮ ಕಂಡು ಕಂಗಳು ನೋಡಲಮ್ಮದೆ ಬೆಚ್ಚಿ ಬೆದರಿದವಯ್ಯ! ನೀನು ಶತಕೋಟಿ ಸೂರ್ಯ ಪ್ರಕಾಶಕ್ಕತೀತನು. ನಿನ್ನ ಕಂಡ ಬಳಿಕ ಕರ್ಮ ಉಂಟೆ ಕಪಿಲಸಿದ್ಧಮಲ್ಲಿಕಾರ್ಜುನ? ॥೩೬॥

ಇಂತು ಪ್ರಭುದೇವರ ಮೂರ್ತಿಯಂ ಕಂಡು, ಸಿದ್ಧರಾಮಯ್ಯದೇವರು ಆ ಪ್ರಭುದೇವರ ಶ್ರೀಪಾದಕ್ಕೆ ನಮಸ್ಕಾರಮಂ ಮಾಡುವ ಪ್ರಸ್ತಾವದ ವಚನ.

ಎಲೆ ಅಯ್ಯ, ಎನ್ನ ಶಿರ ನಿಮ್ಮ ಚರಣವ ಮುಟ್ಟಿದ ಬಳಿಕ ಎನ್ನಲ್ಲಿ ಗುಣದೋಷವನರಸುವರೆ? ಭೃತ್ಯಾಪರಾಧ ಸ್ವಾಮಿನೋ ದಂಡ ಕಪಿಲಸಿದ್ಧ ಮಲ್ಲಿಕಾರ್ಜುನದೇವ ತ್ರಾಹಿ ತ್ರಾಹಿ ಕಾಯಯ್ಯ. ॥೩೭॥

ಇಂತು ನಮಸ್ಕಾರದೊಳು ತನ್ನುವಂ ಮರೆದು ಸ್ತೋತ್ರವಂ ಮಾಡುವ ಪ್ರಸ್ತಾವದ ವಚನ.

ನಿಮ್ಮ ನಿಜದಂತ್ಯವನಾರು ಬಲ್ಲರಯ್ಯ! ಚತುರ್ದಶ ಭುವನಂಗಳೆಲ್ಲವು ನಿಮ್ಮ ಕರಸ್ಥಲದೊಳಡಗಿಪ್ಪವಯ್ಯ! ನಿಮಗೆಣೆಯಪ್ಪ ದೇವರುಂಟೆ ಕಪಿಲಸಿದ್ಧಮಲ್ಲಿಕಾರ್ಜುನಾ? ॥೩೮॥

ಅನಂತ ದೇವರೆಲ್ಲರು ತಂಡ ತಂಡದಲ್ಲಿ ಪ್ರಣಮಂಗೈಯ್ಯಲು ಅವರ ಮಕುಟ ಸಂಪುಟರಜ ಉದರಲು ಅಲ್ಲಿ ರಜತ ಗಿರಿಗಳಾದವು, ಕಪಿಲಸಿದ್ಧ ಮಲ್ಲಿಕಾರ್ಜುನದೇವರದೇವ ನಿಮ್ಮ ಮುಂದೆ. ॥೩೯॥

ಮತ್ತಂ, ಹರಿ ಎಂಬಾತ ನಿಮ್ಮ ಚರಣವನರಿಯ. ಬ್ರಹ್ಮನೆಂಬಾತ ನಿಮ್ಮ ಮುಕುಟವನರಿಯ. ಯತಿವ್ರತಿ ಋಷಿಗಳೆಂಬವರು ನಿಮ್ಮ ಹೊಗಳಲರಿಯರು. ಸಮಸ್ತ ದೇವರ್ಕಳು ನಿಮ್ಮ ರೋಮದ ಪ್ರಮಾಣವನರಿಯರು. ಶತಕೋಟಿ ಸೂರ್ಯರು ನಿಮ್ಮ ಬೆಳಗ ಕಾಣಲರಿಯರು. ಕಪಿಲಸಿದ್ಧಮಲ್ಲಿ ಕಾರ್ಜುನ ನಾ ನಿಮ್ಮ ಅರಿಯಬಲ್ಲೆನೇ ಅಯ್ಯ? ॥೪೦॥

ನೆನೆಸುವೆ ಮರಸುವೆ. ಎನ್ನ ಗುಣದೋಷ ನಿಮ್ಮದು. ಕೇಳಯ್ಯ ಎನ್ನ ಬಿನ್ನಪವ! ನಿಮ್ಮ ನೆನೆವ ನಾನಲ್ಲ ಕಂಡಯ್ಯ. ನಿಮ್ಮಿಂದ ನಿಮ್ಮ ನೆನೆವೆನು. ಕೃಪೆಮಾಡಾ ಕಪಿಲಸಿದ್ಧಮಲ್ಲಿಕಾರ್ಜುನ. ॥೪೧॥

ಮತ್ತಂ, ಕೈಗಳ ಬಿಚ್ಚಿ ಬಿಸಾಟರೆ ಬಿಡೆನು. ಮೈಗಳ ಕಡಿದು ಹರಿದಡೆ ಬಿಡೆನು ನಿಮ್ಮ ಚರಣವನಿನ್ನು. ಎನ್ನ ತನುವಳಿದರೆ ನಿಮ್ಮ ಜ್ಞಾನ ತನುವಿನಿಂದ ಹೊದ್ದುವೆನು ಕಾಣಾ ಕಪಿಲಸಿದ್ಧಮಲ್ಲಿಕಾರ್ಜುನ ॥೪೨॥

ಇಂತು ಸಿದ್ಧರಾಮಯ್ಯದೇವರು ಸ್ತೋತ್ರಮಂ ಮಾಡುತ್ತಿರಲು, ಆ ಪ್ರಭುದೇವರು ಆ ಸ್ತೋತ್ರಮಂ ಜರಿದು ತಮ್ಮ ನಿಲವ ಹೇಳುವ ಪ್ರಸ್ತಾವದ ವಚನ.

ಕಾಯಗೊಂಡ ಮಾನವರಂತೆ ಕೈಗೆ ಸಿಲುಕ. ಪ್ರಾಣವಿಡಿದ ಜೀವಿಗಳಂತೆ ಎಡೆಯಾಡದಿಪ್ಪ. ಕಾಂಬಡೆ ಲಿಂಗಳತೆ ಇಲ್ಲ. ಕೇಳುವಡೆ ಕಿವಿಗಳತೆ ಇಲ್ಲ. ಗುಹೇಶ್ವರನ ನಿಲವು ಬರಿಯ ಸ್ತೋತ್ರಕ್ಕೆ ನಿಲುಕದು ಕಾಣಾ ಸಿದ್ಧರಾಮಯ್ಯ. ॥೪೩॥

ಮತ್ತಂ, ಕಣ್ಣಿಂಗೆ ಕಾಂಬಡೆ ರೂಪು ಇಲ್ಲ. ಕೈಗೆ ಸಿಲುಕುವರೆ ದೇಹಿಯಲ್ಲ. ನಡೆದಡೆ ಗಮನಿಯಲ್ಲ. ನುಡಿದಡೆ ವಾಚಾಳನಲ್ಲ. ನಿಂದಿಸಿದವಗೆ ಹಗೆಯಲ್ಲ. ಹೊಗಳಿದವಗೆ ಕೆಳೆಯಲ್ಲ. ಗುಹೇಶ್ವರನ ನಿಲವು ಮಾತಿನ ಮಾಲೆಗೆ ಸಿಲುಕುವುದೆ? ಸಿದ್ಧರಾಮಯ್ಯ ನೀ ಮರುಳಾದೆಯಲ್ಲ. ॥೪೪॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಸಿದ್ಧರಾಮಯ್ಯ ಕೊಟ್ಟ ಪ್ರತ್ಯುತ್ತರ.

ಸ್ತೋತ್ರವೆಂಬವು ನೀ ಮಾಡಲಾದವು ಕಂಡಯ್ಯ! ಮೂರ್ತಿ ಎಂಬುದು ನೀ ನೆನೆದಡಾದುದು ಕಂಡಯ್ಯ! ಆ ಮೂರ್ತಿ ಎಂಬುದು ನಿನ್ನ ಸ್ವಭಾವ ಕಂಡಯ್ಯ! ಎನ್ನ ಹೃತ್ಕಮಲದೊಳಗೆ ಹುಟ್ಟುವ ಸ್ಮರಣೆ ನಿನ್ನ ಗತಿ ನೋಡಯ್ಯ! ಕಪಿಲಸಿದ್ಧಮಲ್ಲಿನಾಥಯ್ಯ ನೀನು ಸ್ತೋತ್ರಪ್ರಿಯನಲ್ಲದೆ ಇದ್ದರೆ, ಬಾಣಮಯೂರ ಹಲಾಯುಧಂಗೆ ಒಲಿವೆ ಎಂತು ಹೇಳಯ್ಯ. ॥೪೫॥

ಈ ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ವಚನದ ರಚನೆ ಎಂಬ ಮಾತಿನ ಬಣಬೆಯ ಪರಿಯಲ್ಲ ನೋಡಾ! ಹೊಗಳಿ ಕಂಡವರೆಲ್ಲರು ಮೂರ್ತಿಗೊಳಗಾದರು. ವೇದಶಾಸ್ತ್ರ ಶ್ರುತಿಸ್ಮೃತಿಗಳು ಹೊಗಳಿ ಕಾಣವೆಂಬುದ ಗುಹೇಶ್ವರ ಸಾಕ್ಷಿಯಾಗಿ, ಮೂರು ಲೋಕ ಬಲ್ಲುದು ಕಾಣಾ ಸಿದ್ಧರಾಮಯ್ಯ. ॥೪೬॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರ ಬಿನ್ನಹ

ವೇದಪ್ರಿಯನಲ್ಲಯ್ಯ ನೀನು, ಶಾಸ್ತ್ರಪ್ರಿಯನಲ್ಲಯ್ಯ ನೀನು, ನಾದಪ್ರಿಯನಲ್ಲಯ್ಯ ನೀನು, ಸ್ತೋತ್ರಪ್ರಿಯನಲ್ಲಯ್ಯ ನೀನು, ಮುಕ್ತಿಪ್ರಿಯನಲ್ಲಯ್ಯ

ನೀನು. ಯುಕ್ತಿಪ್ರಿಯನಲ್ಲಯ್ಯ ನೀನು. ನೀನು ಇವೆಲ್ಲಕ್ಕಸಾಧ್ಯ ಕಂಡಯ್ಯ! ನೀನು ಭಕ್ತಿಪ್ರಿಯನೆಂದು ಮರೆಹೊಕ್ಕೆ ಕಾಯಯ್ಯ ನೀನು ಕಪಿಲಸಿದ್ಧ ಮಲ್ಲಿಕಾರ್ಜುನ. ॥೪೭॥

ಈ ಹೀಗೆಂದು ಸಿದ್ಧರಾಮಯ್ಯದೇವರು ನೀನು ಭಕ್ತಿಪ್ರಿಯನೆಂದು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ಭಕ್ತಿ ಯುಕ್ತಿಯನಾರು ಬಲ್ಲರು? ಬಲ್ಲವರನಾರ ಕಾಣೆ. ತನ್ನ ಮರೆದು ಇದಿರ ಹರಿದು ಇರಬಲ್ಲರೆ, ಆತ ಭಕ್ತ ಆ ಶಿವಭಕ್ತಂಗೆ ಶಿವನೊಲಿವನು. ನುಡಿಯಲ್ಲಿ ಭಕ್ತಿಯನಾಡಿ ನಡೆಯಲಿಲ್ಲದಿರ್ದಡೆ ಕಡೆಮುಟ್ಟ, ಶಿವನೊಲಿವುದು ಹುಸಿ. ಮರೆದು, ಕೋಪದುರಿಯನುಗುಳಿ ಅರಿದು ಬಂದೆರಗಿದೆನೆಂಬ ನುಡಿಗೆ ಒಲಿವನೇ ನಮ್ಮ ಗುಹೇಶ್ವರಲಿಂಗವು? ॥೪೮॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರ ಬಿನ್ನಹ.

ಎನ್ನ ಕೋಪವೆಂಬುದು ಎನ್ನ ಕಣ್ಣ ನೋಡಯ್ಯ! ನಾನೇತರೊಳಗೇನು ಹೇಳಯ್ಯ! ನಿಮ್ಮ ಜ್ಞಾನ ತೇಜದ ಮುಂದೆ ಎನ್ನರಿವೇತರದು ಹೇಳಯ್ಯ! ಎನ್ನ ದಿಟದ ಭಕ್ತಿ ನಿಮ್ಮ ರೂಪು ಕಂಡಯ್ಯ! ಎನ್ನ ಸಟೆಯ ಭಕ್ತಿಯು ನಿಮ್ಮ ರೂಪು ಕಂಡಯ್ಯ! ಎನಗೆ ಬೇರೆ ಸ್ವತಂತ್ರ ಉಂಟೇ ಕಪಿಲಸಿದ್ಧಮಲ್ಲಿನಾಥಾ? ॥೪೯॥

ಈ ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ಕೋಪ ತಾಪವೆಂಬುದು ಅರಿವಿನೊಳಗೆ. ಭಕ್ತಿಮುಕ್ತಿ ಎಂಬುದು ನಿತ್ಯದೊಳಗೆ. ಭಾವದ ಬಗೆಗೆ ಬಣ್ಣವಿಟ್ಟುಕೊಂಡರೆ ನಿರ್ಭಾವಿಕಂಗೆ ಅದು ಸಹಜವಹುದೆ? ಬಂದ ಶರಣರ ನಿಲವನರಿದು, ಸಂದುಸಂಶಯವಳಿದು ನಂಬದಿದ್ದರೆ ಹಿಂದುಮುಂದಾಗಿ ಹೋಹನು ಕಾಣಾ ನಮ್ಮ ಗುಹೇಶ್ವರಲಿಂಗವು. ॥೫೦॥

ಈ ಹೀಗೆಂದು ಪ್ರಭುದೇವರು ಮುನಿದು ಹಿಂದುಮುಂದಾಗಲು ಸಿದ್ಧರಾಮತಂದೆಗಳು ಅಡ್ಡಬಿದ್ದು ಬಿನ್ನೈಸುವ ಪ್ರಸ್ತಾವದ ವಚನ.

ಹಿರಿದು ಆಗ್ರಹದಿಂದೆ ನೀನೆನ್ನ ಮೇಲಿಕ್ಕಿ ಒಲ್ಲೆ ಸಾರೆಂದರೆ ಹೋಹೆ ಕಾಣಾ ಅಯ್ಯ! ಕೈಯ್ಯ ಹಿಡಿದರೆ ಅಂತು ಮುರುಚುವೆ. ಎನ್ನ ಉರದ

ಲಪ್ಪಿ ಹಿಡಿದಡೆಂತು ಮುರುಚುವೆ ! ನೀನೆಂತು ಹೋಹ ಪರಿಯ ನಿಲಿಸುವೆನು ಕೇಳ ಗಡಾ ! ಸೂಕ್ಷ್ಮತನುವಿನಲ್ಲಿ ಹಿಡಿದರೆ, ಎಂತು ಮುರುಚುವೆ ಹೇಳಾ, ಕಪಿಲಸಿದ್ಧಮಲ್ಲಿಕಾರ್ಜುನಾ ? ||೫೧||

ಈ ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭು ದೇವರು ಕೊಟ್ಟ ಪ್ರತ್ಯುತ್ತರ.

ಅಂಗದಲಪ್ಪಿದೆನೆಂದರೆ ಸಿಲುಕದು. ಪ್ರಾಣದಲಪ್ಪಿದೆನೆಂದರೆ ಸಿಲುಕದು. ಭಾವದಲಪ್ಪಿದೆನೆಂದರೆ ಸಿಲುಕದು. ಸೂಕ್ಷ್ಮ ತನುವಿನ ಮನದ ಕೊನೆಯ ಮೇಲೆ ಅಪ್ಪಿದೆನೆಂದರೆ ಸಿಲುಕದು. ಭಾವಾತೀತವಾದ ನಿರಾಕಾರದ ಘನವು ಸುಜ್ಞಾನಮುಖಕ್ಕಸಾಧ್ಯ ನೋಡಾ ! ಗುಹೇಶ್ವರನ ಶರಣರನಿನ್ನಾವ ಪರಿಯಲ್ಲಿ ತಡೆದು ನಿಲಿಸುವೆ ಹೇಳಾ ಸಿದ್ಧರಾಮಯ್ಯ ? ||೫೨||

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರು ಬಿನ್ನೈಸಿದ ಪ್ರಸ್ತಾವದ ವಚನ.

ಎನ್ನನಾಗಳೆ ಬಂದಿವಿಡಿದೆ ಗಡಾ ನೀನು. ನಮ್ಮ ಹಿಡಿವರೆ ಹಿಡಿವ ತನುವಿರೆ ತನು ಬೇರಾದವರು ನಿಮ್ಮ ಹಿಡಿವರೆ ಹಿಡಿವರು. ಕೈಯ್ಯಿರೆ ಕೈ ಬೇರಾದವರು ನಿಮ್ಮ ಹಿಡಿವರೆ ಹಿಡಿವರು. ಕಣ್ಣಿರೆ ಕಣ್ಣು ಬೇರಾದವರು ಇನಿಸುಳ್ಳವರು ಮೊದಲಾಗಿ ನಿಮ್ಮ ಹಿಡಿಯಲಾರರು. ಕಪಿಲಸಿದ್ಧಮಲ್ಲಿನಾಥ ನಿಮ್ಮ ಹಿಡಿದು ತಡೆಯದವನೇತರವನಲ್ಲ. ಕರುಣದಿಂ ಬಾರಾ ಎನ್ನ ದೇವರ ದೇವಾ. ||೫೩||

ಈ ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನಪಂಗೈದು ತಮ್ಮ ಮಠಕ್ಕೆ ಬಿಜಯಂಗೈವುದು ಎಂದೆನಲು, ಅದಕ್ಕೆ ಪ್ರಭುದೇವರು ನಿಮ್ಮ ಮಠವೆಂದೇನು? ಇದ್ದ ಠಾವಿನಲ್ಲಿದ್ದು ಭಕ್ತಿಯ ಮಾಡಿ, ಪರಿಣಾಮಿಸುವದಲ್ಲದೆ, ನಾವತ್ತ ಬರಲಾರೆವೆಂದು, ನಿರೂಪಿಸಿದ ಪ್ರಸ್ತಾವದ ವಚನ.

ಗತಿಗೆಟ್ಟು, ಧೃತಿಗೆಟ್ಟು, ಮತಿಗೆಟ್ಟವ ನಾನೈಯ್ಯ. ನಡೆವರೆ ಶಕ್ತಿ ಇಲ್ಲ. ನುಡಿವರೆ ಜಿಹ್ವೆ ಇಲ್ಲ. ಇದಿರಲೊಬ್ಬರ ಉಪಚಾರ ಸೇರದು ನೋಡಾ! ಎನಗೆ ಬಂದ ಬರವನರಿದು, ನಿಂದ ನಿಲವನರಿದು, ಕೂಡ ಬಲ್ಲರೆ ಶರಣಂಗೆ ಬೇರೊಂದೇಕಾಂತವೆಂಬ ಸಂದೇಹ ಉಂಟೆ ? ತೆರಹಿಲ್ಲದ ಘನವನೊಳಕೊಂಡ ಬಳಿಕ ಬರಲೆಡೆಯುಂಟೆ ನಮ್ಮ ಗುಹೇಶ್ವರಲಿಂಗಕ್ಕೆ ? ||೫೪||

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಆದಕ್ಕೆ ಸಿದ್ಧರಾಮಯ್ಯ ದೇವರ ಬಿನ್ನಹ. ಭಕ್ತವತ್ಸಲನೆನಿಸಿ ಇಲ್ಲಿಯ ಪರಿಯಂತರ ಬಿಜಯಂಗೈದು, ಇನ್ನು ಬಾರೆನೆಂಬುದಕ್ಕೆ ಕಾರಣವೇನು ಹೇಳೆಂದು ಬೆಸಗೊಂಬ ಪ್ರಸ್ತಾವದ ವಚನ.

ತೆರಹಿಲ್ಲದ ಘನ ತೆರಹಿಲ್ಲದ ಕುರುಹಿಂಗೆ ಬಂದ ಕಾರಣವೇನು ಹೇಳಾ ಎಲೆ ಅಯ್ಯ? ಭಕ್ತಿಕಾರಣದ ಇಚ್ಛೆಗೆ ಬಂದ ಬಳಿಕ ಉಪಚಾರಕ್ಕೆ ತೆರಹುಂಟೆ? ಕಪಿಲಸಿದ್ಧಮಲ್ಲಿನಾಥ ಬಿಜಯ ಮಾಡು ಕರುಣಿಗಳರಸಾ. ॥೫೫॥

ಈ ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಆದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ಭೃತ್ಯನಿದ್ದ ಠಾವಿಂಗೆ ಕರ್ತು ಬಂದರೆ ಅತ್ತಿತ್ತ ಹರಿಯದೆ, ನಂಬಬೇಕು ನೋಡಾ! ಕರ್ತನ ಕಂಡು ಭೃತ್ಯನುರಿಯನುಗುಳಿದರೆ ಬಳಿಕ ಕರ್ತೃ ತನ ಭೃತ್ಯಭಾವಕ್ಕೆ ಸಂಬಂಧವೇನು? ತಪ್ಪಿ ತಪ್ಪಿ ತಿದ್ದಿಕೊಂಡಿಹೆನೆಂದರೆ ಹಸನಾಗಬಲ್ಲುದೆ? ಗುಹೇಶ್ವರಲಿಂಗನ ಶರಣನಾರೆಂಬುದ ನೀನೆತ್ತ ಬಲ್ಲೆ ಹೋಗಾ ಮರುಳ ಸಿದ್ಧರಾಮಾ? ॥೫೬॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಸಿದ್ಧರಾಮಯ್ಯದೇವರು ನೊಂದು ಅತ್ಯಂತ ಭೀತಿಯನೈದಿ, ಬಿನ್ನೈಸಿದ ಪ್ರಸ್ತಾವದ ವಚನ.

ಎನ್ನ ಒಳಗೆ ಒತ್ತಿ ನೋಡುವಿರಿ. ಎನ್ನಲ್ಲೇನುಂಟಯ್ಯ? ನುಡಿ ಇಲ್ಲದ ಭವ ನೀನು ನುಡಿಗಲಿತನೆಂದರೆ, ನಿಮ್ಮನೊಡಂಬಡಿಸಲಾನು ಸಮರ್ಥನೆ? ಅನಂತ ವೇದಂಗಳೆಲ್ಲವು ನಿಮ್ಮ ಮುಂದೆ ಉಸುರಿಕ್ಕಲಮ್ಮದೆ ಮೂಗರಾಗಿದ್ದವು. ನಿಮಗಾನಿದಿರುತ್ತರ ಕೊಟ್ಟು ಕೆಟ್ಟಕೇಡಿಂಗೆ ಏನೆಂಬೆನೆಲೆಯಯ್ಯ? ಕಪಿಲಸಿದ್ಧಮಲ್ಲಿಕಾರ್ಜುನ ನಾನುಭಯ ಭ್ರಷ್ಟನೆಂಬುದ ನೀವೇ ಬಲ್ಲಿರಿ. ॥೫೭॥

ಮತ್ತಂ, ಅಯ್ಯ ನಿಮ್ಮ ಕಂಡಾಕ್ಷಣದಲ್ಲಿ ನಂಬಿ ನೆಚ್ಚಿ ಶರಣು ಹೋಗಲರಿಯದೆ ಕೆಮ್ಮನೆ ಕೆಟ್ಟೆ. ಅಹಂಕಾರವ ಹೊತ್ತುಕೊಂಡು ಕೆಟ್ಟೆನಯ್ಯ. ಕೆಡಿಸಿ ಮರುಗಿ ಅರಸಿಹೆನೆಂಬ ಮರುಳ ನಾನಯ್ಯ! ಕಪಿಲಸಿದ್ಧಮಲ್ಲಿನಾಥಯ್ಯ ಹಾಲಲದ್ದು ನೀರಲದ್ದು. ನೀನೇ ಗತಿ ಮತಿ. ॥೫೮॥

ಮತ್ತಂ, ಎನ್ನ ಭವಭಾರ ನಿಮ್ಮದಯ್ಯ! ಎನ್ನ ಹಾನಿವೃದ್ಧಿ ನಿಮ್ಮದಯ್ಯ! ಎನ್ನ ಕರಕರ ಕಾಡದಿರು ತಂದೆ. ನಿನ್ನ ಕಾಟ ಎನ್ನ ಪ್ರಾಣದೋಟ. ಕಪಿಲಸಿದ್ಧಮಲ್ಲಿನಾಥ ಕೊಲ್ಲು ಕಾಯಿ. ನಿಮ್ಮ ಧರ್ಮದವ ನಾನು. ॥೫೯॥

ಇಂತು ಕಿಂಕುರ್ವಾಣತೆಯಲ್ಲಿ ಸಿದ್ಧರಾಮಯ್ಯದೇವರು ಪ್ರಭುದೇವರ ಚರಣದ ಮೇಲೆ ಬಿದ್ದು ಅಳುತ್ತಿರಲು, ಆ ಪ್ರಭುದೇವರು ಕರುಣದಿಂ ಶಿರವ ಹಿಡಿದೆತ್ತಿದ ಪ್ರಸ್ತಾವದ ವಚನ.

ಹೊರಗಾಡಿ ಬಂದನೆಂದು ನುಡಿಸಲೊಲ್ಲದೆ ಸುಮ್ಮನಿದ್ದೆನು. ಎನ್ನ ಮನ ನೊಂದು ತಾಗಿದರೆ, ನಿಮ್ಮುತ್ತ ಮುಂದಾದೆನು. ಬಿಕ್ಕುತ್ತ ಬೆದರುತ್ತ ಕಾಲ ಮೇಲೆ ಬಿದ್ದರೆ, ಕಂಗಳುದಕ ಮಜ್ಜನಕ್ಕೆರೆದಂತಾಯಿತ್ತು. ಅಂತಿದ್ದರೆ ಕಂಡು, ನೆಗಹಿದೆನು ನಮ್ಮ ಗುಹೇಶ್ವರಲಿಂಗವು. ||೬೦||

ಇಂತು ಅಳುತಿಪ್ಪ ಸಿದ್ಧರಾಮಯ್ಯದೇವರು ಬಿನ್ನೈಸಿದ ವಚನ.

ಎನ್ನ ತನು ಕರಗಿ ಮನ ಕೊರಗಿದ ದುಃಖವಿದಾರದಯ್ಯ! ಅಯ್ಯಯ್ಯ ಎಂದು ಅಳುವ ಅಕ್ಕೆ ಇದಾರದಯ್ಯ! ಮರಹೆಂಬ ಕೂರಸಿಗೆ ಗುರಿ ಮಾಡಿದಪರಾರಯ್ಯಾ! ಹಾ! ಹಾ!! ಎಂಬ ಧ್ವನಿಯ ಕೇಳಲಾರದೆ ಕಂಡು ಕರುಣದಿಂದೆ ಶಿರವ ಹಿಡಿದೆತ್ತಿ ಎನ್ನ ಕಣ್ಣ ನೀರ ತೊಡೆದನು ಕಪಿಲಸಿದ್ಧಮಲ್ಲಿನಾಥಯ್ಯ. ||೬೧||

ಇಂತು ಸಿದ್ಧರಾಮಯ್ಯದೇವರ ಕಿಂಕುರ್ವಾಣತೆಯಂ ಕಂಡು ಕೃಪೆಯಿಂದ ಶಿರವ ಹಿಡಿದೆತ್ತಿ ಕಣ್ಣ ನೀರ ತೊಡೆದು ಆ ಪ್ರಭುದೇವರು ಪ್ರಸನ್ನರಾಗಿ, ಪರಮಯೋಗಿ, ಶುದ್ಧ ಸಾತ್ವಿಕಯೋಗಿ, ಸಚ್ಚಿದಾನಂದಯೋಗಿ, ನಿತ್ಯ ಪರಿಪೂರ್ಣಯೋಗಿ, ಶಿವಯೋಗಾಮೃತ ಸೇವ್ಯ ಸಂತುಷ್ಟಯೋಗಿ, ಪರಮಾನಂದಯೋಗಿ, ಸಕಲ ಕರಣಗುಣ ರಹಿತಯೋಗಿ, ಸರ್ವೇಂದ್ರಿಯ ಸುಖ ನಿರ್ಮಲಯೋಗಿ, ಸಂಸಾರವನದಾವಾನಲಯೋಗಿ, ಮಾಯಾಹರಯೋಗಿ, ಮಾಯಾಮದದೂರಯೋಗಿ, ಮಾಯಾ ಮದ ಮಥನಯೋಗಿ, ಸಗುಣಯೋಗಿ, ಸನ್ನಿಧಾನಯೋಗಿ, ನಿರ್ಗುಣಯೋಗಿ, ನಿರಂಜನಯೋಗಿ, ಸಕಲನಿಃಕಲತತ್ವ ಶಿರೋರತ್ನಯೋಗಿ, ಅಖಂಡ ಪರಿಪೂರ್ಣಯೋಗಿ, ಅಪ್ರಮಾಣ ಗುಣಭರಿತಯೋಗಿ, ಅಪ್ರತರ್ಕ್ಯ ಚಾರಿತ್ರಯೋಗಿ ಅಸಾಧ್ಯ ಸಾಧಕಯೋಗಿ, ಅಭೇದ್ಯಭೇದಕಯೋಗಿ, ಸುಜ್ಞಾನ ಪ್ರಭಾಮಯಯೋಗಿ, ಮಹಾಜ್ಞಾನೈಕ್ಯ ಚೈತನ್ಯಯೋಗಿ, ಕಾಯಗುಣ ಧರ್ಮಕರ್ಮ ಸಂಹಾರಯೋಗಿ, ಬ್ರಹ್ಮಾಂಡ ಸಂದೋಹ ಸಂಭೂತ ಕಾರಣಯೋಗಿ, ನಿರವಯ ನಿರ್ಲೇಪ ನಿಃಪಾಪಯೋಗಿ, ಇಹಲೋಕ ಪರಲೋಕ ಗತಿರಹಿತಯೋಗಿ, ಎಂದು ಕೊಂಡಾಡಿ, ಆ ಸಿದ್ಧರಾಮಯ್ಯದೇವರ ಬಿಗಿದಪ್ಪಿಕೊಂಡ ಪ್ರಸ್ತಾವದ ವಚನ.

ನಿಮ್ಮಲ್ಲಿ ಸನ್ನಿಹಿತನಾಗಿ, ನಿಜವನರಿತು ಬೆರಸಿದ ಶಿವಯೋಗಿಯ ಕಂಡರೆ, ಎನ್ನ ಮನವಗಲಲಾರದಯ್ಯಾ! ಎನ್ನ ತನು ಒಪ್ಪದಿರಲಾರದಯ್ಯಾ! ಎನ್ನ ಶಬುದ ಹೊಗಳಿದಲ್ಲದೆ ಸೈರಿಸದಯ್ಯಾ. ಗುಹೇಶ್ವರ, ನಿಮ್ಮ ಶರಣ ಶಿವಯೋಗಿ ಸಿದ್ಧರಾಮಯ್ಯನನಪ್ಪಿ ಸೊಪ್ಪಳಿದು, ನಮೋ ನಮೋ ಎನುತಿರ್ದೆನು. ||೬೨||

ಮತ್ತಂ, ಕಾಯದೊಳಗೆ ಕರಣವಿಲ್ಲ. ಪ್ರಾಣದೊಳಗೆ ಭಾವವಿಲ್ಲ. ಭಾವದೊಳಗೆ ಭ್ರಮೆ ಇಲ್ಲ. ನವನಾಳದೊಳಗೆ ಸುಳುಹು ಮುನ್ನಿಲ್ಲ. ಬ್ರಹ್ಮರಂಧ್ರದಲ್ಲಿ ಅರಿವರತ ಶಿವಯೋಗಿ ಗುಹೇಶ್ವರನ ಶರಣ ಸಿದ್ಧರಾಮಯ್ಯ, ನಿನ್ನ ಕಂಡೆನ್ನ ಭವಂ ನಾಸ್ತಿಯಾಯಿತ್ತು ಕೇಳಾ. ||೬೩||

ಮತ್ತಂ, ಯೋಗ ಶಿವಯೋಗವೆಂದೆಂಬರು. ಯೋಗದ ಹೊಲಬನಾರು ಬಲ್ಲರಯ್ಯಾ! ಹೃದಯ ಕಮಲಸತ್ರದಲ್ಲಿ ಭ್ರಮಿಸುವನ ಕಳೆದಲ್ಲದೆ, ಯೋಗವೆಂತಪ್ಪುದೋ? ಐವತ್ತೆರಡಕ್ಷರದ ಲಿಪಿಯ ನೋಡಿ ನೋಡಿ, ಆರು ನೆಲೆಯ ಮೇಲಿಪ್ಪ ಮಣಿಮಾಡದೊಳಗೆ ಇರಬಲ್ಲರೆ ಅದು ಯೋಗ. ಸೋಹಂಮೆಂಬಲ್ಲಿ ಸುಳುಹಡಗಿ, ಮನ ನಷ್ಟವಾಗಿರಬಲ್ಲ ಕಾರಣ ಗುಹೇಶ್ವರಲಿಂಗದಲ್ಲಿ ನೀನು ಸ್ವತಂತ್ರ ಧೀರನೆಂಬುದು ಕಾಣ ಬಂದಿತ್ತು ಕಾಣಾ ಸಿದ್ಧರಾಮಯ್ಯ. ||೬೪||

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರ ಬಿನ್ನಹ.

ಯೋಗದ ಹೊಲಬ ನಾನೆತ್ತ ಬಲ್ಲೆನಯ್ಯಾ! ಯೋಗ ಶಿವಭಕ್ತಿ ಷಟ್‌ಸ್ಥಲದಲ್ಲಿಪ್ಪುದಲ್ಲದೆ, ಶಿವಭಕ್ತಿ ವಿಯೋಗವಾದ ಯೊಗವಿಲ್ಲವಯ್ಯಾ! ಹೃದಯಕಮಲದಲ್ಲಿ ಭ್ರಮಿಸದೆ ಇಪ್ಪಾತ ನೀನೆಯಲ್ಲದೆ ಎನಗೆ ಬೇರೆ ಸ್ವತಂತ್ರವಿಲ್ಲ ಕೇಳಾ ಕಪಿಲಸಿದ್ಧಮಲ್ಲಿಕಾರ್ಜುನ. ||೬೫||

ಉತ್ಪತ್ತಿ ಸ್ಥಿತಿಲಯವಿಲ್ಲದಭವ ನೀನು, ಕಂಡಯ್ಯಾ! ಎನಗೆ ಬೇರೆ ಸ್ವತಂತ್ರವಿಲ್ಲ ಕೇಳಾ. ನಿನ್ನ ಇಚ್ಛಾಮಾತ್ರದಿಂದ ನಾನಿಪ್ಪೆನು. ಹಿರಿಯ ನೀನೇ ದೇವಾ. ಕಪಿಲಸಿದ್ಧಮಲ್ಲಿಕಾರ್ಜುನ ನಾನೇತರೊಳಗಪ್ಪೆನು ಹೇಳಾ ಪ್ರಭುವೆ? ||೬೬||

ಈ ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ.

ಮನಮನ ಬೆರಿಸಿದವರೆಂತಿಪ್ಪರವರ ಪರಿಯನರಿಯಬಾರದು ಕೇಳಾ! ಇದಿರಿಂಗೆ ಇಚ್ಛೆಯರಿಯದಿಪ್ಪರು. ಒಳಗೆ ನೋಡಿದರೆ ಬಟ್ಟ ಬಯಲಲಿಪ್ಪರು. ಗುಹೇಶ್ವರನ ಶರಣರು ತಾವಿಲ್ಲದ ಮಹಿಮರೆಂಬುದ ನಿನ್ನಿಂದರಿದೆ ನೋಡಾ ಸಿದ್ಧರಾಮಯ್ಯ. ||೬೭||

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರ ಬಿನ್ನಹ.

ಅಪ್ಪುದನಲ್ಲದುದನೊಪ್ಪವ ಮಾಡುವಿರಿ. ಅಯ್ಯ ನಿನ್ನೊಲವು ಛಲವು ಕಂಡಯ್ಯ! ನೀನಿಂತು ನೋಡಿದವರಂತಿಪ್ಪುದಲ್ಲದೆ ಅಪ್ಪುದಲ್ಲವೆಂಬವರಿಲ್ಲ ಕಾಣಾ ಕಪಿಲಸಿದ್ಧಮಲ್ಲಿಕಾರ್ಜುನ. ||೬೮||

ಈ ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಆ ಪ್ರಭು ದೇವರು ಸಂತೋಷಿಸಿದ ಪ್ರಸ್ತಾವದ ವಚನ.

ಸ್ವತಂತ್ರ ಪರತಂತ್ರಕ್ಕೆ ಆವುದು ಚಿಹ್ನ ನೋಡಾ! ತಾನೆಂಬುದಳಿದು ಇದಿರೆಂಬುದ ಮರೆದು, ಭಾವ ದಗ್ಧವಾಗಿರ ಬಲ್ಲರೆ, ಅದು ಸ್ವತಂತ್ರ. ನೀನೆಂಬುದ ಧಿಃಕರಿಸಿ, ತಾನೆಂಬುದ ನೀಃಕರಿಸಿ ಉಭಯ ಭಾವದಲ್ಲಿ ಸನ್ನಿಹಿತನಾಗಿರಬಲ್ಲಡೆ ಪರತಂತ್ರ. ಪರತಂತ್ರ ಸ್ವತಂತ್ರವೆಂಬರಡನು ವಿವರಿಸದೆ ತನ್ನ ಮರೆದಿಪ್ಪನೆ ಉಪಮಾತೀತನು. ಗುಹೇಶ್ವರನ ಶರಣರು ದೇಹವಿಲ್ಲದ ನಿರ್ದೇಹಿಗಳೆಂಬುದು ಇಂದೆನಗೆ ಕಾಣ ಬಂದಿತ್ತು ನೋಡಾ ಸಿದ್ಧರಾಮಯ್ಯ. ||೬೯||

ನೀನು ನಿರ್ದೇಹಿ ಎಂದು ಎನಗೆ ಅರಿಯ ಬಂದಿತ್ತೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ.

ಮಾತುಳ್ಳನ್ನಕ್ಕರ ದೇಹ ಹಿಂಗದು. ನೆನಹುಳ್ಳನ್ನಕ್ಕರ ಪ್ರಾಣಸೂತಕ ಬಿಡದು. ಕಾಯದ ಜೀವದ ಹೊಲಿಗೆಯ ಸಂದ ಬಿಚ್ಚಲರಿಯೆನು. ಆನು ನಿರ್ದೇಹಿ ಎಂದರೆ ನಗರೇ ನಿಮ್ಮ ಪ್ರಮಥರು? ಎನ್ನ ಅಂತರಂಗದಲುಳ್ಳ ಅವಗುಣವ ಹಿಂಗಿಸಿ ನಿನ್ನಂತೆ ಮಾಡಿದಡಾನುಳುವೆನಲ್ಲದೆ ಬೇರೆ ಗತಿಯ ಕಾಣೆ ನೋಡಯ್ಯ. ಕಪಿಲ ಸಿದ್ಧಮಲ್ಲಿನಾಥ ಹಿಂದೆ ಇಲ್ಲದಡೇನು ಮುಂದೆ ತಪ್ಪದು. ||೭೦||

ಈ ಬಿನ್ನಪಕ್ಕೆ ಪ್ರಭುದೇವರು ಮಚ್ಚಿ ಆ ಸಿದ್ಧರಾಮಯ್ಯದೇವರ ಕೈವಿಡಿದುಕೊಂಡು, ಏಕಾಂತ ಸಮಾಧಿಸ್ಥಾನಕ್ಕೆ ಬಿಜಯಂಗೈಸುವ ಪ್ರಸ್ತಾವದ ವಚನ.

ಅಹುದಹುದು. ಭಕ್ತಿಭಾವದ ಭಜನೆ ಎಂತಿಹುದೆಂದರೆ, ಅಂತರಂಗದ ಅರುಹಿಂಗೆ ಆಚಾರವೇ ಕಾಯ. ಆಚಾರ ಕಾಯವಿಲ್ಲದಡೆ, ಅರುಹಿಂಗಾಶ್ರಯವಿಲ್ಲ. ಅರಿವು ಆಚಾರದಲ್ಲಿ ಸನುವೇಧಿಸಿದ ಲಿಂಗೈಕ್ಯನ ಕ್ರಿಯಾಬದ್ಧನೆಂದು ನುಡಿದರೆ, ಪಂಚ ಮಹಾಪಾತಕ. ನಿನ್ನ ಅರಿವಿಂಗೆ ಅಚ್ಚಾಗಿ ಆಚಾರಕ್ಕೆ ಆಳಾಗಿ ನಮ್ಮ ಗುಹೇಶ್ವರ ನಿನ್ನ ಕೈವಶಕ್ಕೆ ಒಳಗಾದನು. ನಿನ್ನ ಸುಖಸಮಾಧಿಯ ತೋರಬಾರಾ ಸಿದ್ಧರಾಮಯ್ಯ ॥೭೧॥

ಇಂತು ಸಿದ್ಧರಾಮಯ್ಯದೇವರ ಕೈವಿಡಿದುಕೊಂಡು, ಪ್ರಭುದೇವರು ಏಕಾಂತ ಸಮಾಧಿಗ ಬಿಜಯಂಗೈವ ಪ್ರಸ್ತಾವದೊಳು ಸಿದ್ಧರಾಮಯ್ಯ ತಂದೆಗಳು ಬಿನ್ನೈಸಿದ ಪ್ರಸ್ತಾವದ ವಚನ.

ಎಮ್ಮ ನಲ್ಲನೊಲಿದು ಒಲಿಸಿ ಕಾಡುತ್ತಿದ್ದರೆ, ಬಾರಾ ಬಾರಾ ಎಂದೆನ್ನ ಕರಣ ಹರಣವ ತೋರಿದರೆ, ತಾನೇ ಒಲಿದು ಬಂದೆನ್ನ ತಲೆಯ ಹಿಡಿದು, ನೆಗಹಿ ಎನ್ನ ಮನೆಗೆ ಬಂದ ಕಪಿಲಸಿದ್ಧಮಲ್ಲಿನಾಥನ ಒಲುಮೆಯ ಘನವನೇನೆಂದುಪಮಿಸುವೆನು? ॥೭೨॥

ಇಂತು ಪ್ರಭುದೇವರು ಮಠಕ್ಕೆ ಬಿಜಯಂಗೈದಲ್ಲಿ ಆ ಸಿದ್ಧರಾಮಯ್ಯದೇವರು ತಮ್ಮ ಮೇಲಣ ಕೃಪೆಯಿಂದ ಬಂದರೆಂದು ಬಿನ್ನೈಸುವ ಪ್ರಸ್ತಾವದ ವಚನ.

ಅಂಗವಳಿದು ನಿಂದವನೆಂದು ನಾನರಿಯೆ. ಘನಲಿಂಗದಲ್ಲಿ ಸಲೆ ಸಂದವನೆಂದು ನಾನರಿಯೆ. ಆವ ವೇಷದಲ್ಲಿ ನೀ ಬಂದು ನಿಂದ ಠಾವ ನಾನರಿಯೆ. ಕ್ರೋಧವೆಂಬ ಸಂಸಾರಸಾಗರದಲ್ಲಿ ಸಾಧನೆಯ ಮಾಡಲಾಗಿ, ಪ್ರಭುದೇವರ ಸುಳುಹು ಅಘಟಿತವಾಯಿತ್ತು ಕಪಿಲಸಿದ್ಧಮಲ್ಲಿಕಾರ್ಜುನ. ॥೭೩॥

ಇಂತು ಸಿದ್ಧರಾಮಯ್ಯದೇವರು ಪ್ರಭುದೇವರಿಗೆ ತಮ್ಮ ಹೃದಯಕಮಲವೆಂಬ ಸಿಂಹಾಸನವನ್ನಿಕ್ಕಿ ಪಾದಾರ್ಚನೆಯ ಮಾಡಿ, ಅಷ್ಟವಿಧಾರ್ಚನೆ ಷೋಡಶೋಪಚಾರದಿಂದರ್ಚಿಸಿ, ಪಾದೋದಕವಂ ಕೊಂಡು ಪರಮ ಹರುಷವನ್ನೈದಿದ ಪ್ರಸ್ತಾವದ ವಚನ.

ಅಯ್ಯ ಅಯ್ಯ ನೀವು ಬಾರದಿರ್ದಡೆ ಅಂತು ಹಂಬಲಿಸುತ್ತಿರ್ದೆ. ನೀನೆನ್ನ ಹಂಬಲವ ಕೇಳಿ ಕರುಣದಿಂದೆ ಭೋರನೆ ಬಂದರೆ ಆನು ತಳವೆಳಗಾಗಿ ಅವಗುಣವೆಂಬ ರಜವ ಕಳೆದು, ಕಂಬಳಿಯ ಪೀಠವನೊಲ್ಲದೆ ಹೃದಯ ಪೀಠವನಿಕ್ಕಿ ಮೇಲುಪ್ಪಂಗೆಯ ಒರತೆಯ ಅಗ್ಘಣಿಯ ತಂದು, ಪಾದಾರ್ಚನೆಯ ಮಾಡಿ, ಎರಡೆಸಳ ಕಮಲವನೆರಡು ಪಾದಕ್ಕೆ ಪೂಜಿಸಿ, ಕಂಗಳ ತಿರುಳ ತೆಗೆದು, ಆರತಿಯನೆತ್ತಿ, ಉಸಿರ ನುಂಗಿದ ಪರಿಮಳದ ಧೂಪವ ಬೀಸಿ, ನೆತ್ತಿಯಾ ಪರಿಯಾಣದೊಳಿಟ್ಟು, ಬೋನವ ಗಡಣಿಸಿದರೆ, ಸುಯಿಧಾನ ಸವೆಯದೆ ಆರೋಗಣೆಯ ಮಾಡಿ ಉಂಡು, ಬಾಯ್ದೊಳೆದರೆ ಸಂದೇಹವಾದುದೆಂದು ಮೇಲು ಸೆರಗಿನೊಳು ತೊಡೆದುಕೊಂಡು, ಬಾಯಮುಚ್ಚಳದೆಗೆಯದೆ, ತ್ರಿಕರಣವೆಂಬ ತಾಂಬೂಲವನವಧರಿಸಿದ ಭಾವವ ಕನ್ನಡವ ಹರಿದು ಹಾಯ್ಕಿದಾತನ ಪಾದಕ್ಕೆ ನಾನು ಶರಣೆಂದು ಪಾದೋದಕವ ಕೊಂಡೆ. ಆತನ ಪ್ರಸಾದಕ್ಕೆನ್ನ ಸೆರಗ ಹಾಸಿ ಆರೋಗಿಸಿ ಸುಖಿಯಾದೆನು. ಕಪಿಲಸಿದ್ಧಮಲ್ಲಿಕಾರ್ಜುನಯ್ಯ ನಿಮ್ಮ ಶರಣ ಪ್ರಭುದೇವರ ಕರುಣವೆನಗೆ ಸಾಧ್ಯವಾದ ಪರಿಯನೇನೆಂದುಪಮಿಸುವೆನು ? ||೭೪||

ಇಂತು ಪ್ರಭುದೇವರ ಶ್ರೀಪಾದವನು ಅಷ್ಟವಿಧಾರ್ಚನೆ ಷೋಡಶೋಪಚಾರದಿಂದ ಪೂಜಿಸಿದ ಸಿದ್ಧರಾಮಯ್ಯದೇವರ ಕೃಪೆಯಿಂದಲೆನ್ನ ಬೋಧಿಸಿ ಎಂದು ಬಿನ್ನೈಸುವ ಪ್ರಸ್ತಾವದ ವಚನ.

ಆದಿಯಲ್ಲಿ ನಿಮ್ಮಿಂದಲಾದೆನಯ್ಯ ! ಅನಾದಿಯಲ್ಲಿ ನಿಮ್ಮಲ್ಲಿ ತದ್ಗತನಾದೆನಯ್ಯ ! ನಿಮ್ಮ ಹಸ್ತ ಮುಟ್ಟಿದಲ್ಲಿ ನಿಮ್ಮನೆನ್ನ ಮನದೊಳಗಿಟ್ಟುಕೊಂಡಿದ್ದೆನಯ್ಯ ! ಕಾಯವೆಂಬ ಕಪಟವನೊಡ್ಡಿ ನಿಮ್ಮನರಸಿಕೊಂಡಿದ್ದರೆ, ನಿನ್ನ ಬಳಿಬಳಿಯ ಸಂದು ಕಂಡೆನಯ್ಯ ! ಕಪಿಲಸಿದ್ಧಮಲ್ಲಿನಾಥಯ್ಯ, ಎನ್ನ ಅಂತರಂಗವ ಶುದ್ಧವ ಮಾಡಿ ತಿಳುಹಾ ನಿಮ್ಮ ಧರ್ಮ. ||೭೫||

ಈ ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರ ನಿರೂಪ.

ಆದಿಯಲ್ಲಿ ಗುರುಬೀಜವಾದ ಪಿಂಡಕ್ಕೆ ಅನಾದಿ ಎಂಬುದನೊಬ್ಬರು ತಿಳುಹಲುಂಟೆ ? ಆದಿ ಕಾಯ ಅನಾದಿ ಪ್ರಾಣವಾಗಿಪ್ಪ ಯೋಗವ ಭೇದಿಸಿ

ತನ್ನೊಳಗೆ ತಾನೆ ತಿಳಿದು ನೋಡಲು, ಕೋಹಂಮೆಂಬುದು ತಾನೆ ಸತ್ಯ ನೋಡಾ! ಗುಹೇಶ್ವರಲಿಂಗದ ನಿಲವು ಹೇಳಿ ಕಂಡಿಹೆನೆಂದರೆ ಅಸಾಧ್ಯ ಕಾಣಾ ಸಿದ್ಧರಾಮಯ್ಯ ॥೭೬॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು ಅದಕ್ಕೆ ಸಿದ್ಧರಾಮ ದೇವರ ಬಿನ್ನಹ.

ಎಲೆ ಅಯ್ಯ ನಿನ್ನ ಕಂಡ ಬೆಳಗಿನ ಪರಿಯ ಕೇಳು ಕಂಡಾ! ನಾನಾರೆಂಬುದ ತಿಳಿದು ನೋಡಿ ಕಂಡ ಬೆಳಗು ಕಾಂಬ ಪರಿ ಎಂತು ಹೇಳಾ! ಕಂಡುದ ಕಂಡು, ಕಾಯದೊಳಗೆ ಸಂತವಿಡುವ ಪರಿ ಎಂತಯ್ಯ! ಕಪಿಲ ಸಿದ್ಧಮಲ್ಲಿನಾಥಯ್ಯ, ನೀನೆನ್ನ ಮನವ ತಿಳಿಪಡೆ, ಅಸಾಧ್ಯ ಉಂಟೆ ದೇವರ ದೇವಾ ॥೭೭॥

ಈ ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭು ದೇವರು ನಿರೂಪಿಸಿದ ವಚನ.

ತನ್ನನರಿಯೆನೆಂಬುದು ಅಜ್ಞಾನ ನೋಡಾ! ಅರಿಯದೆ ಅಜ್ಞಾನವನ ತಿಗಳೆದು, ಜ್ಞಾನವ ಕಾಣೆನೆಂಬುದು ವಿಪರೀತ ಭಾವ ನೋಡಾ! ಎಲ್ಲವನು ತೋರುವ ಘನವನೆಲ್ಲಿಯೂ ಕಾಣಬಾರದು. ಕಾಣಬಾರದ ನಿಜವ ತೋರಬಾರದು. ತೋರಬಾರದ ಮಹವ ತಿಳಿಯಬಹುದೆ? ಗುಹೇಶ್ವರಲಿಂಗದಲ್ಲಿ ಬಯಕೆಯುಳ್ಳನ್ನಕ್ಕರ ತವಕವೆಡೆಗೊಂಡಿಪ್ಪ ಕಾರಣ, ತಿಳುಹಲಿಲ್ಲವೆಂಬುದ ನಿನ್ನ ನೀ ತಿಳಿದು ನೋಡಾ ಸಿದ್ಧರಾಮಯ್ಯ. ॥೭೮॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು ಅದಕ್ಕೆ ಸಿದ್ಧರಾಮಯ್ಯ ದೇವರು ಬಿನ್ನೈಸಿದ ಪ್ರಸ್ತಾವದ ವಚನ.

ಕಂಡ ಕನಸು ದಿಟವಾಗಿ ಕಂಡೆನೆಂಬೆ. ಕಂಡೆನೆಂಬುದು ಬೆನ್ನ ಬಿಡದು. ಕಂಡುದ ಕಾಣೆನೆಂಬುದ ಎರಡನು ಅರಿಯದೆ, ತವಕ ತಲ್ಲಣಕ್ಕೆ ಎಡೆಯಾದೆನು. ತವಕದ ಕೂಟ ನಿಮ್ಮಲ್ಲಿ ತದ್ಗತವಾದೆನು. ಕಪಿಲಸಿದ್ಧಮಲ್ಲಿನಾಥಯ್ಯ, ನಿಮ್ಮ ಕರುಣವೆನಗೆ ಸಾಧ್ಯವಾಯಿತ್ತು ॥೭೯॥

ಕೂಡುವ ತವಕವೆ ನಿಮ್ಮಲ್ಲಿ ಸಮರಸವಾಯಿತ್ತೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ.

ಬಯಕೆ ಎಂಬುದು ದೂರದ ಕೂಟ. ಬಯಸೆನೆಂಬುದು ಕೂಟದ ಸಂದು. ಈ ಉಭಯವು ಕಪಟದ ಕನ್ನಡವಲ್ಲದೆ ಸಹಜವಲ್ಲ. ಕೂಡಿ ಕಂಡ ಪರಿಯೆಂತು ಹೇಳಾ! ಇನ್ನು ಲಿಂಗೈಕ್ಯವನು ಕೂಪ ಠಾವಿನಲ್ಲಿ ಪರವಶನಾದೆನೆಂಬ ಮಾತು ಮೆಚ್ಚುವನೆ ನಮ್ಮ ಗುಹೇಶ್ವರಲಿಂಗವು? ॥೮೦॥

ಇಂತು ಲಿಂಗದಲ್ಲಿ ಕೂಪವಾಗಿದ್ದಲ್ಲಿ ಭೇದ ಬುದ್ಧಿ ಎಡೆಗೊಂಡಿಪ್ಪುದಲ್ಲದೆ, ಸಮರಸಭಾವವಿಲ್ಲೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ.

ನೀ ಕೂಪನಾಗಿದ್ದಲ್ಲಿ ಕೂಪೆ ನೋಡಯ್ಯ! ನೀ ಒಲ್ಲದಿದ್ದರೆ ಒಲ್ಲೆ ನೋಡಯ್ಯ! ಎನ್ನರಿವು ಮರವೆ ಇಬ್ಬರಿಗೂ ಸಮ ನೋಡಯ್ಯ. ಎನ್ನ ಬಯಕೆಯೊಳಗಣ ಬಯಕೆಯ ನಿಧಾನವು ನೀನೆಂದು ಕಂಡ ಬಳಿಕ ಬಯಸುವಾತ ನೀನೆ ಕಾಣಾ ಕಪಿಲಸಿದ್ಧಮಲ್ಲಿನಾಥಯ್ಯಾ. ॥೮೧॥

ಈ ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ.

ಬಯಸುವ ಬಯಕೆ ನೀನಾದ ಪರಿ ಎಂತು ಹೇಳಾ! ಅರಸುವ ಆರಿಕೆ ನೀನಾದ ಪರಿ ಎಂತು ಹೇಳಾ! ಕಾಯವೆ ಲಿಂಗ, ಪ್ರಾಣವೆ ಶರಣನಾದ ಶರಣಂಗೆ, ಬೇರೆ ದೇವಾಲಯವ ಮಾಡಿಸಲೇಕೆ ಹೇಳಾ? ಗುಹೇಶ್ವರ ಲಿಂಗವು ಸಾಧ್ಯವಾಯಿತ್ತೆಂಬುದ ಮಾತಿನಲ್ಲಿ ಕಂಡೆನಲ್ಲದೆ ಕಾರ್ಯದಲ್ಲಿ ಕಣೆ ನೋಡಾ ಸಿದ್ಧರಾಮಯ್ಯ. ॥೮೨॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು ಅದಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ.

ಅಣುವಿನೊಳಗೆ ಅಣುವಾಗಿಪ್ಪಿರಿ, ಎಲೆ ದೇವಾ ನೀವು. ಮನದೊಳಗೆ ಘನವಾಗಿಪ್ಪಿರಿ, ಎಲೆ ದೇವಾ. ಜಗದೊಳಗೆಲ್ಲಿಯು ನೀವಿಲ್ಲದೆಡೆಯುಂಟೆ? ಎಂಬತ್ತುನಾಲ್ಕು ಲಕ್ಷ ಶಿವಾಲಯಂಗಳ ನೀವು ಮಾಡಿ ಒಳಗಿಪ್ಪುದ ಕಂಡು ನಾನು ಮಾಡಿದೆನಲ್ಲದೆ ಕಪಿಲಸಿದ್ಧಮಲ್ಲಿನಾಥಯ್ಯ ಎನಗೆ ಬೇರೆ ಸ್ವತಂತ್ರವಿಲ್ಲವೆಂದರಿಯೆನು. ॥೮೩॥

ಈ ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರ ಪ್ರತ್ಯುತ್ತರ.

ಕಡೆನಾಡ ಲಿಂಗವ ನಡುನಾಡಿಗೆ ತಂದೆನೆಂದೆಂಬ ಅಹಂಕಾರವ ಮುಂದುಗೊಂಡು ಇದ್ದೆಯಲ್ಲ! ಎಂಬತ್ತು ನಾಲ್ಕು ಲಕ್ಷ ಶಿವಾಲಯಂಗಳೆಂಬ ಬಯಲ ಭ್ರಮೆ ಇದೇನು ಹೇಳಾ? ಆ ಮಹಾ ಘನಲಿಂಗಕ್ಕೆ ಜಗದ ಜೀವರಾಶಿಗಳು ಶಿವಾಲಯವ ಮಾಡಬಲ್ಲವೆ? ನಿನ್ನ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಲಿಂಗವ ನಿನ್ನ ಎದೆಯಲ್ಲಿ ಇರಿಸಿಕೊಳ್ಳಲರಿಯದ ಕಾರಣ ಗುಹೇಶ್ವರ ಲಿಂಗವು ನಿನ್ನ ತಪ್ಪಿಸಿ ಹೋದುದ ಮರೆದೆಯಲ್ಲ ಸಿದ್ಧರಾಮಯ್ಯ. ॥೮೪॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರ ಬಿನ್ನಹ.

ಸಕಲ ಲಿಂಗವ ಹಿಡಿದು ಅಗಲದೆ ನಡೆ ಎಂದಿರಾಗಿ ನಡೆವುತ್ತಿರ್ದೆನು. ಲಿಂಗ ಪ್ರತಿಷ್ಠೆಯ ಮಾಡೆಂದು ಎನಗೆ ನಿರೂಪಿಸುತ್ತಿರ್ದ ಕಾರಣ ಮಾಡುತ್ತಿರ್ದೆನಲ್ಲದೆ ಎನಗೆ ಬೇರೆ ಸ್ವತಂತ್ರ ಉಂಟೇ? ಹಿಂದೆ ನೀವು ಕೊಟ್ಟ ನಿರೂಪ ನಿಮಗೆ ಹುಸಿಯಾದರೆ ಇನ್ನು ಮುಂದೆ ಸ್ವಯವಪ್ಪಂತೆ ನಡಿಸಾ ಕಪಿಲಸಿದ್ಧಮಲ್ಲಿನಾಥಯ್ಯ. ॥೮೫॥

ಇಂತು ನಾನು ಮಾಡುವುದೆಲ್ಲವು ನಿಮ್ಮಾಧೀನವಲ್ಲದೆ, ಎನಗೆ ಬೇರೆ ಸ್ವತಂತ್ರ ಉಂಟೆ? ಮುಂದೆ ನಿಮ್ಮಲ್ಲಿ ನಿಜವಳವಡುವಂತೆ ಮಾಡಾ, ಎಂದುದ ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ.

ಕೆರೆ ದೇಗುಲಂಗಳೆಲ್ಲವು ಹಿಂದಣ ಅಡಿವಜ್ಜೆಗೊಳಗು. ಕರ್ಮಕಾಂಡ ಯೋಗಂಗಳೆಲ್ಲವು ಭವದ ತೆಕ್ಕೆಗೆ ಒಳಗು. ಹಿಂದಣ ಮುಂದಣ ಸಂದವಳಿದು, ಗುಹೇಶ್ವರ ಲಿಂಗದಲ್ಲಿ ಸಂದಿರಬೇಕು ಸಿದ್ಧರಾಮಯ್ಯ. ॥೮೬॥

ಈ ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯಗಳ ಬಿನ್ನಹ.

ಕೃಷಿಮಾಡಿ ಉಣ್ಣದೆ ಹಸಿವು ಹರಿವ ಪರಿ ಇನ್ನೆಂತೋ? ಕರ್ಮಯೋಗವ ಮಾಡದೆ ನಿರ್ಮಲ ಸುಚಿತ್ತವನರಿವ ಪರಿ ಇನ್ನೆಂತೋ? ಬೀಯದೆ ಅಶನವನುಂಬ ಠಾವಾವುದು ಕಪಿಲಸಿದ್ಧಮಲ್ಲಿಕಾರ್ಜುನಲಿಂಗಕ್ಕೆ? ॥೮೭॥

ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ.

ಕರ್ಮವೇ ಪ್ರಾಣವೆಂದು ಮಾಡುವಾಗ ಜ್ಞಾನವನರಿವ ನೆಲೆಸಂದು ವಿನ್ನಾವುದು? ಸಾವನ್ನಕ್ಕ ಸಾಧನೆಯ ಮಾಡಿ, ಕಾದುವ ಠಾವಿನ್ನಾವುದು?

ಅರಿದು ದನತಿಗಳೆದು ಮೇಲರಿದುದ ಕರಿಗೊಳುತ್ತ ತುಷವ ನೀಗಿದ ತಂಡುಲದಂತೆ ಕಾಯದ ದೆಸೆ ಶುದ್ಧವಾಗಿರಬೇಕು ಗುಹೇಶ್ವರ ಲಿಂಗವನರಿವುದಕ್ಕೆ ಸಿದ್ಧ ರಾಮಯ್ಯ. ||೮೮||

ಇದಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ.

ಕೈಯಲ್ಲಿ ಹಿಡಿದು ಕಾಂಬುದು ಕರ್ಮದ ಪೂಜೆಯಲ್ಲವೆ? ಮನದಲ್ಲಿ ನೆನೆದು ಮಾಡುವದೆಲ್ಲವು ಕಾಯದ ಕರ್ಮವಲ್ಲವೆ? ಭಾವ ಶುದ್ಧವನರಿವ ಪರಿ ಇನ್ನಾವುದು ಕಪಿಲಸಿದ್ಧಮಲ್ಲಿಕಾರ್ಜುನ? ||೮೯||

ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ.

ಚಿನ್ನವನೊರೆಯಬಹುದಲ್ಲದೆ, ಬಣ್ಣವನೊರೆಯಬಹುದೆ? ಹೂವ್ವ ಮುಡಿಯಬಹುದಲ್ಲದೆ, ಗಂಧವ ಮುಡಿಯಬಹುದೆ? ಕರ್ಮವ ಮಾಡಬಹುದಲ್ಲದೆ ವಸ್ತುವನರಿಯಬಹುದೆ? ಗುಹೇಶ್ವರನ ನೆನೆಯ ಬಹುದಲ್ಲದೆ ಲಿಂಗವು ತಾನಾಗಬಾರದು ಸಿದ್ಧರಾಮಯ್ಯ. ||೯೦||

ಅದಕ್ಕೆ ಸಿದ್ಧರಾಮಯ್ಯದೇವರ ಪ್ರತ್ಯುತ್ತರ.

ಬಣ್ಣವಿಲ್ಲದೆ ಚಿನ್ನ ನಾಮಕ್ಕರ್ಹವಾದ ಪರಿ ಇನ್ನೆಂತಯ್ಯ! ಹೂವೊಡೆದು ವಾಸನೆ ಮೂಡಿದ ಠಾವಿನಲ್ಲಿ ವಾಸನೆ ನಿಂದುದಿಲ್ಲವೆ? ಅಯ್ಯ, ಕ್ರಿಯಾಶುದ್ಧವಾದಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವು ಭಾವಶುದ್ಧವಾಗಿಪ್ಪನು ||೯೧||

ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ರಾಗವಡಗಿ ತಾಮಸ ನಿಂದು ಅಹಂಕಾರದ ಗಿರಿಯಡಗಿ ಮಾತಿನ ಬಣಬೆಯ ಮೆದೆಯ ಸುಟ್ಟು, ಕಾಯ ಕರ್ಮದಲ್ಲಿ ಸವೆಯುತ್ತ, ಜೀವ ಸಕಲ ಸಂಸಾರದಲ್ಲಿ ನೋವುತ್ತ, ಮತ್ತೆ ಭಾವಶುದ್ಧ ಉಂಟೆ ಗುಹೇಶ್ವರ ಲಿಂಗಕ್ಕೆ? ||೯೨||

ಇದಕ್ಕೆ ಸಿದ್ಧರಾಮಯ್ಯದೇವರು ಕೊಟ್ಟ ಪ್ರತ್ಯುತ್ತರ.

ನುಡಿದಿಹೆನೆಂಬ ಉಲುಹಿನ ಗಲಭೆಯ ತೋಟಿ ಬಿಡದು. ಉತ್ತಮ ಮಧ್ಯಮ ಕನಿಷ್ಠವೆಂದು ತಿರುಗಿ ಕಂಡಿಹೆನೆಂಬ ಕಾಲಿನ ಎಡೆಯಾಟ ಬಿಡದು. ಎನಗೆ ಗರ್ವ ಮೊದಲಾದಲ್ಲಿ ನಿಮಗೆ ಗರ್ವ ವೆಗ್ಗಳವಾಯಿತ್ತು. ಉಭಯದ ತೋಟಿಯ ನಾನಿನ್ನಾರಿಗೆ ಹೇಳುವೆ ಕಪಿಲಸಿದ್ಧಮಲ್ಲಿಕಾರ್ಜುನ? ||೯೩||

ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ.

ಕ್ಷೀರಕ್ಕೆ ತವರಾಜನ ಹೊಯಿದಲ್ಲಿ ಬೇರೆ ಲೇಸು ಕಷ್ಟವನರಸುವರೆ? ಅಂಗಕ್ಕೆ ತಿಮಿರವಾದಲ್ಲಿ ಅಂಗುಲಿ ಮುಟ್ಟಿ ಅಂಗದ ತಿಮಿರಿವ ಕೆಡಿಸಿವರೆ ಅಂಗಕ್ಕೆ ಮಿಥ್ಯ ಉಂಟೆ? ಎನ್ನಂಗವು ತಾನಾದ ಕಾರಣ ನೀನೆಂಬ ನಾಮ ಬೇರಿಲ್ಲ, ಗುಹೇಶ್ವರಲಿಂಗವು ತಾನಾದ ಕಾರಣ. ॥೯೪॥

ಮತ್ತಂ, ಕರಚರಣಾದಿಗಳು ಬೇರಾದವಲ್ಲದೆ, ಅರಿದು ಮುಟ್ಟುವದೊಂದೇ ಆತ್ಮವು. ಬಿಂದುವಿನೊಂದು ಸಾರದಲ್ಲಿ ಸಸಿ ಹಲವು ನಾಮ ಬೆಳೆವಂತೆ ಗುಹೇಶ್ವರಲಿಂಗದಲ್ಲಿ ನಾ ನೀನೆಂಬ ಭಾವ ಇಲ್ಲ ಸಿದ್ಧರಾಮಯ್ಯ. ॥೯೫॥

ಅದಕ್ಕೆ ಸಿದ್ಧರಾಮಯ್ಯದೇವರು ಕೊಟ್ಟ ಪ್ರತ್ಯುತ್ತರ.

ಭೂಮಿಯೊಂದೇ ಎಂದಡೆ ಬೆಳೆವ ವೃಕ್ಷ ಹಲವು ತೆರನುಂಟು. ಉದಕ ಒಂದೇ ಎಂದಡೆ, ಸವಿ ಸಾರದ ಸಂಪದ ಬೇರುಂಟು. ನಿನ್ನ ಒಳಗು ನಾನಾದೊಡೆ ತಾಮಸದ ರಾಗ ವಿರಾಗವಾಗದು. ಕಪಿಲಸಿದ್ಧಮಲ್ಲಿಕಾರ್ಜುನಲಿಂಗವೆಂಬ ಪುರುಷ ರತಿ ಕೂಟವಿಲ್ಲ. ॥೯೬॥

ಇಂತು ನಿನ್ನೊಳಗೆ ನಾನಾದೊಡೆ ಲಿಂಗದಲ್ಲಿ ಏಕತ್ವ ಘಟಿಸದೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಭಿನ್ನ ದೃಕ್ಕಿಂದರಿವ ಲಿಂಗತ್ರಯದ ಸಂದಳಿದಲ್ಲದೆ ಘನಲಿಂಗದಲ್ಲಿ ಏಕತ್ವ ಘಟಿಸದೆಂದು ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ.

ಕಂಗಳಲ್ಲಿ ಜ್ಯೋತಿರ್ಲಿಂಗ ಕೈಯಲ್ಲಿ ಉಭಯ ಪ್ರತಿಷ್ಠೆಯ ಲಿಂಗ ಬ್ರಹ್ಮರಂಧ್ರದಲ್ಲಿ ಅಮೃತಲಿಂಗ ಉಂಟೆಂಬ ತ್ರಿವಿಧ ಸಂದಳಿಯಬೇಕು. ಸಿದ್ಧರಾಮಯ್ಯ ಗುಹೇಶ್ವರಲಿಂಗವನರಿಯಬೇಕು. ॥೯೭॥

ಅದಕ್ಕೆ ಸಿದ್ಧರಾಮಯ್ಯದೇವರ ಪ್ರತ್ಯುತ್ತರ.

ಕಾಯ ಕೊನೆಯುರತಲ್ಲದೆ ಹಣ್ಣಿನ ಸೊನೆ ರಸ ಚಿನ್ಹದೋರದು. ಕಾಯದ ಕರ್ಮವ ಮಾಡಿ ಜೀವಜ್ಞಾನವನರಿದು, ತ್ರಿವಿಧ ಭಾವಶುದ್ಧಿಯಾದಲ್ಲದೆ ಮೇಲೆ ಕಾಣಲಿಲ್ಲ ಕಪಿಲಸಿದ್ಧಮಲ್ಲಿಕಾರ್ಜುನಲಿಂಗವಾ ॥೯೮॥

ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ಇಕ್ಷುದಂಡಕ್ಕೆ ಕೀಳು ಮೇಲಲ್ಲದೆ, ಸರ್ಕರೆಯು ದಂಡಕ್ಕೆ ಕೀಳು ಮೇಲುಂಟೆ? ಪರುಷ ಪಾಷಾಣಕ್ಕೆ ಕೀಳು ಮೇಲಲ್ಲದೆ, ಕಡೆಯಾಣಿಗುಂಟೆ? ಪಾರಿಗಲ್ಲು ಉಂಟು ಇಲ್ಲವೆಂಬ ಸಂದೇಹ ನಿಂದಲ್ಲಿ ಗುಹೇಶ್ವರಲಿಂಗವು ತಾನೆ ಸಿದ್ಧರಾಮಯ್ಯ ||೯೯||

ಹೀಗೆಂದು ಪ್ರಭುದೇವರು ನಿರೂಪಿಸಲು, ತ್ರಿವಿಧಲಿಂಗ ಸಂಬಂಧವಳವಡುವಂತೆ ಮಾಡಾ ಎಂದು ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ.

ನಾನೇನ ಮಾಡುವದೆಲ್ಲವನು ನೀನೆಂದೆ ಇದ್ದೆನಯ್ಯ. ನಾನೇನ ಮಾಡುವದೆಲ್ಲವನು ನೀನೆಯಲ್ಲವೆಂದರೆ ಅದು ಮಾಣಲಿ. ನಿಮ್ಮಾಣತೆ. ಕಾಣಬಾರದ ಘನವ ಕಾಯದಲಿ ಧರಿಸಿ ಹೇಳಬಾರದ ನಿಜವ ಮನದಲ್ಲಿ ನೆಲೆಗೊಳಿಸಿ ತೋರಬಾರದ ಕುರುಹ ಎನ್ನರಿವಿನಲ್ಲಿರಿಸಿ, ಇನ್ನು ನಿಮ್ಮ ಕಾಂಬಂತೆ ಮಾಡಾ ಕಪಿಲಸಿದ್ಧಮಲ್ಲಿನಾಥಯ್ಯ. ||೧೦೦||

ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರ ಪ್ರತ್ಯುತ್ತರ.

ತೋರಬಾರದ ಘನವ ಹೇಳಲೆಂದೆನ್ನೆಯ್ಯ. ಹೇಳಬಾರದ ಘನವ ತೋರಲೆಂದೆನಯ್ಯ. ಶರ ಸಂಧಾನದ ಪರಿಯ ನೋಡಾ! ಗುಹೇಶ್ವರಲಿಂಗವು ಕಲ್ಪಿತವಲ್ಲ ನೋಡಯ್ಯ. ||೧೦೧||

ಪರಬ್ರಹ್ಮವೆಂಬುದನು ಕಲ್ಪಿಸಿ ಹೇಳಬಾರದು ನೋಡಯ್ಯ. ಕಲ್ಪಿಸಿ ತೋರಬಾರದೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರ ಬಿನ್ನಹ.

ಬೆರಸಿ ಬೆಚ್ಚಾತನ ಕಂಡೆನಯ್ಯ. ಆತನ ಬಟ್ಟೆಯ ಕಾಣೆ ನೋಡಯ್ಯ! ಶರೀರವಿಡಿದಿಪ್ಪ ಶತಕೋಟಿ ಜೀವಂಗಳ ಭೇದವನರಿಯೆನು. ನಿಮ್ಮ ನಾನೆತ್ತ ಬಲ್ಲೆನಯ್ಯ? ನೀವು ಮಾಡಿದ ಬೆಂಬಳಿಯಲ್ಲಿ ಹೊರಗಾಣದಿಪ್ಪೆನಲ್ಲದೆ ನಾ ಬೇರೆ ಕಾಂಬುದು ಹುಸಿ. ನೀ ತೋರಯ್ಯ ಎನಗೆ ಕಪಿಲಸಿದ್ಧಮಲ್ಲಿನಾಥಯ್ಯ. ||೧೦೨||

ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ.

ಅಭ್ಯಾಸದ ಮಾತಲ್ಲ, ಶ್ರೋತ್ರದ ಸುಖವಲ್ಲ, ಶಾಸ್ತ್ರದ ಅನುಭಾವದ ಮಾತಲ್ಲ, ಒಳಗಣ ಮಾತಲ್ಲ, ಹೊರಗಣ ಮಾತಲ್ಲ. ಇದರಂಗವನರಿಯದೆ, ಅನುಭಾವವ ಮಾಡಿ ಫಲವೇನಯ್ಯಾ? ಗುಹೇಶ್ವರ ಲಿಂಗವು ಉಪಮಾತೀತ ನೋಡಾ ಸಿದ್ಧರಾಮಯ್ಯ ॥೧೦೪॥

ಇಂತು ಪರಬ್ರಹ್ಮವೆಂಬುದನು ಆರಿಗು ತೋರಬಾರದ ಉಪಮಾತೀತವೆಂದು ಪ್ರಭುದೇವರು ನಿರೂಪಿಸಲು. ಅದಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ.

ಉಪಮೆ ಅನುಪಮೆ ಎಂಬುದು ನಿಮ್ಮಾಧೀನ ಕಂಡಯ್ಯಾ! ಹೇಳಿಹೆ ಕೇಳಿಹೆನೆಂಬುದು ನೀವೆ ಕಂಡಯ್ಯಾ! ಎನ್ನಂತರಂಗಕ್ಕೆ ಬಹಿರಂಗಕ್ಕೆ ನೀವೆ ಕರ್ತರಾದ ಕಾರಣ ನಿಮ್ಮ ನಿಜವ ಹೇಳದಿರ್ದಡೆ, ಎಂತುಳಿವೆನಯ್ಯಾ ಕಪಿಲ ಸಿದ್ಧಮಲ್ಲಿನಾಥಯ್ಯಾ? ॥೧೦೪॥

ಮತ್ತಂ, ಕಾಯವಿಡಿದಿಹನ್ನಕ್ಕ ಕಾಮವೆ ಮೂಲ. ಜೀವವಿಡಿದಿಹನ್ನಕ್ಕ ಕ್ರೋಧವೇ ಮೂಲ. ವ್ಯಾಪ್ತಿಯುಳ್ಳನ್ನಕ್ಕ ಸಕಲ ವಿಷಯಕ್ಕೆ ಆಸೆಯೇ ಮೂಲ. ಎನ್ನ ಆಸೆಯ ಪಾಶ ಗಾಸಿಮಾಡುತ್ತಿದೆ. ಶಿವಯೋಗದ ಲೇಸಿನ ಠಾವ ತೋರಾ ಕಪಿಲಸಿದ್ಧಮಲ್ಲಿಕಾರ್ಜುನ. ॥೧೦೫॥

ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ಕಾಯದ ಜೀವದ ಸಂದುಭೇದವ ವಿವರಿಸಿ ತೋರುವ ಪ್ರಸ್ತಾವದ ವಚನ.

ದೇಹಭಾವವಳಿದಲ್ಲದೆ, ಜೀವಭಾವವಳಿಯದು. ಜೀವಭಾವವಳಿದಲ್ಲದೆ ಭಕ್ತಿಭಾವವಳವಡದು- ಭಕ್ತಿಭಾವವಳವಟ್ಟಲ್ಲದೆ, ಅರಿವು ತಲೆದೋರದು. ಅರಿವು ತಲೆದೋರಿದಲ್ಲದೆ, ಕುರುಹು ನಷ್ಟವಾಗದು. ಕುರುಹು ನಷ್ಟವಾದಲ್ಲದೆ, ಮಾಯೆ ಹಿಂಗದು. ಇದು ಕಾರಣ ಕಾಯದ ಜೀವದ ಹೊಲಿಗೆಯಳಿದ ಭೇದವ ತಿಳಿಯಬಲ್ಲರೆ ಗುಹೇಶ್ವರಲಿಂಗದ ಅರಿವು ಸಾಧ್ಯವಪ್ಪುದು ಕಾಣಾ ಸಿದ್ಧರಾಮಯ್ಯ. ॥೧೦೬॥

ಕಾಯದ ಜೀವದ ಸಂದುಭೇದವಳಿದು, ನೋಡಬಲ್ಲರೆ, ನಿಜವು ಸಾಧ್ಯವಹುದೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರ ಬಿನ್ನಹ.

ನೀರು ಕ್ಷೀರದ ಸಂದುಗಳ ಹಂಸೆ ಬಿಚ್ಚಬಲ್ಲುದು ನೋಡಯ್ಯಾ! ದೇಹದ ಜೀವದ ಸಂದು ನೀವು ಬಿಚ್ಚಬಲ್ಲಿರಲ್ಲದೆ ನಾನೆತ್ತ ಬಲ್ಲೆನಯ್ಯಾ? ನೀನಿಕ್ಕಿದ ತೊಡಕ ಬಿಡಿಸಬಾರದು. ಬಿಡಿಸಿದ ತೊಡಕನಿಕ್ಕಬಾರದು. ಕಪಿಲಸಿದ್ಧ ಮಲ್ಲಿನಾಥಯ್ಯ ನೀನೆನ್ನ ಕಾಯದ ಜೀವದ ಹೊಲಿಗೆಯ ಬಿಡಿಸಾ ನಿಮ್ಮ ಧರ್ಮ. ॥೧೦೭॥

ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ.

ಕಾಯದ ಕಳವಳವ ಕಾಣೆನೆಂದಲ್ಲಿ ಹೋಯಿತ್ತು. ಜೀವದ ದುಷ್ಕೃತ ದೂರವೆಂದಲ್ಲಿ ಹೋಯಿತ್ತು. ಕಾಯ ಜೀವವೆಂಬ ಸೂತಕ ಮನ ನಿರ್ಮಲ ವಾದಲ್ಲಿ ಹೋಯಿತ್ತು. ಗುಹೇಶ್ವರನೆಂಬ ಲಿಂಗವನರಿಯಬೇಕಾದರೆ, ನಿನ್ನೊಳಗೆ ತಿಳಿದು ನೋಡಾ ಸಿದ್ಧರಾಮಯ್ಯ. ॥೧೦೮॥

ನಿನ್ನೊಳಗೆ ತೊಳೆದು ನಿರ್ಮಲವ ಮಾಡಲು ಸರ್ವ ಸಂದೇಹವಳಿದು, ಶಿವತತ್ವ ಸಾಧ್ಯವಪ್ಪುದೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧ ರಾಮಯ್ಯದೇವರ ಬಿನ್ನಹ.

ಅಯ್ಯ ಮನದ ರಜವ ಮಣ್ಣುಗಳೆದುದಯ್ಯಾ ಶಾಂತಿಯ ಉದಕವ ತೆಗೆವೆನಯ್ಯಾ. ಜಳಕವನೆ ಮಾಡಿ ಯೋಗಕಂಪನಿಕ್ಕಿ ಹೊದೆಹೆನಯ್ಯಾ. ಅದನೊಂದು ಎಡೆಗೆ ತಂದು, ಬಟ್ಟಣಗಾಣದಲ್ಲಿ ಹಿಳಿವೆನಯ್ಯಾ. ಹಿಳಿದ ರಸದ ಕಂಪ ಕೊಡುವ ಒಡೆಯ ನೀನೇ ಕಪಿಲಸಿದ್ಧಮಲ್ಲಿನಾಥಾ. ॥೧೦೯॥

ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಇದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ.

ಮನವ ತೊಳೆದು, ನಿರ್ಮಲವ ಮಾಡಿಹೆನೆಂಬ ಯೋಗವೆಂತುಂಟೋ? ಮನವ ಹಿಡಿದು ತಡೆದಿಹೆನೆಂಬವರ ಮರುಳುಮಾಡಿ ಕಾಡಿತ್ತು ನೋಡಾ ಮನವು. ಮನವ ವಿಕಲ್ಪಜ್ಞಾನದಿಂದ ಅರಿದು ಅದ ಶುದ್ಧವ ಮಾಡಿಹೆನೆಂಬುದು ತಾನೆ ಮನ ನೋಡಾ! ನಮ್ಮ ಗುಹೇಶ್ವರಲಿಂಗದ ಅನುವನರಿದಿಹೆನೆಂಬರೆ ಮನ ವಿಲ್ಲದಿರಬೇಕು ನೋಡಾ ಸಿದ್ಧರಾಮಯ್ಯ ॥೧೧೦॥

ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರ ಪ್ರತ್ಯುತ್ತರ.

ಮನವೆಂಬ ಸಂಕಲ್ಪವನರಿಯೆನು, ಸಂಕಲ್ಪ ಸಿದ್ಧಿಯಾಯಿತ್ತಾಗಿ. ಸಂಕಲ್ಪವೆಂಬ ಸಂಬಂಧವನರಿಯೆನು, ನಿಮ್ಮ ವಿಚಾರ ಎಡೆಗೊಂಡಿತ್ತಾಗಿ. ನಿಮ್ಮ ವಿಚಾರವೇ ಅಂತರಂಗದೊಳಗೆ ತುಂಬಿತ್ತಾಗಿ, ಎನ್ನ ಮನದ ಮುಂದೆಯಲ್ಲ ನೀನೆಯಾಗಿರ್ದೆಯಾಗಿ ಕಪಿಲಸಿದ್ಧಮಲ್ಲಿನಾಥಯ್ಯ ॥೧೧॥

ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರ ಪ್ರತ್ಯುತ್ತರ.

ವಿಚಾರವೆಂಬುದು ಸಂದೇಹಕ್ಕೊಳಗು ನೋಡಾ ! ವಿಚಾರಿಸುವನ್ನಕ್ಕರ ನೀ ನಾನೆಂಬುದನೆತ್ತ ಬಲ್ಲೆ ? ಮರುಳೆ ವಾಙ್ಮನಕ್ಕತೀತವಾದ ಘನವು ವಿಚಾರಕ್ಕೆ ಸಿಲುಕುವುದೆ ? ಗುಹೇಶ್ವರಲಿಂಗವು ತನ್ನ ತಿಳಿದು ನೋಡಿಹೆನೆಂಬವರ ವಿಚಾರವೆಂಬ ಬಲೆಯಲ್ಲಿ ಕೆಡಹಿದನು. ॥೧೨॥

ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರು ಬಿನ್ನೈಸಿದ ಪ್ರಸ್ತಾವದ ವಚನ.

ವಿವೇಕವೆಂಬುದು ಬೇರಿಲ್ಲ ಕಂಡಯ್ಯ ! ವಿವೇಕ ನವನಾಳದ ಸುಳುಹು. ತೊಡೆದು ಸುನಾಳವ ಶುದ್ಧ ಮಾಡುವೆ. ಅಷ್ಟದಳ ಕಮಲವನು ಊರ್ಧ್ವ ಮುಖವ ಮಾಡಿ, ನಿಜಪದದಲ್ಲಿ ನಿಲಿಸಿದೆ. ಐವತ್ತೆರಡಕ್ಷರವ ತಿಳಿದು ನೋಡಿ ಏಕಾಕ್ಷರದಲ್ಲಿ ನಿಲಿಸುವೆ. ಕಪಿಲಸಿದ್ಧಮಲ್ಲಿನಾಥ ಎನ್ನ ವಿಚಾರದ ಹವಣ ನೀನೇ ಬಲ್ಲೆ ॥೧೩॥

ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರ ಪ್ರತ್ಯುತ್ತರ.

ಯೋಗ ವಿಯೋಗವೆಂಬ ಹೊಲಬ ಬಲ್ಲವರನಾರನು ಕಾಣೆನು. ನವನಾಳದ ಸುಳುಹ ತಿಳಿದೆನೆಂಬುದು ಯೋಗವಲ್ಲ. ಐವತ್ತೆರಡಕ್ಷರದಭ್ಯಾಸವ ತಿಳಿದು ನೋಡಿ ಹೃದಯ ಕಮಲದ ಕರ್ಣಿಕೆಯಲ್ಲಿ ಸಿಕ್ಕಿದೆನೆಂಬುದು ಯೋಗವಲ್ಲ. ಬಹಿರಂಗವೆಂಬರೆ ಕ್ರಿಯಾರಹಿತ. ಅಂತರಂಗವೆಂಬರೆ ವಾಙ್ಮನಕ್ಕತೀತ. ಗುಹೇಶ್ವರನೆಂಬ ಲಿಂಗವು ಷಡುಚಕ್ರದ ಮೇಲಿಲ್ಲ ಕಾಣಾ ಸಿದ್ಧರಾಮಯ್ಯ. ॥೧೪॥

ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರ ಬಿನ್ನಹ.

ಅಂತರಂಗದಲ್ಲಿ ನಿಮ್ಮ ನೋಡುವನಲ್ಲ ಕೇಳು ಕಂಡಾ. ಎಲೆ ಅಯ್ಯ ಬಹಿರಂಗದಲ್ಲಿ ಬಳಸುವನಲ್ಲ ಕೇಳು ಕಂಡಾ. ಎಲೆ ಅಯ್ಯ ಸುಷುಮ್ನದ ಬಟ್ಟೆಯ ತುದಿಯನಡರಿ, ಸಾವಿರ ದಳದ ಮಂಟಪದಲ್ಲಿ ನಿಮ್ಮ ನೆಲೆಗೊಂಡಿಪ್ಪೆ ನೋಡಾ ಕಪಿಲಸಿದ್ಧಮಲ್ಲಿನಾಥಯ್ಯ. ||೧೧೫||

ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರ ಪ್ರತ್ಯುತ್ತರ.

ಸ್ವಸ್ಥ ಪದ್ಮಾಸನದಲ್ಲಿ ಊರ್ಧ್ವದೃಷ್ಟಿ ನಿಟ್ಟೆಲುವ ಮುರಿದು ನಿಷ್ಠೆಯಿಂದ ಹಿಂದಣ ಬಟ್ಟೆಯ ತೆರೆದು ಅಮೃತವನುಂಡಿಹೆನೆಂಬವರ ಕೇಡಿಂಗೆ ಕಡೆ ಇಲ್ಲ. ಅತ್ಯತಿಷ್ಠದ್ದಶಾಂಗುಲವೆಂಬ ಶ್ರುತಿಯ ನೋಡಲು, ಮುಟ್ಟಿ ನೆಲೆಗೊಳಿಸುವ ಠಾವುಂಟೆ? ಸ್ಥಾನ ಮಾನವೆಂಬ ಮಾತಿಂಗೆ ದೂರವಾದ ಘನವ ಬ್ರಹ್ಮರಂಧ್ರದಲ್ಲಿ ಕಂಡೆಹೆನೆಂದರೆ ಕಾಣಬಹುದೇ? ನಮ್ಮ ಗುಹೇಶ್ವರಲಿಂಗವು ಕಲ್ಪಿತಕ್ಕೆ ದೂರ ಕೇಳಾ ಸಿದ್ಧರಾಮಯ್ಯ. ||೧೧೬||

ಪರಬ್ರಹ್ಮವೆಂಬುದನು ಬ್ರಹ್ಮರಂಧ್ರದಲ್ಲಿ ನೆಲೆಗೊಳಿಸಿದೆನೆಂಬುದು ಕಲ್ಪಿತವಲ್ಲದೆ ನಿರ್ವಿಕಲ್ಪಿತವಲ್ಲವೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರ ಬಿನ್ನಹ.

ನಾ ನಿಮ್ಮ ರೂಪ ವಿಚಾರಿಸುವನಲ್ಲ ಕೇಳಾ! ನಿಮ್ಮ ಧ್ಯಾನದಲ್ಲಿ ಇಪ್ಪಾತನಲ್ಲ ಕೇಳಾ! ಅತ್ಯತಿಷ್ಠದ್ದಶಾಂಗುಲದಲ್ಲಿ ನಿಂದು ನೆಲಿಸಿ ನಾನೊಂದೆಡೆಯಲ್ಲಿ ಇಪ್ಪಾತನಲ್ಲ ನೋಡಾ. ಓಂಕಾರವೆಂಬ ಪೀಠಕ್ಕೆ ನಾನಾಗಿ ನಿಃಶಬ್ದವೆಂಬ ಲಿಂಗವ ನೆಲೆಗೊಳಿಸಿ ಬೆರಸಿ ಬೇರಿಲ್ಲದೆ ಇಪ್ಪೆ ನೋಡಯ್ಯ ಕಪಿಲಸಿದ್ಧಮಲ್ಲಿನಾಥಯ್ಯ ನೀನು ಪ್ರಣವರೂಪಾಗಿ. ||೧೧೭||

ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು ಅದಕ್ಕೆ ಪ್ರಭುದೇವರ ಪ್ರತ್ಯುತ್ತರ.

ಬಿಂದುವೇ ಪೀಠ, ನಾದವೇ ಲಿಂಗವಾದರೆ, ಅದು ಭಿನ್ನಲಿಂಗ ನೋಡಾ! ಕಳೆ ಎಂಬ ಪೂಜೆ ನಿರ್ಮಾಲ್ಯವಾಗಿ ನಾದಬಿಂದುಕಳಾತೀತ ನೋಡಾ! ಮಹಾಘನಲಿಂಗೈಕ್ಯವು ಅಲ್ಲಿ ಇಲ್ಲಿ ಸಿಲುಕದು. ಅಚಳವಪ್ಪ ನಿರಾಳಪ್ರಣವ ರೂಪೆಂದು ಹೆಸರಿಡಬಹುದೇ? ನಮ್ಮ ಗುಹೇಶ್ವರನ ನಿಲವು ನಿಃಶಬ್ದ ಬ್ರಹ್ಮಮುಚ್ಯತೆ ಎಂಬುದನರಿಯಾ ಸಿದ್ಧರಾಮಯ್ಯ? ||೧೧೮||

ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರ ಬಿನ್ನಹ.

ನಾದ ಬಿಂದು ಅಂಗಲಿಂಗಸಂಬಂಧವೆಂಬೆನಯ್ಯ! ನಾದ ಪ್ರಾಣ ಬಿಂದು ಕಾಯವಾದ ಕಾರಣ ನಾದ ಸ್ವರವಲ್ಲ. ಬಿಂದು ಕಾಯವಲ್ಲ. ಉಭಯ ಸೂತಕ ರಹಿತ ಕಂಡಯ್ಯ! ನಾದ ಬಿಂದುವಿನ ಒಡ್ಡ ತೋರಿ ಮನ ಮಗ್ನವಾದ ನಿಲವ ಕಪಿಲಸಿದ್ಧಮಲ್ಲಿಕಾರ್ಜುನ ನೀನೆ ಬಲ್ಲೆ. ||೧೯||

ನಾದಬಿಂದುಕಳಾತೀತವಾದ ಮಹಾಘನದೊಳಗೆ ಮನಮಗ್ನವಾಗಿ ನಾನಿದ್ದೆನೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು. ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ.

ಅರಿವನರಿದು, ಮರಹೆ ಮರೆದು, ಸಂಕಲ್ಪ ಸಂಶಯವಳಿದ ನಿಲವನರಿವ ಪರಿ ಎಂತು ಹೇಳಾ? ಅರಿವೆನೆಂದರೆ ಜ್ಞಾನಕ್ಕೆ ದೂರ. ಮರೆವೆನೆಂದರೆ ಮನಕ್ಕೆ ದೂರ. ಅರಿದು ಮರೆದೆನೆಂದರೆ ಉಪಮೆಗೆ ದೂರ. ನಿರ್ಭಾವದ ಹೊಲಿಗೆಯಲ್ಲಿ ಭಾವಸಂಕಲ್ಪ ಬಿಡದು- ನಮ್ಮ ಗುಹೇಶ್ವರಲಿಂಗದಲ್ಲಿ ಮನಮಗ್ನ ಯೋಗ ನಿನಗೆಂತು ಸಾಧ್ಯವಾಯಿತ್ತು ಹೇಳಾ ಸಿದ್ಧರಾಮಯ್ಯ? ||೧೨೦||

ಹೀಗೆಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯ ದೇವರು ಬಿನ್ನೈಸಿದ ಪ್ರಸ್ತಾವದ ವಚನ.

ಎನ್ನ ಮನಕ್ಕೆ ಮತ್ತೊಂದು ಇಂಬಿಲ್ಲ ಕಂಡಯ್ಯ. ನಿಮ್ಮ ನೆನೆವೆ ನಾನು. ನೀನು ಎನ್ನ ನೆನೆವೆ ಕಂಡಯ್ಯ. ನಿನಗೆಯು ಎನಗೆಯು ಒಮ್ಮನ ಕಂಡಯ್ಯ! ನೀ ಮುಕ್ತನಾದ ಕಾರಣ ನಿನ್ನೊಡನೆ ಎನ್ನ ಮನಮುಕ್ತ ನೋಡಯ್ಯ ಕಪಿಲಸಿದ್ಧಮಲ್ಲಿನಾಥಯ್ಯ. ||೧೨೧||

ಹೀಗೆಂದು ಸಿದ್ಧರಾಮಯ್ಯದೇವರು ಮನಮಗ್ನವಪ್ಪ ಮಹಾನುಭಾವಮಂ ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ.

ಮನ ಉಂಟೇ ಮರುಳೆ ಶಿವಯೋಗಿಗೆ? ಮತ್ತೊಮ್ಮೆ ಮನಮಗ್ನ ಉಂಟೇ ಶಿವಯೋಗಿಗೆ? ಇಲ್ಲದ ಮನ ಉಂಟೆಂದು ನುಡಿದು ಅಡಗಿಸಿದೆನೆಂಬ ಮಾತು ಮನವ ನೆಲೆ ಮಾಡಿ ತೋರಿತ್ತು. ಇದೆ ಗುಹೇಶ್ವರನನಂದ ಶರಣಂಗೆ ತೋರಲಿಲ್ಲ, ಅಡಗಲಿಲ್ಲ ಕೇಳಾ. ||೧೨೨||

ಹೀಗೆಂದು ಪ್ರಭುದೇವರು ನಿರೂಪಿಸಿದ ಮಹಾನುಭಾವದ ನಿಷ್ಪತ್ತಿಗೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ.

ಮನ ಮಗ್ನವಾಗದ ಯೋಗವೆಂದಡೇನು ಕೊರತೆ ಹೇಳಾ ಎಲೆ ಅಯ್ಯ? ಮನವಿಲ್ಲದೆ ಬಚ್ಚಬರಿಯ ಬೊಮ್ಮವೆಂದಡೇನು ಹೆಚ್ಚು ಹೇಳಾ ಎಲೆ ಅಯ್ಯ? ನುಡಿದ ಮಾತಿನಲ್ಲಿ ವಿವರ ತೋರುತ್ತಿದೆ ಎಂದಡೆ ತಾತ್ಪರ್ಯವಂತಪ್ಪುದೆ ಕಪಿಲಸಿದ್ಧಮಲ್ಲಿನಾಥ? ||೧೨೩||

ಹೀಗೆಂದು ಬಿನ್ನೈಸಿದ ಸಿದ್ಧರಾಮಯ್ಯದೇವರು ನಿಜಾನುಭಾವಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ.

ಮನಮಗ್ನವೆಂತಪ್ಪುದು, ಅಂತೆ ಇರಬೇಕಲ್ಲದೆ ಮತ್ತೊಂದು ಮನವೆಂಬುದುಂಟೆ ಹೇಳಾ! ಅರಿದು ಮರೆದುದ ಅರಿದು ನುಡಿದು ಮರೆದೆನೆಂಬ ಜ್ಞಾನ ಉಂಟೆ? ಗುಹೇಶ್ವರಲಿಂಗವು ಅರಿದೆನೆಂಬಲ್ಲಿಯೇ ಮನವ ಮರೆಮಾಡಿ ಕಾಡುವನು. ||೧೨೪||

ಹೀಗೆಂದು ಪ್ರಭುದೇವರು ನಿರೂಪಿಸಿದ ಮಹಾವಾಕ್ಯಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ.

ಅಂಗದಂತೆ ಲಿಂಗ, ಲಿಂಗದಂತೆ ಅಂಗವಾದ ಬಳಿಕ, ಅಂಗದಂತೆ ಲಿಂಗೈಕ್ಯ ಲಿಂಗದಂತೆ ಅಂಗೈಕ್ಯ. ಮನವೆ ಲಿಂಗ ಲಿಂಗವೇ ಮನವಾದ ಬಳಿಕ ಮಾತು ಮಾತುಗಳೆಲ್ಲ ಹೊಳ್ಳಾದ ಕಾರಣ ಮಾತೆ ಲಿಂಗೈಕ್ಯ. ಲಿಂಗೈಕ್ಯವೆ ಸ್ವರ ಶಬ್ದ ಸಂದಣಿಗೆ ಇನ್ನು ತೆರಹುಂಟೆ? ಕಪಿಲಸಿದ್ಧಮಲ್ಲಿನಾಥ ಇನ್ನು ನಿಮ್ಮ ದೇವರೆಂದು ಅರಸಲುಂಟೇ ಇಲ್ಲವೇ ಎಂಬುದನು ತಿಳುಹಿಕೊಡಾ ಎಲೆ ಅಯ್ಯ. ||೧೨೫||

ಹೀಗೆಂದು ಪರತತ್ವದ ಅರಿವಿಂಗೆ ಹರಿವ ನುಡಿದು ನಿನ್ನರಸಲುಂಟೆ ಇಲ್ಲವೊ ಎಂಬುದ ನೀವೆ ನಿರೂಪಿಸೆನಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ.

ಕರ್ಪೂರದ ಗಿರಿಯನುರಿ ಹಿಡಿದ ಬಳಿಕ ಇದ್ದಿಲುಂಟೆ? ಮಂಜಿನ ಶಿವಾಲಯಕ್ಕೆ ಬಿಸಿಲ ಕಲಶ ಉಂಟೇ? ಕೆಂಡದ ಗಿರಿಯು ಅರಗಿನ ಬಾಣದ ಲೆಚ್ಚಡೆ ಬಳಿಕ ಮರಳಿ ಬಾಣವನರಸಲುಂಟೆ? ಗುಹೇಶ್ವರಲಿಂಗವನರಿದ ಬಳಿಕ, ದೇವರೆಂದು ಅರಸಲುಂಟೆ ಸಿದ್ಧರಾಮಯ್ಯ? ||೧೨೬||

ಹೀಗೆಂದು ಪ್ರಭುದೇವರು ನಿರೂಪಿಸಿದ ಮಹಾನುಭಾವಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ.

ಅಯ್ಯ, ನಿಮ್ಮ ದೇವರೆಂದು ಭಾವಿಸಲರಿಯೆನು ಕೇಳು ಕಂಡಾ. ಎನ್ನ ಮನವ ನುಂಗಿದೆ ಎಂದು ಹಿಂದೆ ನಿಮಗಾನು ಬಿನ್ನಹ ಮಾಡಿದ ಕಾರಣ ಎನ್ನ ಒಳಹೊರಗೆ ನೀನೆ ಕಂಡಯ್ಯ! ನಿಮ್ಮೊಳಗೆ ಅಡಗಿದ ನುಡಿಯನೊಳ ಕೊಂಡ ಅರಿವು ಅರಿದರಿದು ಮರೆದ ಪರಿ ಎಂತಯ್ಯ ಕಪಿಲಸಿದ್ಧಮಲ್ಲಿನಾಥಯ್ಯ. ||೧೨೭||

ಹೀಗೆಂದು ಸಿದ್ಧರಾಮಯ್ಯದೇವರ ಶಿವಾದ್ವೈತ ವಾಕ್ಯಕ್ಕೆ ಪ್ರಭುದೇವರು ಸರ್ವಶೂನ್ಯಸಮಾಧಿಯ ನಿಲವ ನಿರೂಪಿಸಿದ ಪ್ರಸ್ತಾವದ ವಚನ.

ಅರಿದೆನೆಂಬುದು ತಾ ಬಯಲು. ಅರಿಯೆನೆಂಬುದು ತಾ ಬಯಲು. ಮರೆದೆನೆಂಬುದು ತಾ ಬಯಲು. ಅರುಹಿನ ಕುರುಹಿನ ಮರಹಿನೊಳಗೆ ಗುಹೇಶ್ವರನೆಂಬುದು ತಾ ಬಯಲು. ||೧೨೮||

ಇಂತು ಪ್ರಭುದೇವರು ನಿರೂಪಿಸಿದ ಮಹಾವಾಕ್ಯವಾದ ಸ್ವಾನುಭಾವೋಪದೇಶದಿಂ ಸಿದ್ಧರಾಮಯ್ಯದೇವರು ಪ್ರಸನ್ನತ್ವಮಂ ಪಡೆದು ಪರಬ್ರಹ್ಮದೊಳು ನಿರ್ವಾಣವೆಂತಪ್ಪುದೆಂದು ಪ್ರಭುದೇವರ ಬೆಸಗೊಂಡ ಪ್ರಸ್ತಾವದ ವಚನ.

ಅಯ್ಯ, ಕಬ್ಬುನ ನೀರನೊಳಕೊಂಡಂತೆ, ಶಬುದ ಸಿರಾಳವನೊಳಕೊಂಡಂತೆ, ಮರೀಚಿಯ ಬಯಲನೊಳಕೊಂಡಂತೆ, ಎನ್ನನೆಂದೊಳಕೊಂಬೆ ಹೇಳಾ ಕಪಿಲಸಿದ್ಧಮಲ್ಲಿಕಾರ್ಜುನ? ||೧೨೯||

ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ನಿರೂಪಿಸಿದ ಮಹಾನುಭಾವದ ವಾಕ್ಯವೆಂತಿರ್ದುದೆಂದೊಡೆ, ಆ ಪ್ರಸ್ತಾವದ ವಚನ.

ತೆರಹಿಲ್ಲದ ಘನವ ಮನ ಒಳಕೊಂಡಿತ್ತು. ತೆರಹಿಲ್ಲದ ಮನವ ಘನ ಒಳಕೊಂಡಿತ್ತು. ತನಗೆ ತಾ ತೆರಹೆರವಾದ ಬಳಿಕ, ಮರಳಿ ಇನ್ನು ಇಂಬುಗೊಡಲುಂಟೆ? ಗುಹೇಶ್ವರನ ಲೀಲೆ ಮಾಬನ್ನಕ್ಕರ ಉರಿಯೊಳಗಣ ಕರ್ಪುರದಂತೆ ಇರಬೇಕು ಕಾಣಾ ಸಿದ್ಧರಾಮಯ್ಯ. ||೧೩೦||

ಇಂತು ಪ್ರಭುದೇವರು ನಿರ್ವಾಣದ ನಿಲುಕಡೆಯ ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರು ಇಂತೀ ಕರ್ಮಕ್ರಿಯೆಗಳಿಂದ ನಿಮ್ಮ ಕಂಡೆನು, ಕಂಡ ಸುಕೃತದ ದೆಸೆಯಿಂದ ಎನಗೆ ನಿಜವು ಸಾಧ್ಯವಾಯಿತ್ತೆಂದು ಬಿನ್ನೈಸಿದ ಪ್ರಸ್ತಾವದ ವಚನ.

ಕೆರೆ ತೊರೆ ದೇಗುಲದ ಕಡೆಯಿಂದ ನಿಮ್ಮ ಕಂಡೆ. ಎಡಹುವ ಕಲ್ಲ ತೆಗೆವ ಮರೆಯಲ್ಲಿ ನಿಧಾನವ ಕಂಡಂತೆ, ಎನ್ನ ಮರವೆಯ ತಮದ ಅದ್ರಿಗೆ ದಿನಮಣಿ ಜನಸಿದಂತೆ, ಕಪಿಲಸಿದ್ಧಮಲ್ಲಿಕಾರ್ಜುನ ಲಿಂಗವೆಂಬ ಭ್ರಾಂತು ಸ್ವಯವಾಯಿತ್ತು ಪ್ರಭುದೇವರ ಕಾರುಣ್ಯದಿಂದೆ. ॥೧೩೧॥

ಇಂತು ಸಿದ್ಧರಾಮಯ್ಯದೇವರು ನಿಮ್ಮಿಂದ ಪರಬ್ರಹ್ಮ ಸ್ವರೂಪವಾದೆನೆಂದು, ಬಿನ್ನೈಸಲು ಅದಕ್ಕೆ ಪ್ರಭುದೇವರು ಆ ಸಿದ್ಧರಾಮಯ್ಯದೇವರ ಸಮರಸವ ಕಂಡು ಕೊಂಡಾಡಿದ ಪ್ರಸ್ತಾವದ ವಚನ.

ನಿರ್ವಿಕಲ್ಪಿತದ ಅದ್ವೈತವ ನೋಡಿರೆ. ಬೆಳಗಿನ ಬೆಳಗು ಅಡಗಿತ್ತು ನೋಡಿರೆ. ಚಂದ್ರ ಸೂರ್ಯರು ಭೂಲೋಕದೊಳಂದಾರುವ ಕಾಣೆ. ಜ್ಯೋತಿ ಇಲ್ಲದ ಬೆಳಗಿನ ಪ್ರಭೆಯೋ ಗುಹೇಶ್ವರಲಿಂಗದಲ್ಲಿ ಸಿದ್ಧರಾಮಯ್ಯದೇವರ ಮಹಾಘನವ ನಾನೇನೆಂಬೆನು. ॥೧೩೨॥

ಹೀಗೆಂದು ಪ್ರಭುದೇವರು ನಿರೂಪಿಸಲು, ಸಿದ್ಧರಾಮಯ್ಯದೇವರು ಪ್ರಭುದೇವರ ಕರಸ್ಥಲದ ಲಿಂಗದ ಆದ್ಯಂತವಂ ಕೇಳಿದ ಪ್ರಸ್ತಾವದ ವಚನ.

ಅಯ್ಯ ನಿಮ್ಮ ಸರ ಉಂಡ ಸಬುದವೆನ್ನ ಮನಕ್ಕೆ ವೇದ್ಯವಾಯಿತ್ತು. ನಿಮ್ಮ ನಿಜ ಉಂಡ ನಿಲವು ಎನ್ನ ಮತಿಗೆ ವೇದ್ಯವಾಯಿತ್ತು. ನಿಮ್ಮ ಕರುಣ ಪ್ರಸಾದವೆನ್ನ ಸರ್ವಾಂಗಕ್ಕೆ ವೇದ್ಯವಾಯಿತ್ತು. ನಿಮ್ಮ ಕಾಯ ವಿಡಿದಿಪ್ಪ ಕರಸ್ಥಲದ ಕಾರಣವ ಹೇಳಾ ಕಪಿಲಸಿದ್ಧಮಲ್ಲಿನಾಥ ॥೧೩೩॥

ಇಂತು ಸಿದ್ಧರಾಮಯ್ಯದೇವರು ಬಿನ್ನಪಂಗೈಯ್ಯಲು, ಪ್ರಭುದೇವರು ತಮ್ಮ ಕರಸ್ಥಲದ ಅನಾದಿ ಸಂಸಿದ್ಧವಂ ನಿರೂಪಿಸಿದ ಪ್ರಸ್ತಾವದ ವಚನ.

ಅನಾದಿ ಗಣನಾಥನ ಶಿಷ್ಯನು ಆದಿಗಣನಾಥನು. ಆದಿಗಣನಾಥನ ಶಿಷ್ಯನು ಅಧ್ಯಾತ್ಮಗಣನಾಥನು. ಅಧ್ಯಾತ್ಮಗಣನಾಥನ ಶಿಷ್ಯನು ಆತ್ಮಗಣನಾಥನು. ಆತ್ಮಗಣನಾಥನ ಶಿಷ್ಯನು ವ್ಯೋಮಸಿದ್ಧಗಣನಾಥನು. ವ್ಯೋಮಸಿದ್ಧ ಗಣನಾಥನ ಶಿಷ್ಯನು ಬಸವನೆಂಬ ಗಣನಾಥನು. ಬಸವನೆಂಬ ಗಣನಾಥನ

ಶಿಷ್ಯನು ಅನುಮಿಷನೆಂಬ ಗಣನಾಥನು. ಅನುಮಿಷನೆಂಬ ಗಣನಾಥನ ಶಿಷ್ಯನು ಅಲ್ಲಮಪ್ರಭುವೆಂಬ ಗಣನಾಥನು. ಇಂತು ಅನಾದಿವಿಡಿದು ಬಂದ ಅನುಪಮಲಿಂಗವು ಗುಹೇಶ್ವರನೆಂಬ ಹೆಸರನೊಳಕೊಂಡು ಎನ್ನ ಕರಸ್ಥಲಕ್ಕೆ ಸಾಧ್ಯವಾಯಿತ್ತು ಕಾಣಾ ಸಿದ್ಧರಾಮಯ್ಯಾ. ।೧೩೪।

ಹೀಗೆಂದು ಪ್ರಭುದೇವರು ತಮ್ಮ ಕರಸ್ಥಲದ ಲಿಂಗದ ಪೂರ್ವಾಪರಮಂ ತಿಳಿಯ ಪೇಳಲು, ಸಿದ್ಧರಾಮಯ್ಯದೇವರು ಇಷ್ಟಲಿಂಗವಿಡಿದು, ನಿಜಲಿಂಗೈಕ್ಯವ ಕಾಂಬ ಪರಿ ಹೇಗೆಂದು ಬೆಸಗೊಂಬ ಪ್ರಸ್ತಾವದ ವಚನ.

ಕಾಯವೇ ಪೀಠಿಕೆ ಪ್ರಾಣವೇ ಲಿಂಗವಾಗಿರಲು ಬೇರೆ ಮತ್ತೆ ಕುರುಹೇಕಯ್ಯ ? ಕುರುಹುವಿಡಿದು ಕೂಡುವ ನಿರವಯ ಉಂಟೆ? ಜಗದೊಳಗೆ ನಷ್ಟವ ಕೈಯ್ಯಲ್ಲಿ ಹಿಡಿದು ದೃಷ್ಟವ ಕಂಡಿಹೆನೆಂದರೆ ಕಪಿಲಸಿದ್ಧಮಲ್ಲಿನಾಥಯ್ಯನು ಸಾಧ್ಯವಹ ಪರಿಯ ಹೇಳಾ ಪ್ರಭುವೇ. ||೧೩೫||

ಇಂತು ಕರುಹು ಹಿಡಿದು ನಿರವಯಲಿಂಗವನರಿವ ಪರಿ ಹೇಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು ಅದಕ್ಕೆ ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ.

ಇಷ್ಟಲಿಂಗದ ಪ್ರಾಣಲಿಂಗದ ಭೇದವನಾರು ಬಲ್ಲರು ಹೇಳಾ ? ಅಂತರಂಗವೆಂಬ ಶಬುದಕ್ಕೆ ಬಹಿರಂಗ ಮುಂದುಗೊಂಡಿಪ್ಪುದು. ಮನವನೆಡೆಗೊಂಡ ಲಿಂಗದರಿವು ವಿಚಾರ ವ್ಯಾಕುಳಕ್ಕೆ ಒಳಗಾಗಬಾರದೆಂದು ಮನ ಭಾವದೆಡೆಗೊಂಡು ಜ್ಞಾನ ನೋಟವ ತಂದು ಕರಸ್ಥಲದಲ್ಲಿ ನಿಕ್ಷೇಪಿಸಿ ಅಂತರಂಗ ಬಹಿರಂಗವೆಂಬುದನರಿಯದೆ ಅನುಮಿಷನಾಗಿಪ್ಪನಾ ಶರಣನು. ಪ್ರಾಣಲಿಂಗದ ಪ್ರಸನ್ನಮುಖವ ನೋಡಿ ಪರಿಣಾಮಿಸಲೋಸುಗ ಕರತೇಜವೆಂಬ ದರ್ಪಣವ ಹಿಡಿದು ಇರ್ಪನು ನೋಡಾ. ಗುಹೇಶ್ವರ ಲಿಂಗದಲ್ಲಿ ನಿಜವನೈದಿಹೆನೆಂದರೆ ಕುರುಹುವಿಡಿದು, ಕುರುಹುಗೆಡಬೇಕು ಸಿದ್ಧರಾಮಯ್ಯ. ||೧೩೬||

ಹೀಗೆಂದು ಪ್ರಭುದೇವರು ತಮ್ಮ ಕರಸ್ಥಲದ ಇಷ್ಟಲಿಂಗದ ಸಂಬಂಧದ ಘನ ವಿವೇಕಮುಖದಿಂದ ತಿಳುಹಿ ತೋರಲು, ಆ ಸಿದ್ಧರಾಮಯ್ಯ

ದೇವರು ಪರಮ ಹರುಷಿತರಾಗಿ ಆ ಕರಸ್ಥಲದ ಲಿಂಗದಲ್ಲಿ ಅಡಗಿರ್ಪ ನಿರ್ದೇಶ ಎಷ್ಟು ಭೇದವೆಂದು, ಬೆಸಗೊಂಬ ಪ್ರಸ್ತಾವದ ವಚನ.

ಅಯ್ಯ ನಿಮ್ಮ ಕರಸ್ಥಲದ ಘನಲಿಂಗವನುಪಮಿಸಬಲ್ಲವರಿಲ್ಲವಯ್ಯ. ನಿಮ್ಮ ಮಹಿಮೆಯನರಿವರೆ ನಾನೇತರೊಳಗೇನಯ್ಯ! ಇಷ್ಟಲಿಂಗದೊಳಗೆ ಹುಟ್ಟಿದ ಶರಣನೊಳಗೆ ಹುಟ್ಟಿದ ಕರಸ್ಥಲವೆಂಬುದ ತಿಳುಹಿ ಎನ್ನನುಳುಹಿಕೊಳ್ಳಾ ಕಪಿಲಸಿದ್ಧಮಲ್ಲಿಕಾರ್ಜುನ. ॥೧೩೭॥

ಹೀಗೆಂದು ಸಿದ್ಧರಾಮಯ್ಯದೇವರು ಇಷ್ಟಲಿಂಗದೊಳಗಣ ಸೂಕ್ಷ್ಮ ಭೇದವ ಕೇಳಲು, ಆ ಪ್ರಭುದೇವರು ಸೂಕ್ಷ್ಮದ ಸ್ಥಿತಿಯನು ಸಂಗನಬಸವಣ್ಣ ಬಲ್ಲ. ಆತನಲ್ಲಿ ನಿನಗೆ ತಿಳುಹಿ ಕೊಡುಹುವೆ ನಡೆ, ಎಂದು ನಿರೂಪಿಸಿದ ಪ್ರಸ್ತಾವದ ವಚನ.

ಆಯತಲಿಂಗವಿಡಿದು ಸ್ವಾಯತಲಿಂಗವ ಕಾಣಬೇಕು ಸಿದ್ಧರಾಮಯ್ಯ. ಸ್ವಾಯತಲಿಂಗವಿಡಿದು ಜಂಗಮಲಿಂಗವ ಕಾಣಬೇಕು ಸಿದ್ಧರಾಮಯ್ಯ. ಜಂಗಮಲಿಂಗವಿಡಿದು ಗುರುಲಿಂಗವ ಕಾಣಬೇಕು ಸಿದ್ಧರಾಮಯ್ಯ. ಗುರುಲಿಂಗವಿಡಿದು ಶಿವಲಿಂಗವ ಕಾಣಬೇಕು ಸಿದ್ಧರಾಮಯ್ಯ ಶಿವಲಿಂಗವಿಡಿದು ಪ್ರಸಾದಲಿಂಗವ ಕಾಣಬೇಕು ಸಿದ್ಧರಾಮಯ್ಯ. ಇಂತು ಷಟ್‌ಸ್ಥಲದಂತುವ ಸಂಧಿಸಿ ಒಂದು ಮಾಡಿಕೊಂಡಿಪ್ಪ ಕರಸ್ಥಲದನುವನು ಗುಹೇಶ್ವರನ ಶರಣ ಸಂಗನಬಸವಣ್ಣ ಬಲ್ಲ, ಬೆಸಗೊಂಬ ಬಾರಾ ಸಿದ್ಧರಾಮಯ್ಯ. ॥೧೩೮॥

ಇಂತು ಬಸವರಾಜದೇವರ ದರುಶನವಾಗಬೇಕು ನಡೆ ಎಂದು ಪ್ರಭುದೇವರು ನಿರೂಪಿಸಲು, ಅದಕ್ಕೆ ಸಿದ್ಧರಾಮಯ್ಯದೇವರು ಪರಮ ಹರುಷಿತರಾಗಿ ಬಿನ್ನೈಸಿದ ಪ್ರಸ್ತಾವದ ವಚನ.

ಅಯ್ಯ ಕರಸ್ಥಲದ ಘನ ನಿಮ್ಮಲ್ಲಿರಲಿ. ಅಯ್ಯ ನಿಮ್ಮ ಪರಮಸ್ಥಲದ ಘನಲಿಂಗ ನಿಮ್ಮಲ್ಲಿರಲಿ. ಕರಸ್ಥಲವನೊಲ್ಲೆ, ಪರಸ್ಥಲವನೊಲ್ಲೆ, ಆವುದನು ಒಲ್ಲೆ ನೋಡಯ್ಯ. ಕಪಿಲಸಿದ್ಧಮಲ್ಲಿನಾಥಯ್ಯ, ನೀ ಒಲಿದು ಸಂಗನಬಸವಣ್ಣನ ಶ್ರೀಪಾದವ ತೋರಿಹೆನೆಂಬ ಮಾತಿಂಗೆ ಮಾರುವೋದೆನು. ಇನ್ನು ತೋರಿ ಎನ್ನನುಳುಹಿಕೊಳ್ಳಾ ಎನ್ನ ದೇವರದೇವಾ ॥೧೩೯॥

ಇಂತು ಸಿದ್ಧರಾಮಯ್ಯದೇವರು ಬಿನ್ನೈಸಲು. ಪ್ರಭುದೇವರು ಸಿದ್ಧರಾಮಯ್ಯ ದೇವರನೊಡಗೊಂಡು, ಕಲ್ಯಾಣದತ್ತಲಭಿಮುಖವಾಗಿ ಬರುತ್ತಿರ್ಪ ಪ್ರಸ್ತಾವದ ವಚನ.

ಅಂಗದಲ್ಲಿ ಆಚಾರವ ಸ್ವಾಯತವ ಮಾಡಿಕೊಂಡನು. ಆಚಾರದಲ್ಲಿ ಪ್ರಾಣವ ಸ್ವಾಯತವ ಮಾಡಿಕೊಂಡನು. ಪ್ರಾಣದಲ್ಲಿ ಲಿಂಗವ ಸ್ವಾಯತವ ಮಾಡಿಕೊಂಡನು ಲಿಂಗದಲ್ಲಿ ಜಂಗಮವ ಸ್ವಾಯತವ ಮಾಡಿಕೊಂಡನು. ಜಂಗಮದಲ್ಲಿ ಪ್ರಸಾದವ ಸ್ವಾಯತವ ಮಾಡಿಕೊಂಡನು. ಪ್ರಸಾದದಲ್ಲಿ ನಿತ್ಯವ ಸ್ವಾಯತವ ಮಾಡಿಕೊಂಡನು. ನಿತ್ಯದಲ್ಲಿ ದಾಸೋಹವ ಸ್ವಾಯತವ ಮಾಡಿಕೊಂಡನು. ದಾಸೋಹದಲ್ಲಿ ತನ್ನ ಮರೆದು ನಿಶ್ಚಿಂತನಿವಾಸಿಯಾಗಿ ಇದ್ದಾನೆ. ನಮ್ಮ ಗುಹೇಶ್ವರಲಿಂಗದಲ್ಲಿ ಸಂಗನಬಸವಣ್ಣನ ಶ್ರೀಪಾದಕ್ಕೆ ಶರಣೆಂದು ಧನ್ಯರಾಗಬೇಕು. ನಡೆ ಸಿದ್ಧರಾಮಯ್ಯ. ॥೧೪೦॥

ಇಂತೀ ಶ್ರೀಮತ್ಸಕಲಗಣಪುರಾತನರೊಳ್ ಪ್ರಭುದೇವರು ಮಹಾನುಭಾವ ಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್ ಸಿದ್ಧರಾಮಯ್ಯ ದೇವರ ಸಂಪಾದನೆಗಂ ತೃತಿಯೋಪದೇಶ ಸಮಾಪ್ತ.

1577

# ಸಿದ್ಧರಾಮಯ್ಯದೇವರ ಸಂಪಾದನೆಯ

# ಭಾವಾರ್ಥ.

ಈ ಮೂರನೆಯ ಸಂಪಾದನೆಯು ಶೂನ್ಯ ಸಂಪಾದನೆ ಗ್ರಂಥದಲ್ಲಿ ಬಹು ಮಹತ್ವದ್ದಾಗಿದೆ. ಬಿಜ್ಜಳ ಮತ್ತು ಬಸವೇಶ್ವರನ ಕಾಲದಲ್ಲಿ ಸಿದ್ಧರಾಮೇಶ್ವರನು ಸೊನ್ನಲಾಪುರ ಅಂದರೆ ಈಗಿನ ಸೊಲ್ಲಾಪೂರ ಗ್ರಾಮಕ್ಕೆ ಅಧಿಪತಿಯಾಗಿದ್ದನು. ಅವನಿಗೆ ಮೊದಲು ಲಿಂಗಧಾರಣೆಯು ಇರಲಿಲ್ಲ. ಮುಂದೆ ಅವನು ಅಲ್ಲಮಪ್ರಭುವಿನಿಂದ ಅನುಗ್ರಹೀತನಾಗಿ ಕಲ್ಯಾಣಕ್ಕೆ ಹೋಗಿ ಅಲ್ಲಿ ಚನ್ನಬಸವನಿಂದ ಲಿಂಗಧಾರಣೆಯನ್ನು ಹೊಂದಿದನು. ಈ ವಿವರಗಳು ಮೂರನೆಯ ಮತ್ತು ಹತ್ತನೆಯ ಸಂಪಾದನೆಗಳಲ್ಲಿ ಬಂದಿರುತ್ತವೆ.

ಈ ಮೂರನೆಯ ಸಂಪಾದನೆಯಲ್ಲಿ ವೀರಶೈವ ಧರ್ಮದ ಸಾಮಾನ್ಯ ತತ್ವಗಳನ್ನು ಅಲ್ಲಮಪ್ರಭುವು ಸಿದ್ಧರಾಮೇಶ್ವರನಿಗೆ ಮೊದಲು ತಿಳಿಸಿಕೊಡುತ್ತಾನೆ. ಆ ಮೇಲೆ ಸಿದ್ಧರಾಮೇಶ್ವರನು ತನಗೆ ಲಿಂಗಧಾರಣೆ ಮಾಡಬೇಕೆಂದು ಅಲ್ಲಮಪ್ರಭುವಿಗೆ ಕೇಳಿಕೊಳ್ಳುತ್ತಾನೆ. ಆದರೆ ಅಲ್ಲಮಪ್ರಭುವು ಸೊನ್ನಲಾಪುರದಲ್ಲಿ ಅವನಿಗೆ ಲಿಂಗಧಾರಣೆಯನ್ನು ಮಾಡದೆ ಅವನನ್ನು ಕಲ್ಯಾಣಕ್ಕೆ ಕರೆದುಕೊಂಡು ಬರುತ್ತಾನೆ. ಅಲ್ಲಿ ಶಿವಾನುಭವ ಮಂಟಪದಲ್ಲಿ ಶಿವಶರಣರ ಸನ್ನಿಧಿಯಲ್ಲಿ ಲಿಂಗಧಾರಣೆಯ ಅವಶ್ಯಕತೆ ಮತ್ತು ಅದರ ಮಹತ್ವವನ್ನು ಕುರಿತು ಚರ್ಚೆಗಳು ನಡೆಯುತ್ತಿವೆ. ಹೀಗೆ ಸಿದ್ಧರಾಮೇಶ್ವರನಿಗೆ ಲಿಂಗಧಾರಣೆಯ ಮಹತ್ವವನ್ನು ತಿಳಿಸಿ ಆ ಮೇಲೆ ಅವನಿಗೆ ಚನ್ನಬಸವೇಶ್ವರನ ಕಡೆಯಿಂದ ಲಿಂಗಧಾರಣೆಯನ್ನು ಮಾಡಿಸುತ್ತಾನೆ. ಹೀಗೆ ಈ ಕಥಾ ಸಂದರ್ಭವಿರುತ್ತದೆ.

## ದೇವಾಲಯಗಳ ನಿರಾಕರಣೆ.

ಅಲ್ಲಮಪ್ರಭುವು ಬನವಾಸಿ, ಬಳ್ಳಿಗಾವಿ ಪ್ರಾಂತದಿಂದ ಹೊರಟು ಮುಕ್ತಾಯಕ್ಕ, ಗೊಗ್ಗಯ್ಯ ಮೊದಲಾದವರಿಗೆ ವೀರಶೈವ ಧರ್ಮದ ತತ್ವಗಳನ್ನು ತಿಳುಹಿಸುತ್ತ ಸೊಲ್ಲಾಪೂರ ಪಟ್ಟಣದಲ್ಲಿ ಪ್ರಸಿದ್ಧಿಯನ್ನು ಹೊಂದಿದ್ದ

ಸಿದ್ಧರಾಮೇಶ್ವರನನ್ನು ಕಂಡುಕೊಂಡನು. ಆಗ ಸಿದ್ಧರಾಮೇಶ್ವರನು ದೇವಾಲಯಗಳನ್ನೂ ಕೆರೆಗಳನ್ನೂ ಕಟ್ಟಿಸುವದರಲ್ಲಿ ತೊಡಗಿದ್ದನು. ಆದರೆ ಅಲ್ಲಮಪ್ರಭುವು ಇಂಥ ಕಾರ್ಯಗಳನ್ನು ಮಾಡುವದರಿಂದ ಪಾರಮಾರ್ಥವು ದೊರಕಲಾರದು, ಎಂದು ಸಿದ್ಧರಾಮೇಶ್ವರನಿಗೆ ತಿಳಿಸಿ ಹೇಳಲು ಪ್ರಯತ್ನಿಸುತ್ತಾನೆ.

ಅಲ್ಲಮಪ್ರಭುವು ಕೆರೆ ಕಟ್ಟುವದರಲ್ಲಿ ತೊಡಗಿದ್ದ ಅಲ್ಲಿಯ ಕೆಲಸಗಾರರನ್ನು ನೋಡಿ ಅವರನ್ನು ವಿಡಂಬಿಸುತ್ತ ನುಡಿದದ್ದೇನಂದರೆ:— "ಸಿದ್ಧರಾಮೇಶ್ವರನು ಒಂದು ದೊಡ್ಡ ಸಂತೆಯನ್ನು ಇಲ್ಲಿ ನೆರಿಸಿದ್ದಾನೆ. ಇಲ್ಲಿ ವ್ಯರ್ಥ ವಿಲಾಸವನ್ನು ನಾನು ನೋಡುತ್ತಿದ್ದೇನೆ. ಭವಸಾಗರದಲ್ಲಿ ಹುಟ್ಟಿದವರು ಭವದಲ್ಲಿಯೇ ಇದ್ದುಕೊಂಡು ತೊಳಲಾಡುತ್ತಾರೆ. ಶಿವನು ಜ್ಞಾನಿ ಎಂಬುದೇನೋ ನಿಜವು. ಆದರೆ ಅವನು ಮಾಯೆಯಿಂದ ತುಂಬಿಕೊಂಡ ಈ ಜಗತ್ತನ್ನು ಹುಟ್ಟಿಸಿದ್ದನ್ನು ನೋಡಿ ನಾನು ಬೆರಗಾದೆನು. ಹೀಗೆ ಅಲ್ಲಮಪ್ರಭುವು ಪರಮಾತ್ಮನನ್ನು ಸಹ ವಿಡಂಬಿಸಹತ್ತಿದನು. (೨) ಅಂದರೆ ಪರಮಾತ್ಮನು ಜೀವಿಗಳಾದವರು ಭವದಲ್ಲಿದ್ದುಕೊಂಡೇ ಆತ್ಮಪ್ರಗತಿಯನ್ನು ಹೊಂದಿ ಭವಸಾಗರವನ್ನು ದಾಟಬೇಕೆಂದು ಈ ಭವವನ್ನು ರಚಿಸಿದನೋ ಏನೋ ಎಂಬ ಭಾವವನ್ನು ಅಲ್ಲಮಪ್ರಭುವು ಇಲ್ಲಿ ಪ್ರಕಟಿಸಿದ್ದಾನೆ.

ಮುಂದೆ ಅವನು ಅನ್ನುವದೇನಂದರೆ, ಮನುಷ್ಯನು ಕಲ್ಲದೇವರ ಮಾಡಿ ಅದನ್ನು ಕಲ್ಲು ಮನೆಯಲ್ಲಿಟ್ಟು ಕಲ್ಲಿನ ಮೇಲೆ ಕಲ್ಲು ಸ್ಥಾಪಿಸಿದರೆ ನರಕವು ತಪ್ಪದು. (೩) ಯಾಕಂದರೆ ಮನುಷ್ಯನಿಗೆ ದೇವಾಲಯವೆಂಬುದಿಲ್ಲ. ಅವನಿಗೆ ದೇಹವೇ ದೇವಾಲಯವು. ಈ ದೇವಾಲಯದಲ್ಲಿರುವ ಪ್ರಾಣವೇ ಅವನಿಗೆ ಲಿಂಗವು. ಹೀಗೆ ಶರಣನು ಪ್ರಾಣಲಿಂಗಿಯಾಗಿ ವ್ಯವಹರಿಸಬೇಕಲ್ಲದೆ ಕಲ್ಲನ್ನು ದೇವರೆಂದು ತಿಳಿದು ಅದನ್ನು ಪೂಜಿಸಬಾರದು. ದೇವರು ಹೀಗೆ ಕಲ್ಲಾದರೆ ನನ್ನ ಗತಿ ಏನು, ಎಂದು ಅಲ್ಲಮಪ್ರಭುವು ಹಾಸ್ಯ ಮಾಡುತ್ತ ಕೆಲಸಗಾರರ ಗುಂಪಿನಲ್ಲಿ ನಡೆದು ಬರುವವನಾದನು. (೪)

ಈ ಭಾವವನ್ನು ಅವನು ಪುನಃ ನುಡಿಯುತ್ತ ಕೆರೆಯನ್ನು ಕಟ್ಟಿಸುವವರಿಗೆ ಪುಣ್ಯವು ಮಾತ್ರ ಲಭಿಸಬಹುದು ಅಥವಾ ಅವರು ಸ್ವರ್ಗ ಸುಖವನ್ನು ಹೊಂದಬಹುದು. ಆದರೆ ಅವರಿಗೆ ಶಿವನ ನಿಜವು ಸಾಧ್ಯವಾಗಲಾರದು ಎಂದು ಅನ್ನುತ್ತಾನೆ. (೫)

ಮುಂದೆ ಅವನು ಕೆಲಸಗಾರರನ್ನು ವಿಡಂಬಿಸಿ ನುಡಿಯುತ್ತ ಮನುಷ್ಯನು ಯಾವ ತರದ ಕೆರೆಯನ್ನು ಕಟ್ಟಿಸಬೇಕೆಂದರೆ:— ಶರೀರಕ್ಕೆ ಮನವೆಂಬ ಕಟ್ಟೆಯನ್ನು ಕಟ್ಟಬೇಕು. ಅದಕ್ಕೆ ಆಚಾರವೆಂಬ ಸೋಪಾನವಿರಬೇಕು. ಈ ಕೆರೆಯಲ್ಲಿ ಪರಮಾನಂದವೆಂಬ ಜಲವನ್ನು ತುಂಬಬೇಕು. ಇಂಥ ಕೆರೆಯನ್ನು ಕಟ್ಟಬೇಕು. ಇಂಥ ನನ್ನ ಕೆರೆಯು ಎಂದೂ ಬತ್ತುಲಾರದು, ಅದು ಶಾಶ್ವತವಾಗಿ ಉಳಿಯುತ್ತದೆ. ಆದರೆ ಸಿದ್ಧರಾಮನು ಇಂಥ ಕೆರೆಯನ್ನು ಕಟ್ಟದೆ ನೆಲವನ್ನು ಅಗೆಸುತ್ತ ವ್ಯರ್ಥ ಶ್ರಮಪಡುತ್ತಿದ್ದಾನೆ. ಅವನು ಒಂದು ಕಲ್ಲನ್ನು ಕಟೆದು ಅದನ್ನು ಮತ್ತೊಂದು ಕಲ್ಲಿನ ಮೇಲೆ ಇಟ್ಟು ಅವುಗಳನ್ನು ಪೂಜೆ ಮಾಡುತ್ತ ಅವುಗಳಿಗೆ ಭೋಗ ಕೊಡಬೇಕೆಂದಿದ್ದಾನೆ. ಅವನ ಈ ರೀತಿಯನ್ನು ನೋಡಿ ನಾನು ಬೆರಗಾದೆನು. (೭)

ಹೀಗೆ ಅವನು ಗಟ್ಟಿಯಾಗಿ ನುಡಿಯುತ್ತ ಕೆರೆಯ ಕೆಲಸ ಮಾಡುವವರಲ್ಲಿ ಮುಂದೆ ಬರಹತ್ತಿದನು. ಮುಂದೆ ಅವನು ಪುನಃ ನುಡಿಯುತ್ತ ಮನುಷ್ಯನು ತನ್ನ ಶರೀರದೊಳಗಿರುವ ದುರ್ಗುಣಗಳನ್ನು ಮೊದಲು ತೊಳೆಯಬೇಕು. ಒಡ್ಡರ ರಾಮಯ್ಯನು ಹಾಗೆ ಮಾಡದೆ ತನ್ನ ನಿಜವನ್ನು ಅರಿಯದೆ ಕೆರೆ ಬಾವಿ ದೇವಾಲಯಗಳನ್ನು ಕಟ್ಟಿಸುತ್ತಿದ್ದಾನೆ. ಇದಕ್ಕೆ ನಾನೇನು ಹೇಳಲಿ, (೮) ಎಂದು ಅಲ್ಲಮಪ್ರಭುವು ಕೆಲಸ ಮಾಡುವವರ ಕಿವಿಗೆ ಬೀಳುವಂತೆ ಉಚ್ಚರಿಸುತ್ತ ಮುಂದೆ ಬರಲು ಅಲ್ಲಿದ್ದ ಕೆಲಸಗಾರರು ಈತನು ನಮ್ಮ ಗುರುವಿನ ನಿಂದೆಯನ್ನು ಮಾಡುತ್ತಿದ್ದಾನೆ. ಅದನ್ನು ಕೇಳಿ ನಾವು ಸುಮ್ಮನಿರಬೇಕೇ, ಎಂದು ಕಲ್ಲು, ಗುಂಡು, ಬಡಿಗೆಗಳನ್ನು ತೆಗೆದುಕೊಂಡು ಅವನನ್ನು ಹೊಡೆಯಲು ಪ್ರಾರಂಭಿಸಿದರು.

## ಲಿಂಗತನುವಿನ ಸ್ವರೂಪ.

ಹೀಗೆ ಆ ಗುಡ್ಡರುಗಳು ಅಲ್ಲಮಪ್ರಭುವಿನನ್ನು ಹೊಡೆದರೂ ಅವನಿಗೆ ಎಷ್ಟು ಮಾತ್ರವೂ ಪೆಟ್ಟುಗಳು ತಗಲಿಲ್ಲ. ಆ ಪೆಟ್ಟುಗಳು ಆ ಗುಡ್ಡರುಗಳನ್ನೇ ಮರಳಿ ತಾಕಲಾಗಿ ಅವುಗಳಿಂದ ಅವರು ನೋವನ್ನು ಹೊಂದುವವರಾದರು. ಅವರ ಈ ಸ್ಥಿತಿಯನ್ನು ನೋಡಿ ಅಲ್ಲಮಪ್ರಭುವು— ಸಿದ್ಧರಾಮೇಶ್ವರನು ಎಂಥವರನ್ನು ತನ್ನ ಶಿಷ್ಯರನ್ನಾಗಿ ಮಾಡಿಕೊಂಡಿದ್ದಾನೆ! ಶಿಷ್ಯರನ್ನು ಮಾಡಿಕೊಳ್ಳುವ ರೀತಿಯು ಇದಲ್ಲ. ಈ ಗುಡ್ಡರುಗಳು ಗುರುವೆಂದರಿಯರು, ಲಿಂಗ ಜಂಗಮವೆಂದರಿಯರು, ಇವರು ಪಾತಕಿಗಳು, ಇಂಥವರು ನನ್ನನ್ನು ಹೊಡೆ

ದರೆ ಅವರಿಂದ ನನ್ನ ಲಿಂಗತನುವಿಗೆ ಎಂದಾದರೂ ನೋವು ಉಂಟಾಗಬಹುದೇ? (೬) ಪರಮಾತ್ಮನು ಜಗತ್ತಿನ ತುಂಬೆಲ್ಲ ಇದ್ದಾನೆ. ಆದ್ದರಿಂದ ಶಿವಶರಣರಿಗೆ ಆದ ನೋವುಗಳು ಅವರಿಗೆ ಹತ್ತಲಾರವು. ಗುರುವು ಭವಿಗಳಿಗೆ ಮಾಡಿದ ಉಪದೇಶದಿಂದ ಅವರಲ್ಲಿ ನಿಜವು ಉಂಟಾಗದೆ, ಗುರುವಿಗೆ ಮಾತ್ರ ಉಪಹತಿಯು, ಎಂದು ನುಡಿದನು (೧೨)

ಇತ್ತ ಪ್ರಭುದೇವರನ್ನು ಹೊಡೆದದ್ದರಿಂದ ನೋವನ್ನು ಹೊಂದಿದ ಗುಡ್ಡರುಗಳು ಗೋಳಿಡುತ್ತ ಸಿದ್ಧರಾಮನು ಬಳಿಗೆ ಓಡಿಬಂದು ಅವನಿಗೆ ಮೊರೆ ಇಟ್ಟರು. ಆಗ ಸಿದ್ಧರಾಮನು ಯಾವುದನ್ನು ವಿಚಾರ ಮಾಡದೆ ಅಲ್ಲಮಪ್ರಭುವಿನಲ್ಲಿಗೆ ಸಿಟ್ಟಿನಿಂದ ಬಂದು— ಈತನು ನನ್ನ ಶಿಷ್ಯರನ್ನು ನೋಯಿಸಿದ್ದಾನೆ. ನನ್ನ ಶಿಷ್ಯರಿಗೆ ಮಾಡಿದ ನೋವು ನನಗೆಯೇ ಮಾಡಿದಂತೆ ಸರಿ. (೧೩) ಎಂದು ಭಾವಿಸಿ ಸಿದ್ಧರಾಮನು ಪ್ರಭುದೇವರನ್ನು ಹಿಂಸಿಸಬೇಕೆಂದು ತನ್ನ ನೊಸಲಕಣ್ಣನ್ನು ತೆರೆದನು. (೧೪) ಆಗ ಅದರಲ್ಲಿದ್ದ ಕಿಚ್ಚು ಅದ್ಭುತವಾಗಿ ಮೂರು ಲೋಕಗಳಲ್ಲಿ ಪಸರಿಸುತ್ತ ಅಲ್ಲಮಪ್ರಭುವು ಇದ್ದೆಡೆಗೆ ಬರಹತ್ತಿತು (೧೫)

ಅಲ್ಲಮಪ್ರಭುವು ಈ ಕಿಚ್ಚು ಎಲ್ಲಿಂದ ಬಂದಿತೆಂಬುದನ್ನು ತಿಳಿದು ತನ್ನೊಳಗೆ ತಾನು— ಈ ಸಿದ್ಧರಾಮನು ಹುಚ್ಚನಿದ್ದಾನೆ. ಶರಣರಿಗೆ ಕಾಯಗುಣಗಳಿಲ್ಲ. ಅವರ ಅಂಗವೆಲ್ಲವು ಲಿಂಗದಲ್ಲಿ ಅಡಗಿಹೋಗಿರುತ್ತದೆ. ಇಂಥ ಲಿಂಗ ಶರೀರವನ್ನು ತಾನು ಸುಡುವೆನೆಂದು ಸಿದ್ಧರಾಮನು ಬಗೆದಿದ್ದಾನೆ. ಈತನು ಮರುಳನು. ನನ್ನ ಕಾಯವು ಈ ಮೊದಲಿಗೆಯೇ ಜ್ಞಾನವೆಂಬ ಉರಿಗೆ ಆಹುತಿಯಾಗಿದೆ. ನಿಃಶೂನ್ಯವೆಂಬ ತೇಜದಲ್ಲಿ ಅದು ಸುಟ್ಟು ಭಸ್ಮವಾಗಿದೆ. ಅದು ನಿರ್ವಾಣ ಪದದಲ್ಲಿ ನಿಂತಿದೆ. ಇಂಥವರನ್ನು ಸುಡುವೆನೆಂಬುದು ಸಿದ್ಧರಾಮನಿಗೆ ಅಶಕ್ಯವು. (೧೬)

ಹೀಗೆ ಅಲ್ಲಮಪ್ರಭುವು ನುಡಿಯುತ್ತ ತನ್ನಲ್ಲಿರುವ ಪರಮಾತ್ಮಶಕ್ತಿಯನ್ನು ಕುರಿತು ನುಡಿದುದು ಏನೆಂದರೆ— ಪರಮಾತ್ಮನೇ, ನಿಮ್ಮ ಶಕ್ತಿಯು ಜಗತ್ತಿನಲ್ಲಿದೆ ಮತ್ತು ಆ ಜಗದಲ್ಲಿಯ ಶಕ್ತಿಯು ನಿಮ್ಮಲ್ಲಿದೆ. ಹೀಗೆ ಜಗಕ್ಕೂ ನಿನಗೂ ಯಾವ ಭೇದವಿರುವದಿಲ್ಲ. ಪರಮಾತ್ಮನನ್ನು ಒಲಿಸಿಕೊಂಡ ಶರಣರ ಮಹತ್ವವು ಈ ಸಿದ್ಧರಾಮನಿಗೆ ತಿಳಿದಿಲ್ಲ. ಇದನ್ನು ಅವ

ನಿಗೆ ತಿಳಿಸಬೇಕೆಂದು ಅಲ್ಲಮಪ್ರಭುವು ಯೋಚಿಸಿ ಸಿದ್ಧರಾಮನ ಉರಿಗಣ್ಣಿನಿಂದ ಹೊರಟ ಜ್ವಾಲೆಯನ್ನು ಅವನು ತನ್ನ ಅಂಗಾಲಿನಲ್ಲಿ ಅಡಗಿಸಿಕೊಂಡು ಬಿಟ್ಟನು ! (೨೦)

ಶಿವಶರಣರು ಎಷ್ಟು ಸಮರ್ಥರೆಂಬುದನ್ನು ಸಿದ್ಧರಾಮನು ತಿಳಿಯಬೇಕೆಂದು ಅಲ್ಲಮಪ್ರಭುವು ಹೀಗೆ ಮಾಡಿದನು. ಸಿದ್ಧರಾಮನು ನೊಸಲ ಕಣ್ಣನ್ನು ತೆರೆದರೆ ಶರಣರು ತಮ್ಮ ಅಂಗಾಲಿನಲ್ಲಿ ಒಂದು ಕಣ್ಣನ್ನು ಉಂಟು ಮಾಡಿ ಅಂಥ ಕಣ್ಣಿನಿಂದ ಅವರು ಜ್ವಾಲೆಯನ್ನು ಹೊರಡಿಸಬಲ್ಲರು, ಎಂಬುದು ಅವನಿಗೆ ತಿಳಿಯಬೇಕೆಂದು ಅಲ್ಲಮಪ್ರಭುವು ತನ್ನ ಅಂಗಾಲಿನಲ್ಲಿ ಒಂದ ಕಣ್ಣನ್ನು ಉಂಟುಮಾಡಿದನು. ಮುಂದೆ ಅದರಿಂದ ಒಂದು ಮಹಾಜ್ವಾಲೆಯು ಹೊರಡುವಂತೆ ಮಾಡಿದನು. ಅದರ ತೇಜವು ಶತಕೋಟಿ ಸೂರ್ಯರ ತೇಜಕ್ಕಿಂತಲೂ ಮಿಗಿಲಾಗಿದ್ದಿತು. (೨೩) ಅದು ಪರಮಾತ್ಮನ ಅನುಹಿನ ಬೆಳಗು. ಇಂಥ ಬೆಳಗಿನಿಂದ ಒಂದು ಮಹಾಜ್ವಾಲೆಯು ಹೊರಟು ಚತುರ್ದಶ ಭುವನಗಳಿಗೆಲ್ಲ ಪ್ರಳಯ ಕಾಲವು ಬಂದಿತೋ ಏನೋ, ಎಂದು ಅನ್ನುವಂತೆ ಅದು ಘೋರ್ಗರೆಯುತ್ತ ಮುಂದೆ ಬರಹತ್ತಿತು. ಆಗ ಸಿದ್ಧರಾಮನು ಈ ಮಹಾಜ್ವಾಲೆಯು ಎಲ್ಲಿಂದ ಬಂದಿತೆಂಬುದನ್ನು ತನ್ನ ವಿವೇಕದಿಂದ ತಿಳಿದುಕೊಂಡು— ನನ್ನ ಇದಿರಿಗೆ ನಿಂತ ಅಲ್ಲಮಪ್ರಭುವು ಮಾನವನಲ್ಲ, ಅವನು ಶಿವನು. ಇವನನ್ನು ನಾನು ಪೀಡಿಸಿ ಪಾಪ ಮಾಡಿದ್ದೇನೆ. ನನ್ನಿಂದ ದೊಡ್ಡ ತಪ್ಪಾಗಿದೆ, ನಾನು ಕೆಟ್ಟೆನು, ಘನಮಹಿಮ ಶರಣರ ಮುಂದೆ ನನ್ನ ಪ್ರತಾಪವು ನಿಲ್ಲಲಾರದು, ಎಂದು ನುಡಿಯುತ್ತಿರುವಷ್ಟರಲ್ಲಿ ಸಿದ್ಧರಾಮನಿಂದ ಮೊದಲು ಹೊರಟಿದ್ದ ಕಿಚ್ಚು ಎಲ್ಲಿಯೋ ಕಾಣದೆ ಅಡಗಿ ಹೋಯಿತು. ಆಗ ಅವನು ಲಜ್ಜಿತನಾಗಿ ಅಲ್ಲಮಪ್ರಭುವಿನಲ್ಲಿ ಶರಣಹೋಗಬೇಕೆಂದು ಅವನನ್ನು ನಾನಾ ರೀತಿಯಿಂದ ಪ್ರಾರ್ಥಿಸಹತ್ತಿದನು. ಆಗ ಅವನು ಪರಮಾತ್ಮನನ್ನು ಕುರಿತು ಬಹು ವಿಧವಾಗಿ ಬೇಡಿಕೊಳ್ಳಹತ್ತಿದನು. (೨೬)

ಸಿದ್ಧರಾಮನು ನುಡಿದ ಪಶ್ಚಾತ್ತಾಪಯುಕ್ತ ವಚನಗಳು ಮೂಲ ಗ್ರಂಥದಲ್ಲಿರುತ್ತವೆ. ನಂ॥ ೨೮, ೨೯, ೩೦, ೩೧, ೩೨, ೩೩, ೩೪, ೩೬, ೩೭, ೩೮, ೪೦, ೪೧, ೪೪, ೪೫, ೪೬ ಇವು ಇದ್ದು ಅವುಗಳನ್ನು ವಾಚಕರು ಮೂಲದಲ್ಲಿಯೇ ನೋಡಬೇಕು. ಈ ವಚನಗಳು ಬಹು ಸುಂದರವಾದವುಗಳಿವೆ ಮತ್ತು ಭಾವಪೂರ್ಣವಾಗಿವೆ.

## ಪರಮಾತ್ಮನು ಸ್ತುತಿಪ್ರಿಯನಲ್ಲ, ಭಕ್ತಿಪ್ರಿಯನು.

## ಭಕ್ತಿ ಎಂದರೇನು?

ಹೀಗೆ ಸಿದ್ಧರಾಮನು ಪ್ರಭುವಿನನ್ನು ಸ್ತೋತ್ರ ಮಾಡಲಿಕ್ಕೆ ಪ್ರಾರಂಭಿಸಲು ಪ್ರಭುದೇವರು ಹೀಗೆ ಸ್ತೋತ್ರವನ್ನು ಮಾಡುವದನ್ನು ಜರಿಯುತ್ತ ಸಿದ್ಧರಾಮನಿಗೆ ನೋಡಿದುದು ಏನಂವರೆ— ಸಿದ್ಧರಾಮನೇ, ಪರಮಾತ್ಮನು ಇಂಥ ಬರೀ ಸ್ತೋತ್ರಕ್ಕೆ ಒಲಿಯಲಾರನು. ಅವನು ಮಾತಿನ ಮಾಲೆಗೆ ಸಿಕ್ಕುವದಿಲ್ಲ, ಎಂದು ನುಡಿಯಲು, ಅದಕ್ಕೆ ಸಿದ್ಧರಾಮನು ಹೇಳಿದ್ದು— ಸ್ತೋತ್ರಗಳನ್ನು ಪರಮಾತ್ಮನೇ ಮಾಡಿದ್ದಾನೆ. ಅವು ನನ್ನ ಹೃದಯದೊಳಗೆ ಅವನ ಸ್ಮರಣೆಯನ್ನು ತರುತ್ತವೆ. ಇಂಥವುಗಳನ್ನು ಬಾಣ ಮಯೂರ ಹಲಾಯುಧರು ಮಾಡಿದ್ದರಿಂದ ಪರಮಾತ್ಮನು ಅವರಿಗೆ ಒಲಿದಿದ್ದಾನೆ, ಎಂದು ನುಡಿದನು (೪೫)

ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರ:—

ವಚನದ ರಚನೆ ಇದು ಮಾತಿನ ಗುಂಪೆಯಲ್ಲ. ಶ್ರುತಿ ಸ್ಮೃತಿ ಪುರಾಣಗಳು ಪರಮಾತ್ಮನನ್ನು ಹೊಗಳಿದ್ದರೂ ಹೊಗಳಿ ಹೊಗಳಿ ಅವನನ್ನು ಕಾಣದೆ ಹೋದವು, (೪೬–೪೭).

ಹೀಗೆ ಹೇಳಲು ಅದಕ್ಕೆ ಸಿದ್ಧರಾಮನು ಒಪ್ಪಿ ಅಂದದ್ದೇನಂದರೆ— ಪರಮಾತ್ಮನು ವೇದಶಾಸ್ತ್ರಗಳಿಂದ ಪ್ರೀತಿಯನ್ನು ಹೊಂದುವದಿಲ್ಲ. ನಾದ ಅಥವಾ ಸ್ತೋತ್ರಕ್ಕೂ ಒಲಿಯುವದಿಲ್ಲ. ಆದರೆ ಅವನು ಭಕ್ತಿಪ್ರಿಯನು. ಇದನ್ನು ನಾನು ತಿಳಿದು ನಿನ್ನ ಮೊರೆಹೊಕ್ಕೆನು ಎಂದು ಹೇಳಿದನು.

ಅದಕ್ಕೆ ಪ್ರಭುದೇವರು ಪ್ರತ್ಯುತ್ತರ ಕೊಟ್ಟಿದ್ದೇನಂದರೆ— ಕೆಲವೊಬ್ಬನು ಭಕ್ತಿವಂತನೆಂದು ಹೇಗೆ ಹೇಳಬೇಕು? ತನ್ನನ್ನು ಮರೆದು ಭಿನ್ನತೆಯನ್ನು ಹರಿದರೆ ಅದು ಭಕ್ತಿಯು. ಇಂಥ ಭಕ್ತಿಯುಳ್ಳವನಿಗೆ ಶಿವನು ಒಲಿಯುತ್ತಾನೆ. ಮಾತಿನಲ್ಲಿ ಭಕ್ತಿಯನ್ನಾಡಿ ನಡೆಯಲ್ಲಿ ಅದು ಇರದಿದ್ದರೆ, ಶಿವನೊಲಿಯನು, ಎಂದು ಅಲ್ಲಮಪ್ರಭುವು ನಿರೂಪಿಸಿದನು. (೪೮).

ಆದರೆ ಈ ಮಾತಿಗೆ ಸಿದ್ಧರಾಮನು ನುಡಿದುದು ಏನೆಂದರೆ- ನನಗೆ ಕೋಪವೆಂಬುದು ನನ್ನ ಕಣ್ಣಿನಲ್ಲಿ ಮಾತ್ರ ಇದೆ. ನನ್ನಿಂದ ಏನಾಗಬೇಕು?

ನಾನು ದುರ್ಬಲನು. ನಿನ್ನ ಜ್ಞಾನದ ತೇಜದ ಮುಂದೆ ನನ್ನಜ್ಞಾನವು ಎಷ್ಟ ರದು? ನನ್ನ ಭಕ್ತಿ ದಿಟವಾದರೆ ಅದು ನಿಮ್ಮ ರೂಪು. ನನಗೆ ಸ್ವತಂತ್ರತೆ ಎಂಬುದು ಇಲ್ಲ, ಎಂದು ನುಡಿದನು. (೪೯)

ಆಗ ಪ್ರಭುದೇವರು ಹೇಳಿದ್ದೇನಂದರೆ- ಕೋಪ ತಾಪಗಳು ಅರಿವು ಅಂದರೆ ಜ್ಞಾನದಲ್ಲಿವೆ. ಮಾನವನಲ್ಲಿ ನಿತ್ಯತ್ವವೆಂಬುದು ಇದೆ. ಭಕ್ತಿ ಮುಕ್ತಿ ಗಳನ್ನು ಅದರಲ್ಲಿ ಕಾಣಬಹುದು. ಆದರೆ ಭಕ್ತಿಯನ್ನು ಮಾಡುವೆನೆಂದು ಭಾವದಲ್ಲಿ ಬರೀ ಬಣ್ಣವಿಟ್ಟು ಪರಮಾತ್ಮನನ್ನು ಕುರಿತು ಹೊಗಳಿದರೆ ಅದು ಸಹಜವಾದೀತೇ? ಅದು ಆಗಲಾರದು. ನಿನ್ನನ್ನು ಕಾಣುವ ಶರಣರು ಎಂಥ ವರೆಂಬುದನ್ನು ನೀನು ತಿಳಿದು ಅವರ ನುಡಿಯನ್ನು ನಂಬಬೇಕು. ಅವರನ್ನು ನಂಬದಿದ್ದರೆ ಶರಣರು ಅಲ್ಲಿ ನಿಲ್ಲಲಾರರು, ಎಂದು ಪ್ರಭುದೇವನು ಸಿಟ್ಟಿ ನಿಂದ ನುಡಿದು, ಸಿದ್ಧರಾಮನ ಸ್ಥಾನವನ್ನು ಬಿಟ್ಟು ಹೋಗಲು ಸಿದ್ಧನಾದನು. ಆಗ ಸಿದ್ಧರಾಮನು ಪ್ರಭುವಿಗೆ ಅಡ್ಡಬಿದ್ದು ಹೇಳಿಕೊಳ್ಳುತ್ತಿದ್ದಾನೆ. ಅದು ಏನೇದರೆ:— (೫೦)

## ಪರಮಾತ್ಮ ಸಾಧನೆ

ಅಲ್ಲಮಪ್ರಭುವೇ, ನೀನು ಹೀಗೆ ಸಿಟ್ಟಿನಿಂದ ನನ್ನನ್ನು ಬಿಟ್ಟು ಹೋಗ ಬಾರದು. ನಿನ್ನ ಕೈಯ್ಯ ಹಿಡಿದರೆ, ನೀನು ಕೊಸರಿಕೊಂಡು ಹೋಗಬಹುದು. ನಿನ್ನನ್ನು ಹೃದಯದಲ್ಲಿಟ್ಟುಕೊಂಡರೆ ನೀನು ಕೊಸರಿಕೊಂಡು ಹೇಗೆ ಹೋಗುವಿ? ನಾನು ನಿನ್ನನ್ನು ಸೂಕ್ಷ್ಮ ತನುವಿನಲ್ಲಿ ಹಿಡಿದುಕೊಂಡರೆ ನೀನು ನನ್ನನ್ನು ಬಿಟ್ಟು ಹೋಗುವದೆಂತು? (೫೧)

ಹೀಗೆ ನುಡಿಯಲು ಅದಕ್ಕೆ ಪ್ರಭುದೇವರು ಕೊಟ್ಟ ಪ್ರತ್ಯುತ್ತರವೇನೆಂ ದರೆ—ಅಂಗದಲ್ಲಿ ಅಥವಾ ಪ್ರಾಣದಲ್ಲಿ ಅಥವಾ ಭಾವದಲ್ಲಿ ಹಿಡಿಯುವೆ ನೆಂದರೆ ಅದು ಆಗದ ಮಾತು. ಅವನು ಅಲ್ಲಿ ಸಿಕ್ಕಲಾರನು- ಸೂಕ್ಷ್ಮತನುವಿನ ಮನದ ಕೊನೆಯ ಮೇಲೆ ಅವನನ್ನು ಅಪ್ಪಿದೆನೆಂದರೂ, ಅವನು ಸಿಕ್ಕಲಾ ರನು. ಯಾಕಂದರೆ ಭಾವಾತೀತವಾದ ನಿರಾಕಾರದ ಘನವು ಸುಜ್ಞಾನ ಮುಖಕ್ಕೆ ಅಸಾಧ್ಯನು. ಹೀಗಿದ್ದ ಬಳಿಕ ಶರಣರನ್ನು ನೀನು ಹೇಗೆ ತಡೆದು ನಿಲ್ಲಿಸುವಿ? (೫೨)

ಹೀಗೆ ಪ್ರಭುದೇವರು ಸಿದ್ಧರಾಮನಿಗೆ ಪ್ರಶ್ನೆಮಾಡಲಾಗಿ, ಸಿದ್ಧರಾಮ ನಿಗೆ ಮನಸ್ಸಿನಲ್ಲಿ ಒಂದು ವಿಲಕ್ಷಣವಾದ ಪ್ರಕಾಶವು ಹೊಳೆದಂತಾಯಿತು. ಆಗ ಅವನು ಪ್ರಭುದೇವರಿಗೆ ಉತ್ತರ ಕೊಟ್ಟದು ಏನೆಂದರೆ:—

ಪ್ರಭುವೇ, ನೀನು ನನ್ನನ್ನು ಕಂಡಾಗಲೇ ಬಂದಿವಿಡಿದಿರುವಿ. ನಿನ್ನ ಕರುಣೆಯು ನನ್ನ ಮೇಲಿದ್ದರೆ ಸಾಕು. ಅದು ನನ್ನನ್ನು ನಿನ್ನಲ್ಲಿಗೆ ಒಯ್ಯುತ್ತಿದೆ, ಎಂದು ಉತ್ತರಕೊಟ್ಟೆನು. (೫೩)

ಈ ಉತ್ತರದಲ್ಲಿ ಇರುವ ತತ್ವವು ಏನೆಂದರೆ:— ಮನುಷ್ಯನು ತನ್ನ ನಡೆಯಿಂದ ಮೊದಲು ಪವಿತ್ರನಾಗಬೇಕು. ಆರಂಭದಲ್ಲಿ ಹೇಗೆ ಆಚರಿಸಬೇಕೆಂಬುದನ್ನು ತಿಳಿಯಬೇಕು. ಇಂಥ ಆಚರಣೆಯು ಸಂಘಟಿಸಿದಲ್ಲಿ ಮನುಷ್ಯನಲ್ಲಿ ಅಂತರ್ಜ್ಞಾನವು ಬಲಿಯುತ್ತ ಹೋಗುತ್ತದೆ. ಆಗ ಅವನು ಪರಮಾತ್ಮನಲ್ಲಿ ಬೆರೆದು ಹೋಗುತ್ತಾನೆ. ಆದರೆ ತಾನು ಬೆರೆದೆನು ಎಂಬ ವಿಚಾರವು ಅವನಲ್ಲಿ ಆಗ ಇರುವದಿಲ್ಲ. ಅವನು ಆಗ ಶಬ್ದಮುಗ್ಧನಾಗಿರುತ್ತಾನೆ. ತಾನು ನಿಜದಲ್ಲಿ ಬೆರೆದೆನೆಂಬ ಭಾವವು ಅವನಲ್ಲಿ ಇರುವದಿಲ್ಲ. ನೀರಿನಲ್ಲಿ ನೀರು ಕೂಡಿದ ಹಾಗೆ ಅವನ ಸ್ಥಿತಿಯು ಆಗ ಇರುತ್ತದೆ. ಸ್ವಾನುಭಾವದಲ್ಲಿ ಪೂರ್ಣವಾಗಿ ಲಯವಾಗಿ ಹೋಗಿರುತ್ತಾನೆ. ಈ ವಿಚಾರಗಳನ್ನು ಪ್ರಭುದೇವರು ಸಿದ್ಧರಾಮನಿಗೆ ಪ್ರಶ್ನೋತ್ತರಗಳ ಮೂಲಕ ಇಲ್ಲಿ ಹೇಳುತ್ತ ಹೋಗಿದ್ದಾನೆ. ಮನಷ್ಯನ ಪ್ರಗತಿಯು ಮತ್ತು ಬೆಳವಣಿಗೆಯ ವಿಚಾರಗಳು ಇದರಲ್ಲಿ ಇವೆ. ಇವುಗಳನ್ನು ತಿಳಿದುಕೊಂಡು ಮನುಷ್ಯನು ಆಚರಿಸಿದಲ್ಲಿ ಅದೇ ನಿಜವಾದ ಭಕ್ತಿಯು, ಎಂದು ಅಲ್ಲಮಪ್ರಭುವು ಇಲ್ಲಿ ಹೇಳಿದ್ದಾನೆ.

ಹೀಗೆ ವಿವಾದಗಳಾದ ಬಳಿಕ ಸಿದ್ಧರಾಮನು ಅಲ್ಲಮಪ್ರಭುವಿಗೆ-ನನ್ನ ಮಠಕ್ಕೆ ನೀವು ಆಗಮಿಸಬೇಕೆಂದು ಕೇಳಿಕೊಂಡನು. ಅದಕ್ಕೆ ಪ್ರಭುದೇವರು ನನಗೆ ಮಠವೆಂಬ ಒಂದು ವಿಶಿಷ್ಟಸ್ಥಾನವಿಲ್ಲ- ನಾನು ಇದ್ದಠಾವಿನಲ್ಲಿ ಭಕ್ತಿಯನ್ನು ಮಾಡಿ ನೀನು ಪರಿಣಾಮಿಸಬೇಕು. ಈ ಪ್ರಕಾರ ಅಲ್ಲಮಪ್ರಭುವು ಸಿದ್ಧರಾಮನ ಮಠಕ್ಕೆ ಬರುವದಿಲ್ಲೆಂದು ತಿಳಿಸಿ ಮುಂದೆ ಸಿದ್ಧರಾಮನಿಗೆ ಹೇಳಿದ್ದೇನಂದರೆ— ನಾನು ಮತಿಗೆಟ್ಟವನು, ನಡಿಯಲಿಕ್ಕೆ ಶಕ್ತಿಯಿಲ್ಲ, ನುಡಿಯಲಿಕ್ಕೆ ನಾಲಿಗೆಯಿಲ್ಲ, ನನಗೆ ಎರಡನೆಯವರಿಂದ ಉಪಚರಿಸಿಕೊಳ್ಳುವದು ಬೇಡ. ಯಾವನಿಗೆ ತೆರಹು ಎಂದರೆ ಕೆಲಪ್ರೊಂದು ವಿಶಿಷ್ಟ ಸ್ಥಾನವಿಲ್ಲವೋ ಅಂಥ ನನಗೆ ಇಂಥವರಲ್ಲಿಗೆ ಹೋಗುವದು ಬರುವದು ಎಂಬುದು ಇರಲಾರದು, ಎಂದು ಹೇಳಿದನು. ||೫೪||

ಅದಕ್ಕೆ ಸಿದ್ಧರಾಮನು — ನೀವು ಇಲ್ಲಿಯ ವರೆಗೆ ನನ್ನನ್ನು ಉದ್ದೇಶಿಸಿಯೇ ಬಂದಿರುವಿರಿ. ಅಂದಬಳಿಕ ಈಗ ನೀವು ನನ್ನಲ್ಲಿಗೆ ಬರದಿರಲಿಕ್ಕೆ ಕಾರಣವೇನು, ಎಂದು ಕೇಳಿದನು. ಅದಕ್ಕೆ ಪ್ರಭುದೇವರು ಹೇಳಿದ್ದು ಏನಂದರೆ—

ಸ್ಥಳವಿಲ್ಲದ ಘನ ಮತ್ತು ಸ್ಥಳವಿಲ್ಲದ ಕುರುಹಿಗೆ ಏಕೆ ಬಂದಿರಿ? ಭಕ್ತಿ ಕಾರಣಕ್ಕೆ ಬಂದಿರುವಿರಿ. ಅಂದಬಳಿಕ ಉಪಚಾರದ ಮಾತುಬೇಡ. ನನ್ನಲ್ಲಿ ಬರಬೇಕು ಎಂದು ಹೇಳಿದನು (೫೫).

ಅದಕ್ಕೆ ಪ್ರಭುದೇವರ ಉತ್ತರವೇನೆಂದರೆ— ಭೃತ್ಯನು ಇದ್ದ ಸ್ಥಳಕ್ಕೆ ಕರ್ತನು ಬಂದರೆ ಅವನನ್ನು ನಂಬಿ ಉಪಚರಿಸಬೇಕು. ನೀನು ಹಾಗೆ ಮಾಡದೆ ನನ್ನಮೇಲೆ ಅಗ್ನಿಯನ್ನು ಎರಚಿದೆ. ನಿನಗೆ ಶರಣರಾರೆಂಬುದು ಗೊತ್ತಿಲ್ಲ. ನಾನು ಹೊರಟುಹೋಗುತ್ತೇನೆ, ಎಂದು ಪ್ರಭುದೇವನು ಅವನಿಗೆ ವಿಡಂಬಿಸಿ ನುಡಿದನು. (೫೬)

ಕಿಂಕುರ್ವಾಣ ಭಾವ.

ಅದಕ್ಕೆ ಸಿದ್ಧರಾಮಯ್ಯದೇವನು ನೊಂದು ನುಡಿದದ್ದು ಏನೆಂದರೆ:— ಅನೇಕ ವೇದಗಳು ನಿಮ್ಮ ಮುಂದೆ ಮಾತನಾಡಲಾರದೆ ಮೌನಗೊಂಡಿವೆ. ನಿಮಗೆ ನಾನು ಇದಿರುತ್ತರ ಕೊಟ್ಟು ಕೆಟ್ಟೆನು. (೫೭) ನಿಮ್ಮನ್ನು ಕಂಡಾ ಕ್ಷಣವೇ ನಿಮಗೆ ನಾನು ಶರಣುಹೋಗಲಿಲ್ಲ. ಅಹಂಕಾರದಿಂದ ವರ್ತಿಸಿದೆನು. ನಾನು ತಿಳಿಯದವನು. ನನ್ನ ಹಾನಿ ವೃದ್ಧಿ ನಿನ್ನದು. (೫೮) ಹೀಗೆ ಸಿದ್ಧ ರಾಮನು ನುಡಿಯುತ್ತ ಪ್ರಭುದೇವರ ಚರಣದ ಮೇಲೆ ಬಿದ್ದು ರೋದಿಸು ತ್ತಿರಲು, ಪ್ರಭುದೇವರು ಕರುಣದಿಂದ ಅವನನ್ನು ಮೇಲೆತ್ತಿ ನುಡಿದುದು ಏನೆಂದರೆ: —

ನಿನಗೆ ನಿಜವಾಗಿ ಪಶ್ಚಾತ್ತಾಪವಾಗಿದೆ. ನಾನು ನಿನ್ನನ್ನು ಪುರಸ್ಕರಿ ಸುವೆನೆಂದು ಸಮಾಧಾನ ಹೇಳಿದನು. ಮತ್ತು ಸಿದ್ಧರಾಮನನ್ನು ಹೊಗಳುತ್ತ ನುಡಿದುದು ಏನೆಂದರೆ:— ನೀನು ಪರಮಯೋಗಿ, ಶುದ್ಧ ಸಾತ್ವಿಕಯೋಗಿ, ಪರಮಾನಂದಯೋಗಿ, ಇಹಲೋಕ ಪರಲೋಕಗತಿ ರಹಿತಯೋಗಿ, ಎಂದು ಕೊಂಡಾಡಿ ಸಿದ್ಧರಾಮನನ್ನು ಬಿಗಿದಪ್ಪಿ, ಅಂದುದೇನೆಂದರೆ:—

ನಿಜವನರಿತ ಶಿವಯೋಗಿಯ ಕಂಡರೆ ನನ್ನ ಮನಸ್ಸು ಅಗಲಲಾರದು.(೬೨) ನಿನ್ನ ಭಾವದಲ್ಲಿ ಭ್ರಮೆ ಇಲ್ಲ, ನಪನಾಳದಲ್ಲಿ ಸುಳುಹು ಇಲ್ಲ. ನಿನ್ನನ್ನು ಕಂಡು ನನ್ನ ಭವವು ನಾಸ್ತಿಯಾಯಿತು. (೬೩) ಯೋಗದ ಹೊಲಬನ್ನು ಬಲ್ಲವರು ಬಹಳ ಸ್ವಲ್ಪ ಜನರು. ಹೃದಯಕಮಲ ಪತ್ರದಲ್ಲಿ ಭ್ರಮಿಸುವ ಸ್ಥಿತಿಯನ್ನು ದೂರಮಾಡಬೇಕು. ಐವತ್ತೆರಡು ಅಕ್ಷರದ ಲಿಪಿಯನ್ನು ನೋಡಿ

ಷಟ್‌ಚಕ್ರಗಳ ಮೇಲೆ ಇರುವ ಅಂತಸ್ತಿನಲ್ಲಿ ಇರಬೇಕು. ಮನ ನಷ್ಟವಾಗಿರಬೇಕು. ಹೀಗೆ ಇದ್ದರೆ ಅನು ಯೋಗ, ಎಂದು ಅಲ್ಲಮಪ್ರಭುವು ನುಡಿದನು. (೬೪)

ಇದಕ್ಕೆ ಸಿದ್ಧರಾಮನು ಅಂದದ್ದು– ನಾನು ಯೋಗದ ಹೊಲಬನ್ನು ಅರಿಯೆನು. ನೀನೇ ನಿಜವಾದ ಯೋಗಿಯು. ನನಗೆ ಸ್ವತಂತ್ರತೆಯು ಇಲ್ಲ. ನಿನ್ನ ಇಚ್ಛಾ ಮಾತ್ರದಿಂದ ನಾನು ಇದ್ದೇನೆ. ನೀನೇ ನನಗೆ ಹಿರಿಯನು, ಎಂದು ಸಿದ್ಧರಾಮನು ಬಿನ್ನೈಸಿದನು. (೬೬)

ಆಗ ಪ್ರಭುದೇವರು ಸಂತೋಷಪಟ್ಟವನಾಗಿ, ಸ್ವತಂತ್ರ ಪರತಂತ್ರಕ್ಕೆ ಆವುದು ಚಿನ್ಹವೋ ಅದನ್ನು ನೀನು ನಷ್ಟಗೊಳಿಸಿ ನೀನು ಭಾವದಗ್ಧನಾದರೆ, ಅದು ಸ್ವತಂತ್ರತೆಯು. ನೀನು ಪರತಂತ್ರ ಸ್ವತಂತ್ರ ಎಂಬೆರಡರ ರೀತಿಯನ್ನು ತಿಳಿದುಕೊಂಡು ನಿನ್ನನ್ನು ನೀನು ಮರೆತುಬಿಡಬೇಕು. ಶರಣರು ಈ ಪ್ರಕಾರ ನಿರ್ದೇಹಿಗಳಾಗಿರಬೇಕು, ಎಂದು ಪ್ರಭುದೇವನು ನುಡಿದನು. (೬೯)

## ಕಾಯ ಜೀವ.

ಅದಕ್ಕೆ ಸಿದ್ಧರಾಮನು ನನಗೆ ಮಾತುಗಳು ಮಾತ್ರ ಇದ್ದು ಕಾಯದ ಜೀವದ ಹೊಲಿಗೆಯನ್ನು ಬಿಚ್ಚಲಾರದವನಾಗಿದ್ದೇನೆ. ನನ್ನ ಅಂತರಂಗದಲ್ಲಿ ಅವಗುಣಗಳು ತುಂಬಿಕೋಗಿವೆ. ಅವುಗಳನ್ನು ನಾನು ದೂರಮಾಡಿದರೆ ಮಾತ್ರ ನಾನು ಉಳಿಯುವೆನು. (೭೦)

ಹೀಗೆ ಸಿದ್ಧರಾಮನು ಬಿನ್ನಹ ಮಾಡಿಕೊಳ್ಳಲು ಪ್ರಭುದೇವರು ಸಿದ್ಧರಾಮನು ಈಗ ಪಕ್ವ ಸ್ಥಿತಿಗೆ ಬಂದಿದ್ದಾನೆ. ಅವನಿಗೆ ಉಪದೇಶ ಮಾಡಲು ಸಮಯವು ಬಂದಿದೆ, ಎಂದು ಭಾವಿಸಿ– ಅರುಹಿಗೆ ಆಚಾರವೇ ಕಾಯವಾಗಿದೆ. ಆಚಾರವಿಲ್ಲದಿದ್ದರೆ ಅರುಹಿಗೆ ಆಶ್ರಯವಿಲ್ಲ. ಈವೆರಡು ಸಮವೇಧಿಸಲು ಜ್ಞಾನಿಯು ಕ್ರಿಯಾಬದ್ಧನೆಂದು ತಿಳಿಯಕೂಡದು. ಮನುಷ್ಯನು ಜ್ಞಾನಕ್ಕೆ ಅಚ್ಚಾಗಿ ಆಚಾರಕ್ಕೆ ಆಳಾಗಿ ವರ್ತಿಸಬೇಕು. ಆಗ ಪರಮಾತ್ಮನು ಅವನಿಗೆ ಕೈವಶನಾಗುತ್ತಾನೆ. (೭೧)

ಈ ಪ್ರಕಾರ ಪ್ರಭುದೇವರು ನುಡಿದು ಸಿದ್ಧರಾಮನ ಮಠಕ್ಕೆ ಬಿಜಯ ಮಾಡಿದನು. ಆಗ ಸಿದ್ಧರಾಮನು— ಪ್ರಭುದೇವನು ನನ್ನ ಮಠಕ್ಕೆ ಬಂದನು.

ಈಗ ಒಂದು ಅಘಟಿತ ಕಾರ್ಯವಾಯಿತು. ಹೀಗೆ ಅವನು ನುಡಿದು ಅಲ್ಲಮಪ್ರಭುವಿಗೆ ಪಾದಾರ್ಚನೆಯನ್ನು ಮಾಡಿ ಪಾದೋದಕವನ್ನು ಅವನಿಂದ ಸ್ವೀಕರಿಸಲು ಸಿದ್ಧನಾದನು.

## ಪಾದೋದಕ ಪ್ರಸಾದ

ಮುಂದೆ ಪಾದೋದಕ ಪ್ರಸಾದಗಳ ನಿರೂಪಣೆಯು ಬಂದಿದೆ. ವೀರ ಶೈವರು ಇವುಗಳನ್ನು ಈಗ ಕೇವಲ ಯಾಂತ್ರಿಕ ರೀತಿಯಿಂದ ಆಚರಿಸು ತ್ತಾರೆ. ಆದರೆ ಈ ವಿಧಾನಗಳ ತಿರುಳನ್ನು ತಿಳಿಯಬೇಕು. ಸಿದ್ಧರಾಮನು ೭೪. ೭೫. ನೇ ವಚನಗಳಲ್ಲಿ ಇವುಗಳ ಸ್ವರೂಪನ್ನು ವರ್ಣಿಸಿದ್ದಾನೆ. ಅದು ಹೇಗೆಂದರೆಃ —

ಪ್ರಭುವೇ, ನೀನು ನನ್ನ ಹಂಬಲವನ್ನು ತಿಳಿದು ನನ್ನೆಡೆಗೆ ಬಂದಿರುವಿ. ನಾನು ನನ್ನ ಶರೀರದ ಅವಗುಣಗಳನ್ನು ಮೊದಲು ಕಳೆಯಬೇಕು. ಇದು ನನ್ನ ಪ್ರಥಮ ಕರ್ತವ್ಯವು. ಗುರುವು ಗೃಹದಲ್ಲಿ ಬಂದೊಡನೆ ಮನೆಯನ್ನು ಸ್ವಚ್ಛ ಉಡುಗಿ ಸಾರಿಸತಕ್ಕದ್ದು. ಅವಗುಣಗಳನ್ನು ಕಳೆಯುವದೇ ಹೀಗೆ ಮಾಡುವದರ ಉದ್ದೇಶವಿರುತ್ತದೆ. ಆ ಮೇಲೆ ಭಕ್ತನು ಜಂಗಮಕ್ಕೋಸ್ಕರ ಆಸನವನ್ನು ಸಿದ್ಧಪಡಿಸುವದುಂಟು. ಆದರೆ ಸಿದ್ಧರಾಮನು ಅನ್ನುವದೇನಂದರೆಃ- ನಾನು ನಿನ್ನನ್ನು ನನ್ನ ಹೃದಯವೆಂಬ ಪೀಠದಲ್ಲಿ ಸ್ಥಾಪಿಸುವೆನು. ಹೀಗೆ ನಿನ್ನನ್ನು ನನ್ನಲ್ಲಿ ಸ್ಥಾಪಿಸಿ ಮಜ್ಜನಕ್ಕೆ ಬೇಕಾಗುವ ನೀರು ಅಥವಾ ಅಗ್ಗ ವಣಿಯು ನನ್ನ ಬ್ರಹ್ಮರಂಧ್ರದಲ್ಲಿದ್ದು ಅಲ್ಲಿಂದ ಅದು ಒಸರಿ ಬರುವಂತೆ ಮಾಡುತ್ತೇನೆ. ಈ ನೀರನ್ನು ನಾನು ನಿನ್ನ ಪಾದಾರ್ಚನೆಗೆ ಉಪಯೋಗಿ ಸುತ್ತೇನೆ. ಹೀಗೆ ಪಾದಾರ್ಚನೆಯನ್ನು ಮಾಡಿ ನನ್ನಲ್ಲಿರುವ ಎರಡೆಸಳಿನ ಕಮಲವನ್ನು ನಿನ್ನ ಎರಡು ಪಾದಕ್ಕೆ ಅರ್ಪಿಸುತ್ತೇನೆ. ಆ ಮೇಲೆ ಈ ಪರಿಮಳದ ಧೂಪವನ್ನು ನಿನಗೆ ಬೀಸುತ್ತೇನೆ. ನನ್ನ ಆರೋಗಣೆಯ ಜೀನಸುಗಳು ಸಹ ನನ್ನ ಬ್ರಹ್ಮರಂಧ್ರದಲ್ಲಿರುತ್ತವೆ. ಅವುಗಳಿಂದ ನಾನು ತೃಪ್ತಿಯನ್ನು ಹೊಂದಿ ಬಾಯ್ದೊ ಳೆದುಕೊಳ್ಳುವೆನು. ಹೀಗೆ ನಾನು ನಿನಗೆ ಶರಣುವೊಕ್ಕು ನಿನ್ನ ಪಾದೋ ದಕವನ್ನು ಅಣಿಮಾಡಿ ಅದನ್ನು ಸ್ವೀಕರಿಸುತ್ತೇನೆ. ಇದಕ್ಕೆಯೇ ನಾನು ಹಾರೈ ಸುತ್ತೇನೆ. ಮೊದಲು ನನ್ನ ಅಂತರಂಗವನ್ನು ಶುದ್ಧಮಾಡಿ ನಿನ್ನ ಪಾದೋದಕ ವನ್ನು ಮೇಲೆ ಹೇಳಿದಂತೆ ಸ್ವೀಕರಿಸುತ್ತೇನೆ. ಈ ಪ್ರಕಾರ ಸಿದ್ಧರಾಮನು ತನ್ನ ತಾತ್ವಿಕ ಮತ್ತು ಯೌಗಿಕ ರೀತಿಯಿಂದ ಪಾದೋದಕ ಪ್ರಸಾದಗಳನ್ನು ಸಿದ್ಧ

ಪಡಿಸಿ ಅವುಗಳನ್ನು ತಾನು ಹೇಗೆ ಸ್ವೀಕರಿಸುತ್ತೇನೆಂಬುದನ್ನು ಹೇಳಿದ್ದಾನೆ. ಆದರೆ ಈ ಯಾವತ್ತು ವಿಷಯಗಳನ್ನು ಆತ್ಮಾನುಭವದಿಂದಲೇ ಶಿವಾನುಭವಿಯು ಅರಿಯಬೇಕು. (೭೪. ೭೫)

## ನಿನ್ನನ್ನು ನೀನೇ ಅರಿಯಬೇಕು.

ಮುಂದೆ ಅಲ್ಲಮನು ಹೇಳುವದೇನಂದರೆ: — ವೀರಶೈವನಾದವನು ಅನಾದಿ ಎಂಬುದನ್ನು ತಾನೇ ಅರಿಯಬೇಕು. ಕಾಯವು ಆದಿ, ಪ್ರಾಣವು ಅನಾದಿ ಎಂದಿದ್ದು ಇದರ ಯೋಗವನ್ನು ತಾನೇ ತಿಳಿದುಕೊಳ್ಳಬೇಕು. ತಾನಾರೆಂಬುದನ್ನು ತಿಳಿದಾಗಲೇ ಅದೇ ಸತ್ಯವು. ಪರಮಾತ್ಮನ ನಿಲವನ್ನು ಬೇರೆಯವರಿಂದ ಕೇಳಿಕೊಂಡು, ಕಂಡಿಹೆವೆಂಬುದು, ಅದು ಸಾಧ್ಯವಲ್ಲ, ಎಂದು ಹೇಳುತ್ತಾನೆ. (೭೬)

ಈ ವಿಚಾರಕ್ಕೆ ಸಿದ್ಧರಾಮನು- ಹೀಗೆ ನನ್ನನ್ನು ನಾನು ಅರಿಯುವದು ಕಠಿಣವೇ ಸರಿ. ಆದ್ದರಿಂದ ನೀನೇ ನನ್ನ ಮನಸ್ಸನ್ನು ತಿಳಿದು ನನಗೆ ತಿಳಿಸಿ ಹೇಳಿದಳು. ಇದು ನಿನಗೆ ಕಠಿಣವಲ್ಲ. (೭೭)

ಅದಕ್ಕೆ ಅಲ್ಲಮಪ್ರಭುವು— ನಿನ್ನನ್ನು ನೀನು ಅರಿಯಲಾರೆನೆಂಬುದು ಅಜ್ಞಾನವು. ಜ್ಞಾನವನ್ನು ಕಾಣೆನೆಂಬುದು ಒಂದು ವಿಪರೀತ ಭಾವವು. ಘನವೆಂಬುದು ಕಾಣುವದಿಲ್ಲ. ಕಾಣದಿದ್ದನ್ನು ಹೇಗೆ ತಿಳಿಯಬೇಕು? ಆದರೆ ನಿನ್ನಲ್ಲಿ ತಿಳಿಯಬೇಕೆಂಬ ತವಕವಿದೆ. ಈ ತವಕದ ಮೂಲಕ ನಿನ್ನನ್ನು ನೀನೇ ತಿಳಿದುಕೊಳ್ಳಬೇಕು. (೭೮)

ಇದಕ್ಕೆ ಸಿದ್ಧರಾಮನು ಅಂದದ್ದು:— ನಾನು ಕಾಣುವದೆಲ್ಲ ಕನಸು. ಅದು ನಿಜವೆಂದು ನನಗೆ ತೋರುತ್ತದೆ! ಇದರಿಂದ ನನ್ನಲ್ಲಿ ತವಕಮಾತ್ರ ಉಂಟಾಗುತ್ತದೆ. ಇದರಿಂದ ನಿನ್ನ ಕರುಣೆಯು ಎಂಬುದು ಮಾತ್ರ ಸಾಧ್ಯವಾಗಬಹುದು. (೭೯)

ಇದಕ್ಕೆ ಪ್ರಭುದೇವರು:— ತವಕ ಅಥವಾ ಬಯಕೆಯು ದೂರದ ಕೂಟದಂತೆ ಇದೆ. ಬಯಸೆನೆಂಬುದು ಕೂಟದಿಂದ ದೂರಾಗುವದು. ಇವೆರಡೂ ಸಹಜವಲ್ಲ. ಕೂಡಿ ಕಾಣುವ ರೀತಿ ಹೇಗೆ ಎಂಬುದನ್ನು ತಿಳಿಸಬೇಕು. ಕೇವಲ ಮಾತಿನಲ್ಲಿ ಲಿಂಗೈಕ್ಯವೆಂದೆನ್ನುವದನ್ನು ಮತ್ತು ಪ್ರೀತಿಯ ಠಾವಿನಲ್ಲಿ ತದ್ಗತನಾದೆನೆಂಬುವದನ್ನು ಪರಮಾತ್ಮನು ಮೆಚ್ಚಲಾರನು. (೮೦)

## ಕ್ರಿಸ್ತ, [illegible] ದೃಷ್ಟಿ

ಆಗ ಪ್ರಭುವು ಅಂದದ್ದು :— ಹೀಗೆ ತಿಳಿಯುವದು ಭೇದ ಬುದ್ಧಿಯು. ಸಾಮರಸ್ಯವಲ್ಲ. ಅದಕ್ಕೆ ಸಿದ್ಧರಾಮನು— ನಮ್ಮಿಬ್ಬರಲ್ಲಿ ಭೇದಭಾವವಿಲ್ಲ. ನಮ್ಮಿಬ್ಬರ ಅರಿವು ಮರವುಗಳು ಒಂದೇ ಆಗಿವೆ. ನನ್ನಲ್ಲಿ ಬಯಕೆ ಅತ್ಯುತ್ಕಟವಾಗಿದೆ. ಅದೇ ನೀನು ಎಂದು ತಿಳಿದ ಬಳಿಕ ಬಯಸುವಾತನು ನೀನೇ ಇರುತ್ತೀ, ಎಂದು ನುಡಿದನು. (೮೧)

ಅದಕ್ಕೆ ಪ್ರಭುವು— ಬಯಸುವ ಬಯಕೆಯಿಂದ ಅರಸುವ ಅರಿಕೆಯಿಂದ ನೀನಾದ ಪರಿ ಹೇಗೆ ? ಕಾಯವೇ ಲಿಂಗ, ಪ್ರಾಣವೇ ಶರಣನಾದ ಶರಣನು ಬೇರೆ ದೇಗುಲವನ್ನು ಮಾಡಿಸಲೇಕೆ ? ಪರಮಾತ್ಮನು ಸಾಧ್ಯವಾದನೆಂಬುದು ನಿನ್ನ ಮಾತಿನಲ್ಲಿ ಇದೆಯೋ ಹೊರ್ತು ಕೃತಿಯಲ್ಲಿ ಕಾಣೆನು. (೮೨)

ಅದಕ್ಕೆ ಸಿದ್ಧರಾಮನು ಅಂದದ್ದು — ಪರಮಾತ್ಮನು ಅಣುವಿಗೆ ಅಣುವು ಆಗಿದ್ದಾನೆ. ಅವನು ಜಗತ್ತಿನಲ್ಲೆಲ್ಲ ತುಂಬಿಕೊಂಡಿದ್ದಾನೆ. ನಾನು ೮೪ ಲಕ್ಷ ಶಿವಾಲಯಗಳನ್ನು ಮಾಡಿಸಿದರೂ ಅವುಗಳಲ್ಲೆಲ್ಲ ಪರಮಾತ್ಮನೇ ಇರುತ್ತಾನೆ, ಎಂದು ತಿಳಿದು ಅವುಗಳನ್ನು ನಾನು ನಿರ್ಮಿಸಿದೆನು. (೮೩)

ಇದಕ್ಕೆ ಪ್ರಭುವಿನ ಉತ್ತರ- ಅಂತ್ಯದಲ್ಲಿ ತೋರತಕ್ಕ ಲಿಂಗವನ್ನು ಈಗಳೇ ನಾನು ತೋರುವೆನೆಂಬುದು ನಿನ್ನ ಅಹಂಕಾರವು. ಸ್ಥಾವರ ಲಿಂಗಗಳನ್ನು ನಿನ್ನ ಪ್ರಾಣದಲ್ಲಿ ಇರಿಸಿಕೊಳ್ಳದ್ದರಿಂದ ಅದು ನಿನ್ನನ್ನು ತಪ್ಪಿಸಿ ಹೋಗಿ ಬಿಟ್ಟಿದೆ. (೮೪)

ನಾನು ಮಾಡಿದ್ದು ನೀವು ಕೊಟ್ಟ ನಿರೋಪವು ಎಂದು ನನಗೆ ತೋರಿದ್ದರಿಂದ ನಾನು ಇದನ್ನೆಲ್ಲ ಮಾಡಿದೆನು. ಇದು ಹುಸಿಯಾದರೆ ನಿನಗೆ ತೋರಿದಂತೆ ನನ್ನನ್ನು ನಡಿಸು (೮೫) ಎಂದು ಸಿದ್ಧರಾಮನು ನುಡಿದನು.

ಇದಕ್ಕೆ ಪ್ರಭುವು- ಕೆರೆ ದೇಗುಲಗಳೆಲ್ಲವನ್ನು ನೀನು ಬಿಟ್ಟು ಬಿಡಬೇಕು. ನಿನ್ನ ಯೋಗವು ಕರ್ಮಮಾರ್ಗಕ್ಕೆ ಸಂಬಂಧಿಸಿದೆ. ಇಂಥ ಯೋಗವನ್ನು ನೀನು ದೂರ ಮಾಡು ಎಂದು ನುಡಿದನು. (೮೬)

### ಕರ್ಮ ಮಾರ್ಗ, ಜ್ಞಾನ ಮಾರ್ಗ

ಈ ಪ್ರಕಾರ ಈ ವಿಷಯವು ಚರ್ಚೆಗೆ ಬಂದ ಬಳಿಕ ಸಿದ್ಧರಾಮನು ಮತ್ತು ಪ್ರಭುದೇವರು ಈ ಇಬ್ಬರೂ ಕರ್ಮಮಾರ್ಗ ಮತ್ತು ಜ್ಞಾನಮಾರ್ಗ ಇವುಗಳಲ್ಲಿರುವ ತಾರತಮ್ಯವನ್ನು ಕುರಿತು ಚರ್ಚಿಸ ಹತ್ತಿದರು.

ಆಗ ಸಿದ್ಧರಾಮನು ಕರ್ಮಮಾರ್ಗವನ್ನು ಪುರಸ್ಕರಿಸುತ್ತ ಅಂದುದು ಏನೆಂದರೆ:— ನಮಗೆ ಹಸಿವೆಯಾದರೆ ಊಟ ಮಾಡುತ್ತೇವೆ. ಊಟ ಮಾಡದೆ ಹೋದರೆ ಹಸಿವೆಯು ದೂರಾಗುವದು ಹೇಗೆ? ನಮ್ಮ ಚಿತ್ತವು ಶುದ್ಧವಾಗಲಿಕ್ಕೆ ಕರ್ಮವನ್ನೇ ಆಚರಿಸಬೇಕು. ನಾವು ಅಡಿಗೆಯನ್ನು ಮಾಡದಿದ್ದರೆ ಊಟ ಮಾಡುವದು ಹೇಗಾದೀತು? ಹೀಗೆ ಅವನು ಕರ್ಮಮಾರ್ಗದ ಶ್ರೇಷ್ಠತೆಯನ್ನು ಹೇಳುತ್ತಾನೆ (೮೭)

ಇದಕ್ಕೆ ಪ್ರಭುದೇವರು ಉತ್ತರ ಕೊಟ್ಟಿದ್ದೇನಂದರೆ:– ಹೀಗೆ ಕರ್ಮವೇ ಮುಖ್ಯವೆಂದು ಭಾವಿಸಿದಲ್ಲಿ ಜ್ಞಾನದ ನೆಲೆಯು ಹೇಗೆ ದೊರಕೀತು? ಸಾಯುವ ವರೆಗೆ ಕರ್ಮವನ್ನು ಮಾಡುತ್ತ ನಾವು ತಯಾರಿಕೆಯಲ್ಲಿ ಕಾಲ ಕಳೆದರೆ ಕಾದಾಡುವ ವೇಳೆಯು ಸಮೀಪಿಸಿದಾಗ ನಿಮ್ಮ ಈ ತಯಾರಿಕೆಯ ಪೂರ್ಣತೆಯು ಎಷ್ಟೆಂಬುದನ್ನು ತಿಳಿಯಲಿಕ್ಕೆ ಬರಲಾರದು. ತಯಾರಿಕೆಯು ಕೂಡ ಹೋರಾಟವೂ ಯಾವಾಗಲೂ ನಡೆಯುತ್ತಿರಬೇಕು. ಈ ಉಭಯ ವಿಷಯಗಳು ಪರಸ್ಪರಾವಲಂಬಿಗಳು. ಬತ್ತವನ್ನು ಮೊದಲು ಕುಟ್ಟಿ ಅದರ ಮೇಲಿನ ಗೊಳ್ಳನ್ನು ತೆಗೆದ ಬಳಿಕ ಅದನ್ನು ಕುದಿಸಿದರೆ ಅದು ರುಚಿಯಾಗುವದು. ಇದರಂತೆ ಕ್ರಿಯಾಜ್ಞಾನಗಳು ಇರುತ್ತವೆ. (೮೮)

ಹೀಗೆ ಅಲ್ಲಮಪ್ರಭುವು ಉತ್ತರ ಕೊಡಲು ಅದಕ್ಕೆ ಸಿದ್ಧರಾಮನು ಅಂದುದು ಏನಂದರೆ– ಕೈಯ್ಯಲ್ಲಿ ಲಿಂಗವನ್ನು ಹಿಡಿದು ಪೂಜಿಸುವದೇ ಕರ್ಮವೆನಿಸುತ್ತದೆ. ಹಾಗೆಯೇ ಮನಸ್ಸಿನಲ್ಲಿ ನೆನೆಹುದೆಲ್ಲವೂ ಕಾಯದ ಕರ್ಮವೆನಿಸಿಕೊಳ್ಳುತ್ತವೆ. ಕರ್ಮದ ಸಹಾಯವಿಲ್ಲದೆ ಭಾವವು ಶುದ್ಧವಾಯಿತೋ ಹೇಗೆಂಬುದನ್ನು ತಿಳಿಯಲು ಶಕ್ಯವಿಲ್ಲ. (೮೯)

ಇದಕ್ಕೆ ಪ್ರಭುದೇವರು ಹೇಳಿದ್ದೇನಂದರೆ:— ಬಂಗಾರವು ಚೊಕ್ಕಟವಾಗಿರುವದನ್ನು ಅದರ ಬಣ್ಣದಿಂದ ತಿಳಿಯಬೇಕು. ಆದರೆ ಬಂಗಾರವನ್ನು ಹಿಡಿಯದೆ ಅದರ ಬಣ್ಣವನ್ನಷ್ಟೇ ಬೇರೆ ಹಿಡಿದು ಅದನ್ನು ತಿಕ್ಕೆಂದರೆ ಇದು ಸಾಧ್ಯವಿಲ್ಲ. ಹೂವನ್ನು ಬಿಟ್ಟು ಅದರ ಗಂಧವನ್ನು ಮಾತ್ರ ಮುಡಿ ಎಂದರೆ ಶಕ್ಯವೇ? ಪರಮಾತ್ಮನನ್ನು ಮೊದಲು ನೆನೆದು ಆಮೇಲೆ ಲಿಂಗವಾಗಬೇಕು. ರೀತಿಯು ಹೀಗಿದೆ, ಎಂದು ಅಲ್ಲಮಪ್ರಭುವು ನುಡಿದನು. (೯೦)

ಇದಕ್ಕೆ ಸಿದ್ಧರಾಮನ ಪ್ರತ್ಯುತ್ತರವೇನೆಂದರೆ:— ಕ್ರಿಯೆಯು ಮೊದಲು ಶುದ್ಧವಾಗಬೇಕು. ಆಗ ಭಾವದ ಶುದ್ಧತೆಯು ಹೊರಬೀಳುತ್ತದೆ. ಬಣ್ಣ

ವಿಲ್ಲದೆ ಚಿನ್ನವೆನಿಸಿಕೊಳ್ಳಲಾರದು. ಹೂವು ಒಡೆದು ವಾಸನೆ ಮೂಡಬೇಕು, ಆಗ ವಾಸನೆಯು ನಿಲ್ಲುತ್ತದೆ. ಆದ್ದರಿಂದ ಕ್ರಿಯೆಗೆ ಉಚ್ಚ ಸ್ಥಾನವಿದೆ. (೯೧)

ಅದಕ್ಕೆ ಅಲ್ಲಮಪ್ರಭುವು ಕೊಟ್ಟ ಪ್ರತ್ಯುತ್ತರವೇನೆಂದರೆ:— ಲಂಪಟ ತನವು ಹೋಗಿ ಬಿಟ್ಟಿದೆ. ತಾಮಸ ಸ್ವಭಾವವು ಇರುವದಿಲ್ಲ. ಅಹಂಕಾರವೂ ಇಲ್ಲ. ಹೀಗೆ ಶರೀರವು ಆಚರಿಸುತ್ತಲಿದ್ದ ಬಳಿಕ ಭಾವಕ್ಕೆ ಬೇರೆ ಶುದ್ಧತೆಯುಂಟೇ? ಅಂದರೆ ಕ್ರಿಯೆಗಳು ಹೀಗಿದ್ದ ಬಳಿಕ ಭಾವ ಶುದ್ಧತೆ ಎಂಬುದು ಅವುಗಳನ್ನು ಬಿಟ್ಟು ಬೇರೆ ಇಲ್ಲ. ಇವೆರಡರಲ್ಲಿ ಸಮನ್ವಯವಿರುತ್ತದೆಂಬ ಭಾವವು ಇದರಲ್ಲಿದೆ. (೯೨)

ಸಿದ್ಧರಾಮನು ಮುಂದೆ ನುಡಿದದ್ದು ಏನೆಂದರೆ:— ಭೂಮಿ ಒಂದೇಯಾಗಿರುತ್ತದೆ. ಆದರೆ ಅದರಲ್ಲಿ ಹಲವಾರು ಜಾತಿಯ ವೃಕ್ಷಗಳು ಬೆಳೆಯುತ್ತವೆ. ನೀರೂ ಒಂದೇ ಒಂದು ಪದಾರ್ಥವು. ಆದರೆ ಅದರ ರುಚಿಗಳು ನಾನಾ ವಿಧವಾಗಿವೆ. ನಿನ್ನೊಳಗೆ ನಾನಾದರೆ ತಾಮಸದ ರೀತಿಯು ಬಿಟ್ಟು ಹೋಗದು. ಪರಮಾತ್ಮನಲ್ಲಿ ನಾನಾದರೆ ಲಿಂಗದಲ್ಲಿ ಏಕತ್ವವು ಘಟಿಸಲಾರದು. (೯೬)

## ಇಷ್ಟ, ಪ್ರಾಣ, ಭಾವಲಿಂಗಗಳು.

ಇದಕ್ಕೆ ಪ್ರಭುದೇವರು ಹೇಳಿದ್ದು:— ಅಂಗವು ಸ್ಥೂಲ, ಸೂಕ್ಷ್ಮ, ಕಾರಣಗಳೆಂದು ಮೂರು ವಿಧವಾಗಿದೆ. ಅದಕ್ಕನುಸರಿಸಿ ಲಿಂಗವು ಮೂರು ವಿಧವಾಗಿದೆ. ಅವು ಇಷ್ಟ, ಪ್ರಾಣ, ಭಾವಲಿಂಗಗಳಿಷ್ಟು, ಅವುಗಳಲ್ಲಿ ಏಕತ್ವವು ಘಟಿಸಬೇಕು. ಬ್ರಹ್ಮರಂಧ್ರದಲ್ಲಿ ಅಮೃತಲಿಂಗವೆಂಬಿದ್ದು ಅದೂ ಕೂಡ ಈ ಮೂರು ವಿಧಗಳಲ್ಲಿ ಬೆರೆಯಬೇಕು. (೯೭)

ಅದಕ್ಕೆ ಸಿದ್ಧರಾಮನು:— ಕಾಯದಲ್ಲಿ ಕರ್ಮವನ್ನು ಮಾಡುತ್ತ ಜೀವವು ಜ್ಞಾನವನ್ನು ಅರಿದು ತ್ರಿವಿಧವಾದ ಭಾವಶುದ್ಧಿಯಾದಲ್ಲದೆ ಪರಮಾತ್ಮನು ಕಾಣಲಾರನು. (೯೮)

ಇದಕ್ಕೆ ಪ್ರಭುದೇವರು:— ಕೀಳು, ಮೇಲು ಎಂಬುದು ಕಬ್ಬಿನ ಗಣಿಕೆಯಲ್ಲಿ ಇದೆ. ಆದರೆ ಸಕ್ಕರೆಗೆ ಇಂಥ ಭಿನ್ನತೆಯು ಇಲ್ಲ. ಪರುಷ ಮತ್ತು ಪಾಷಾಣ ಇವುಗಳಲ್ಲಿ ಭಿನ್ನತೆಯು ಇದೆ. ಆದರೆ ಕಡೆಯಾಣಿಗೆ ಇಲ್ಲ. ಉಂಟು ಇಲ್ಲವೆಂಬ ಸಂದೇಹ ನಿಂದಲ್ಲಿ ಅದೇ ಪರಮಾತ್ಮ ಲಿಂಗವು. (೯೯)

ಆಗ ಸಿದ್ಧರಾಮನು ಪ್ರಭುದೇವರಿಗೆ— ಪ್ರಭುವೇ ನೀನು ಹೇಳಿದಂತೆ ನಾನು ನಡೆಯುವೆನು. ನಾನು ಮಾಡುವದು ನೀನು ಅಲ್ಲವೆಂದರೆ ಅದು ಇರಲಿ. ಆದರೆ ಕಾಣಬಾರದ ಘನವನ್ನು ಕಾಯದಲ್ಲಿ ಧಂಸಿ, ಹೇಳಬಾರದ ನಿಜವನ್ನು ಮನದಲ್ಲಿಟ್ಟುಕೊಂಡು ತೋರಬಾರದ ಕುರುಹನ್ನು ನನ್ನ ಜ್ಞಾನ ದಲ್ಲಿರಿಸಿ ನಿನ್ನನ್ನು ಕಾಣುವಂತೆ ಮಾಡು, ಎಂದು ಸಿದ್ಧರಾಮನು ಬೇಡಿಕೊ ಳ್ಳುತ್ತಾನೆ. (೧೦೦)

## ಪರಮಾತ್ಮನ ಸ್ವರೂಪ

ಅದಕ್ಕೆ ಪ್ರಭುದೇವರು— ಪರಮಾತ್ಮನ ಸ್ವರೂಪನ್ನು ಹೇಳಲಿಕ್ಕೂ ಬಾರದು, ಅವನನ್ನು ತೋರಿಸಲಿಕ್ಕೂ ಬಾರದು. ಗುರಿ ಹೊಡೆಯುವಾಗ, ತಾನು, ಬಾಣ ಮತ್ತು ಗುರಿ ಈ ಎಲ್ಲವೂ ಸಮರಸವಾಗುತ್ತವೆ. ಪರ ಮಾತ್ಮಲಿಂಗವು ಕಲ್ಪಿತವಲ್ಲ. (೧೦೧) ಪ್ರತ್ಯಕ್ಷ ಕ್ರಿಯೆಯ ಪರಿಣಾಮವು.

ಇದಕ್ಕೆ ಸಿದ್ಧರಾಮನು: ಪರಮಾತ್ಮನ ಬಟ್ಟೆಯನ್ನು ನಾನು ಕಾಣೆನು. ಶತಕೋಟಿ ಜೀವರಾಶಿಗಳಿವೆ. ಅವುಗಳ ಭೇದವನ್ನರಿಯೆನು. ಹೀಗಿರುವಾಗ ನಾನು ಪರಮಾತ್ಮನನ್ನು ಕಾಣುವೆನೆಂಬುದು ಹುಸಿ. ನೀನೇ ಅವನನ್ನು ತೋರಿಸಬೇಕು. (೧೦೨)

ಇದಕ್ಕೆ ಪ್ರಭುವು:—ಪರಮಾತ್ಮನನ್ನು ಕಾಣುವದು ಅಭ್ಯಾಸದ ಮಾತಲ್ಲ. ಶ್ರೋತ್ರದ ಸುಖವಲ್ಲ. ಒಳಗಿನ ಮಾತು ಅಲ್ಲ. ಹೊರಗಿನ ಮಾತೂ ಅಲ್ಲ. ಇದರ ಇಂಗಿತವನ್ನರಿಯದೆ ಬರೀ ಅನುಭಾವವನ್ನು ಮಾಡಿದರೆ ಏನು ಉಪ ಯೋಗ? ಪರಮಾತ್ಮನು ಉಪಮಾತೀತನಾಗಿದ್ದಾನೆ. (೧೦೩)

ಆದರೆ ಇದರಿಂದ ಸಿದ್ಧರಾಮನಿಗೆ ಏನೂ ತೋಚದಾಗಿ— ಗುರುವೇ, ಲಿಂಗದ ನಿಜವನ್ನು ನಾನು ಅರಿಯೆನು. ಅದನ್ನು ನೀವು ತಿಳಿಸಬೇಕು. ಇಲ್ಲದಿದ್ದರೆ ನಾನು ಉಳಿಯಲಾರೆನು. (೧೦೪)

ಕಾಮಕ್ರೋಧಗಳೂ ವಿಷಯಗಳೂ ಆಸೆಯೂ ನನ್ನನ್ನು ಗಾಸಿಮಾಡುತ್ತ ಲಿವೆ. ಶಿವಯೋಗದ ಲೇಸನ್ನು ನೀನಾಗಿಯೇ ನನಗೆ ತಿಳಿಸು, ಎಂದು ಅವ ನಿಗೆ ಬೇಡಿಕೊಳ್ಳುತ್ತಾನೆ. (೧೦೫)

ಆಗ ಪ್ರಭುದೇವನು ಕಾಯ ಜೀವ ಇವುಗಳ ಪರಸ್ಪರ ಸಂಬಂಧವನ್ನು ಮೊದಲು ನೀನು ಅರಿಯುವದು ಅವಶ್ಯವು. ಹೀಗೆ ಹೇಳಿ ಈ ವಿಷಯವನ್ನು ಕುರಿತು ಅವನು ಪುನಃ ಪ್ರಸ್ತಾಪಿಸಹತ್ತುತ್ತಾನೆ.

## ಕಾಯ ಜೀವ.

ಜೀವ ಮತ್ತು ದೇಹ ಇವುಗಳಲ್ಲಿ ಪರಸ್ಪರ ನಿಕಟ ಸಂಬಂಧವಿದೆ. ಜೀವದ ಮೇಲೆ ದೇಹವು ಅವಲಂಬಿಸಿದೆ. ದೇಹವು ಜೀವದ ಮೇಲೆ ಅ ಲಂಬಿಸಿದೆ. ಈಪ್ರಕಾರ ಮೊದಲು ವಿವರಿಸಿ ಮುಂದೆ ಅಲ್ಲಮಪ್ರಭುವು ಹೇಳುವ ದೇನೆಂದರೆ—

ಈ ದೇಹ ಭಾವವು ಮೊದಲು ಅಳಿಯಬೇಕು. ಅದು ಅಳಿದಲ್ಲಿ ಜೀವ ಭಾವವೂ ಅಳಿಯುವದು. ದೇಹದಲ್ಲಿ ಅನೇಕ ಒಲವುಗಳಿರುತ್ತವೆ. ಅವು ಗಳನ್ನು ಅಂಕಿತದಲ್ಲಿಟ್ಟುಕೊಂಡರೆ ಜೀವದ ಮೇಲೆ ಅಧಿಕಾರವು ಉಳಿಯು ತ್ತದೆ. ಹೀಗೆ ಜೀವವು ತನ್ನ ಅಂಕಿತದಲ್ಲಿ ಬಂದ ಕೂಡಲೆ ಭಕ್ತಿ ಎಂಬುದು ತಾನೇ ಮೊಳೆದೋರುತ್ತದೆ. ಅಂದರೆ ಅದಕ್ಕೆ ಪರಮಾತ್ಮನ ಕಡೆಗೆ ಒಲವು ಉಂಟಾಗುತ್ತದೆ. ಪರಮಾತ್ಮನತ್ತ ಅದು ಒಲಿದ ಕೂಡಲೆ ಪರಮಾತ್ಮ ಜ್ಞಾನವು ಅದಕ್ಕೆ ಪ್ರಾಪ್ತವಾಗಹತ್ತುತ್ತದೆ. ಇಂಥ ಜ್ಞಾನವು ಪ್ರಾಪ್ತವಾಗ ಹತ್ತಿದ ಕೂಡಲೆ, ಭಿನ್ನತೆ ಎಂಬುದ. ಅಳಿಯುತ್ತ ಹೋಗುತ್ತದೆ ಭಿನ್ನ ತೆಯು ಮಾಯೆಯ ಪರಿಣಾಮವು. ಆದ್ದರಿಂದು ಮಾಯೆಯು ಹಿಂದೆ ಸರಿದ ಹಾಗೆ, ಪರಮಾತ್ಮನ ಅರಿವು ಮನುಷ್ಯನಲ್ಲಿ ಉಂಟಾಗಹತ್ತುತ್ತದೆ. (೧೦೬)

ಈ ಪ್ರಕಾರ ಪ್ರಭುದೇವನು ವಿವರಣೆ ಮಾಡಲು ಸಿದ್ಧರಾಮನು ಅದಕ್ಕೆ ಅಂದದ್ದು ಏನೆಂದರೆ:— ನೀರು ಕ್ಷೀರ ಕೂಡಿದ ಕಾಲಕ್ಕೆ ಹಂಸೆ ಮಾತ್ರ ಅವುಗಳ ಸಂದನ್ನು ಬಿಡಿಸಬಲ್ಲದು. ಹಾಗೆಯೇ ಮಾಯೆ ಮತ್ತು ಪರಮಾತ್ಮ ಇವುಗಳ ಸಂದನ್ನು ಬಿಡಿಸಲು ನೀನೇ ಸಮರ್ಥನಿರುವಿ. ಅದು ನನಗೆ ಹೇಗೆ ಸಾಧ್ಯವಾಬೇಕು? ಎಲೋ ಪ್ರಭುವೇ, ನೀನು ನನಗೆ ಹಾಕಿದ ತೊಡಕನ್ನು ಬಿಡಿಸುವದು ನನ್ನಿಂದ ಆಗದು. ಆದ್ದರಿಂದ ನನ್ನ ಕಾಯದ ಜೀವದ ಹೊಲಿ ಗೆಯನ್ನು ಬಿಡಿಸುವದನ್ನು ನೀನೇ ನನಗೆ ತಿಳಿಸಿಕೊಡು, ಎಂದು ಕೇಳು ತ್ತಾನೆ. (೧೦೭)

ಅದಕ್ಕೆ ಪ್ರಭುದೇವನು ಕೊಟ್ಟ ಉತ್ತರ ಏನಂದರೆ: —

ಕಾಯ, ಜೀವವೆಂಬುದು ಭಿನ್ನಸ್ಥಿತಿಯು. ನಿನ್ನ ಮನಸ್ಸು ನಿರ್ಮಲ ವಾದರೆ ಈ ಭಿನ್ನತೆಯು ಹೋಗಿ ಬಿಡುತ್ತದೆ. ನಿನ್ನ ಮನಸ್ಸು ನಿರ್ಮಲ ವಾದುದು ಅಥವಾ ಇಲ್ಲದ್ದು ನಿನಗೆಯೇ ತಿಳಿಯಬೇಕು. ಅನ್ಯರು ಅದನ್ನು ತಿಳಿಯಲಾರರು. ಮನಸ್ಸು ನಿರ್ಮಲವಾದರೆ ಶಿವತತ್ವವು ನಿನಗೆ ಸಾಧ್ಯವಾಗು ತ್ತದೆ. (೧೦೮)

## ಯೋಗ

ಇದಕ್ಕೆ ಸಿದ್ಧರಾಮನು ಪ್ರತಿಯಾಗಿ ನುಡಿದದ್ದು ಏನೆಂದರೆ:--

ನಾನು ನನ್ನ ಮನಸ್ಸಿನಲ್ಲಿರುವ ಹೊಲಸನ್ನು ದೂರ ಮಾಡಿದ ಕೂಡಲೆ ಮನಸ್ಸಿನಲ್ಲಿ ಶಾಂತಿಯೆಂಬುದು ಉತ್ಪನ್ನವಾಗುತ್ತದೆ. ಈ ಶಾಂತಿ ರಸದಲ್ಲಿ ನಾನು ಸ್ನಾನ ಮಾಡಬೇಕೆಂದಿದ್ದೇನೆ. ನಾನು ಯೋಗವೆಂಬ ಸುವಾಸನೆಯನ್ನು ಈ ನೀರಿನಲ್ಲಿ ಕಲಿಸುತ್ತೇನೆ. ಕಲಿಸಿದ ಇಂಥ ಉದಕವನ್ನು ನಾನು ಗಾಣದಲಿಕ್ಕಿ ಪದಾರ್ಥವನ್ನು ಹಿಂಡುವಂತೆ ಹಿಂಡುವೆನು. ಹಿಂಡಿ ಈ ಶಾಂತಿರಸದ ಕಂಪನ್ನು ಹೊರಗೆ ತೆಗದು ಅದನ್ನು ಅನುಭವಿಸುವೆನು. ಹೀಗೆ ಅನುಭವಿಸುವವನು ಪರಮಾತ್ಮನು ಮಾತ್ರ ಎಂದು ಸಿದ್ಧರಾಮನು ನುಡಿಯುತ್ತಾನೆ. (೧೯)

ಇದಕ್ಕೆ ಪ್ರಭುದೇವರು ಕೊಟ್ಟ ಉತ್ತರವೇನೆಂದರೆ:— ಸಿದ್ಧರಾಮನೇ, ಮನಸ್ಸನ್ನು ತೊಳೆಯುವಂಥ ಯೋಗವು ಅಸ್ತಿತ್ವದಲ್ಲಿ ಇಲ್ಲ. ಈ ಪ್ರಯತ್ನದಲ್ಲಿ ನೀನು ತೊಡಗಿದರೆ ನಿನ್ನನ್ನು ಆ ಮನಸ್ಸು ಕಾಡ ಹತ್ತುವದು. ಆದ್ದರಿಂದ ಮನಸ್ಸನ್ನು ವಿಕಲ್ಪ ಜ್ಞಾನದಿಂದ ಅರಿದು ಶುದ್ಧಮಾಡಲು ಅದು ತಾನೇ ಸಿದ್ಧವಾಗಬೇಕು. ಪರಮಾತ್ಮನ ಅನುವನ್ನು ಅರಿಯುವೆನೆಂದರೆ ಮನವಿಲ್ಲದಿರಬೇಕು (೧೧೦) ಅಂದರೆ ಅದರ ವಾಡಿಕೆಯ ವ್ಯಾಪಾರಗಳು ಇಲ್ಲವಾಗಬೇಕು. ಇದಕ್ಕೆ ಸಿದ್ಧರಾಮನು ಪ್ರತ್ಯುತ್ತರವಾಗಿ ನುಡಿದದ್ದು:— ಮನವೆಂಬ ಸಂಕಲ್ಪವನ್ನು ನಾನು ತಿಳಿಯೆನು. ಏಕೆಂದರೆ ಈ ಸಂಕಲ್ಪದ ಸಿದ್ಧಿಯು ನನಗೆ ಆಗಿದೆ. ನಾನು ಪರಮಾತ್ಮನ ವಿಚಾರದಲ್ಲಿ ಇದ್ದುದರಿಂದ ಈ ವಿಚಾರಗಳು ನನ್ನ ಅಂತರಂಗದಲ್ಲಿ ತುಂಬಿವೆ. ನಾನು ಇಂಥ ವಿಚಾರದಲ್ಲಿ ಮಗ್ನನಾಗಿದ್ದರಿಂದ ನನ್ನ ಮನದ ಮುಂದೆ ನೀನೇ ಆಗಿ ತೋರಹತ್ತಿರುವಿ. (೧೧೧)

ಅದಕ್ಕೆ ಪ್ರಭುವು:— ಈ ಪ್ರಕಾರ ವಿಚಾರದಲ್ಲಿದ್ದರೆ ಅದು ಸಂದೇಹವನ್ನು ಮಾತ್ರ ಹುಟ್ಟಿಸುತ್ತದೆ. ಆಗ ನಾನು ಯಾರು, ನೀನು ಯಾರು ಎಂಬುದು ಹೇಗೆ ಗೊತ್ತಾಗಬೇಕು? ಪರಮಾತ್ಮನು ವಾಙ್ಮನಾತೀತನಾಗಿದ್ದಾನೆ. ಅವನು ವಿಚಾರಕ್ಕೆ ನಿಲುಕನು. ಆದರೆ ತಿಳಿದು ನೋಡುವೆನೆಂಬ ಸಂಕಲ್ಪಕ್ಕೆ ಯಾರಾದರೂ ಒಳಗಾದರೆ ಅವರನ್ನು ಪರಮಾತ್ಮನು ಬಲೆಯಲ್ಲಿ ಸಿಕ್ಕಿಸಿ ಕೆಳಕ್ಕೆ ಬೀಳಿಸುವನು. (೧೧೨)

ಅದಕ್ಕೆ ಸಿದ್ಧರಾಮನು ಹೇಳಿದ್ದು:— ಪರಮಾತ್ಮನು ದೇಹ ಬಿಟ್ಟು ಬೇರಿಲ್ಲ. ಅವನು ನವನಾಳದಲ್ಲಿ ಸುಳಿಯುತ್ತಾನೆ. ಆದ್ದರಿಂದ ನಾನು ಆ

ನಾಳವನ್ನು ಶುದ್ಧಪಡಿಸುವೆನು. ಅಷ್ಟದಳ ಕಮಲವು ನನ್ನ ಹೃದಯದಲ್ಲಿ ಇದೆ. ಅದನ್ನು ಊರ್ಧ್ವಮುಖಮಾಡಿ ನಿಜ ಪದದಲ್ಲಿ ನಿಲ್ಲಿಸುವೆನು. ಐವತ್ತೆರಡು ಅಕ್ಷರಗಳನ್ನೆಲ್ಲ ನನ್ನ ತಿಳಿವಳಿಕೆಯಿಂದ ಒಂದೇ ಅಕ್ಷರದಲ್ಲಿ ನಿಲ್ಲಿಸುವೆನು, ಎಂದು ನುಡಿದನು. (೧೧೩) ಸಿದ್ಧರಾಮನು ಯೋಗದಲ್ಲಿ ನಿಷ್ಣಾತನು. ಅದ್ದರಿಂದ ಅವನು ಇಂಥ ವಿಚಾರಗಳನ್ನು ಇಲ್ಲಿ ನುಡಿದಿರುವನು.

ಇದಕ್ಕೆ ಪ್ರಭುದೇವರ ಉತ್ತರಃ— ನೀನು ಹೇಳುವ ಯೋಗವನ್ನು ಕಂಡವರು ಯಾರೂ ಇಲ್ಲ. ನೀನು ಹೇಳುವದು ಯೋಗವಲ್ಲ ಐವತ್ತೆರಡು ಅಕ್ಷರಗಳನ್ನು ಹೃದಯ ಕಮಲದಲ್ಲಿ ಸಿಕ್ಕಿಸುವೆನೆಂಬುದು ಯೋಗವಲ್ಲ. ಬಹಿರಂಗವು ಕ್ರಿಯಾರಹಿತವಾದದ್ದು. ಅಂತರಂಗವು ವಾಙ್ಮನಾತೀತವಾದದ್ದು. ಪರಮಾತ್ಮನು ಆರು ಚಕ್ರಗಳಲ್ಲಿಲ್ಲ, ಎಂದು ಉತ್ತರ ಕೊಟ್ಟನು. (೧೧೪)

ಹೀಗೆ ಅಲ್ಲಮನು ಹೇಳಲು ಸಿದ್ಧರಾಮನು ಇದನ್ನು ನಿರಾಕರಿಸುತ್ತ ನುಡಿದದ್ದು ಏನೆಂದರೆ:—

ಅಂತರಂಗದಲ್ಲಿ ಪರಮಾತ್ಮನು ಮನುಷ್ಯನಿಗೆ ಕಾಣಲಾರನು. ಬಹಿರಂಗದ ಕ್ರಿಯೆಗಳನ್ನೂ ಅವನು ಬಳಿಸುವದಿಲ್ಲ. ಆದರೆ ನಾನು ಸುಷುಮ್ನ ನಾಳದ ದ್ವಾರವನ್ನು ಹತ್ತಿ ಅದರ ತುಟ್ಟ ತುದಿಯಲ್ಲಿ ಸಾವಿರ ದಳ ಮಂಟಪವಿದ್ದು ಅಲ್ಲಿ ಪರಮಾತ್ಮನಿದ್ದು, ಅಲ್ಲಿ ನಾನು ಅವನನ್ನು ಕಾಣುವೆನು, ಎಂದು ಸಿದ್ಧರಾಮನು ಹೇಳುತ್ತಾನೆ. (೧೧೫)

ಅದಕ್ಕೆ ಪ್ರಭುವು ಅಂದದ್ದು ಏನೆಂದರೆಃ— ಪದ್ಮಾಸನದಲ್ಲಿ ಕುಳಿತುಕೊಂಡು ಶರೀರದ ಬೆನ್ನೆಲುವನ್ನು ಸರಳವಾಗಿಟ್ಟುಕೊಂಡು ನಿಷ್ಠೆಯುಳ್ಳವನಾಗಿ ಅದರ ಮಧ್ಯದಲ್ಲಿರುವ ದಾರಿಯಿಂದ ಮುಂದೆ ಸಾಗುತ್ತ ಅದರ ಕೊನೆಗೆ ಅಮೃತವಿದೆ, ಎಂದು ತಿಳಿದು ಅದನ್ನು ಆಸ್ವಾದಿಸಲು ಪ್ರಯತ್ನಿಸುವಂಥವರ ಕೇಡಿಗೆ ಕಡೆಯಿಲ್ಲ. ಪರಮಾತ್ಮನು ಶರೀರದ ಹೊರಗೆ ಹತ್ತು ಬೆರಳುಗಳ ಆಚೆಗೆ ಇದ್ದಾನೆ, ಎಂದು ಶ್ರುತಿಗಳು ಸಾರುತ್ತವೆ. ಇದನ್ನು ನೀನು ಅರಿಯೆಯಾ ? ಹೀಗಿರಲು ನೀನು ಹೇಳುವಂತೆ ಅವನನ್ನು ಮುಟ್ಟುವೆನೆಂಬುದು ಅಶಕ್ಯವು. ನಮ್ಮ ಪರಮಾತ್ಮನು ಕಲ್ಪನಾತೀತನಾಗಿರುತ್ತಾನೆ. ಆ ಪರಮಾತ್ಮ ಲಿಂಗವು ಬ್ರಹ್ಮರಂಧ್ರದಲ್ಲಿಲ್ಲ, ಎಂದು ಹೇಳಿದನು. (೧೧೬)

ಅದಕ್ಕೆ ಸಿದ್ಧರಾಮನ ಉತ್ತರ ಏನಂದರೆ: –

ನಾನು ನಿಮ್ಮ ರೂಪ ಹೇಗಿದೆ, ಎಂಬುದನ್ನು ಕೇಳುವದಿಲ್ಲ. ನಿಮ್ಮ ಧ್ಯಾನದಲ್ಲಿಯೂ ನಾನು ಇರುವದಿಲ್ಲ. ಪರಮಾತ್ಮನು ಅತ್ಯತಿಷ್ಠದ್ದಶಾಂಗುಲನೆಂದು ಅಲ್ಲಿ ನಿಂತು ನಾನೊಂದೆಡೆಯಲ್ಲಿ ಇರುವವನಲ್ಲ. ಆದರೆ ಓಂಕಾರವೆಂಬ ಪೀಠವಲ್ಲಿ ನಾನು ನೆಲಿಸಿ ನಿಃಶಬ್ದವೆಂಬ ಲಿಂಗವನ್ನು ಅಲ್ಲಿ ನೆಲೆಗೊಳಿಸಿ ಆ ಲಿಂಗದಲ್ಲಿ ನಾನು ತದ್ಗತನಾಗುವೆನು. ಯಾಕಂದರೆ ಅಲ್ಲಿ ನೀನು ಪ್ರಣಮರೂಪಾಗಿರುವಿ, ಎಂದು ಹೇಳುತ್ತಾನೆ. (೧೧೭)

## ಲಿಂಗದ ಸ್ವರೂಪ.

ಇದಕ್ಕೆ ಪ್ರಭುದೇವನು ಕೊಟ್ಟ ಉತ್ತರವೇನೆಂದರೆ: — ಬಿಂದುವು ಪೀಠವು, ನಾದವು ಲಿಂಗವು, ಎಂದು ಭಾವಿಸುವದು ಭಿನ್ನತ್ವವು. ಲಿಂಗದ ಕಲೆ ಇದು ಪೂಜಾ ಉಪಕರಣಗಳು ಅರ್ಪಿತನಾಗಿ ಹಿಂದುಗಡೆ ಶ್ಲೇಷವಾಗಿ ಉಳಿದಿದ್ದುದು ಎಂದು ಜನರು ತಿಳಿಯುವದುಂಟು. ಆದರೆ ಲಿಂಗವು ನಾದಬಿಂದು ಕಳೆಗಳಿಗೆ ಮೀರಿದ್ದಿರುತ್ತದೆ. ಮಹಾಘನಲಿಂಗೈಕ್ಯವು ಯಾವುದರಿಂದಲೂ ಬಂಧಿಸಲ್ಪಟ್ಟಿರುವದಿಲ್ಲ. ಅದು ಅಚಲವು, ಅದು ನಿರಾಳವು, ಎಂದು ಹೆಸರಿಸಲು ಸಹ ಬರಲಾರದು. ನಮ್ಮ ಪರಮಾತ್ಮಲಿಂಗವು ನಿಃಶಬ್ದವೆಂದು ಶ್ರುತಿಗಳು ಸಾರುತ್ತವೆ. ಇದನ್ನು ನೀನು ಅರಿಯೆಯಾ, ಎಂದು ಅಲ್ಲಮ ಪ್ರಭುವು ಪ್ರಶ್ನೆ ಮಾಡುತ್ತಾನೆ. (೧೧೮)

ಇದಕ್ಕೆ ಸಿದ್ಧರಾಮನು ಉತ್ತರಕೊಟ್ಟದ್ದು ಏನೆಂದರೆ:— ನಾದವೆಂದರೆ ಪ್ರಾಣ, ಬಿಂದುವೆಂದರೆ ಕಾಯ. ಆದರೆ ನಾದವೆಂದರೆ ಕೇವಲ ಸ್ವರವಲ್ಲ. ಬಿಂದುವೆಂದರೆ ಕೇವಲ ಕಾಯವಲ್ಲ. ನಾದ ಬಿಂದುಗಳ ರೀತಿಯನ್ನು ಕಂಡು ಮನ ಮಗ್ನವಾಗಬೇಕು. ಆದರೆ ಇದು ಯಾರಿಗೂ ತಿಳಿಯಲಾರದು. ಅದನ್ನು ಪರಮಾತ್ಮನು ಮಾತ್ರ ಬಲ್ಲನು, ಎಂದು ನುಡಿಯುತ್ತಾನೆ. (೧೧೯)

ಇದಕ್ಕೆ ಪ್ರಭುದೇವನು ಉತ್ತರ ಕೊಟ್ಟುದು ಏನೆಂದರೆ-ಅರಿವನ್ನು ನಾನು ಅರಿಯುತ್ತೇನೆ, ಅಜ್ಞಾನವನ್ನು ನಾನು ದೂರ ಮಾಡುತ್ತೇನೆ, ಸಂಕಲ್ಪ ಸಂಶಯಗಳನ್ನು ನಾನು ತಳ್ಳಿಬಿಡುತ್ತೇನೆ, ಎಂದು ನೀನು ಅನ್ನುವದರ ರೀತಿ ಏನು? ಯಾಕಂದರೆ ನಾನು ಅರಿಯುತ್ತೇನೆ, ಎಂದು ಬಗೆದಾಗಳೇ ನೀನು ಜ್ಞಾನಕ್ಕೆ ದೂರಾಗುವಿ. ಮರೆಯುವೆನೆಂದರೆ, ನೀನು ಮನಕ್ಕೆ ದೂರಾಗುವಿ. ನಾನು

ಮೊದಲು ಅರಿಯುವೆನು. ಆಮೇಲೆ ಅದನ್ನು ಮರೆಯುವೆನೆಂದರೆ, ಮರೆಯುವ ರೀತಿಯನ್ನು ಹೇಳಲಿಕ್ಕೆ ಬರಲಾರದು. ನಿರ್ಭಾವವೆಂಬುದರಲ್ಲಿಯೂ ಭಾವದ ಸಂಕಲ್ಪವಿದೆ. ಪರಮಾತ್ಮ ಲಿಂಗವು ಹೀಗಿದ್ದಬಳಿಕ ನೀನು ಮನಮಗ್ನನಾಗಿ ಪರಮಾತ್ಮನನ್ನು ಕಾಣುವದು ಎಲ್ಲಿಯ ಮಾತು, ಎಂದು ಪ್ರಶ್ನೆಮಾಡುತ್ತಾನೆ. ಇದು ಅಸಾಧ್ಯವೆಂದು ಅವನ ಅಭಿಪ್ರಾಯವು. (೧೨೦)

ಸಿದ್ಧರಾಮನ ಮುಂದಿನ ವಿಚಾರವು ಏನೆಂದರೆ:— ನನ್ನ ಮನಕ್ಕೆ ಮತ್ತೊಂದು ಸ್ಥಾನವಿಲ್ಲ. ನಾನು ನಿನ್ನನ್ನು ನೆನೆಯುತ್ತೇನೆ. ನೀನೂ ನನ್ನನ್ನು ನೆನೆಯುತ್ತೀ. ನನಗೂ ನಿನಗೂ ಒಂದೇ ಮನಸ್ಸು. ನೀನು ಮುಕ್ತನಾಗಿರುವಿ. ಆದ್ದರಿಂದ ನಾನೂ ನಿನ್ನೊಡನೆ ಮನಮುಕ್ತನಾಗಿದ್ದೇನೆ, ಎಂದು ನುಡಿಯುತ್ತಾನೆ. (೧೨೧)

ಇದಕ್ಕೆ ಅಲ್ಲಮಪ್ರಭುವು ಅಂದದ್ದು:—ಶಿವಯೋಗಿಗೆ ಮನವೆಂಬುವಿಲ್ಲ. ಅವನಿಗೆ ಮನಮಗ್ನ ಸ್ಥಿತಿಯೂ ಇಲ್ಲ. ಪರಮಾತ್ಮನನ್ನು ಅರಿದ ಶರಣನಿಗೆ ಪರಮಾತ್ಮನು ತೋರುವದಿಲ್ಲ. ಅಥವಾ ಅವನಿಗೆ ಕಾಣದಂತೆಯೂ ಇರುವದಿಲ್ಲ. (೧೨೨)

ಇದಕ್ಕೆ ಸಿದ್ಧರಾಮನು ಅನ್ನುವದೇನೆಂದರೆ:— ಯೋಗವು ಮನಮಗ್ನವಾಗಿಲ್ಲೆಂದು ಹೇಳಿದರೆ ಕೊರತೆ ಏನು ? ಮನವಿಲ್ಲದೆ ಬಚ್ಚ ಬರಿಯ ಬೊಮ್ಮವೆಂದು ನುಡಿದರೆ ಅದೇನೂ ಹೆಚ್ಚಿನದಲ್ಲ. (೧೨೩)

ಇದಕ್ಕೆ ಪ್ರಭುದೇವರ ಉತ್ತರ:— ಮನಮಗ್ನದಂತೆ ಇರಬೇಕಲ್ಲದೆ, ಬೇರೊಂದನ್ನು ನೆನಿಸಬಾರದು. ಅರಿದು ಮರೆದುದು, ನುಡಿದು ಮರೆದುದು, ಹೀಗೆ ಇರಲಾರದು. ನಾನು ಅರಿದೆನು ಎಂದರೆ ಅಲ್ಲಿಯೇ ಪರಮಾತ್ಮನು ಮನಸ್ಸು ಮರೆಮಾಡಿ ಕಾಡುತ್ತಾನೆ, ಎಂದು ಹೇಳಿದನು. (೧೨೪)

ಇದಕ್ಕೆ ಸಿದ್ಧರಾಮನು ಅಲ್ಲಮಪ್ರಭುವಿಗೆ ಹೇಳಿಕೊಳ್ಳುವದೇನೆಂದರೆ:- ಅಂಗದಲ್ಲಿ ಲಿಂಗ, ಲಿಂಗದಂತೆ ಅಂಗವಾದ ಬಳಿಕ ಅಂಗದಂತೆ ಲಿಂಗೈಕ್ಯವು, ಲಿಂಗದಂತೆ ಅಂಗೈಕ್ಯವು ಹೀಗಾಗುತ್ತದೆ. ಮನವೇ ಲಿಂಗ, ಲಿಂಗವೇ ಮನ, ಈ ಸ್ಥಿತಿಯುಂಟಾದ ಬಳಿಕ ಎಲೋ ಪರಮಾತ್ಮನೇ ನಿನ್ನನ್ನು ದೇವರೆಂದು ಹುಡುಕುವದು ಅವಶ್ಯವೋ, ಅನವಶ್ಯವೋ ಎಂಬುದನ್ನು ತಿಳಿಸಿಕೊಡೆಂದು ಪ್ರಭುವಿಗೆ ಸಿದ್ಧರಾಮನು ಕೇಳಿಕೊಳ್ಳುತ್ತಾನೆ. (೧೨೫)

ಇದಕ್ಕೆ ಪ್ರಭುವಿನ ಉತ್ತರ:— ಕರ್ಪೂರದ ಗಿರಿಗೆ ಉರಿ ಹಚ್ಚಿದರೆ ಇದ್ದಲಿಯು ಉಳಿಯುವದಿಲ್ಲ. ಹಿಮದ ದೇವಾಲಯದ ಮೇಲೆ ಬಿಸಿಲ ಕಲಶವನ್ನು ಇಡಲಿಕ್ಕೆಬರಲಾರದು. ಅದು ಕರಗಿ ಹೋಗುವದು. ಕೆಂಡದ ಗಿರಿಗೆ ಅರಗಿನ ಬಾಣವನ್ನು ಹೊಡೆದರೆ ಆ ಬಾಣವನ್ನು ಪುನಃ ಹುಡುಕಲಿಕ್ಕೆ ಬರಲಾರದು. ಪರಮಾತ್ಮನನ್ನು ಅರಿತಬಳಿಕ ಅವನನ್ನು ಹುಡುಕುವದು ಅಸಾಧ್ಯವು. ಇದನ್ನು ನೀನು ತಿಳಿದರೆ ನಿನ್ನ ಪ್ರಶ್ನೆಗೆ ಉತ್ತರ ದೊರೆಯುವದು. (೧೨೬)

## ಸರ್ವ ಶೂನ್ಯ ಸಮಾಧಿ.

ಇದಕ್ಕೆ ಸಿದ್ಧರಾಮಯ್ಯನ ಆಕ್ಷೇಪವು ಏನೆಂದರೆ:— ನೀನು ನನ್ನ ಮನಸ್ಸನ್ನು ನುಂಗಿದ್ದರಿಂದ, ನೀನು ನನ್ನ ಒಳಗೂ ಹೊರಗೂ ನೀನೇ ಇರುತ್ತಿ. ನನ್ನ ಅರಿವು ನಿಮ್ಮಲ್ಲಿ ಅಡಗಿದ ನುಡಿಯೊಳಗೆ ಬೆರೆತಿದೆ. ಅವನ್ನು ಮರೆಯುವದು ಹೇಗೆ ಎಂದು ಪ್ರಶ್ನೆಮಾಡುತ್ತಾನೆ. (೧೨೭)

ಆಗ ಪ್ರಭುವು ಸರ್ವಶೂನ್ಯ ಸಮಾಧಿಯ ರೀತಿಯನ್ನು ಸಿದ್ಧರಾಮನಿಗೆ ತಿಳಿಸಿ ಹೇಳಿದನು. ಅದು ಹೇಗೆಂದರೆ—

ಸರ್ವ ಶೂನ್ಯದಲ್ಲಿ ಅರಿದೆನೆಂಬುದು, ಅರಿಯೆನೆಂಬುದು, ಮರೆದೆನೆಂಬುದು ಅದರಂತೆಯೇ ಅರಿವನ್ನು ತಿಳಿಸುವ ಕುರುಹಿನಲ್ಲಿ ಮರವೆ ಇದ್ದು ಅದರಲ್ಲಿಯೂ ಕೂಡ ಪರಮಾತ್ಮನು ಇದ್ದು ಈ ಎಲ್ಲವುಗಳು ಬಯಲು ಎಂದು ಅಲ್ಲಮಪ್ರಭುವು ಒಂದು ಮಹಾ ವಾಕ್ಯವನ್ನು ನುಡಿಯುತ್ತಾನೆ. (೧೨೮)

ಈ ಮಹಾ ವಾಕ್ಯವು ಸ್ವಾನುಭಾವೋಪದೇಶವಾಗಿದ್ದು ಇದರಿಂದ ಸಿದ್ಧರಾಮನ ಮನಸ್ಸಿನಲ್ಲಿ ಒಂದು ಪ್ರಸನ್ನತ್ವವು ಉಂಟಾಯಿತು. ಇದೇ ಪರಬ್ರಹ್ಮದಲ್ಲಿಯ ನಿರ್ವಾಣ ಸ್ಥಿತಿಯು ಎಂದು ಅರಿತು ಇದರ ರೀತಿಯನ್ನು ತಿಳಿಯುವಂತೆ ಹೇಳೆಂದು ಸಿದ್ಧರಾಮನು ಪ್ರಭುದೇವರಿಗೆ ಬಿನ್ನವಿಸಿಕೊಂಡನು. ಅದು ಹೇಗೆಂದರೆ:—

ಕಬ್ಬಿಣವು ನೀರನ್ನು ಒಳಕೊಳ್ಳುತ್ತದೆ. ಶಬ್ದವು ನಿರಾಳ ಅಥವಾ ಬಯಲನ್ನು ಒಳಕೊಳ್ಳುತ್ತದೆ. ಬಯಲು ಕಿರಣವನ್ನು ಒಳಕೊಳ್ಳುತ್ತದೆ. ಇವುಗಳಂತೆ ನೀನು ನನ್ನನ್ನು ಎಂದು ಒಳಕೊಳ್ಳುವಿ ಎಂದು ಕೇಳಿಕೊಳ್ಳುತ್ತಾನೆ. (೧೨೯)

ಅದಕ್ಕೆ ಪ್ರಭುದೇವರು ಹೇಳಿದ್ದೇನೆಂದರೆ:— ಮನಸ್ಸು ತೆರಹು ಅಂದರೆ ಸ್ಥಳವು ಇಲ್ಲದ ಘನವನ್ನು ಒಳಕೊಳ್ಳುತ್ತದೆ. ಹಾಗೆಯೇ ಘನವು ತೆರಹು

ಇಲ್ಲದ ಮನವನ್ನು ಒಳಕೊಳ್ಳುತ್ತದೆ. ಮನುಷ್ಯನು ಶಾಂತನಾದ ಬಳಿಕ ಅವನಲ್ಲಿ ಇಂಬು ಅಂದರೆ ಸ್ವತಂತ್ರ ಸ್ಥಳವು ಎಂಬುದು ಇರಲಾರದು. ಆಗ ಮನುಷ್ಯನು ಉರಿಯೊಳಗಣ ಕರ್ಪೂರದಂತೆ ಇರುವನು. ಈ ಸ್ಥಿತಿಯಲ್ಲಿ ಅವನು ಪರಮಾತ್ಮನ ಲೀಲೆಯು ನಿಂತುಹೋಗುವ ವರೆಗೂ ಇರುತ್ತಾನೆ.(೧೩೦)

ಆಗ ಸಿದ್ಧರಾಮನು ಕ್ರಿಯೆಗಳಿಂದ ನಾನು ಪರಮಾತ್ಮನನ್ನು ಕಂಡೆನು, ನನ್ನ ಸುಕೃತದಿಂದ ನಿಜವು ಸಾಧ್ಯವಾಯಿತು, ಮರವೆ ಎಂಬ ಕತ್ತಲೆಗೆ ಸೂರ್ಯನು ಉದಿಸಿದಂತೆ ಪರಮಾತ್ಮನೆಂಬ ಭ್ರಾಂತಿಯು ನಿಜವನ್ನು ಹೊಂದಿತು, ಇವೆಲ್ಲವು ಅಲ್ಲಮಪ್ರಭುವಿನ ಕಾರುಣ್ಯದ ಮೂಲಕ, ಎಂದು ಪ್ರಭುವಿನನ್ನು ಸ್ತುತಿಸುತ್ತ ಹೇಳುತ್ತಾನೆ. (೧೩೧)

ಆಗ ಸಿದ್ಧರಾಮನೆಗೆ ಈ ಸ್ಥಿತಿಯು ಉಂಟಾದುದನ್ನು ಪ್ರಭುದೇವನು ಕಂಡು ಕೊಂಡಾಡಹತ್ತಿದನು. ಅದು ಹೇಗೆಂದರೆ—

### ಬೆಳಗು.

ಈತನದು ನಿರ್ವಿಕಲ್ಪಿತ ಅದ್ವೈತ ಸ್ಥಿತಿಯಾಗಿದೆ. ಇದು ಬೆಳಗಿನ ಬೆಳಗು. ಇದು ಸಹ ಅಡಗಿಹೋಯಿತು. ನಾನು ಸೂರ್ಯಚಂದ್ರರನ್ನು ಅಥವಾ ಭೂಲೋಕದ ಪ್ರಾಣಿಗಳಲ್ಲಿ ಯಾವುದನ್ನೂ ಕಾಣೆನು. ಇದು ಜ್ಯೋತಿ ಇಲ್ಲದ ಬೆಳಗಿನ ಪ್ರಭೆಯು. ಸಿದ್ಧರಾಮನ ಇಂಥ ಮಹಾ ಘನವನ್ನು ನಾನೇನು ಹೇಳಲಿ, ಎಂದು ಕೊಂಡಾಡಿದನು. (೧೩೨)

ಹೀಗೆ ಪ್ರಭುದೇವರು ನುಡಿಯಲು ಸಿದ್ಧರಾಮನು ಪ್ರಭುದೇವರ ಪೂರ್ವಾಪರವನ್ನು ತನಗೆ ತಿಳಿಸಬೇಕೆಂದು ಅವನಿಗೆ ಕೇಳಿಕೊಂಡನು. ಅದಕ್ಕೆ ಪ್ರಭುವು ಉತ್ತರಕೊಟ್ಟದು ಏನೆಂದರೆ:—

ಮೊದಲು ಅನಾದಿಗಣನಾಥ, ಅವನ ಶಿಷ್ಯ ಆದಿ ಗಣನಾಥ, ಅವನ ಶಿಷ್ಯ ಅಧ್ಯಾತ್ಮ ಗಣನಾಥ. ಹೀಗೆ ಅವನ ಶಿಷ್ಯಪರಂಪರೆಯು ಇದ್ದು ಇದನ್ನು ಹೇಳುತ್ತ ಹೋಗಿ, ಈ ಅಧ್ಯಾತ್ಮ ಗಣನಾಥ, ಆತ್ಮ ಗಣನಾಥ, ಈತನಿಗೆ ವ್ಯೋಮಸಿದ್ಧ ಗಣನಾಥ, ಅವನಿಗೆ ಬಸವ ಗಣನಾಥ, ಅವನಿಗೆ ಅನುಮಿಷ ಗಣನಾಥ, ಅವನಿಗೆ ಅಲ್ಲಮಪ್ರಭು ಗಣನಾಥ, ಎಂಬವರು ಇದ್ದು ಹೀಗೆ ಅನಾದಿಕಾಲದಿಂದಲೂ ಬಂದ ಅನುಪಮ ಲಿಂಗವು ಗುಹೇಶ್ವರ ಎಂಬ ಹೆಸರಿನಿಂದ ನನ್ನ ಕೈಯ್ಯಲ್ಲಿ ಇದ್ದಾನೆ, ಎಂದು ಪ್ರಭುದೇವನು ಸಿದ್ಧರಾಮನಿಗೆ ತಿಳಿಸಿ ಹೇಳಿದನು. (೧೩೪)

## ನಿರವಯ.

ಮುಂದೆ ಸಿದ್ಧರಾಮನು ಇಂಥ ಇಷ್ಟಲಿಂಗವನ್ನು ಹಿಡಿದು ನಿಜಲಿಂಗೈಕ್ಯವನ್ನು ಕಾಣುವ ರೀತಿಯು ಯಾವುದು ಹೇಳೆಂದು ಪ್ರಭುವಿಗೆ,ಕೇಳಿಕೊಂಡನು. ಅವನು ಕೇಳಿಕೊಂಡುದು ಹೇಗೆಂದರೆ: – ಕಾಯವೇ ಪೀಠ. ಪ್ರಾಣವೇ ಲಿಂಗವಾದ ಬಳಿಕ ಬೇರೆ ಕುರುಹು ಏಕೆ ? ಈ ತೆರದ ಕುರುಹು ಹಿಡಿದು ಸಾವುರಸ್ಯವನ್ನು ಹೊಂದುವ ನಿರವಯುವು ಎಲ್ಲಾದರೂ ಉಂಟೇ, ಇದನ್ನು ಹೇಳು. ಕುರುಹಿಗೆ ಅಂತ್ಯವಿದೆ. ಇಂಥದರಿಂದ ಪರಮಾತ್ಮನನ್ನು ಕಾಣಬೇಕೆಂದು ಹೇಳುತ್ತಿರುವಿರಿ. ಹೀಗೆ ಕಾಣುವದು ಹೇಗೆ, ಎಂದು ಸಿದ್ಧರಾಮನು ಪ್ರಭುದೇವರಿಗೆ ಪ್ರಶ್ನೆಮಾಡಿದನು. (೧೩೫)

## ಇಷ್ಟ ಪ್ರಾಣ ಭಾವಲಿಂಗಗಳು.

ಇದಕ್ಕೆ ಪ್ರಭುದೇವರ ಉತ್ತರಃ—

ಇಷ್ಟಲಿಂಗ, ಪ್ರಾಣಲಿಂಗ ಇವುಗಳಲ್ಲಿರುವ ಭೇದವನ್ನು ಯಾರು ಬಲ್ಲರು ? ಶರಣನಾದವನು ತನ್ನ ಮನಸ್ಸಿನಲ್ಲಿರುವ ಲಿಂಗದ ವಿಷಯವಾಗಿ ವಿಚಾರ ವ್ಯಾಕುಳಕ್ಕೆ ಒಳಗಾಗಬಾರದೆಂದು ಮನ, ಮತ್ತು ಭಾವ, ಇವುಗಳಲ್ಲಿದ್ದ ಜ್ಞಾನನೋಟವನ್ನು ಕರಸ್ಥಲದಲ್ಲಿ ನಿಕ್ಷೇಪಿಸಿ, ಅಂತರಂಗ, ಬಹಿರಂಗವೆಂಬುದನ್ನು ತಿಳಿಯದೆ ಏಕಾಗ್ರಚಿತ್ತನಾಗಿ ಇರುತ್ತಾನೆ. ಅವನು ಪ್ರಾಣಲಿಂಗವನ್ನು ಕಂಡು ಅದರಲ್ಲಿ ಆನಂದಪಡುವದಕ್ಕೋಸ್ಕರ ಅದು ಕರದ ಕನ್ನಡಿ ಎಂದು ತಿಳಿದು ಕೊಂಡು ಅದನ್ನು ಹಿಡಿದುಕೊಂಡು ಇರುತ್ತಾನೆ. ಪರಮಾತ್ಮನಲ್ಲಿ ತನ್ನ ನಿಜವನ್ನು ಕಳೆಯಬೇಕೆಂದು ಅವನು ಒಂದು ಕುರುಹುಹಿಡಿದು, ಆ ಕುರುಹನ್ನು ಅಳಿಯಬೇಕು, ಎಂದು ಪ್ರಭುದೇವರು ನುಡಿದರು. (೧೩೬)

ಅದಕ್ಕೆ ಸಿದ್ಧರಾಮನು:— ಅಯ್ಯಾ ನಿಮ್ಮ ಕರಸ್ಥಲದ ಲಿಂಗದ ಘನವನ್ನು ನಾನು ತಿಳಿಯಲಾರೆನು. ಈ ನಿಮ್ಮ ಘನತೆಯನ್ನು ನಾನರಿಯೆನು. ಆ ಇಷ್ಟಲಿಂಗವನ್ನು ಹಿಡಿದಿರುವ ಶರಣನ ಕರಸ್ಥಲವು ಎಂಥದು ಎಂಬುದನ್ನು ತಿಳಿಸಿ ನನ್ನನ್ನು ಉದ್ಧರಿಸು, ಎಂದು ಬೇಡಿಕೊಳ್ಳುತ್ತಾನೆ. (೧೩೭)

ಹೀಗೆ ಸಿದ್ಧರಾಮನು ಇಷ್ಟಲಿಂಗದೊಳಗಿರುವ ಸೂಕ್ಷ್ಮ ಭೇದವೇನೆಂದು ಕೇಳಲು, ಪ್ರಭುದೇವರು ಇದು ನನಗೆ ತಿಳಿದಿಲ್ಲ. ಇದರ ರೀತಿಯನ್ನು

ಬಸವೇಶ್ವರನು ಮಾತ್ರ ಬಲ್ಲನು. ಅವನ ಮುಂದೆ ಈ ವಿಷಯವನ್ನು ಇಟ್ಟು, ಅವನಿಂದ ನಾವು ಇದನ್ನು ತಿಳಿದುಕೊಳ್ಳಬೇಕು, ಎಂದು ನುಡಿದು ಪುನಃ ಅಂದುದೇನೆಂದರೆ—

ಆಯತಲಿಂಗ ಎಂದರೆ ಬಾಹ್ಯಲಿಂಗ, ಇದನ್ನು ಹಿಡಿದು ಸ್ವಾಯತಲಿಂಗ, ಅಂದರೆ ಪ್ರಾಣಲಿಂಗವನ್ನು ಕಾಣಬೇಕು. ಸ್ವಾಯತಲಿಂಗವನ್ನು ಹಿಡಿದು ಜಂಗಮಲಿಂಗವನ್ನು ಕಾಣಬೇಕು- ಈ ಜಂಗಮಲಿಂಗವನ್ನು ಹಿಡಿದು ಗುರು ಲಿಂಗವನ್ನು ಕಾಣಬೇಕು. ಈ ಗುರುಲಿಂಗವನ್ನು ಹಿಡಿದು ಪ್ರಾಣದಲ್ಲಿರುವ ಶಿವ ಲಿಂಗವನ್ನರಿಯಬೇಕು. ಮುಂದೆ ಈ ಶಿವಲಿಂಗದಿಂದ ಅದಕ್ಕೂ ಸೂಕ್ಷ್ಮವಾದ ಪ್ರಸಾದಲಿಂಗವನ್ನು ಕಾಣಬೇಕು. ಹೀಗೆ ಷಟ್‌ಸ್ಥಲವನ್ನು ಅರಿತುಕೊಂಡು ಲಿಂಗದಲ್ಲಿ ತಾನಾಗಿ ಆದರ ಮೂಲಕ ಕರಸ್ಥಲದ ಲಿಂಗವನ್ನು ಅರಿಯ ಬೇಕು. ಇದರ ರೀತಿಯು ಬಸವಣ್ಣನಿಗೆ ಮಾತ್ರ ಗೊತ್ತು ಇದೆ. ಅವನನ್ನು ನಾವು ಕೇಳೋಣ. ನನ್ನ ಕೂಡ ಕಲ್ಯಾಣಕ್ಕೆ ನಡೆ, ಎಂದು ಅಲ್ಲಮಪ್ರಭುವು ಸಿದ್ಧರಾಮನಿಗೆ ಹೇಳುತ್ತಾನೆ. (೧೩೮)

## ಕಲ್ಯಾಣಕ್ಕೆ ಗಮನ.

ಸಿದ್ಧರಾಮನು ಇದನ್ನು ಕೇಳಿ ಅತ್ಯಾನಂದ ಭರಿತನಾಗಿ ಹೇಳಿದ್ದೇ ನೆಂದರೆಃ— ಕರಸ್ಥಲದ ಘನವು ಯಾವುದು ಇದೆಯೋ, ಅದು ನಿಮ್ಮಲ್ಲಿ ಇರಲಿ, ಪರಮಸ್ಥಲದ ಘನವು ಯಾವದು ಇದೆಯೋ ಇದರ ರೀತಿಯನ್ನು ತಿಳಿಯುವದು ನನಗೆ ಬೇಡ ಅಲ್ಲಮಪ್ರಭುವೇ, ನೀನು ನನ್ನ ಮೇಲೆ ಪ್ರೀತಿ ಯುಳ್ಳವನಾಗಿ ಬಸವಣ್ಣನ ಪಾದವನ್ನು ತೋರಿಸುವೆನೆಂದು ನೀನು ಹೇಳಿ ದ್ದಕ್ಕೆ ಮಾತ್ರ ನಾನು ನಿನಗೆ ಮನಸೋತೆನು. ಅವನ ಕಡೆಗೆ ನಾವು ಹೋಗುವಾ, ಎಂದು ಕಲ್ಯಾಣಕ್ಕೆ ಸಿದ್ಧರಾಮನು ಹೊರಡಲು ಸಿದ್ಧನಾ ದನು. (೧೩೯)

ಅಲ್ಲಮಪ್ರಭುವು ಸಿದ್ಧರಾಮನು ಕಲ್ಯಾಣಕ್ಕೆ ಬರಲು ಸಿದ್ಧನಾದುದನ್ನು ನೋಡಿ, ಹೇಳಿದ್ದು ಏನೆಂದರೆ—

ಬಸವನು ತನ್ನ ಅಂಗದಲ್ಲಿ ಆಚಾರವನ್ನು ನೆಲೆಗೊಳಿಸಿದ್ದಾನೆ. ಆ ಆಚಾರದಲ್ಲಿ ತನ್ನ ಪ್ರಾಣವನ್ನು ಸ್ವಾಯತ ಮಾಡಿದ್ದಾನೆ. ಪ್ರಾಣದಲ್ಲಿ

ಲಿಂಗವನ್ನು ಸ್ವಾಯತ ಮಾಡಿಕೊಂಡಿದ್ದಾನೆ. ಲಿಂಗದಲ್ಲಿ ಜಂಗಮವನ್ನು, ಜಂಗಮದಲ್ಲಿ ಪ್ರಸಾದವನ್ನು, ಪ್ರಸಾದದಲ್ಲಿ ನಿತ್ಯವನ್ನು. ನಿತ್ಯದಲ್ಲಿ ದಾಸೋಹವನ್ನು ಸ್ವಾಯತ ಮಾಡಿಕೊಂಡಿದ್ದಾನೆ. ದಾಸೋಹದಲ್ಲಿ ತನ್ನ ಮರೆದು ನಿಶ್ಚಿಂತ ನಿವಾಸಿಯಾಗಿದ್ದಾನೆ. ಇಂಥ ಬಸವೇಶ್ವರನ ಪಾದಕ್ಕೆ ಶರಣೆಂದು ನಾವು ಧನ್ಯರಾಗಬೇಕು. ಸಿದ್ಧರಾಮನೇ, ಅವನಲ್ಲಿಗೆ ಹೋಗುವಾ ನಡೆ, ಎಂದು ಹೇಳಲು ಅವನೊಡನೆ ಸಿದ್ಧರಾಮನು ಕಲ್ಯಾಣಕ್ಕೆ ಹೊರಡಲು ಸಿದ್ಧನಾದನು. (೧೪೦)

# ಸಟೀಕ ಶೂನ್ಯ ಸಂಪಾದನೆ.

## ಸಿದ್ಧರಾಮಯ್ಯನ ಗುರುಕರುಣ.

(ದಶಮೋಪದೇಶ)

ಕಂದ ॥ ಶಿವಯೋಗಿ ಸಿದ್ಧರಾಮಗೆ ।
ಅವಿರಳ ಶಿವಲಿಂಗದೀಕ್ಷೆಯಂ ಸಂತಸದಿಂ ॥
ಬುವಿಯರಿಯೆ ಚನ್ನಬಸವಂ ।
ತವೆ ಇತ್ತುದ ಪೇಳ್ವೆ ಶರಣ ಜನ ಮುದವೆಯಿದಲ್ ॥

ಅದೆಂತೆಂದೊಡೆ, ಪ್ರಭುದೇವರು ಬಸವರಾಜದೇವರು ಚನ್ನಬಸವರಾಜ ದೇವರು ಮಡಿವಾಳ ಮಾಚಿತಂದೆಗಳು ಮುಖ್ಯವಾದ ಅಸಂಖ್ಯಾತ ಮಹಾ ಪುರಾತನರು ಮಹಾನುಭಾವ ಸದ್ಗೋಷ್ಠಿಯಂ ಮಾಡುತ್ತಿರ್ಪ ಪ್ರಸ್ತಾವ ದೊಳು ಪರಶಿವ ಯೋಗೀಶ್ವರನಪ್ಪ ಸಿದ್ಧರಾಮಯ್ಯದೇವರು ಪ್ರಭುದೇವರ ಕೂಡೆ ನಿಮ್ಮ ಕರಸ್ಥಲದ ಲಿಂಗದ ನಿಜವ ಬಸವರಾಜದೇವರಿಂದೆ ಹೇಳಿಸಿ ಹೆನೆಂದು ಕರೆದುಕೊಂಡು ಬಂದಿರಿ. ಆ ಲಿಂಗದ ನಿಜವಂ ಎನಗೆ ನಿರೂ ಪಿಸೆಂದು ಬಿನ್ನೈಸುವ ಪ್ರಸ್ತಾವದ ವಚನ.

ಅಯ್ಯ ಈ ಕಾಯ ಲಿಂಗವೋ ? ಕಾಯದಲ್ಲಿ ಸಾರಿಪ್ಪ ಲಿಂಗ ಲಿಂಗವೋ? ಪ್ರಾಣ ಲಿಂಗವೋ? ಪ್ರಾಣದಲ್ಲಿ ಸಾರಿಪ್ಪ ಲಿಂಗ ಲಿಂಗವೋ? ಜ್ಞಾನ ಲಿಂಗವೋ? ಜ್ಞಾನದ ಮೊನೆಯಲ್ಲಿ ಬೆಳಗುವ ಲಿಂಗ ಲಿಂಗವೋ ? ಲಿಂಗಪ್ರಾಣ ಪ್ರಾಣ ಲಿಂಗವೆಂತೆಂದರಿಯೆನು. ನಿಮ್ಮ ಕಾಯದ ಕರಸ್ಥಲವ ಸಾರಿದ ಲಿಂಗ ಪ್ರಾಣದೊಳಗೆ ವೇದ್ಯವಾದ ಪರಿಯನುಪದೇಶಿಸಿ ಕೃಪೆಯ ಮಾಡಾ ಪ್ರಭುವೆ ಕಪಿಲಸಿದ್ಧಮಲ್ಲಿಕಾರ್ಜುನ. ॥೧॥

ಹೀಗೆಂದು ಸಿದ್ಧರಾಮಯ್ಯದೇವರು ಪ್ರಭುದೇವರ ಬೆಸಗೊಳಲು, ಆ ಪ್ರಭುದೇವರು ಸಿದ್ಧರಾಮಯ್ಯ ದೇವರಿಗೆ ಹೇಳೆಂದು ಬಸವರಾಜದೇವರಿಗೆ ಬೆಸಗೊಂಬ ಪ್ರಸ್ತಾವದ ವಚನ.

ಒಂದೂ ಇಲ್ಲದ ಬಿಂದುವ ತಂದೆ ಇಲ್ಲದ ಕಂದನ ಮಾತೆ ಇಲ್ಲದ ಜಾತನ ಗಮನವಿಲ್ಲದಗಮ್ಯನ ಮೂವರರಿಯದ ಮುಗ್ಧನ ಠಾವ ತೋರಿಸಾ ಗುಹೇಶ್ವರಲಿಂಗದಲ್ಲಿ ಸಂಗನಬಸವಣ್ಣಾ. ।೨॥

ಇಂತು ಪ್ರಭುದೇವರು ಮಹಾ ಘನವಪ್ಪ ಇಷ್ಟಲಿಂಗದ ನಿಲವ ಸಿದ್ಧರಾಮಯ್ಯದೇವರ ಕುರಿತು ಬಸವರಾಜದೇವರ ಬೆಸಗೊಳಲು, ಆ ಬಸವ ರಾಜದೇವರು ಸಿದ್ಧರಾಮಯ್ಯದೇವರ ಅಂಗದ ಮೇಲೆ ಲಿಂಗವಿಲ್ಲದುದನರಿದು ಪ್ರಭುದೇವರಿಗೆ ನಮಸ್ಕಾರಮಂ ಮಾಡುವ ಮುಖದಲ್ಲಿ ನಿರೂಪಿಸಿದ ಪ್ರಸ್ತಾವದ ವಚನ.

ಎನ್ನ ಕಾಯದ ಕರಸ್ಥಲದಲ್ಲಿ ಅಲ್ಲಮಪ್ರಭುದೇವರ ಕಂಡೆನು. ಎನ್ನ ಮನದ ಕರಸ್ಥಲದಲ್ಲಿ ಚನ್ನಬಸವಣ್ಣನ ಕಂಡೆನು. ಎನ್ನ ಅರಿವಿನ ಕರ ಸ್ಥಲದಲ್ಲಿ ಮಡಿವಾಳಯ್ಯನ ಕಂಡೆನು. ಒಳಗು ಹೊರಗು ಒಳಗೆಂಬ ಭೇದವ ನರಿಯದೆ ಇದ್ದೆನು ಕಾಣಾ ಕೂಡಲಸಂಗಮದೇವಯ್ಯ ನಿಮ್ಮ ಶರಣರು ಪಾವನ ಮಾಡಿದ ಪರಿಣಾಮವ ಅಂತಿಂತೆನಲಮ್ಮದೆ ನಮೋ ನಮೋ ಎನುತಿರ್ದೆನು. ।೩॥

ಹೀಗೆಂದು ಬಸವರಾಜದೇವರು ಸಿದ್ಧರಾಮಯ್ಯದೇವರಿಗೆ ಅಂಗ ಲಿಂಗ ಸಂಬಂಧವಿಲ್ಲದಿದ್ದರೆ ಎನ್ನ ಮನ ಒಪ್ಪದೆಂದು ಬಿನ್ನೈಸಿದ ಪ್ರಸ್ತಾವದ ವಚನ.

ಸಮಯ ವಿರುದ್ಧಕಂಜಿ ವಿನಯವ ನುಡಿವೆ. ಕೊಂದರೆ ಕೊಲ್ಲು, ಕಾಯಿ ದರೆ ಕಾಯಿ. ಎನ್ನವರೆಂದು ಮನ ಹಿಡಿಯದು ಕೂಡಲಸಂಗಮದೇವಾ. ॥೪॥

ಹೀಗೆಂದು ಬಸವರಾಜದೇವರು ಪ್ರಭುದೇವರೊಡನೆ ಬಿನ್ನೈಸಲು, ಸಿದ್ಧರಾಮಯ್ಯದೇವರು ಆ ಪ್ರಭುದೇವರ ಕೂಡೆ ಮಡಿವಾಳನೆಂಬ ಪರ ಬ್ರಹ್ಮವ ಎನ್ನಂತರಂಗದಲ್ಲಿ ಕಂಡು, ಮನಮಗ್ನವಾಗಿಪ್ಪೆನೆಂದು ಬಿನ್ನೈ ಸಿದ ಪ್ರಸ್ತಾವದ ವಚನ.

ಬೆಳಗು ಬೆಳಗು ಹಳಚುವಲ್ಲಿ ಕತ್ತಲೆ ಉಳಿಯಬಲ್ಲುದೆ ಅಯ್ಯ ? ಶರಣರು ಶರಣರು ಮಹಾನುಭಾವ ಗೋಷ್ಠಿಯ ಮಾಡುವಲ್ಲಿ ಸಂಗದೊಳಿರ್ದವರ ಅಜ್ಞಾನವಳಿದು, ನಿಜವನೈದುವರಯ್ಯ. ನಿಮ್ಮ ಮಹಾನುಭಾವ ಸೋಂಕಿದ ಸೆರಗಿನೊಳಗಿರ್ದ ನಾನು ಪರಮ ಸುಖಿಯಾಗಿ ಮಡಿವಾಳನ ಪಾದದಲ್ಲಿ ಮನಮಗ್ನವಾದೆನು ಕಾಣಾ ಪ್ರಭುವೇ ಕಪಿಲಸಿದ್ಧಮಲ್ಲಿಕಾರ್ಜುನ ।೫॥

ಇಂತೆಂದು ಸಿದ್ಧರಾಮಯ್ಯದೇವರು ನುಡಿಯಲು, ಚನ್ನಬಸವಣ್ಣನು ಕೇಳಿ ಅಂಗದ ಮೇಲೆ ಲಿಂಗಸಂಬಂಧವಿಲ್ಲದವಂಗೆ ಪ್ರಾಣಲಿಂಗಸಂಬಂಧವಿಲ್ಲವೆಂದು ನಿರೂಪಿಸಿದ ಪ್ರಸ್ತಾವದ ವಚನ.

ಅಂಗದ ಮೇಲೆ ಲಿಂಗವಿಲ್ಲದನ್ನಕ್ಕರ ಪ್ರಾಣಲಿಂಗದಲ್ಲಿ ಪರಿಣಾಮವ ನೆಯ್ದುವ ಪರಿ ಎಂತಯ್ಯ ? ಅಂಗತ್ರಯವುಳ್ಳವರು ಲಿಂಗತ್ರಯಸಂಪನ್ನರಾಗಬೇಕು. ಒಂದಂಗ ವಿರಹಿತವಾಗಿಪ್ಪವರುಂಟೆ ? ಕಂಗಳ ನೋಟಕ್ಕೆ ಇಂಬಾವುದು ಹೇಳಾ ? ಒಂದಂಗವ ಬಿಟ್ಟು ಒಂದಂಗವ ತೋರದಾಗಿ ಸಂದುಭೇದವಿಲ್ಲದಿಪ್ಪ ಮಡಿವಾಳನ ನಿಲವು ಕೂಡಲಚನ್ನಸಂಗನಲ್ಲಿ ನಿನಗೆಂತು ಸಾಧ್ಯವಾಯಿತ್ತು ಹೇಳಾ ಸಿದ್ಧರಾಮಯ್ಯ ? ॥೬॥

ಹೀಗೆಂದು ಚಿಕ್ಕದಣ್ಣಾಯಕರು ಬೆಸಗೊಳಲು, ಇದಕ್ಕೆ ಸಿದ್ಧರಾಮಯ್ಯ ಕೊಟ್ಟ ಪ್ರತ್ಯುತ್ತರ.

ತನು ಉಂಟೆಂಬ ಭಾವ ಮನದಲ್ಲಿಲ್ಲವಯ್ಯ ! ಮನ ಉಂಟೆಂಬ ಭಾವ ಅರಿವಿನಲ್ಲಿಲ್ಲವಯ್ಯ. ಅರಿವು ಉಂಟೆಂಬ ಭಾವ ನುಡಿಯೊಳಗಿಲ್ಲವಯ್ಯ. ಇಂತೀ ತನು ಮನ ಜ್ಞಾನವೆಂಬ ತ್ರಿವಿಧವು ಏಕಾರ್ಥವಾದ ಬಳಿಕ ಆ ತನುವಿನ ಮೇಲೆ ಸ್ವಾಯತವ ಮಾಡುವೆನು. ಎನ್ನ ಕಾಯವೆ ಬಸವಣ್ಣನು. ಎನ್ನ ಪ್ರಾಣಲಿಂಗವೆ ಪ್ರಭುದೇವರು. ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಒಳಹೊರಗೆಂಬುದಿಲ್ಲ ಕಾಣಾ ಚನ್ನಬಸವಣ್ಣ. ॥೭॥

ಹೀಗೆಂದು ಸಿದ್ಧರಾಮಯ್ಯ ದೇವರು ಬಿನ್ನೈಸಲು, ಇದಕ್ಕೆ ಚಿಕ್ಕದಣ್ಣಾಯಕರ ಪ್ರತ್ಯುತ್ತರ.

ಅಂಗವಿಲ್ಲೆಂಬಲ್ಲಿಯೆ, ಅಂಗ ಶಂಕೆ ಬಿಡದು. ಲಿಂಗವುಂಟೆಂಬಲ್ಲಿಯೆ, ಲಿಂಗ ಶಂಕೆ ಬಿಡದು. ಇಲ್ಲೆಂಬುದಕ್ಕೆ ಉಂಟೆಂಬುದೇ ಮರಹು. ಉಂಟೆಂಬುದಕ್ಕೆ ಇಲ್ಲೆಂಬುದೇ ಮರಹು. ಉಂಟಿಲ್ಲವೆಂಬುದಳಿದುಳಿದಲ್ಲದೆ ಪ್ರಾಣಲಿಂಗ ಸಂಬಂಧ ಸ್ವಾಯತವಾಗದು. ಕೂಡಲಚನ್ನಸಂಗಯ್ಯನಲ್ಲಿ ಪ್ರಾಣಲಿಂಗ ಸಂಬಂಧ ನಿನಗೆಲ್ಲಿಯದು ಹೇಳಾ ಸಿದ್ಧರಾಮಯ್ಯ ? ॥೮॥

ಹೀಗೆಂದು ಚಿಕ್ಕದಣ್ಣಾಯಕರು ನಿರೂಪಿಸಲು, ಇದಕ್ಕೆ ಸಿದ್ಧರಾಮಯ್ಯದೇವರು ಬಿನ್ನೈಸಿದ ಪ್ರಸ್ತಾವದ ವಚನ.

ತನುವಿದ್ದು ತನುವಿಲ್ಲ. ಮನವಿದ್ದು ಮನವಿಲ್ಲ. ಭಾವವಿದ್ದು ಭಾವವೆಂಬ ಬುದ್ಧಿ ಇಲ್ಲ. ನೀನೆಂಬುದುಂಟಾಗಿ ಭೃತ್ಯಾಚಾರವಿಲ್ಲ. ನಾನೆಂಬುದುಂಟಾಗಿ ಅಹಂಕಾರವಿಲ್ಲ. ಕಪಿಲಸಿದ್ಧ ಮಲ್ಲಿನಾಥಯ್ಯನಲ್ಲಿ ಲಿಂಗಸಂಗ ನಿರ್ಲೇಪನೆಂಬುದನಿದಿರಿಂಗೆ ನುಡಿದು ಹೇಳಬಾರದು ಕಾಣಾ ಚನ್ನಬಸವಣ್ಣಾ ||೯||

ಹೀಗೆಂದು ಸಿದ್ಧರಾಮಯ್ಯದೇವರಿಗೆ ಚನ್ನಬಸವರಾಜದೇವರು ಮಥನ ಸಂಪರ್ಕಗೋಷ್ಠಿಯೊಳು ಒರೆದೊರೆದು ನೋಡುವ ಪ್ರಸ್ತಾವದೊಳು ಪ್ರಭುದೇವರು ನಿರೂಪಿಸಿದ ಪ್ರಸ್ತಾವದ ವಚನ.

ನಿಮ್ಮನರಿದ ಶರಣಂಗೆ ಶಿವಪೂಜೆಯ ಮಾಡುವ ದಂದುಗವೇಕೊ? ಒಲುಮೆಯ ಕೂಟಕ್ಕೆ ಹಾಸಿಕೆಯ ಹಂಗೇಕೊ? ಬೇಟದ ಮರುಳಂಗೆ ಲಜ್ಜೆ ಇನ್ನೇಕೊ? ಮಿಸುನಿಯ ಚಿನ್ನಕ್ಕೆ ಒರೆಗಲ್ಲಿನ ಹಂಗೇಕೊ? ಗುಹೇಶ್ವರಲಿಂಗವು ಪ್ರಾಣವಾಗಿಪ್ಪ ಸಿದ್ಧರಾಮಯ್ಯಂಗೆ ಕುರುಹು ಮುನ್ನೇಕೊ ಚನ್ನಬಸವಣ್ಣಾ? ||೧೦||

ಮತ್ತಂ, ಆಕಾಶವನಡರುವಂಗೆ ಅಟ್ಟುಗೋಲ ಹಂಗೇಕೊ? ಸಮುದ್ರವ ದಾಂಟುವಂಗೆ ಹರಿಗೋಲ ಹಂಗೇಕೊ? ಸೀಮೆಯ ಮೀರಿದ ನಿಸ್ಸೀಮಂಗೆ ಸೀಮೆಯ ಹಂಗೇಕೊ? ಗುಹೇಶ್ವರಲಿಂಗದಲ್ಲಿ ನಿಸ್ಸೀಮ ಸಿದ್ಧರಾಮಯ್ಯಂಗೆ ಲಿಂಗವೆಂದೇನು ಹೇಳಾ ಚನ್ನಬಸವಣ್ಣಾ? ||೧೧||

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಚನ್ನಬಸವರಾಜದೇವರು ಆ ಉತ್ತರವಂ ಖಂಡಿಸಿ ನುಡಿದ ಪ್ರಸ್ತಾವದ ವಚನ.

ಆಕಾಶದಲಾಡುವ ಪಟಕ್ಕೆ ದಾರ ಮೂಲಸೂತ್ರವಿರಬೇಕು. ಕಲಿಕಲಿ ಹೊಯ್ದಾಡಲು ಖಡ್ಗವಿಲ್ಲದಾಗದು. ಭೂಮಿ ಇಲ್ಲದೆ ಬಂಡಿ ನಡೆವುದೇ? ಅದಕ್ಕೆ ಲಿಂಗಸಂಗವಿಲ್ಲದೆ ನಿಸ್ಸಂಗವಾಗಬಾರದು. ಕೂಡಲಚನ್ನಸಂಗಮದೇವರಲ್ಲಿ ಸಂಗವಿಲ್ಲದೆ ನಿಸ್ಸಂಗಿ ಎಂದು ನುಡಿಯಬಹುದೆ ಪ್ರಭುವೆ? ||೧೨||

ಪಟವಾಕಾಶವನಡರಿತ್ತೆಂದಡೆ ಪಟದ ಸೂತ್ರದ ಸಂಚ ಕೆಳಗಿಪ್ಪುದು ನೋಡಾ! ವ್ಯೋಮದಲ್ಲಿ ಚರಿಸುವ ಸೋಮಸೂರ್ಯರೆಂದಡೆ ಹೇಮಗಿರಿಯ ಸಂಚ ತಪ್ಪದು ನೋಡಾ? ಭೂಮಿಯನೊಲ್ಲದೆ ಗಗನಕ್ಕೆ ಹಾರಿದವಂತೆ ಆ ವ್ಯೋಮದಲ್ಲಿ ನಿಲ್ಲುವುದಕ್ಕೆ ಒಂದೆಡೆಯುಂಟೆ? ಮಣ್ಣು ಮರನನುಳಿದು

ತೋರುವ ಹಣ್ಣಿ ರುಚಿಯುಂಟೆ? ನಮ್ಮ ಕೂಡಲಚನ್ನಸಂಗನ ಶರಣರೊಳಗಿರ್ದು ಸೀಮೆಯ ಮೀರಿದ ಸಿಸ್ಸೀಮನು ಸಿದ್ಧರಾಮಯ್ಯನೆಂಬ ಮಾತು ಅಂತಿರಲಯ್ಯ ಪ್ರಭುವೇ. ॥೧೩॥

ಇದಕ್ಕೆ ಪ್ರಭುದೇವರ ಪ್ರತ್ಯುತ್ತರ.

ಕಾಯವೇ ಸಕಲ, ಪ್ರಾಣವೇ ಸಕಲ ನಿಃಕಲ, ಭಾವವೆ ನಿಃಕಲ ಲಿಂಗವಾಗಿರ್ದು, ಮತ್ತೆ ಬೇರೆ ಆಯತ ಸ್ವಾಯತ ಸನ್ನಿಹಿತವೆಂಬುದಿಲ್ಲ ನೋಡಾ. ಶಿವಶಕ್ತಿ ಸಂಬಂಧವೇ ದೇಹದೇಹಿಗಳಾಗಿರ್ದ ಬಳಿಕ ಗುಹೇಶ್ವರ ಲಿಂಗದಲ್ಲಿ ಬೇರೊಂದು ಕುರುಹುವಿಡಿದು ಅರಿಯಲೇಕಯ್ಯ ಚನ್ನಬಸವಣ್ಣಾ? ॥೧೪॥

ಇದಕ್ಕೆ ಚನ್ನಬಸವರಾಜದೇವರ ಪ್ರತ್ಯುತ್ತರ.

ಆಚಾರ ಅಂಗದ ಮೇಲೆ ಆಯತವಾದುದೆ ಇಷ್ಟಲಿಂಗ. ಆ ಇಷ್ಟಲಿಂಗ ವಿಡಿದಿಹುದೆ ಪ್ರಾಣಲಿಂಗಸ್ವಾಯತ. ಪ್ರಾಣಲಿಂಗ ಉದಯಿಸಿದಲ್ಲದೆ ಇಷ್ಟಲಿಂಗವ ಕಾಣಬಾರದು. ಈ ಭೇದವ ಭೇದಿಸಬಲ್ಲರೆ ಕೂಡಲಚನ್ನಸಂಗಯ್ಯನಲ್ಲಿ ಲಿಂಗೈಕ್ಯ ಕಾಣಾ ಪ್ರಭುವೆ. ॥೧೫॥

ಮತ್ತಂ, ತಿಳಿದುಪ್ಪ ಗಟ್ಟಿದುಪ್ಪಕ್ಕೆ ಭೇದ ಉಂಟೆ? ದೀಪಕ್ಕೆ ದೀಪ್ತಿಗೆ ಭಿನ್ನ ಉಂಟೆ? ಆತ್ಮಕ್ಕೆಯೂ ದೇಹಕ್ಕೆ ಹಂಗುಂಟೆ? ಕ್ಷೀರಕ್ಕೆ ಸ್ವಾದಕ್ಕೆ ಭಿನ್ನ ಉಂಟೆ? ಇದುಕಾರಣ ಸಾಕಾರವೇ ನಿರಾಕಾರವೆಂದಾದು ಅಂಗಲಿಂಗ ಸಂಬಂಧವಿಲ್ಲದವರ ಸಂಗ ಭಂಗವೆಂದು ಕೂಡಲಚನ್ನಸಂಗಯ್ಯನ ಶರಣರು ಮೆಚ್ಚರಯ್ಯ ಪ್ರಭುವೆ. ॥೧೬॥

ಮತ್ತಂ, ಚನ್ನಬಸವರಾಜದೇವರು ಸಿದ್ಧರಾಮಯ್ಯನಿಗೆ ಅಂಗಲಿಂಗ ಸಂಬಂಧವಿಲ್ಲದಿದ್ದರೆ ನಮ್ಮ ಶರಣರು ಒಪ್ಪರೆಂದು ಮೋಳಿಗಯ್ಯಗಳು ಮುಖ್ಯವಾದ ಶರಣರ ಮುಖವ ನೋಡಿ ನಿರೂಪಿಸಿದ ಪ್ರಸ್ತಾವದ ವಚನ.

ಸತಿ ಸಂಗವತಿ ಸುಖವೆಂದರಿದಡೇನು ಗಣಸಾಕ್ಷಿಯಾಗಿ, ವಿವಾಹವಾಗದನ್ನಕ್ಕರ? ಕಣ್ಣು ಕಾಂಬುದೆಂದಡೆ, ಕತ್ತಲೆಯಲ್ಲಿ ಕಾಂಬುದೆ ದೀಪವಿಲ್ಲದನ್ನಕ್ಕರ? ಸೂರ್ಯನ ಪ್ರಕಾಶದಿಂದ ಕಂಡು ತಾ ಕಂಡೆನೆಂಬ ಜಗದ ನಾಣ್ನುಡಿಯಂತಾಯಿತ್ತು. ಅಂಗವ ಬಿಟ್ಟು ಆತ್ಮನುಂಟೆ? ಭಕ್ತಿಯ ಬಿಟ್ಟು ಶಿವನುಂಟೆ? ಇದುಕಾರಣ ಸ್ಥೂಲ ಸೂಕ್ಷ್ಮ ಕಾರಣವೆಂಬ ತನುತ್ರಯ

ವಿರಲು, ಇಷ್ಟಪ್ರಾಣಭಾವವೆಂಬ ತ್ರಿವಿಧಲಿಂಗ ಸಂಬಂಧ ಬೇಡವೆಂನಡೆ ಅಸಂಖ್ಯಾತ ಪ್ರಮಥಗಣಂಗಳೊಪ್ಪುವರೆ ? ಇದುಕಾರಣ ಕೂಡಲಚನ್ನ ಸಂಗಯ್ಯನಲ್ಲಿ ಇಷ್ಟಲಿಂಗ ಸಂಬಂಧವಿಲ್ಲದವರ ಮುಖವ ನೋಡಲಾಗದಯ್ಯ? ಪ್ರಭುವೆ. ||೧೭||

ಹೀಗೆಂದು ಚನ್ನಬಸವರಾಜದೇವರು ಅಸಂಖ್ಯಾತ ಮಹಾಗಣಂಗಳ ಮುಖವಂ ನೋಡಲು, ಆ ಸಮಯದಲ್ಲಿ ಮೋಳಿಗೆಯ ಮಾರಿತಂದೆಗಳು ಮುಖ್ಯವಾದ ಏಳುನೂರೆಪ್ಪತ್ತು ಅಮರಗಣಂಗಳು ಕೇಳಿ ಕನಲಿ ನುಡಿದ ಪ್ರಸ್ತಾವದ ವಚನಗಳು.

ಆ ಸಮಯದಲ್ಲಿ ಮೋಳಿಗೆಯ್ಯಗಳ ವಚನ.

ಗರಳವಿಲ್ಲದುರುಗಂಗೆ ಹಲಬರಂಜಿದರುಂಟೆ ? ಕೈದುವಿಲ್ಲದ ಬಂಟ ಗರ್ಜಿಸಿದರೆ ಅಂಜಿದವರುಂಟೆ ? ಇಷ್ಟ ಬಾಹ್ಯ ದೃಷ್ಟದ ಮಾತನಾಡಿದಡೆ ನೆಟ್ಟನೆ ಪ್ರಾಣಲಿಂಗಿಯಪ್ಪನೆ ? ಇದು ನಿಶ್ಚಯವಲ್ಲ ನಿಃಕಳಂಕ ಮಲ್ಲಿಕಾರ್ಜುನ. ||೧೮||

ಮತ್ತಂ ಸರ್ವ ಸ್ಥಾವರ ಮೂಲಂಗಳಿಗೆಲ್ಲಕ್ಕು ಪೃಥ್ವಿಯಾದಿ ಅಪ್ಪುವಿನ ಸಾರದಿಂದೆ ಪಲ್ಲೈಸಿದ ದೃಕ್ಕಿಂಗೆ ದೃಷ್ಟವಾದ ತೆರನಂತೆ, ಇಷ್ಟದ ಪೂಜೆಯೇ ದೃಷ್ಟವಾಗಿ ಆ ದೃಷ್ಟಿ ನಿಶ್ಚಲವಾದಲ್ಲಿ ಪ್ರಾಣಲಿಂಗ ಸಂಬಂಧ ನಿಃಕಳಂಕ ಮಲ್ಲಿಕಾರ್ಜುನ. ||೧೯||

ಮತ್ತಂ, ತಿಲದ ಮರೆಯ ತೈಲವನರದು ಕಾಂಬ ತೆರನಂತೆ, ಫಳದ ಮರೆಯ ರಸವ ಹಿಳಿದು ಕಾಂಬ ಸವಿ ರುಚಿಯಂತೆ, ತೆರೆಯ ಮರೆಯ ರೂಪ ತೆಗೆದು ಕಾಂಬ ತೆರನಂತೆ, ಇಷ್ಟದ ಮರೆಯಲ್ಲಿರ್ದ ದೃಷ್ಟವ ಉಭಯವ ನಿಶ್ಚೈಸಿದಲ್ಲಿ ಪ್ರಾಣಲಿಂಗ ಸಂಬಂಧಿ ನಿಃಕಳಂಕ ಮಲ್ಲಿಕಾರ್ಜುನ. ||೨೦||

ಇದಕ್ಕೆ ದಾಸಿಮಯ್ಯಗಳ ವಚನ.

ಕರಸ್ಥಲದ ಜ್ಯೋತಿಯದು. ಕರುವಿಟ್ಟಿರಕವದು. ಅದರ ನೆಲೆಯ ತಿಳಿದರೆ, ನಿಜದಾನಂದವು. ಹೊಲಬುದೋರದಿಹ ನಿಸ್ಸೀಮನ ಹೊಲಬನರಿದು ಕೂಡಿದಾತನೆ ಪ್ರೌಢನು ಕಾಣಾ ರಾಮನಾಥಾ. ||೨೧||

ಇದಕ್ಕೆ ಮೆರೆಮಿಂಡ ದೇವರ ವಚನ.

ಮೊನೆ ಇರಿವರೆ ಕರದಲ್ಲಿ ಪಿಡಿದಲ್ಲದಾಗದು. ಮನನರಿವರೆ ಕುರುಹಿನ ನಿರುಗೆಯಲ್ಲಿ ಸಲೆ ಸಂದು ನಿಂದಲ್ಲದಾಗದು. ಕ್ರಿಯಾಸ್ವಭಾವ ಶುದ್ಧವಾದಲ್ಲದೆ, ಐಘಟದೂರರಾಮೇಶ್ವರಲಿಂಗವ ಕೂಡಬಾರದು. ॥೨೨॥

ಇದಕ್ಕೆ ಉರಿಲಿಂಗ ಪೆದ್ದಣ್ಣಗಳ ವಚನ.

ಸಾಕಾರವಿಡಿದು, ಅರ್ಚನೆಯ ಪೂಜನೆಯ ಮಾಡಬೇಕಲ್ಲದೆ, ನಿರಾಕಾರವ ನಂಬಲಾಗದು. ಶ್ರೀಗುರು ಪ್ರಾಣಲಿಂಗವನು ಕರಸ್ಥಲಕ್ಕೆ ಬಿಜಯಂಗೈಸಿ ಕೊಟ್ಟ ಬಳಿಕ ವಜ್ರದಲ್ಲಿ ಬಯಲನರಸಲುಂಟೆ ಉರಿಲಿಂಗಪೆದ್ದಿಪ್ರಿಯವಿಶ್ವೇಶ್ವರಾ ? ॥೨೩॥

ಇದಕ್ಕೆ ರಾಯಸದ ಮಂಚಣ್ಣಗಳ ವಚನ.

ಉಂಬರೆ ಬಂದು ಬಾಯ ಮರೆದೆನೆಂದು ಮೊರೆ ಇಡುತಿಪ್ಪ ಅರಿಕೆಹೀನನ ತೆರನಂತಾಯಿತ್ತು. ಅರಿಕೆಯನರಿ ಎಂದು ಕುರುಹ ಕೊಟ್ಟರೆ ಆ ಕುರುಹ ಮರೆದು ಅರಿದೆನೆಂಬ ಕುರುಬನ ನೋಡಾ ಜಂಬೇಶ್ವರಾ. ॥೨೪॥

ಇದಕ್ಕೆ ಢಕ್ಕೆಯ ಬೊಮ್ಮಣ್ಣಗಳ ವಚನ.

ಮಾತ ಲೇಖದ ಮೇಲೆ ಕುರುಹಿಟ್ಟಲ್ಲದೆ, ನೀತಿ ಲಕ್ಷಣವ ಕಾಣಬಾರದು. ಚಿತ್ರಜಾಂತಕನ ಪೂಜಿಸುವ ವಸ್ತುವಿನಲ್ಲಿ ಲಕ್ಷಿಸಿದಲ್ಲದೆ, ಮೇಲಣ ಲಕ್ಷವ ಕಾಣಬಾರದು. ಕಾಂಬನ್ನಕ್ಕರ ಉಭಯದ ಆಚರಣೆ ತಾವುಳ್ಳನ್ನಕ್ಕರ ಕಾಲಾಂತಕ ಭೀಮೇಶ್ವರ ಲಿಂಗವ ಪೂಜಿಸಬೇಕು. ॥೨೫॥

ಇದಕ್ಕೆ ಅಮುಗಿದೇವಯ್ಯಗಳ ವಚನ.

ಜ್ಞಾನದಲ್ಲಿ ಅರಿದರೇನಯ್ಯ, ಸತ್ಕ್ರಿಯಾಚಾರಿಯಾಗದನ್ನಕ್ಕರ ? ನೆನೆದ ಮಾತ್ರದಲ್ಲಿ ಕಾಂಬುದೆ ಕಾಯದಲಲ್ಲದೆ ? ಕುರುಡ ಕಾಣ ಪಥವ. ಹೆಳವ ನಡಿಯಲರಿಯ. ಒಂದಿಲ್ಲದಿದ್ದರೆ ಒಂದಾಗದು. ಜ್ಞಾನವಿಲ್ಲದ ಕ್ರಿ ಜಡನು. ಕ್ರಿ ಇಲ್ಲದ ಜ್ಞಾನ ಭ್ರಾಂತು. ಇದು ಕಾರಣ ಸಿದ್ಧಸೋಮನಾಥನಲ್ಲಿ ಎರಡೂ ಬೇಕು. ॥೨೬॥

ಇದಕ್ಕೆ ಶಿವನಾಗಮಯ್ಯಗಳ ವಚನ.

ಅಂಗದಮೇಲೆ ಲಿಂಗವಿದ್ದಬಳಿಕ ಲಿಂಗ ಮುಂತಾಗಿ ಎಲ್ಲ ಕ್ರಿಗಳನು ಗಮಿಸಬೇಕಲ್ಲದೆ ಅಂಗ ಮುಂತಾಗಿ ಗಮಿಸಬಾರದು. ಲಿಂಗಸಂಬಂಧಿಯಾಗಿ,

ಅಂಗ ಮುಂತಾಗಿ ಇಪ್ಪವರು ಲಿಂಗಕ್ಕೆ ದೂರವಯ್ಯ ನಾಗಯ್ಯ ಪ್ರಿಯ ಚನ್ನರಾಮೇಶ್ವರಾ. ॥೨೭॥

ಇದಕ್ಕೆ ತೆಲುಗು ಜೊಮ್ಮಯ್ಯಗಳ ವಚನ.

ಗುರುಕಾರುಣ್ಯವ ಪಡೆದುದಕ್ಕೆ ಚಿನ್ಹವಾವುದೆಂದರೆ, ಅಂಗದ ಮೇಲೆ ಲಿಂಗ ಸ್ವಾಯತವಾಗಿರಬೇಕು. ಅಂಗದ ಮೇಲೆ ಲಿಂಗ ಸ್ವಾಯತವಿಲ್ಲದೆ, ಬರಿದೆ ಗುರುಕಾರುಣ್ಯವಾಯಿತ್ತೆಂದಡೆ ಅದೆಂತೊ ? ಲಿಂಗಹೀನವಾಗಿ ಗುರು ಕಾರುಣ್ಯ ಉಂಟೆ ? ಇಲ್ಲ. ಆ ಮಾತ ಕೇಳಲಾಗದು. ಇದು ಕಾರಣ ಲಿಂಗವುಳ್ಳರೆ ಸದಾಚಾರ. ಇಲ್ಲದಿರೆ ಅನಾಚಾರವೆಂಬೆನಯ್ಯ ತೆಲುಗೇಶ್ವರಾ ॥೨೮॥

ಹೀಗೆಂದು ಸಮಸ್ತ ಶರಣರೆಲ್ಲರು ವಿಡಂಬಿಸಿ ನುಡಿಯಲು, ಮರಳಿ ಚನ್ನಬಸವರಾಜದೇವರು ಅಂಗದ ಮೇಲೆ ಲಿಂಗವಿಲ್ಲದ ಸಿದ್ಧರಾಮಯ್ಯ ನೊಡನೆ ಬರಬಹುದೆ ಎಂದು ಪ್ರಭುದೇವರ ಕನಲಿ ನುಡಿದ ಪ್ರಸ್ತಾವದ ವಚನ.

ನೊಸಲಲ್ಲೊಂದು ಕಣ್ಣುಳ್ಳವರಾದರು, ಅವನಂಗದ ಮೇಲೆ ಲಿಂಗ ಸ್ವಾಯತವಿಲ್ಲದಿದ್ದರೆ ಅವನ ಮನೆಯಲ್ಲಿ ಮಾಡಿದ ಪಾಕ ಶ್ವಾನನ ಮಾಂಸ ತಪ್ಪದಾಗಿ ಬಲ್ಲವರೊಲ್ಲರು. ಶಿವಭಕ್ತರಲ್ಲದವರ ಮನೆಯಲ್ಲಿ ಉಂಡರೆ ಜನ್ಮ ಜನ್ಮಾಂತರದಲ್ಲಿ ಶ್ವಾನನ ಯೋನಿಯಲ್ಲಿ ಬಪ್ಪುದು ತಪ್ಪದು. ಎಲೆ ಶಿವನೇ ನೀವಿಲ್ಲದವರ ಮನೆಯಲ್ಲಿ ತಿಂಬವರ ಕಂಡರೆ, ಎನ್ನ ಮನ ಸೊಗಸದಯ್ಯ ಕೂಡಲಚನ್ನಸಂಗಮದೇವಾ. ॥೨೯॥

ಮತ್ತಂ, ಲಿಂಗವಿಲ್ಲದೆ ನಡೆವವನ, ಲಿಂಗವಿಲ್ಲದೆ ನುಡಿವವನ, ಲಿಂಗ ವಿಲ್ಲದೆ ಉಗುಳ ನುಂಗಿದರೆ, ಅಂದಂದಿಗೆ ಕಿಲ್ಬಿಷವಯ್ಯ. ಏನೆಂಬೆನೇನೆಂಬೆ? ಲಿಂಗವಿಲ್ಲವೆ ನಡೆವವನ, ಲಿಂಗವಿಲ್ಲದೆ ನುಡಿವವನ, ಅಂಗ ಲೌಕಿಕ ಮುಟ್ಟ ಲಾಗದು. ಲಿಂಗವಿಲ್ಲದೆ ನುಡಿವ ಶಬ್ದಸೂತಕವ ಕೇಳಲಾಗದು. ಲಿಂಗ ವಿಲ್ಲದೆ ಗಮಿಸಿದರೆ ಆ ನಡೆನುಡಿಗೊಮ್ಮೆ ವ್ರತಗೇಡಿ ಕೂಡಲಚನ್ನ ಸಂಗಮದೇವ. ॥೩೦॥

ಇದಕ್ಕೆ ಬಸವರಾಜದೇವರ ವಿಡಂಬನ.

ಗುರು ತೋರಿದ ಲಿಂಗವು ಮನ ಸಾಹಿತ್ಯವಾಗಿರುತ್ತಿರಲು, ಪವನ ಭೇದದಿಂದೆ ಅರಿದಿಹೆನೆಂದರೆ ಅದೇ ದ್ರೋಹ. ಈಡಾ ಪಿಂಗಳ ಸುಷುಮ್ನ

ನಾಳದಿಂದೆ ಅರಿದಿಹೆನೆಂದರೆ ಕೂಡಲಸಂಗಮದೇವರು ಮೂಗ ಕೊಯ್ಯದೆ ಬಿಡುವನೆ? ॥೩೧॥

ಇದಕ್ಕೆ ಚನ್ನಬಸವರಾಜದೇವರ ವಚನ.

ಕಾಯಾನುಭಾವಿಗಳು ಕಾಯದಲ್ಲಿ ಮುಕ್ತರು. ಜೀವಾನುಭಾವಿಗಳು ಜೀವದಲ್ಲಿ ಮುಕ್ತರು. ಪ್ರಾಣಾನುಭಾವಿಗಳು ಪ್ರಾಣದಲ್ಲಿ ಮುಕ್ತರು. ಪವನಾನುಭಾವಿಗಳು ಪವನದಲ್ಲಿ ಮುಕ್ತರು. ಲಿಂಗಾನುಭಾವಿಗಳಿಗೆಂತು ಸರಿ ಎಂಬೆ? ನಿರವಯ ಸ್ವಯಂಜ್ಯೋತಿ ಪ್ರಕಾಶವಾಗಿಪ್ಪರು ಲಿಂಗದಲ್ಲಿ ಕೂಡಲ ಚನ್ನಸಂಗಮದೇವ ನಿಮ್ಮ ಶರಣರು. ॥೩೨॥

ಇಂತು ವೇದಾಂತ, ಸಿದ್ಧಾಂತ, ದ್ವೈತ ಕ್ರಿಯಾ ಶೈವಜ್ಞಾನದಿಂದರಿದು ನೋಡಿ ಲಕ್ಷವಿಟ್ಟು ಕೂಡಿಹೆನೆಂಬ ಆತ್ಮಜ್ಞಾನದಿಂದ ಶಿವತತ್ವವ ಕಾಂಬುದು ಹುಸಿ, ಎಂದು ಬಸವರಾಜದೇವರು ಚನ್ನಬಸವರಾಜದೇವರು ಮೋಳಿಗೆಯ ಮಾರಿತಂದೆಗಳು ಮೊದಲಾದ ಏಳುನೂರೆಪ್ಪತ್ತು ಅಮರಗಣಂಗಳು ಸಿದ್ಧರಾಮಯ್ಯನ ಅಷ್ಟಾಂಗಯೋಗಂಗಳ ಜರಿದು ಖಂಡಿಸಿ ನಿರಸನಮಂ ಮಾಡಿ ಪ್ರಭುದೇವರೊಡನೆ ಬಿನ್ನೈಸುತ್ತಿರಲು, ಆ ಪ್ರಭುದೇವರು ಚನ್ನಬಸವಣ್ಣ ಮುಖ್ಯವಾದ ಅಸಂಖ್ಯಾತ ಗಣಂಗಳು ಅಂಗದ ಮೇಲೆ ಲಿಂಗವಿಲ್ಲದೆ ಒಪ್ಪರೆಂದು ಸಿದ್ಧರಾಮಯ್ಯದೇವರಿಗೆ ನಿರೂಪಿಸಿದ ಪ್ರಸ್ತಾವದ ವಚನ.

ಬೆಳಗಿನೊಳಗೊಂದು ಬೆಳಗು ದೊರೆಕೊಂಡರೆ ಮತ್ತೊಂದು ಬೆಳಗು ಮತ್ತೆಲ್ಲಿಯದೊ? ಘನದೊಳಗೊಂದು ಘನವು ದೊರೆಕೊಂಡರೆ ಮತ್ತೊಂದು ಘನವು ಮತ್ತೆಲ್ಲಿಯದೊ? ಸಮೀಪದ ಮೇಲೆ ಸಮೀಪ ದಾಳಿವರಿದನು ಗುಹೇಶ್ವರನ ಶರಣ ಚನ್ನಬಸವಣ್ಣನು. ॥೩೩॥

ಮತ್ತಂ, ಎಳ್ಳಿಂಗೆ ಪರಿಮಳವ ಕಟ್ಟಿದಲ್ಲದೆ ಎಣ್ಣಿಂಗೆ ಪರಿಮಳ ವೇಧಿಸದು. ದೇಹದಲ್ಲಿ ಇಷ್ಟಲಿಂಗವ ಸ್ಥಾಪಿಸಿದಲ್ಲದೆ ಪ್ರಾಣಲಿಂಗ ಸಂಬಂಧವಾಗದು. ಇದುಕಾರಣ ಗುಹೇಶ್ವರಲಿಂಗದಲ್ಲಿ ಇಷ್ಟಲಿಂಗ ಸಂಬಂಧಿಯಾದಲ್ಲದೆ ಪ್ರಾಣಲಿಂಗ ಸಂಬಂಧಿಯಾಗಬಾರದು ಕಾಣಾ ಸಿದ್ಧರಾಮಯ್ಯ. ॥೩೪॥

ಹೀಗೆಂದು ಪ್ರಭುದೇವರು ನಿರೂಪಿಸಲು, ಇದಕ್ಕೆ ಸಿದ್ಧರಾಮಯ್ಯದೇವರು ಜಜ್ಜನೆ ಜಿರಿದು, ಬಿಬ್ಬನೆ ಬಿರಿದು, ಪ್ರಾಣ ಹಮ್ಮನೆ ಹಾರಿ, ಭಯ

ವಟ್ಟು ನಡನಡುಗಿ ಪ್ರಭುದೇವರ ಪಾದಾಕ್ರಾಂತನಾಗಿ ನಿಮ್ಮ ಶರಣರ ಕರುಣವ ಕೃಪೆ ಮಾಡಾ ಪ್ರಭುವೇ ಎಂದು ಉಪಾವಸ್ಥೆಯಂ ಮಾಡುವ ಪ್ರಸ್ತಾವದ ವಚನ.

ಪುಣ್ಯ ಪಾಪಂಗಳನರಿಯದ ಮುನ್ನ ಅನೇಕ ಭವಂಗಳಲ್ಲಿ ಬಂದು ನಿಮ್ಮ ನಿಲವನರಿಯದೆ ಕೆಟ್ಟೆನಯ್ಯ ! ಇನ್ನು ನಿಮ್ಮ ಶರಣುವೊಕ್ಕೆನಾಗಿ ನಾ ನಿಮ್ಮನೆಂದು ಅಗಲದಂತೆ ಮಾಡಯ್ಯ ನಿಮ್ಮ ಧರ್ಮ, ನಿಮ್ಮ ಧರ್ಮ. ನಿಮ್ಮಲ್ಲಿ ಒಂದ ಬೇಡುವೆ ಎನ್ನ ಕರ್ಮಬಂಧನವ ಬಿಡುವಂತೆ ಮಾಡಾ ಕಪಿಲಸಿದ್ಧ ಮಲ್ಲಿಕಾರ್ಜುನ. ॥೩೫॥

ಮತ್ತಂ. ಎಂದಿಪ್ಪೆನಯ್ಯ ನಿಮ್ಮ ಗಣಂಗಳ ಸಮೂಹದಲ್ಲಿ ? ಎಂದಿಪ್ಪೆನಯ್ಯ ನಿಮ್ಮವರ ನಡುವೆ ? ಎಂದಿಪ್ಪೆನಯ್ಯ ಕೀಳ ಕಾಯ್ದು ? ಎಂದಿಪ್ಪೆನಯ್ಯ ಕಿಂಕರನಾಗಿ ? ಎಂದಿಪ್ಪೆನಯ್ಯ ನಿಮ್ಮ ನಾಮ ಡಿಂಗರಿಗನಾಗಿ ? ಎಂದಿಪ್ಪೆನಯ್ಯ ಶಿವನೆ ಕಪಿಲಸಿದ್ಧಮಲ್ಲಿಕಾರ್ಜುನ ? ॥೩೬॥

ಎಂದಿಪ್ಪೆನಯ್ಯ ಶುದ್ಧ, ಸಿದ್ಧ, ಪ್ರಸಿದ್ಧ, ಪ್ರವೇಶಿಯಾಗಿ? ಎಂದಿಪ್ಪೆನಯ್ಯ ದೀಕ್ಷಾತ್ರಯದಲ್ಲಿ ಸಂಪನ್ನನಾಗಿ ? ಎಂದಿಪ್ಪೆನಯ್ಯ ಲಿಂಗತ್ರಯದಲ್ಲಿ ಪ್ರಸಾದ ಸಂಪನ್ನನಾಗಿ ? ಎಂದಿಪ್ಪೆನಯ್ಯ ಕಪಿಲಸಿದ್ಧಮಲ್ಲಿಕಾರ್ಜುನಯ್ಯ ನಿಮ್ಮವರ ನಡುವೆ ಓರಂತೆ ? ॥೩೭॥

ಮತ್ತಂ. ಒಡೆಯರುಳ್ಳ ತೊತ್ತಾನು, ತಾಯುಳ್ಳ ಶಿಸುವಾನು. ಸ್ವತಂತ್ರವೇಕಯ್ಯ ನಿಮ್ಮವರೊಡನೆ ಎನಗೆ ? ನಿನ್ನವರು ಎನ್ನನೊಲ್ಲದಿಪ್ಪರು. ದುಃಖವನು ಮರೆವೆನೆ ನಾನು ? ನಿನ್ನವರಾಜ್ಞೆಯ ಮೀರಿದೆನಾಯಿತ್ತಾದಡೆ, ನಿನ್ನಾಣೆ ಕಪಿಲಸಿದ್ಧಮಲ್ಲಿಕಾರ್ಜುನಯ್ಯ ॥೩೮॥

ಆವಾಗಳು ನಿನ್ನವರುಗಳ ನೀನೆಂಬ ಮನದ ವ್ರತದ ಉನ್ನತಿಯ ಕೊಡು ಕಂಡ್ಯಾ ಎಲೆ ಅಯ್ಯ. ನಿಮ್ಮ ಧರ್ಮವಯ್ಯ. ನಿನ್ನ ಲಾಂಛನವ ಕಂಡು ತಾತ್ಪರ್ಯವೆಂದು ನಂಬುವ ಮನಸ್ಸಿಂಗೆ ಮಂಗಳವನೀಯಯ್ಯ ! ನಿನ್ನವರು ಸಹ ಲೋಕದಲ್ಲಿ ಅವರ ಕೀಳ ಕಾಯ್ದಿರ್ಪ ಸುಕೃತವನು ತಪ್ಪದೆ ಕುಡು ಕಪಿಲಸಿದ್ಧಮಲ್ಲಿಕಾರ್ಜುನಯ್ಯ ನಿಮ್ಮ ಧರ್ಮ. ॥೩೯॥

ಮತ್ತಂ, ಸಿದ್ಧರಾಮಯ್ಯದೇವರು ತಾ ಮಾಡುವ ಶೈವಯೋಗಾಭ್ಯಾಸ ಭಿನ್ನ ಕ್ರಿಗಳನು ತಾವೆ ಜರಿದುಕೊಂಡು ನುಡಿದು ಶರಣರ ಕರುಣವ ಸಾಧ್ಯವ ಮಾಡಿಕೊಡು ಎಂದು ಪ್ರಭುದೇವರಿಗೆ ಬಿನ್ನೈಸುವ ಪ್ರಸ್ತಾವದ ವಚನ.

ಹೀಗೆ ಬಯಸಿದೆ ಕಾಳುತನದಲ್ಲಿ. ಎನ್ನ ಮಂದಮತಿಯ ನೋಡದಿರಯ್ಯಾ! ಕೆರೆ ಬಾವಿ ಹೂದೋಟ ಚೌಕ ಛತ್ರಂಗಳ ಮಾಡಿ, ಜೀವಂಗಳ ಮೇಲೆ ಕೃಪೆಯುಂಟೆಂದು ಎನ್ನ ದಾನಿ ಎಂಬರು. ಆನು ದಾನಿಯಲ್ಲವಯ್ಯಾ. ನೀ ಹೇಳಿದಂತೆ ನಾ ಮಾಡಿದೆನು. ನೀ ಬರಹೇಳಿದಲ್ಲಿ ನಾ ಬಂದೆನು. ನೀನು ಇರಿಸಿದಂತೆ ಇದ್ದೆನು. ನಿನ್ನ ಇಚ್ಛಾ ಮಾತ್ರ ವಿನಾ ಇಂದೆ ನಾ ಯಿತ್ತಾಡಡೆ ಫಲಪದ ಜನನವ. ಬಯಸಿದೆನಾದಡೆ ನಿಮ್ಮಾಣೆ. ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ, ಭವಕ್ಕೆ ಬರಿಸದಿರಯ್ಯಾ, ನಿಮ್ಮ ಧರ್ಮ, ನಿಮ್ಮ ಧರ್ಮ. ||೪೦

ಮತ್ತಂ ಮಾಡಿಸಯ್ಯಾ ಎನಗೆ ನಿನ್ನವರ ಸಂಗವ. ಮಾಡಿಸಯ್ಯಾ ಎನಗೆ ನಿಮ್ಮವರಾನಂದವ. ಆಗಿಸಯ್ಯಾ ನಿನ್ನವರಾದಂತೆ. ನೋಡಿಸಯ್ಯಾ ನಿನ್ನವರ ಕೂಡ ಸಂಗವನು ಮಾಡಿಸಯ್ಯಾ. ಎನಗೆ ಬಚ್ಚ ಬರಿಯ ಭಕ್ತಿಯ. ಕೊಡಿಸಯ್ಯಾ ಎನಗೆ ಪಾದೋದಕ ಪ್ರಸಾದವನೊಚ್ಚತವ ಸೈರಿಸಯ್ಯಾ. ನಿಮ್ಮವರ ಕೂಡೆ ಸಿಕ್ಕಿರಿಸಯ್ಯಾ! ನಿನ್ನವರ ಪಾದದ ಕೆಳಗೆ ನಿತ್ಯನಾಗಿ ಬರಿಸಯ್ಯಾ. ಎನ್ನ ಭವಭವದಲ್ಲಿ ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ, ನೀನು ಇಂತು ಕೆಡಿಸಯ್ಯಾ ಎನ್ನ ಭವಭವದ ಹುಟ್ಟ. ||೪೧||

ನುಡಿಯಬಹುದು ಅದ್ವೈತವನೊಂದುಕೋಟಿ ವೇಳೆ. ಒಮ್ಮೆ ನಡೆಯಬಹುದೆ ನಿರ್ಧರವಾಗಿ, ಸದ್ಭಕ್ತಿ ಆಚಾರವಾಗಿ? ನುಡಿದಂತೆ ನಡೆವ ನಡೆದಂತೆ ನುಡಿವ ಸದ್ಭಕ್ತಿಸದಾಚಾರಯುಕ್ತ ಮಹಾತ್ಮರ ಪಾದವ ಹಿಡಿದು ಬದುಕಿಸಯ್ಯಾ ಪ್ರಭುವೆ ಕಪಿಲಸಿದ್ಧಮಲ್ಲಿಕಾರ್ಜುನ ||೪೨||

ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು ಅದಕ್ಕೆ ಪ್ರಭುದೇವರು ನಿನಗೆ ಅಂತರ್ಲಕ್ಷದನುಸಂಧಾನ ಧ್ಯಾನಯೋಗದಿಂದ ವಸ್ತುವ ಕಂಡಿಹೆನೆಂದರೆ ಸಾಧ್ಯವಾಗದು. ಎನ್ನ ಶ್ರೀ ಗುರುವಪ್ಪ ಅನುಮಿಷದೇವರಂತೆ, ಕರಸ್ಥಲದ ಲಿಂಗದಲ್ಲಿ ಬಹಿರ್ಲಕ್ಷದನುಸಂಧಾನದಿಂದೆ ವಸ್ತುನಿಶ್ಚಯವ ಕಂಡು ಬದುಕೆಂದು ನಿರೂಪಿಸಿದ ಪ್ರಸ್ತಾವದ ವಚನ.

ಶ್ರುತಿಯ ನಂಬದಿರೊ. ಶ್ರುತಿಯ ನಂಬದಿರೊ. ಶ್ರುತಿತತಿಗಳು ಮುನ್ನ ಶಿವನಡಿಯ ಕಾಣದೆ "ಶ್ರುತಿಚಕಿತಮಭಿಧತ್ತೆ" ಎನ್ನುತ್ತ ಮುನ್ನವೆ ಅರಸಿ ತೊಳಲಿ ಬಳಲುತೈದಾವೆ. ಶ್ರುತಿ ಹೇಳಿದಂತೆ ಅರಿದರಿದು ಬಳಲದಿರೊ. ಶೂನ್ಯಕ್ಕೆ ತಲೆವಾರನಿಕ್ಕದಿರೊ. ವಸ್ತು ಹೃದಯದಲ್ಲುಂಟೆಂದು ನೀ ನೆನೆಯ

ದಿರೊ. ವಸ್ತು ಭ್ರೂಮಧ್ಯದಲ್ಲುಂಟೆಂದು, ಭ್ರಮಿಸದಿರೊ. ವಸ್ತು ಬ್ರಹ್ಮರಂಧ್ರದಲ್ಲಿ ಉಂಟೆಂದು ಹೊಲಬುಗೆಡದಿರೊ. ವಸ್ತು ನಿಶ್ಚಯವ ಕಾಂಬಡೆ ಎನ್ನ ಸದ್ಗುರು ಅನುಮಿಷದೇವರಂತೆ ನಿನ್ನ ಕರಸ್ಥಲದಲ್ಲಿ ನಿಶ್ಚೈಸಿಕೊಂಡು ನಮ್ಮ ಗುಹೇಶ್ವರ ಲಿಂಗದಲ್ಲಿ ನಿಬ್ಬೆರಗಾಗೊ ಮರುಳೆ. ॥೪೩॥

ಮತ್ತಂ, ಪ್ರಭುದೇವರು ಅನುಮಿಷ ದೇವರೆಂಬ ಗುರುವಿನ ಕೃಪೆಯಿಂದ ಇಷ್ಟಲಿಂಗ ಸಂಬಂಧವ ಪಡೆದೆನಾಗಿ ಪ್ರಾಣಲಿಂಗ ಸಂಬಂಧವಾಯಿತ್ತು. ನಿನಗೆ ಇಷ್ಟಲಿಂಗ ಸಂಬಂಧವಿಲ್ಲದಿದ್ದರೆ, ಆಗದೆಂದು ನಿರೂಪಿಸಿದ ವಚನ.

ಅಂಗಲಿಂಗ, ಪ್ರಾಣಲಿಂಗ. ಮನಲಿಂಗವಾಯಿತ್ತು ನೋಡಾ ! ಅಂಗ ಲಿಂಗ ನಡೆನುಡಿ ಗತಿಯನರಿಯದು. ಪ್ರಾಣ ಲಿಂಗವಾಗಿ ನವನಾಳ ಸುಳುಹೆನರಿಯದು. ಮನ ಲಿಂಗವಾಗಿ ನೆನಹುಗೆಟ್ಟಿತ್ತು. ಅನುಭಾವ ಲಿಂಗವಾಗಿ ವಿಚಾರವರತಿತ್ತು. ಭಾವ ಲಿಂಗವಾಗಿ ಭಾವನೆಯಳಿದಿತ್ತು. ಸರ್ವ ಕ್ರಿಗಳೆಲ್ಲವು ಲಿಂಗವಾಗಿ, ಮಾರ್ಗಕ್ರಿ ಹೊಲಬನರಿಯದು. ಅರಿವು ಲಿಂಗವಾಗಿ ಮರಹುಗೆಟ್ಟಿತ್ತು. ಅಂತರಂಗ ಲಿಂಗವಾಗಿ ಬಹಿರಂಗವೆಂದರಿಯದು. ಬಹಿರಂಗ ಲಿಂಗವಾಗಿ, ಅಂತರಂಗದ ಸುದ್ದಿಯನರಿಯದು. ಸರ್ವಾಂಗ ಲಿಂಗವಾಗಿ ಸರ್ವೇಂದ್ರಿಯ ಗಮನಗೆಟ್ಟಿತ್ತು. ಮಹಾಘನವೆಂಬುಗೊಂಡಿತ್ತಾಗಿ, ನಿಷ್ಪತ್ತಿ ಕರಿಗೊಂಡಿತ್ತು. ಗುಹೇಶ್ವರಲಿಂಗದಲ್ಲಿ ಪ್ರಾಣಲಿಂಗ ಸಂಬಂಧ ಸ್ವಯವಾಯಿತ್ತು ನೋಡಾ ಸಿದ್ಧರಾಮಯ್ಯ ॥೪೪॥

ಹೀಗೆಂದು ಪ್ರಭುದೇವರು ಸಿದ್ಧರಾಮಯ್ಯ ದೇವರಿಗೆ ನಿರೂಪಿಸಲು ಆ ಸಮಯದೊಳು ಅಮುಗಿದೇವಯ್ಯಗಳು ಬಿನ್ನೈಸುವ ಪ್ರಸ್ತಾವದ ವಚನ.

ಕ್ಷುತ್ತು ಪಿಪಾಸೆಯರತಡೇನು, ಭಕ್ತನಪ್ಪನೆ ? ಸ್ವೇಚ್ಛಾಗಮನಿಯಾದಡೇನು, ಭಕ್ತನಪ್ಪನೆ ? ತನು ಬಯಲಾದಡೇನು, ಭಕ್ತನಪ್ಪನೆ ? ಅಷ್ಟ ಮಹಾಸಿದ್ಧಿಯುಳ್ಳಡೇನು, ಭಕ್ತನಪ್ಪನೆ ? ಚತುರ್ವಿಧ ಪದವ ಪಡೆದು ಕೈಲಾಸದಲ್ಲಿದ್ದಡೇನು, ಭಕ್ತನಪ್ಪನೆ ? ಮಹತ್ವವ ಹಲವ ತೋರಿ ಮೆರೆದಡೇನು, ಭಕ್ತನಪ್ಪನೆ ? ಮಹತ್ವವ ಹಲವ ತೋರಿ ಮೆರೆದಡೇನು, ಭಕ್ತನಪ್ಪನೆ ? ಅಲ್ಲಲ್ಲ. ಭಕ್ತಿಯ ಪರಿ ಎಂತೆಂದಡೆ, ಅಂಗತ್ರಯದಲ್ಲಿ ಲಿಂಗತ್ರಯ ಸಂಬಂಧವಾಗಿ ಗುರುಲಿಂಗಜಂಗಮವನಾರಾಧಿಸಿ ಲಿಂಗತ್ರಯದಲ್ಲಿ ಸಮವೇಧಿಸಿ, ಆ ತ್ರಿವಿಧ ಲಿಂಗಜಂಗಮವನಾರಾಧಿಸಿ ಪ್ರಸಾದ ಗ್ರಾಹಿಯಾದಲ್ಲದೆ ಭಕ್ತನಲ್ಲವೆಂದು ಸಿದ್ಧಸೋಮನಾಥನ ಶರಣರು ನುಡಿವರಯ್ಯ ಪ್ರಭುವೇ ॥೪೫॥

ಮಾತ್ರಂ, ಗುರುಕಾರುಣ್ಯವ ಪಡೆದು ಲಿಂಗದೊಳವಗ್ರಾಹಕನಾಗದೆ, ಅಂಗಲಿಂಗ, ಪ್ರಾಣಲಿಂಗ, ಆತ್ಮಲಿಂಗ ಸಂಬಂಧದ ವಿಚಾರವಿಲ್ಲದೆ ಬರಿಯ ಜ್ಞಾನಯೋಗವೆಂಬ ಶೂನ್ಯದನುಭಾವಿಗೆ ಗುರುಭಕ್ತಿ ಇಲ್ಲ. ಗುರುಭಕ್ತಿ ಇಲ್ಲವಾಗಿ ಲಿಂಗಭಕ್ತಿ ಇಲ್ಲ. ಲಿಂಗಭಕ್ತಿ ಇಲ್ಲವಾಗಿ ಜಂಗಮಭಕ್ತಿ ಇಲ್ಲ. ಜಂಗಮ ಭಕ್ತಿ ಇಲ್ಲವಾಗಿ ಪ್ರಸಾದವಿಲ್ಲ. ಪ್ರಸಾದವಿಲ್ಲವಾಗಿ ಮೋಕ್ಷವಿಲ್ಲ. ಇದುಕಾರಣ ಸದ್ಗುರು ಸಿದ್ಧಸೋಮನಾಥನಲ್ಲಿ ಗುರುಕರಜಾತನಾದ ಲಿಂಗಾಂಗಸಂಬಂಧಿ ಗಳಪೂರ್ವವಯ್ಯ ಪ್ರಭುವೇ ॥೪೬॥

ಹೀಗೆಂದು ಅಮುಗಿದೇವಯ್ಯಗಳು ಪ್ರಭುದೇವರೊಡನೆ ಬಿನ್ನೈಸಲು ಸಿದ್ಧರಾಮಯ್ಯದೇವರು ಬಸವಣ್ಣ ಮುಖ್ಯವಾದ ಅಸಂಖ್ಯಾತ ಮಹಾ ಗಣಂಗಳಿಂದ ಚನ್ನಬಸವೇಶ್ವರನ ಕೈಯ್ಯಿಂದ ಅನುಗ್ರಹವ ಕರುಣಿಸಿಕೊಡು ಎಂದು ಪ್ರಭುದೇವರಿಗೆ ಭಕ್ತಿಜ್ಞಾನಾತುರದಿಂದೆ ಬಿನ್ನೈಸುವ ಪ್ರಸ್ತಾವದ ವಚನ.

ಇನ ಮಂಡಲದೊಳಗೆ ಕಿರಣವಡಗಿಪ್ಪಂತೆ ಫಲವಹ ಬೀಜದಲ್ಲಿ ವೃಕ್ಷವಡಗಿಪ್ಪಂತೆ ಇಂದುಕಾಂತ ರವಿಕಾಂತ್ರದಲ್ಲಿ ಜಲಬಿಂದು ಅಗ್ನಿ ಇಪ್ಪಂತೆ ಸಂದ ಕ್ಷೀರದಲ್ಲಿ ಹೊಂದಿಹ ದಧಿ ತಕ್ರ ನವನೀತ ಘೃತವಿಪ್ಪಂತೆ ಅಂಗದ ಮೇಲೆ ಲಿಂಗ ಸಾಹಿತ್ಯವಾಗಿ ತನ್ನೊಳಗೆ ಆ ಲಿಂಗವ ಕಂಡು ಲಿಂಗದೊ ಳಗೆ ತನ್ನ ಕಂಡು ತನ್ನೊಳಗೆ ಸಮಸ್ತ ವಿಸ್ತಾರವೆಲ್ಲವ ಕಂಡು ಜಂಗಮ ಮುಖ ಲಿಂಗವೆಂಬ ಭೇದವನು ಲಿಂಗಕ್ಕೆ ಜಂಗಮವೆ ಪ್ರಾಣವಾಗಿಪ್ಪ ಭೇದವನು ಅಂಗದೊಳಗೆ ಲಿಂಗವೆ ಆಚಾರವಾಗಿ ಅಳವಟ್ಟ ವಿವರವನು ಲಿಂಗಾಂಗ ಸಂಬಂಧ ಸ್ಥಳಕುಳಂಗಳವಿರಳವಾಗಿ ಇದ್ದಿತೆಂಬುದನು ಕಂಗಳ ನೋಟಕ್ಕೆ ಗುರಿಯಾದ ಲಿಂಗವೆ ಅಂಗವನೊಳಕೊಂಬ ಭೇದವನು ಸಂಗನ ಬಸವಣ್ಣ ಚನ್ನಬಸವಣ್ಣನಿಂದ ಕೃಪೆಮಾಡಿಸಿ ಎನ್ನನುಳುಹಾ ಪ್ರಭುವೆ ಕಪಿಲ ಸಿದ್ಧಮಲ್ಲಿಕಾರ್ಜುನದೇವಯ್ಯ ॥೪೭॥

ಹೀಗೆಂದು ಸಿದ್ಧರಾಮಯ್ಯದೇವರು ಪ್ರಭುದೇವರೊಡನೆ ಬಸವಣ್ಣ ಚನ್ನಬಸವಣ್ಣನವರಿಂದ ಲಿಂಗಧಾರಣವ ಮಾಡಿಸೆಂದು ಬಿನ್ನೈಸಲು ಪ್ರಭು ದೇವರು ಚನ್ನಬಸವರಾಜದೇವರೊಡನೆ ಸಿದ್ಧರಾಮಯ್ಯದೇವರಿಗೆ ಲಿಂಗವ ಧರಿಸಬೇಕೆಂದು ನಿರೂಪಿಸಿದ ಪ್ರಸ್ತಾವದ ವಚನ.

ರತ್ನದೀಪ್ತಿಯಾದಡೇನು ? ಬಂಧಿಸಿದ ಕುಂದಣದಲ್ಲಿ ಸಂದಿರಬೇಕು. ಸ್ವಾದುರಸರುಚಿಯುಳ್ಳ ಫಲವೆಂದಡೇನು ವೃಕ್ಷವಿಲ್ಲದನ್ನಕ್ಕ ? ಚಿತ್ರ

ಸೌಂದರ್ಯನೋಟಕ್ಕೆ ಸುಖವೆಂದಡೇನು ಭಿತ್ತಿಯ ಪಟಮುಖ್ಯಸ್ಥಾನವಿಲ್ಲದನ್ನಕ್ಕ? ಅಂಜನಸಿದ್ಧಿಯಿಂ ನಿಧಾನವ ಕಂಡಡೇನು, ಸಾಧನ ಕ್ರಿಯಿಂದ ಸಾಧ್ಯವ ಮಾಡಿಕೊಳ್ಳದನ್ನಕ್ಕ ? ಇದು ಕಾರಣ ಕಾಯದ ಕರಸ್ಥಲಕ್ಕೆ ಇಷ್ಟಲಿಂಗ ಸಾಧ್ಯವಿಲ್ಲದಿದ್ದರೆ ನಿರವಯವಾದ ಜ್ಞಾನಯೋಗದ ಕೂಟ ಸಾಧ್ಯವಾಗದು. ಇದು ಕಾರಣ ಕ್ರಿಯಾಲಿಂಗ ಸಂಬಂಧವೆ ಭಕ್ತಂಗೆ ಮತವು. ಇದೇ ಮಹಾ ಸೌಖ್ಯವು. ನಮ್ಮ ಗುಹೇಶ್ವರನ ಶರಣನ ಮನ ಒಪ್ಪುವಂತೆ ಸಿದ್ಧರಾಮಯ್ಯಂಗೆ ಲಿಂಗಸಾಹಿತ್ಯವ ಮಾಡಾ ಚನ್ನಬಸವಣ್ಣ ||೪೮||

ಇಂತು ಪ್ರಭುದೇವರು ಸಿದ್ಧರಾಮಯ್ಯದೇವರಿಗೆ ಉಪದೇಶವ ಮಾಡೆಂದು ಚನ್ನಬಸವರಾಜದೇವರಿಗೆ ನಿರೂಪಿಸಲು, ಆ ಚನ್ನಬಸವರಾಜದೇವರು ಸಿದ್ಧರಾಮಯ್ಯದೇವರಿಗೆ ದೀಕ್ಷೆಯಂ ಮಾಡಿದ ಪ್ರಸ್ತಾವದ ವಚನ.

ಆಣವಮಲ, ಮಾಯಾಮಲ, ಕಾರ್ಮಿಕಮಲವೆಂಬ ಮಲತ್ರಯಂಗಳ ಕಳೆದು, ಆಜ್ಞಾದೀಕ್ಷೆ, ಉಪಮಾದೀಕ್ಷೆ, ಸ್ವಸ್ತಿಕಾರೋಹಣ, ಕಳಶಾಭಿಷೇಕ, ವಿಭೂತಿಪಟ್ಟ, ಲಿಂಗಾಯತ, ಲಿಂಗಸ್ವಾಯತ, ಈ ಏಳನು ಕಾಯಕ್ಕೆ ಉಪದೇಶವ ಮಾಡುವುದು. ಸಮಯ, ನಿಸ್ಸಂಸಾರ, ನಿರ್ವಾಣ, ತತ್ವದೀಕ್ಷೆ, ಅಧ್ಯಾತ್ಮಿಕ, ಅನುಗ್ರಹ, ಸತ್ಯಶುದ್ಧ ಈ ಏಳನು ಪ್ರಾಣಕ್ಕೆ ಉಪದೇಶವ ಮಾಡುವುದು. ಏಕಾಗ್ರಚಿತ್ತ ದೃಢವ್ರತ, ಪಂಚೇಂದ್ರಿಯಾರ್ಪಿತ, ಅಹಿಂಸೆ, ಮನೋಲಯ, ಲಿಂಗನಿಜ, ಸದ್ಯೋನ್ಮುಕ್ತಿ, ಈ ಏಳನು ಮನಕ್ಕೆ ಉಪದೇಶವ ಮಾಡುವುದು. ಈ ಕ್ರಮವನರಿದು ಮಾಡುವುದು ಕೂಡಲಚನ್ನಸಂಗಯ್ಯನಲ್ಲಿ ಸಹಜದೀಕ್ಷೆಯಯ್ಯ. ||೪೯||

ಇಂತು ಚನ್ನಬಸವರಾಜದೇವರು ಕಾಯ ಪ್ರಾಣ ಮನವೆಂಬ ತ್ರಿವಿಧದಲ್ಲಿ ಇಪ್ಪತ್ತೊಂದು ದೀಕ್ಷೆಯಂ ಮಾಡಿ ತ್ರಿವಿಧ ಲಿಂಗಧಾರಣಮಂ ಸಂಬಂಧಿಸಲು, ಇದಕ್ಕೆ ಸಿದ್ಧರಾಮಯ್ಯದೇವರು ಪರಮಾನಂದ ಹರುಷವನೈದಿ ಬಿನ್ನೈಸಿದ ವಚನ.

ಅಧ್ಯಾತ್ಮ ಅಧ್ಯಾತ್ಮವೆಂದೆಂಬಿರಿ. ಅಧ್ಯಾತ್ಮವಾರಿಗೆ ? ಶ್ರೀ ಗುರುಸ್ವಾಮಿ ಬಹಳವಪ್ಪ ಶಿವಲಿಂಗವ ಸೂಕ್ಷ್ಮವ ಮಾಡಿ ಕರಸ್ಥಲಕ್ಕೆ ಕೊಟ್ಟ ಬಳಿಕ ಬೇರೆ ಯೋಗ ಉಂಟೆ? ತನ್ನ ಹಸ್ತವ ಮಸ್ತಕದಲ್ಲಿಟ್ಟು ವಾಯು ಪ್ರಾಣಿಯಾಗಿದ್ದುದ ಕೊಂದು ಲಿಂಗಪ್ರಾಣಿಯ ಮಾಡಿದ ಬಳಿಕ ಅಕ್ಷರ ಐದರಲ್ಲಿ ಮುಕ್ತನ ಮಾಡಿದ ಬಳಿಕ ಮರಳಿ ಯೋಗ ಉಂಟೇ, ಶಿವಯೋಗವಲ್ಲವೆ?

ಲಿಂಗಾರ್ಚನೆಯ ಮಾಡಿ, ಜಂಗಮ ಪ್ರಸಾದವ ಕೊಂಡ ಬಳಿಕ ಬರಿಯ ಯೋಗಕ್ಕೆ ಒಡಂಬಡುವುದೆ ಅರಿವು ? ಇಂತಪ್ಪವನತಿಗಳೆದು ಶುದ್ಧ ಶಿವ ಯೋಗಿಯ ಮಾಡಿದಾತ ಚನ್ನಬಸವಣ್ಣ. ಆನು ಚನ್ನಬಸವಣ್ಣನ ಕರುಣ ದಿಂದೆ ಅಭ್ಯಾಸಯೋಗವನತಿಗಳೆದು ಶಿವಯೋಗದಲ್ಲಿ ನಿತ್ಯನಾಗಿ ಭಕ್ತ, ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣೈಕ್ಯರೆಂಬ ಷಡುಸ್ಥಲಕ್ಕಧಿಕಾರಿ ಯಾದೆ. ನಿನ್ನವರ ಸಲುಗೆಗೆ ಸಂದೆ. ಚನ್ನಬಸವಣ್ಣನ ಕೃಪೆ ಎನ್ನನಿಂತು ಮಾಡಿತ್ತು ಕಾಣಾ ಗುರುವೆ ಕಪಿಲಸಿದ್ಧಮಲ್ಲಿಕಾರ್ಜುನ. ॥೫೦॥

ಮತ್ತಂ॥ ಹೆಸರಿಡಬಾರದ ಲಿಂಗವ ಹೆಸರಿಟ್ಟು ಎನ್ನ ಕರಸ್ಥಲಕ್ಕೆ ತಂದು ಕರತಳಾಮಳಕದಂತೆ ಮಾಡಿ, ಎನ್ನ ಕರಸ್ಥಲಕ್ಕೆ ಕ್ರಿಯಾಲಿಂಗವ ಕೊಟ್ಟು ಶ್ರೀಗುರು ಚನ್ನಬಸವಣ್ಣ ಹೆಸರಿಟ್ಟ ಲಿಂಗದ ಹೆಸರ ಹೇಳುವೆನು ಕೇಳಯ್ಯ. ಕಂಜ ಕರ್ಣಿಕೆಯ ಹಣೆಯಲ್ಲಿ ಯಾವತ್ತು ವಶವೆಂದು ಬರೆದೈ ದಕ್ಷರವೆ ಆತನ ಪ್ರಥಮನಾಮ. ಅವ್ವಯ ಕರದೊಳಿಪ್ಪ ಆರಕ್ಷರವೇ ಆತನ ದ್ವಿತೀಯ ನಾಮ. ಮಸ್ತಕದೊಳಿಪ್ಪ ಅಕ್ಷರವೆ ಆತನ ಆಚಾರ್ಯನಾಮ. ಇಂತೀ ನಾಮತ್ರಯಂಗಳನರಿದು, ಧ್ಯಾನಾರೂಢನಾಗಿ ಇರುವರು ಎಲ್ಲಿಗಾ ದರೂ ಒಬ್ಬರು. ಈ ಬಸವಣ್ಣ ಮೊದಲಾದ ಪುರಾತನರು ಅವ್ವಯ ಅನುಮತದಿಂದೆ ಲಿಂಗಾರ್ಚನೆಯಂ ಮಾಡಿ ನಿತ್ಯ ನಿಜನಿವಾಸಿಗಳಾದರು. ಆ ಶರಣರ ಅನು ಮತದ ಅರುಹಿನ ಉಪದೇಶವ ಕೇಳಿ ಎನಗಿನ್ನಾವುದು ಹದನಯ್ಯ ಎಂಬ ಚಿಂತೆಯ ಬಿಟ್ಟು ಕಪಿಲಸಿದ್ಧಮಲ್ಲಿಕಾರ್ಜುನಯ್ಯನ ಕೈಯ್ಯಲ್ಲಿ ಪಿಡಿದೆನು.॥೫೧॥

ಮತ್ತಂ॥ ಆದಿ ಆಧಾರವಿಲ್ಲದಂದಿನ, ಸಾದಾಖ್ಯ ದೇಹವಿಲ್ಲದಂದಿನ, ಸೀಮೆಸಂಬಂಧಗಳಿಲ್ಲದಂದಿನ, ಅನಾದಿ ಸಂಸಿದ್ಧನ ಆಗು ಮಾಡಿ ಹೆಸರಿಟ್ಟು ಕರಸ್ಥಲಕ್ಕೆ ತಂದುಕೊಟ್ಟ ಗುರು ಚನ್ನಬಸವಣ್ಣನಯ್ಯ ಕಪಿಲಸಿದ್ಧಮಲ್ಲಿಕಾ ರ್ಜುನಯ್ಯ ॥೫೨॥

ಮತ್ತಂ॥ ಇಹಲೋಕ ಪರಲೋಕವೆಂಬ ಸಂದಳಿಯಿತ್ತಯ್ಯ ಗುರುವಿನ ಹಸ್ತದಲ್ಲಿ ಸತ್ತು ಪಂಚಾಕ್ಷರಿಯಿಂದೆತ್ತಿದ ಕಾರಣದಲ್ಲಿ ನಿತ್ಯವು ಲಿಂಗಾರ್ಚ ನೆಯ ಮಾಡುವ ಕಾರಣದಲ್ಲಿ ನಿತ್ಯ ವಿಭೂತಿ, ರುದ್ರಾಕ್ಷಿಯ ಧಾರಣವ ಮಾಡುವ ಕಾರಣದಲ್ಲಿ ಇಹ ಲೋಕವೆಂದೇನು ಪರಲೋಕವೆಂದೇನು ? ಹಂಗು ಹರಿದು ಒಂದಾದ ಬಳಿಕ ಮಲದ ಮದಂಗಳ ಹರಿದು, ನಾನು ನೀನಾದ

ಬಳಿಕ ಎಲೆ ಅಯ್ಯ ಭಕ್ತರ ಸರ್ವಾಂಗ ಲಿಂಗ ತನು ಭಕ್ತರಿಪ್ಪ ಲೋಕವೇ ರುದ್ರಲೋಕ ಗುರುವೇ ಕಪಿಲಸಿದ್ಧಮಲ್ಲಿಕಾರ್ಜುನಯ್ಯ ನಿನ್ನ ಹಸ್ತ ಮಸ್ತಕದಲ್ಲಿ ಇಟ್ಟೆಡಾಯಿತ್ತು ||೫೩||

ಮತ್ತಂ|| ಶುದ್ಧವನರಿದೆ, ಚನ್ನಬಸವಣ್ಣ ನಿನ್ನಿಂದ. ಸಿದ್ಧವನರಿದೆ ಚನ್ನಬಸವಣ್ಣ ನಿಮ್ಮಿಂದ. ಪ್ರಸಿದ್ಧವನರಿದೆ ಚನ್ನಬಸವಣ್ಣ ನಿಮ್ಮಿಂದ. ಕಪಿಲಸಿದ್ಧಮಲ್ಲಿಕಾರ್ಜುನಯ್ಯ ಚನ್ನಬಸವಣ್ಣ ಗುರುವಾಗಿ ಬಂದು, ಎನ್ನ ಜನ್ಮಕರ್ಮವ ನಿವೃತ್ತಿಯ ಮಾಡಿದನಯ್ಯ ||೫೪||

ಮತ್ತಂ|| ಹೃದಯಕಮಲದ ಅಷ್ಟದಳದ ದ್ವಾತ್ರಿಂಶಕುಸುಮಮಧ್ಯದಲ್ಲಿಪ್ಪ ಸೂರ್ಯ, ಆ ಸೂರ್ಯನ ಮಧ್ಯದಲ್ಲಿಪ್ಪ ಚಂದ್ರ, ಆ ಚಂದ್ರನ ಮಧ್ಯದಲ್ಲಿಪ್ಪ ಅಗ್ನಿ ಆ ಅಗ್ನಿಯ ಮಧ್ಯದಲ್ಲಿಪ್ಪುದು ಕಾಂತಿ, ಆ ಕಾಂತಿಯ ಮಧ್ಯದಲ್ಲಿ ಇಪ್ಪುದು ಸುಜ್ಞಾನ, ಆ ಸುಜ್ಞಾನದ ಮಧ್ಯದಲ್ಲಿಪ್ಪುದು ಚಿದಾತ್ಮ, ಆ ಚಿದಾತ್ಮನ ಮಧ್ಯದಲ್ಲಿಪ್ಪನಾ ಚಿತ್ಪ್ರಕಾಶರೂಪನಪ್ಪ ಪರಶಿವನು. ಅಂತಪ್ಪ ಪರಶಿವನು ಎನ್ನ ಸುಜ್ಞಾನ ಕಾಯದ ಮಸ್ತಕದಲ್ಲಿ ಹಸ್ತವನಿರಿಸಿ ಮನ ಭಾವ ಕರಣೇಂದ್ರಿಯಂಗಳಿಂ ಸ್ವರೂಪೀಕರಿಸಿ ದೃಷ್ಟಿಗೆ ತೋರಿ ಕೈಯಲ್ಲಿ ಲಿಂಗವ ಕೊಟ್ಟ ಚನ್ನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂದು ಬದುಕಿದೆನಯ್ಯ, ಪ್ರಭುವೆ ಕಪಿಲಸಿದ್ಧಮಲ್ಲಿಕಾರ್ಜುನ ||೫೫||

ಹೀಗೆಂದು ಸಿದ್ಧರಾಮಯ್ಯದೇವರು ಚನ್ನಬಸವರಾಜದೇವರಿಂದೆ ಲಿಂಗಾಂಗ ಸಂಬಂಧಿಯಾಗಿ ಬದುಕಿದೆನೆಂದು ಸ್ತುತಿಸುತ್ತಿರಲು, ಆ ಚನ್ನಬಸವರಾಜದೇವರು ಸಂತೋಷಿಸಿ ಕೊಂಡಾಡಿದ ವಚನ.

ಕಂಗಳ ನೋಟವೆ ಮನದ ಕೂಟದಲ್ಲಿಯೆ ಏಕತ್ವ, ಭಾವದ ಲಿಂಗೈಕ್ಯದ ನಿಲವು ತನ್ನಿಂದ ತಾನೆಯಾದ ಬಗೆಯ ನೋಡಾ ! ಅರಿಯಲಿಲ್ಲದ ಅರಿವಿನ ತೆರನು ಸಯವಾಯಿತ್ತು ಕೂಡಲಚನ್ನಸಂಗಯ್ಯನಲ್ಲಿ ಸಿದ್ಧರಾಮಯ್ಯಂಗೆ ||೫೬||

ಹೀಗೆಂದು ಚನ್ನಬಸವರಾಜದೇವರು ಸಿದ್ಧರಾಮಯ್ಯದೇವರ ಕೊಂಡಾಡಲು, ಪ್ರಭುದೇವರು ಚನ್ನಬಸವರಾಜದೇವರೊಡನೆ ಸಿದ್ಧರಾಮಯ್ಯದೇವರ ಕೊಂಡಾಡಿದ ಪ್ರಸ್ತಾವದ ವಚನ.

ಸ್ವಾನುಭಾವದ ಬೆಳಗಿನಲ್ಲಿ ಒಂದು ಬೆಕ್ಕು ಹುಟ್ಟಿತ್ತು. ಆ ಬೆಕ್ಕಿನ ತಲೆಯ ಮೇಲೊಂದು ಗಿಳಿಯು ಹುಟ್ಟಿತ್ತು. ಆ ಗಿಳಿಯ ಮೇಲೆ ಎರಡು ರತ್ನ

ಹುಟ್ಟಿದವು. ಆ ರತ್ನವನರಸಿಕೊಂಡು ಬರಲು, ಅವು ತನ್ನನವಗ್ರಹಿಸಿದವು. ಒಂದು ರತ್ನ ಅಂಗವನನವಗ್ರಹಿಸಿತ್ತು. ಮತ್ತೊಂದು ರತ್ನ ಪ್ರಾಣವನನವಗ್ರಹಿಸಿತ್ತು. ಆ ರತ್ನಂಗಳ ಪ್ರಭೆ ತಾನಾದ ಸವ್ಮ ಗುಹೇಶ್ವರನ ಶರಣ ಸಿದ್ಧರಾಮಯ್ಯನ ನಿಲವಿಂಗೆ ನಮೋ ನಮೋ ಎನುತಿರ್ದೆನಯ್ಯ ಚನ್ನಬಸವಣ್ಣಾ॥೫೭॥

ಇದಕ್ಕೆ ಚನ್ನಬಸವರಾಜದೇವರು ಪರಿಣಮಿಸಿ ತಾವು ಮತ್ತಂ ಸಿದ್ಧರಾಮಯ್ಯದೇವರಿಗೆ ನಿಜಲಿಂಗೈಕ್ಯದ ಭೇದವುಂ ಕೊಂಡಾಡಿ ನಿರೂಪಿಸಿದ ಪ್ರಸ್ತಾವದ ವಚನ.

ಅಹುದಹುದು ಅಂಗಕ್ಕೆ ಲಿಂಗವನರಸಬೇಕಲ್ಲದೆ ಲಿಂಗಕ್ಕೆ ಲಿಂಗವನರಸಲುಂಟೆ? ಪ್ರಾಣಕ್ಕೆ ಜ್ಞಾನವನರಸಬೇಕಲ್ಲದೆ ಜ್ಞಾನಕ್ಕೆ ಜ್ಞಾನ ಅರಸಲುಂಟೆ? ಎರಡಾಗಿದ್ದುದನೊಂದು ಮಾಡುವೆನೆನಬಹುದಲ್ಲದೆ ಒಂದಾಗಿರ್ದುದನೆರಡು ಮಾಡಲಿಲ್ಲ. ಕೂಡಲಚನ್ನಸಂಗಮದೇವರಲ್ಲಿ ಸಿದ್ಧರಾಮಯ್ಯದೇವರ ಶ್ರೀಪಾದಕ್ಕೆ ನಮೋ ನಮೋ ಎಂದು ಬದುಕಿದೆನು ಕಾಣಾ ಪ್ರಭುವೆ ॥೫೮॥

ಹೀಗೆಂದು ಚನ್ನಬಸವರಾಜದೇವರು ಬಿನ್ನೈಸಲು, ಅದಕ್ಕೆ ಪ್ರಭುದೇವರು ಸಿದ್ಧರಾಮಯ್ಯದೇವರ ನಿಲವ ಕೊಂಡಾಡಿದ ಪ್ರಸ್ತಾವದ ವಚನ.

ಪಂಚಭೂತ ತ್ರಿಗುಣವನು ಸಂಚರಿಸಿ ರವಿಶಶಿಯ ಅಂತು ಕೂಡದ ರಜಬೀಜ ಬದ್ಧಬಂಧವಾಯಿತ್ತು. ಸಂಗತಿ ಇಲ್ಲದವನಲ್ಲ. ಪವನಗತಿಯು ನಡೆವವನಲ್ಲ. ಭೇದಿಸುತ್ತಿದ್ದಿತು ಲೋಕವೆಲ್ಲ. ಆತನೆ ರಜಬೀಜವಲ್ಲದ ಬಯಲು ಬದ್ಧವಾಯಿತ್ತು. ಇನ್ನೇನೆಂದುಪಮಿಸುವೆ ಗುಹೇಶ್ವರ ಸಿದ್ಧರಾಮಯ್ಯನ ನಾಮವನು? ॥೫೯॥

ಕಾಮನ ಕೊಲುವಲ್ಲಿ ಹೋಮವ ಸುಡುವಲ್ಲಿ ತ್ರಿಪುರ ಸಂಹಾರದ ಕೀಲನರಿವಲ್ಲಿ ಆತನ ಯೋಗಿ ಎನ್ನಬೇಡಾ. ಆತನ ಭೋಗಿ ಎನ್ನಬೇಡಾ. ಆತನು ಅಚ್ಚ ಲಿಂಗೈಕ್ಯನು. ಹಸಿವ ಮರೆತಲ್ಲಿ ವ್ಯಸನವರತಲ್ಲಿ ಗುಹೇಶ್ವರ ಲಿಂಗವು ಸಿದ್ಧರಾಮಯ್ಯ ತಾನೆ ॥೬೦॥

ಹೀಗೆಂದು ಪ್ರಭುದೇವರು ಸಿದ್ಧರಾಮಯ್ಯದೇವರ ಸ್ತುತಿಸುತ್ತಿರಲು, ಚನ್ನಬಸವರಾಜದೇವರು ಮರಳಿ ಸಿದ್ಧರಾಮಯ್ಯದೇವರ ಕೊಂಡಾಡಿದ ಪ್ರಸ್ತಾವದ ವಚನ.

ಕಾಯ ಕಲ್ಪಿತದಿಂದೆ ಭೋಗಾದಿ ಭೋಗಂಗಳ ಭೋಗಿಸಬಲ್ಲ ದೇವಲೋಕವೆ ಪರ್ವತ. ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ

ಇಂತೀ ಚತುರ್ವಿಧವನೆ ಮೀರಿ ಶಿವನ ಪ್ರಸಾದದಲ್ಲಿ ಇರಬಲ್ಲರೆ ಕೈಲಾಸವೇ ಕಲ್ಯಾಣ, ಲಿಂಗವೇ ತಾನು, ತಾನೇ ಲಿಂಗವಾಗಿರಬಲ್ಲರೆ ಶಿವಯೋಗಿ ಸಿದ್ಧರಾಮಯ್ಯದೇವರ ಶ್ರೀಪಾದದಲ್ಲಿ ಎಂದಿಪ್ಪೆ ಹೇಳಾ ಪ್ರಭುವೇ ಕೂಡಲ ಚನ್ನಸಂಗಮದೇವಾ ॥೬೧॥

ಮತ್ತಂ, ಹಸು ಹಯನಾಯಿತ್ತು. ಹಸು ಮನೆಗೆ ಬಂದಿತ್ತು. ಹಸುವ ಕಟ್ಟುವರೆಲ್ಲರ ಒಕ್ಕಲಿಕ್ಕಿ ತುಳಿಯಿತ್ತು. ಕೂಡಲಚನ್ನಸಂಗಯ್ಯನಲ್ಲಿ ಹಸುವ ಕಟ್ಟಿದಾತ ನಮ್ಮ ಸಿದ್ಧರಾಮಯ್ಯದೇವರೊಬ್ಬರೆ. ॥೬೨॥

ಮತ್ತಂ, ಹರ ತನ್ನ ರೂಪವ ತೋರಲಿಕ್ಕೆ ಶ್ರೀಗುರುವಾದ. ಆ ಗುರುವೇ ಕರಸ್ಥಲಕ್ಕೆ ಲಿಂಗವಾದ. ಮನಸ್ಥಲಕ್ಕೆ ಮಂತ್ರವಾದ. ತನುಸ್ಥಲಕ್ಕೆ ಪ್ರಸಾದವಾದ. ಪ್ರಾಣಸ್ಥಲಕ್ಕೆ ಜಂಗಮವಾದ. ಕೂಡಲ ಚನ್ನಸಂಗಯ್ಯನಲ್ಲಿ ಶಿವಯೋಗಿ ಸಿದ್ಧರಾಮಯ್ಯದೇವರು ಒಬ್ಬರೆ ತಾವಾದರು. ॥೬೩॥

ಕಬ್ಬಿನ ಗಾಣ ಬಲ್ಲುದೆ ಹಾಲಿನ ಸವಿಯ ? ಗಗನಬಳಿಯಲಾಡುವ ಪಕ್ಷಿಯು ಬಲ್ಲುದೆ ರವಿಯ ನಿಲವ ? ಹಗರಣಕ್ಕೆ ಪೂಜಿಸುವರು ಬಲ್ಲರೆ ನಮ್ಮ ಶರಣರ ಸುಳುಹ ? ನಡು ಮುರಿದು ಗುಡಗೂರಿದರೇನು, ಲಿಂಗದ ನಿಜವನರಿಯದನ್ನಕ್ಕ ? ಸಾವನ್ನಕ್ಕ ಜಪವ ಮಾಡಿದರೇನೋ ಲಿಂಗದ ಪ್ರಾಣ ತನ್ನ ಪ್ರಾಣ ಒಡಗೂಡದನ್ನಕ್ಕ ? ಇಂತಿವರೆಲ್ಲರು ಅಭ್ಯಾಸ ಶಕ್ತಿಗರುಹಿಗರು. ನಮ್ಮ ಕೂಡಲಚನ್ನಸಂಗಯ್ಯನಲ್ಲಿ ಮಾಯಾಕೋಳಾಹಳ ಸಿದ್ಧರಾಮಯ್ಯದೇವರಿಗೆ ಅಹೋರಾತ್ರಿ ನಮೋ ನಮೋ ಎಂದು ಬದುಕಿದೆನು ಕಾಣಾ ಪ್ರಭುವೇ. ॥೬೪॥

ಹೀಗೆಂದು ಚನ್ನಬಸವರಾಜದೇವರು ಕೊಂಡಾಡುತ್ತಿರಲು, ಆ ಸಿದ್ಧರಾಮಯ್ಯದೇವರು ಅತ್ಯಂತ ಭೀತಾತುರದಿಂದ ಬಿನ್ನೈಸುವ ಪ್ರಸ್ತಾವದ ವಚನ.

ಮಲತ್ರಯಂಗಳಲ್ಲಿ ಕುದಿಯಲೀಯ್ಯದೆ, ಮನಸಿಜನ ಬಾಣಕ್ಕೆ ಗುರಿಯಾಗಲೀಯ್ಯದೆ, ಎನ್ನ ತನ್ನಂತೆ ಮಾಡಿದನಯ್ಯ ಶ್ರೀಗುರು. ಪದಿನಾಲ್ಕು ಮೀರಿ ಭವಕ್ಕೆ ಹೇತುವಾಗಲೀಯ್ಯದ ಕಾರಣ ಸದ್ಯೋನ್ಮುಕ್ತನ ಮಾಡಿದನಯ್ಯ ಶ್ರೀಗುರುವೆ, ಪರಮಗುರುವೇ, ಪುಭವಕ್ಕೆ ಬರಲೀಯ್ಯದಂತೆ ಎನ್ನ ನಿನ್ನವರೊಳಗೊಬ್ಬನೆಂದೆನಿಸಿದೆಯಲ್ಲ ಗುರುವೆ, ಪರಮ ಗುರುವೆ, ಕಾಲ ಕರ್ಮಕ್ಕೆ ಗುರಿಯಹ ಎನ್ನನು ತೆಗೆದು, ಗುರುಲಿಂಗ ಜಂಗಮ ತ್ರೈಲಿಂಗಕ್ಕೆ

ಕಾರಣಿಕನ ಮಾಡಿದೆ. ಇನ್ನು ಭವಕ್ಕೆ ಬಾರೆನು. ನಿನ್ನವರಾದಂತೆ ಅಪ್ಪೆ ಕಪಿಲಸಿದ್ಧಮಲ್ಲಿಕಾರ್ಜುನಯ್ಯ ಎನ್ನ ಮೀರಿದ ಪದವೊಂದು ಇಲ್ಲವಯ್ಯ ॥೬೫॥

ರೂಪಿಂಗೆ ರೂಪು, ಜ್ಞಾನಕ್ಕೆ ಜ್ಞಾನ, ಪ್ರಾಣಕ್ಕೆ ಪ್ರಸಾದ, ಲಿಂಗತ್ರಯವ ಹೆದೆಯಿಂದವೆ ತಂದು, ಅವರವರ ಕರದಲ್ಲಿ ದೀಕ್ಷೆಯ ಮಾಡಿದನು ಚನ್ನಬಸವಣ್ಣ ಕಪಿಲಸಿದ್ಧಮಲ್ಲಿಕಾರ್ಜುನಯ್ಯ ॥೬೬॥

ಎಂದೋ ಎನಗೆ ಶಿವಪದ ಎಂದೋ ಎಂದು ಚಿಂತಿಸುವಂಗೆ ಮುಂದೆ ತೋರುತ್ತಿದೆ ಪರಮ ಪ್ರಸಾದದ ಬೀಡು. ಆ ಬೀಡ ಕಂಡು ಶಿವಗಣಂಗಳ ನೆರವು ಮಾಡಿಕೊಂಡು ಪರಮುಗುರು ಚನ್ನಬಸವಣ್ಣನ ಶ್ರೀಪಾದಾರವಿಂದವನರಿದು, ಅವರ ಕೃಪಾವಲೋಕನದಿಂದೆ ನಿಮ್ಮ ಶ್ರೀಪಾದವನರಿದೆ ಕಪಿಲಸಿದ್ಧಮಲ್ಲಿನಾಥಯ್ಯ ॥೬೭॥

ಇನ್ನು ಜನನವಿಲ್ಲ. ಮುನ್ನವೆ ಸಂದಳಿದೆ. ಮನ್ನಣೆಯಿಂದ ನೀ ಕಳುಹಿದಂತೆ ಉನ್ನತೋನ್ನತವಾದ ಚನ್ನಬಸವಣ್ಣನ ಕರುಣದಿಂದೆ ನಿನ್ನ ರೂಪಾದೆ. ಇನ್ನೆನಗೆ ಅರಿವುಂಟೆ ಕಪಿಲಸಿದ್ಧಮಲ್ಲಿಕಾರ್ಜುನ ? ॥೬೮॥

ಮತ್ತಂ, ಎನ್ನ ತನ್ನವನೆನಿಸಿ ಮನ್ನಿಸಿದ ಭಕ್ತಿಯೊಳು ಸನ್ನುತನಾದೆನಯ್ಯ. ಸಕಲದೊಳಗೆ ಬಿನ್ನಾಣ ದೇಹವನು ತನ್ನಂತೆ ಮಾಡಿದನು ಚನ್ನಬಸವಣ್ಣನಯ್ಯ ಕಪಿಲಸಿದ್ಧಮಲ್ಲಿಕಾರ್ಜುನ ॥೬೯॥

ಹೀಗೆಂದು ಚನ್ನಬಸವರಾಜದೇವರಂ ಸ್ತುತಿಸಿ ತನ್ನ ಲಿಂಗಾಂಗ ಸಮರಸಮಂ ಪ್ರಭುದೇವರಿಗೆ ಬಿನ್ನೈಸುವ ಪ್ರಸ್ತಾವದ ವಚನ.

ನೆರೆವೆನು ನೆರೆವೆನು ಎಂಬಡೆ ನಾನೇನು ನೆರೆವೆ ? ಶ್ರೀಗುರುಸ್ವಾಮಿ ನಿನ್ನ ಎನ್ನ ಕರಸ್ಥಲದಲ್ಲಿ ಸ್ಥಾಪ್ಯಗೊಳಿಸಿದಬಳಿಕ ಮಹಾ ಜ್ಯೋತಿರ್ಮಯದಲ್ಲಿ ತಮ ಉಂಟೆ ? ಕಪಿಲಸಿದ್ಧಮಲ್ಲಿಕಾರ್ಜುನನೆಂಬ ಮಹಾ ಸಮುದ್ರವನೊಡಗೂಡಿದ ಬಳಿಕ ಬೇರೆ ನಾನೊಂದು ನದಿ ಎನಲುಂಟೆ ಪ್ರಭುವೆ ? ॥೭೦॥

ಮತ್ತಂ, ಕರಣಂಗಳಂ ಕಳೆದು, ಇರವಿನ ಬ್ರಹ್ಮ ನಿಜದಲ್ಲಿ ನಿಂದಿತ್ತಯ್ಯ. ಆತ್ಮಸಂಗಸಂಯೋಗದ ಇರವು ನಿಮ್ಮಲ್ಲಿ ನಿಜವಾಯಿತ್ತಯ್ಯ. ಕಪಿಲಸಿದ್ಧಮಲ್ಲಿನಾಥಯ್ಯ ನಿಮ್ಮ ಚನ್ನಬಸವಣ್ಣನ ಕೃಪೆ ನಿಮ್ಮಿಂದ ಸಾಧ್ಯವಾಯಿತ್ತಯ್ಯ ಪ್ರಭುವೇ ॥೭೧॥

ಹೀಗೆಂದು ಸಿದ್ಧರಾಮಯ್ಯದೇವರು ಬಿನ್ನೈಸಲು ಆ ಪ್ರಭುದೇವರು ತಮ್ಮ ಲಿಂಗಾಂಗಸಮರಸಪರಿಣಾಮವ ಸಿದ್ಧರಾಮಯ್ಯ ದೇವರಿಂದೆ ಅರಿದೆನೆಂದು ನಿರೂಪಿಸಿದ ಪ್ರಸ್ತಾವದ ವಚನ.

ಲಿಂಗವನರಿಯದೆ ಏನನರಿದಡೆಯು ಫಲವಿಲ್ಲ. ಲಿಂಗವನರಿದಬಳಿಕ ಮತ್ತೇನನರಿದಡೆಯು ಫಲವಿಲ್ಲ. ಸರ್ವ ಕರಣ ಲಿಂಗವಾಗಿ ಲಿಂಗವನೆ ಅರಿದರಿದು ಲಿಂಗಸಂಗವನೆ ಮಾಡುವೆ. ಸಂಗಸುಖದೊಳೋಲಾಡುವೆ ಗುಹೇಶ್ವರಾ ॥೭೨।

ಹೀಗೆಂದು ಪ್ರಭುದೇವರು ನಿರೂಪಿಸಲು, ಆ ಸಿದ್ಧರಾಮಯ್ಯದೇವರು ಪ್ರಭುದೇವರ ಸ್ತೋತ್ರಮಂ ಮಾಡಿದ ಪ್ರಸ್ತಾವದ ವಚನ.

ಭವದ ಬೇರ ಹರಿಯಲ್ಕೆ ಪ್ರಭುವಾಗಿ ಬಂದ. ಮಲತ್ರಯಂಗಳ ಕೆಡಿಸಲ್ಕೆ ಪ್ರಭುವಾಗಿ ಬಂದ. ಅಜ್ಞಾನಂಗೆ ಸುಜ್ಞಾನವ ತೋರಲ್ಕೆ ಪ್ರಭುವಾಗಿ ಬಂದ. ಕಪಿಲಸಿದ್ಧಮಲ್ಲಿಕಾರ್ಜುನಯ್ಯ ಎನ್ನ ಭವವ ಹರಿಯಲ್ಕೆ ಪ್ರಭುವಾಗಿ ಬಂದ ॥೭೩॥

ಹೀಗೆಂದು ಸಿದ್ಧರಾಮಯ್ಯದೇವರು ಪ್ರಭುದೇವರ ಸ್ತುತಿಸುತ್ತಿರಲು ಆ ಪ್ರಸ್ತಾವದಲ್ಲಿ ಚನ್ನಬಸವರಾಜದೇವರು ಸಿದ್ಧರಾಮಯ್ಯದೇವರ ಸ್ತೋತ್ರಮಂ ಮಾಡಿದ ಪ್ರಸ್ತಾವದ ಪದಂಗಳು.

ರಾಗನಾಮಕ್ರಿ ॥ ಬೀಜವಿಲ್ಲದ ಸಸಿಗೆ ಸೌಖ್ಯ ರಾಜಿಸುವ ಸುಗಂಧದೊಡಲು ತ್ರೈಜಗಂಗಳನಿಂಬುಗೊಂಡು ಲಿಂಗದೇಹಿ ಶರಣನು ॥ಪಲ್ಲ॥

ಆದಿಯಿಂದತ್ತತ್ತನಾದಿ ಸಂಸಿದ್ಧವನ್ನು ವೇದಂಗಳರಸಿ ಕಾಣದಾಗಮಕತ್ಯಧಿಕನಾ ॥ ಸಾಧಕಂಗದೊಳಗೈದಿ ಭೇದಿಸಿ ಪರತತ್ವದರವಾದಡದುವೆ ಲಿಂಗದಂಗ ಅಂಗಲಿಂಗ ಶರಣನು ॥೧॥

ಪರುಷ ಸೋಂಕಿನಿಂದ ಲೋಹ ಪರುಷವಾದುದೆಂಬ ಶಬ್ದ ಪರುಷ ರೂಪು ರಸ ಗಂಧವೆರಸಿದರ್ಪಿತಂಗಳ ॥ ಪರಶಿವನೊಳು ಬೆರಸಿ ಪರತತ್ವ ತುರೀಯವಾದ ಬಳಿಕ ಶರಣ ಭರಿತಲಿಂಗವೋ ಲಿಂಗ ಭರಿತ ಶರಣನೋ ॥೨॥

ಅಂಗ ಲಿಂಗ ಸಂಗ ಸಂಚ ಹಿಂಗೆ ಕಂಗಳಂಗದಲ್ಲಿ ಹಿಂಗದ ನೋಟ ಘೃತದ ನೆಳಲೊಳಿಪ್ಪ ಬಿಂಬವು ಲಿಂಗವೇ ಶರಣಭರಿತ ಶರಣನೇ ಲಿಂಗ ಭರಿತ ಅಂಗ ಭಂಗ ಕೂಡಲಚನ್ನಸಂಗ ನಿಮ್ಮ ಶರಣನು ॥೩॥

ಇಂತು ಚನ್ನಬಸವರಾಜದೇವರು ಸಿದ್ಧರಾಮಯ್ಯದೇವರ ಸ್ತುತಿಸುತ್ತಿರಲು, ಆ ಸಿದ್ಧರಾಮಯ್ಯದೇವರು ಚನ್ನಬಸವರಾಜದೇವರ ಸ್ತುತಿಸಿದ ಪ್ರಸ್ತಾವದ ವಚನ.

ಕಂಗಳೇ ಮನೆಯಾಗಿ, ಕಂಗಳೆ ಕರಂಗಳಾಗಿ ಅರ್ಪಿಸುವ ಭೇದನನಾರು ಬಲ್ಲರಯ್ಯ, ಚನ್ನಬಸವಣ್ಣನಲ್ಲದೆ ? ತನು ಪ್ರಾಣ ಇಷ್ಟಲಿಂಗ ಸಂಬಂಧಿಯಾಗಿ ಇಂದ್ರಿಯಂಗಳೈದು ಮುಖಂಗಳಾಗಿ ಅರ್ಪಿಸುವ ಭೇದವನಾರು ಬಲ್ಲರಯ್ಯ ಚನ್ನಬಸವಣ್ಣನಲ್ಲದೆ ? ಆನಂದಸ್ಥಾನದಲ್ಲಿ ಅನುಮಿಷಾಕ್ಷರ ಸಂಯೋಗ ಅರ್ಪಣದ ಪ್ರಸಾದದ ಭೇದವ ಕಪಿಲಸಿದ್ಧಮಲ್ಲಿಕಾರ್ಜುನಯ್ಯನಲ್ಲಿ ಚನ್ನಬಸವಣ್ಣ ಬಲ್ಲ. ಮಿಕ್ಕಿನವರಿಗಸಾಧ್ಯವೆಂಬೆನೆಂಬೆ ॥೭೭॥

ಮತ್ತಂ, ಭಕ್ತಿವಿಡಿದು ಭಕ್ತನಾದ ಪ್ರಸಾದಿ. ಮೋಕ್ಷವಿಡಿದು ಧೈರ್ಯವಿಡಿದು ಆ ಭಕ್ತಂಗೆ ಮಹೇಶ್ವರನಾದ ಪ್ರಸಾದಿ. ಕಾರಣವಿಡಿದು ಅವಧಾನ ತಪ್ಪದೆ ಆ ಭಕ್ತಂಗೆ ಪ್ರಸಾದಿಯಾದ ಪ್ರಸಾದಿ. ಕರ್ಮರಹಿತನಾಗಿ ಕಾಲ ಕಲ್ಪಿತವಿಲ್ಲದೆ ಆ ಭಕ್ತಂಗೆ ಪ್ರಾಣಲಿಂಗಿಯಾದ ಪ್ರಸಾದಿ. ಪತಿಭಕ್ತಿವಿಡಿದು ಧರ್ಮಾರ್ಥ ಕಾಮ ಮೋಕ್ಷಂಗಳಾಸೆ ನಿವೃತ್ತಿಯಂ ಮಾಡಿದ ಆ ಭಕ್ತಂಗೆ ಶರಣನಾದ ಪ್ರಸಾದಿ. ಈ ಉಭಯಸಮರಸವೇಕವೆಂದು ತಿಳಿದು ಉಭಯ ಭಾವ ಉರಿ ಕರ್ಪುರಸಂಯೋಗವಾದ ಭಕ್ತಂಗೆ ಐಕ್ಯನಾದ ಪ್ರಸಾದಿ. ನಮ್ಮ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಸರ್ವಕ್ಕೆ ಚೈತನ್ಯನಾದ ನಮ್ಮ ಚನ್ನಬಸವಣ್ಣನೆಂಬ ಅಚ್ಚಪ್ರಸಾದಿ ॥೭೮॥

ಇಂತು ಸಿದ್ಧರಾಮಯ್ಯದೇವರು ಚನ್ನಬಸವರಾಜದೇವರ ಸ್ತೋತ್ರಮಂ ಮಾಡುತ್ತಿರಲು, ಪ್ರಭುದೇವರು ಸಿದ್ಧರಾಮಯ್ಯದೇವರಿಂದ ಮಡಿವಾಳನೆಂಬ ಪರಬ್ರಹ್ಮವ ಕಂಡು ಒಡವೆರಸಿ ಬೆರಸಿ ನಿರವಯಲಾದೆವೆಂದು ನಿರೂಪಿಸಿದ ವಚನ.

ಹಲವು ಮಕ್ಕಳ ತಾಯಂತೆ ಹೇಸದವರನಾರೈದ ತನು ಸಾಮರ್ಥ್ಯವು ನಿನಗಲ್ಲದೆ, ಇನ್ನಾರಿಗೆ ಅಳವಡುವುದು ? ಮುನ್ನಾರಿಗೆ ಅಳವಡುವದು ? ಇನ್ನು ಎನ್ನಳವೆ ? ನಿಮ್ಮುವನು ತಿಳಿಯಲು ಮುನ್ನಿನ ಸುಕೃತ ಉಂಟಾಗಿ ನಿಮ್ಮ ಪಾದ ದೊರೆಕೊಂಡಿತ್ತು. ಇನ್ನು ನಮ್ಮನಿಳಿಯಬಿಡದೆ ಎನ್ನವನುಮಿವನೆಂದು ವಿವರಿಸಿ ಎನ್ನ ನಿಸ್ಸತ್ತ ತೆಗೆ ಕರುಣಿಸಿ. ಎನ್ನ ಮಾತಾಪಿತ ಗುಹೇಶ್ವರ ನಮ್ಮ ಶರಣ ಮಡಿವಾಳಮಾಚಯ್ಯನಿಂದ ಬಯಲಾದೆನು, ಮುಕ್ತನಾದೆನು, ನಿಮ್ಮ ಕರುಣದಿಂದ. ॥೭೯॥

ಇದಕ್ಕೆ ಮಡಿವಾಳಮಾಚಿತಂದೆಗಳು ಬಸವಣ್ಣ ಚನ್ನಬಸವಣ್ಣ, ಪ್ರಭು ದೇವರಿಂದ ಬದುಕಿದೆನೆಂದು ಬಿನ್ನೈಸಿದ ಪ್ರಸ್ತಾವದ ವಚನ.

ಬಸವಣ್ಣನೆಂದರೆ, ಚನ್ನಬಸವಣ್ಣನೆಂದರೆ, ಪ್ರಭುದೇವರೆಂದರೆ, ಮಹಾ ದೇವ ಎಂದರೆ, ಮಹಾಸ್ಥಾನದಲ್ಲಿರ್ದು ಕರೆದರೆ ಓ ಎನುತಿರ್ದ ಕಾಣಾ ಕಲಿ ದೇವರ ದೇವಾ. ॥೮೦॥

ಇದಕ್ಕೆ ಚನ್ನಬಸವರಾಜದೇವರು ನಿರೂಪಿಸಿದ ಪ್ರಸ್ತಾವದ ವಚನ.

ಮತ್ತಂ, ಲಿಕಾರವೇ ಶೂನ್ಯ, ಬಿಂದುವೇ ಲೀಲೆ, ಗಕಾರವೇ ಚಿತ್ತು, ಈ ತ್ರಿವಿಧದೊಳಗೆ ಲಿಂಗವೆಂಬ ಸಕೀಲ. ಇದರ ಸಂಚವನಾವಾತ ಬಲ್ಲ ಆತನೇ ಲಿಂಗಸಂಗಿ. ಲಿಂಗಾನುಭಾವಿಗಳ ಶ್ರೀಚರಣಕ್ಕೆ ನಮೋ ನಮೋ ಎಂಬೆ ಕೂಡಲಚನ್ನಸಂಗಮದೇವಾ ॥೮೧॥

ಇದಕ್ಕೆ ಸಿದ್ಧರಾಮಯ್ಯದೇವರ ವಚನ.

ಮೂರು ಲಿಂಗಕ್ಕೆ ಮೂಲಮಂತ್ರವಾದಾತ ಗುರು. ಮೂರು ವಿದ್ಯಕ್ಕೆ ವಿದ್ಯಾರೂಪಾದಾತ ಗುರು. ಹೊದ್ದಿದ ಪ್ರಪಂಚವನತಿಗಳೆದು ರೂಪಿಂಗೆ ರೂಪಾದಾತ ಗುರು. ಲೋಕತ್ರಯಕ್ಕೆ ಕಪಿಲಸಿದ್ಧಮಲ್ಲಿಕಾರ್ಜುನಯ್ಯನೇ ಗುರು ॥೮೨॥

ಮತ್ತಂ॥ ಅಯಿದು ಬ್ರಹ್ಮದಲ್ಲಿ ಅಯ್ಯ ನೀನು ಅತಿಶಯ ಜ್ಯೋತಿರ್ಮಯ ನೀನು. ಆನಂದ ಸ್ಥಾನದಲ್ಲಿ ಅಯ್ಯ ನೀನು ಅತಿಶಯ ನಿತ್ಯಮಯನು. ಬಾಹ್ಯಾಭ್ಯಂತರದಲ್ಲಿ ಪರಿಪೂರ್ಣನು. ನಿನ್ನ ಆದಿ ಅಂತವನರಿಯಲ್ಕೆ ನಿಗಮಕ್ಕೆ ಅಭೇದ್ಯ. ಗುರುವಿನ ಕರುಣದಿಂದೆ ಎನ್ನ ಕರಸ್ಥಲಕ್ಕೆ ಸಿಕ್ಕಿ ಒಳಗಾದೆ, ಶಿವನೇ ಮಹಾಲಿಂಗಕಪಿಲಸಿದ್ಧಮಲ್ಲಿಕಾರ್ಜುನ ॥೮೩॥

ಮತ್ತಂ॥ ಭೇದಿಸಬಾರದಿಪ್ಪ ಅಭೇದ್ಯ ಶಿವನೆ ನಿನ್ನ ಭೇದಿಸಿ ತಂದು ಕೊಟ್ಟನೆನ್ನ ಗುರು, ಇನ್ನು ನಾ ನಿನ್ನ ಬಿಡುವೆನೆ? ಬಿಡೆ, ಬಿಡೆ. ಮಚ್ಚಿದೆ. ಪಾದೋದಕವ ನಚ್ಚಿದೆ ಪ್ರಸಾದವ ಗುರುವೆ ಕಪಿಲಸಿದ್ಧಮಲ್ಲಿಕಾರ್ಜುನ ॥೮೪॥

ಇದಕ್ಕೆ ಬಸವರಾಜದೇವರು ಸಿದ್ಧರಾಮಯ್ಯದೇವರ ಮಹಾತ್ಮೆಯಂ ಕೊಂಡಾಡಿದ ಪ್ರಸ್ತಾವದ ವಚನ.

ಅಡಿಗಡಿಗೆ ಸ್ಥಾನನಿಧಿ, ಅಡಿಗಡಿಗೆ ದಿವ್ಯಕ್ಷೇತ್ರ, ಅಡಿಗಡಿಗೆ ನಿಧಿಯು ನಿಧಾನವು ನೋಡಾ! ಆತನ ಇರವೇ ವಾರಣಾಸಿ, ಅವಿಮುಕ್ತಕ್ಷೇತ್ರ, ಕೂಡಲಸಂಗನ ಶರಣ ಸ್ವತಂತ್ರನಾಗಿ ॥೮೫॥

ಇದಕ್ಕೆ ಸಿದ್ಧರಾಮಯ್ಯದೇವರು ಬಸವರಾಜದೇವರ ಕೊಂಡಾಡಿದ ಪ್ರಸ್ತಾವದ ವಚನ.

ಸೀಮೆಯ ಸಂಬಂಧಕ್ಕೆ ಮೀರಿಪ್ಪ ಮಂತ್ರಕ್ಕೆ ರಾಜಮಂತ್ರವು ತಾನೆ ಪಂಚಾಕ್ಷರಿ. ಪಂಚಾಕ್ಷರಿ ಗುಣವ ಬಸವಾಕ್ಷರತ್ರಯದ ಧ್ಯಾನ ಮೌನದ ಗುಣದ ಸತ್ವವಿಡಿದು, ಆನಂದ ತ್ರಿಲಿಂಗ ಮೂಲ ಮಂತ್ರಕ್ಕೀಗ ಬಸವಾಕ್ಷರ ಮಾತೆಯಯ್ಯ ಕಪಿಲಸಿದ್ಧಮಲ್ಲಿಕಾರ್ಜುನ ॥೮೬॥

ಮತ್ತಂ॥ ದೆಸೆದಿಗ್ವಳಯದಲ್ಲಿ ಪಸರಿಸಿ ಪರ್ಬಿತು ನಿನ್ನ ನಾಮ. ವಸುಧೆ ಎಲ್ಲವು ಹೆಣ್ಣು, ನೀನೆ ಗಂಡು. ನೀನೆ ಬಸವಾಕ್ಷರತ್ರಯದಿಂದುದ್ಭವಿಸಿ ಸಕಲ ಬ್ರಹ್ಮಾಂಡಂಗಳಾದನಯ್ಯ ಕಪಿಲಸಿದ್ಧಮಲ್ಲಿಕಾರ್ಜುನ ॥೮೭॥

ಮತ್ತಂ॥ ಮುನ್ನ ಮುನ್ನ ಶಶಿ ರವಿಗಳಿಲ್ಲದ ಮುನ್ನ ಬ್ರಹ್ಮ ವಿಷ್ಣು ಗಳುದ್ಭವಿಸದ ಮುನ್ನ, ಮೂರ್ತಿಗಳೆಂಟು ಒಂದಾಗದ ಮುನ್ನ, ತನು ಮಧ್ಯ ವಳಯದಲ್ಲಿ ಸಕಲ ಬ್ರಹ್ಮಾಂಡ ಜಲಮಯವಾಗಿಪ್ಪಲ್ಲಿ, ಭಕ್ತಿ ಕಾರಣ ಬಸ ವನನವಗ್ರಹಿಸಿಪ್ಪಲ್ಲಿ, ಆದೆತ್ತಲಿದ್ದೆ ? ನೀನೆ ಬಲ್ಲೆಯಯ್ಯ ಕಪಿಲಸಿದ್ಧಮಲ್ಲಿ ಕಾರ್ಜುನಯ್ಯ ಕುರುಹುಗೆಟ್ಟ ನಿಶ್ಚಿಂತನು ॥೮೮॥

ಮತ್ತಂ॥ ಇಂದ್ರಾದಿ ದೇವತಾಸಂಕುಳಕ್ಕೆ ಅಂತಪ್ಪ ಪದವನಿತ್ತಾತ ಬಸವಣ್ಣನಯ್ಯ. ಬ್ರಹ್ಮ ವಿಷ್ಣು ಮೊದಲಾದ ದೇವತಾ ಮಾತ್ರಕ್ಕೆ ಅಂತಪ್ಪ ಪದವನಿತ್ತಾತ ಬಸವಣ್ಣನಯ್ಯ. ಶಿವಲಿಂಗಭಕ್ತರಿಗೆ ಚರಲಿಂಗದಾಚರಣೆಯ ಪರಿಯಾಯದಿಂದಲೊರೆದಾತ ಗುರು. ಇಹಲೋಕ ಪರಲೋಕದನುಮಿಷಾ ದಿಯನರಿದಾತ ಬಸವಣ್ಣನಯ್ಯ ಕಪಿಲಸಿದ್ಧಮಲ್ಲಿಕಾರ್ಜುನಯ್ಯ ॥೮೯॥

ಮತ್ತಂ, ಪ್ರಸಾದವೈದಾರು, ಪಾದೋದಕವೆರಡೈದು, ಆದಿ ಅಕ್ಷರದಲ್ಲಿ ದೀಕ್ಷಾತ್ರಯವು ನಾದದಿಂದ ತೂಗಿ ಬಂದು ಸಮನಿಸದೀಗ ಆಧಾರಸ್ಥಾನಕ್ಕೆ ಅತ್ಯತಿಷ್ಠ ಮೂಲಸ್ಥಾನದಲ್ಲಿರ್ದ ಮುನ್ನೂರು ಕಮಲಕ್ಕೆ ಆದಿ ಭ್ರಮರನು ಬಸವ ಕಪಿಲಸಿದ್ಧಮಲ್ಲಿಕಾರ್ಜುನಯ್ಯ ॥೯೦॥

ಮತ್ತಂ, ಅಣ್ಣನ ನೋಡಿರೇ. ಲೋಕಕ್ಕೆ ಜಗಕ್ಕೆ ಕಣ್ಣಾದವ ಕಳೆ ದನು. ಮುಕ್ಕಣ್ಣನಿಪ್ಪೆಡೆಯ ತೋರಿದ ಅಣ್ಣ ಬಸವಣ್ಣ. ವಾಙ್ಮನಕ್ಕ ಗೋಚರ ಮುಕ್ಕಣ್ಣನವತಾರಂಗಳನು ನಾಟಕವೆಂದರಿದು ಮೆರೆದ ಸತ್ಯಶುದ್ಧ ನಿರ್ಮಳ ಕೈವಲ್ಯ ವಾಙ್ಮನಕ್ಕಗೋಚರ ಸತ್ಯಶುದ್ಧ ಬಸವಣ್ಣ, ನಿಮ್ಮಿಂದ

ಶುದ್ಧವ ಕಂಡೆ. ಸಿದ್ಧವ ಕಂಡೆ. ಪ್ರಸಿದ್ಧವ ಕಂಡೆ. ಆರರಲ್ಲಿ ಆಂದೋಳವಾದೆ. ಆರು ವ್ರತದಲ್ಲಿ ನಿಪುಣನಾದೆ. ನೀನೊಂದು ಮೂರಾದೆ. ಮೂರೊಂದಾಗಿ ತೋರಿದ ಗುಣವಿಂತುಟಯ್ಯ. ಬಸವಣ್ಣ ಇನ್ನೆನಗಾಧಿಕ್ಯ ಒಪ್ಪುದೊಂದಿಲ್ಲ. ನಾ ನಿಮ್ಮ ಉರವಣಿಸಿ ಹರಿವೆ. ಹರಿದು ಭರದಿಂದ ಗೆಲೆವೆ. ತತ್ವ ಮೂವ ತ್ತಾರರಿಂ ಮೇಲೆ ಒಪ್ಪಿಪ್ಪ ತತ್ವಮುಸಿಯಸ್ಯೆದುವೆ. ಕಪಿಲಸಿದ್ಧಮಲ್ಲಿಕಾರ್ಜು ನಯ್ಯ ಎನಗರಿದಪ್ಪುದಿಲ್ಲ ಕಾಣಾ ಬಸವನ ಪ್ರಸಾದದಿಂದ ॥೯೧॥

ಮತ್ತಂ, ಲೋಕಾದಿಗಳೆಲ್ಲ ನೀವು ಕೇಳಿರೆ. ಏಕೈಕ ರುದ್ರನ ಅವತಾರವನರಿದೆನೆಂಬಿರಿ. ನೋಡಿ ನಚ್ಚಿದೆ ಶಿವನ. ಶಿವನು ಬಸವಣ್ಣನಾದ ನೋಡಿರೆ. ಬಸವಣ್ಣನು ಗುರುವಾದ. ಬಸವಣ್ಣ ಲಿಂಗವಾದ. ಬಸವಣ್ಣ ಚರವಾದ. ಬಸವಣ್ಣ ಪರನು ಪ್ರಸನ್ನಪರವಾದ. ಬಸವಣ್ಣ ಮೂಲಮಂತ್ರ ವಾದ. ಬಸವಣ್ಣ ಭಕ್ತಿ ಎರಡು ತ್ರಯನಾದ. ಬಸವಣ್ಣ ಆರರಿಂ ಮೇಲೆ ತೋರಿದ. ಕಪಿಲಸಿದ್ಧಮಲ್ಲಿಕಾರ್ಜುನಯ್ಯ ಬಸವಣ್ಣನ ಪ್ರಸಾದವ ಕೊಂಡು ಭವಂ ನಾಸ್ತಿಯಾದೆ. ॥೯೨॥

ಸೀಮೆಯು ಮೀರಿದ ಸಂಬಂಧನೆ, ಸಂಬಂಧದಲ್ಲಿ ಸಮನಿಸಿದ ಸಂಯೋ ಗನೆ, ಎನ್ನ ಸಲಹುವ ಗುರುಲಿಂಗಜಂಗಮಪಾದೋದಕಪ್ರಸಾದಕ್ಕೆ ಅರ್ಹನ ಮಾಡಿದೆ. ಗುರುವೆ ಕಪಿಲಸಿದ್ಧಮಲ್ಲಿಕಾರ್ಜುನಯ್ಯ, ನೀ ಬಸವ ನಾಗಿ ಬಂದು ನಿಮ್ಮವರಿಗೆ ಯೋಗ್ಯನ ಮಾಡಿದೆ ಭವವ ತಪ್ಪಿಸಿದೆ ॥೯೩॥

ಮತ್ತಂ, ಗುರುವಾಗಿ ಬಂದೆನಗೆ ದೀಕ್ಷೆಯ ಮಾಡಿದಿರಿ. ಲಿಂಗವಾಗಿ ಬಂದೆನ್ನ ಮನದ ಮಲಿನವ ತೊಳೆದಿರಿ. ಜಂಗಮವಾಗಿ ಬಂದು ಪ್ರಪಂಚುಕ ತನವ ಪರಮು ಕಳೆದು ಸೀಮೆಯ ಮಾಡಿದಿರಿ. ಇಂತಿವೆಲ್ಲವು ಬಸವಣ್ಣನಾಗಿ, ಎನಗೆ ಪ್ರಸಾದವ ನೀಡಿ, ಸಲಹಿದ ಕಪಿಲಸಿದ್ಧಮಲ್ಲಿಕಾರ್ಜುನ ಇನ್ನೆನಗತಿಶಯ ವೇನು ಇಲ್ಲ ॥೯೪॥

ಅರ್ಪಿತ ಅವಧಾನ ಮುಖಂಗಳು ಎಲ್ಲರಿಗೆ ಸುಲಭವೇ, ಅನಾದಿ ಸಂಸಿದ್ಧವಾಗಿ ಬಂದ ಬಸವಣ್ಣಂಗಲ್ಲದೆ ? ತ್ರಿಲಿಂಗಮೂಲಮಂತ್ರಕ್ಕೆ ರೂಪು ಬಸವಣ್ಣ. ಲಿಂಗಪ್ರಸಾದಕ್ಕರ್ಹ ಬಸವಣ್ಣ. ಮೂರು ಲಿಂಗ ಮೂರ್ತಿ ಒಂದಾದ ಮೂರ್ತಿಬಸವಣ್ಣ. ಕಪಿಲಸಿದ್ಧಮಲ್ಲಿಕಾರ್ಜುನಯ್ಯ ನೀ ಸಾಕ್ಷಿ ಯಾಗಿ ಬಸವನ ನೆನೆವರು ನೀನಹರು. ॥೯೫॥

ಮತ್ತಂ॥ [illegible]

ಮತ್ತಂ, ಪ್ರಥಮ ನಾಮಕೀಗ ಬಸವಾಕ್ಷರವೆ ಬೀಜ. ಗುರುನಾಮ ಮೂಲಕ್ಕೆ ಅಕ್ಷರಾಂಕ ಬಸವಣ್ಣ. ಬಸವಣ್ಣ. ಬಸವಣ್ಣ, ಎಂದೀಗ ದೆಸೆಗೆಟ್ಟೆನಯ್ಯ ಗುರುವೆ ಕಪಿಲಸಿದ್ಧಮಲ್ಲಿಕಾರ್ಜುನ ॥೯೬॥

ಇಂತು ಸಿದ್ಧರಾಮಯ್ಯದೇವರು ಬಸವರಾಜದೇವರ ಕೊಂಡಾಡುತ್ತಿರಲು, ಇದಕ್ಕೆ ಚನ್ನಬಸವರಾಜದೇವರು ಸಿದ್ಧರಾಮಯ್ಯದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳ ಅನುಭಾವ ಸಂಪರ್ಕದಿಂದೆ ತ್ರಿವಿಧ ಸಾಧ್ಯವಾಯಿತ್ತೆಂದು ನಿರೂಪಿಸಿದ ಪ್ರಸ್ತಾವದ ವಚನ.

ಅನಂತಕಾಲದಲ್ಲಿ ಹೋಗಿ ತರುಮರಾದಿಗಳಲ್ಲಿ ತಪಮಿರುವದನು ಒಂದು ದಿನ ಗುರುಚರಣ ಸೇವೆ ಸಾಲದೆ ಅಯ್ಯ? ಅನಂತ ಕಾಲ ಗುರು ಚರಣ ಸೇವೆ ಮಾಡುವುದು ಒಂದು ದಿನ ಲಿಂಗಪೂಜೆ ಸಾಲದೆ ಅಯ್ಯ? ಅನಂತ ಕಾಲ ಲಿಂಗಪೂಜೆಯ ಮಾಡುವದನು ಒಂದು ದಿನ ಜಂಗಮ ತೃಪ್ತಿ ಸಾಲದೆ ಅಯ್ಯ? ಅನಂತಕಾಲ ಜಂಗಮತೃಪ್ತಿ ಮಾಡುವುದನು ಒಂದು ನಿಮಿಷ ನಿಮ್ಮ ಶರಣರ ಅನುಭಾವ ಸಾಲದೆ ಕೂಡಲ ಚನ್ನಸಂಗಮದೇವಾ? ॥೯[illegible]

ಇದಕ್ಕೆ ಸಿದ್ಧರಾಮಯ್ಯದೇವರು ಚನ್ನಬಸವಣ್ಣ ಮುಖ್ಯವಾದ ಅಸಂಖ್ಯಾತ ಮಹಾ ಗಣಂಗಳಿಂದ ಸರ್ವವೂ ಸಾಧ್ಯವಾಯಿತ್ತೆಂದು ಬಿನ್ನೈಸುವ ಪ್ರಸ್ತಾವದ ವಚನ.

ಶುದ್ಧ ಸಿದ್ಧ ಪ್ರಸಿದ್ಧದ ನೆಲೆಯನರಿದಿಹೆನೆಂದು ತೊಳಲಿ ಬಂದೆ. ಗಿರಿಗಂಹರದೊಳಗೆ ಕಂಡೆ. ಕಾಣೆನೆಂಬ ಸಂಶಯವಾಯಿತ್ತು. ಅದೇನು ಕಾರಣ? ನಿಮ್ಮವರ ಗಣಸಮೂಹಕ್ಕೆ ತಾತ್ಪರ್ಯದವನಲ್ಲವಾಗಿ. ನೀನು ಸದ್ಭಕ್ತದೇಹಿಕನಾಗಿ ಸದ್ಭಕ್ತರಲ್ಲಿ ಒಚ್ಚತವೋಗಿ ಇಪ್ಪೆಯಾಗಿ. ಇಪ್ಪ ಗಿರಿಗಂಹರದಲ್ಲಿ ಗುರುವಿನ ಕರುಣದಿಂದೆ ಕಂಡೆ ನೀನಿಪ್ಪ ನೆಲೆಯಯ್ಯ. ಶುದ್ಧವ ಗುರುವಿನಲ್ಲಿ ಸಿದ್ಧವ ಲಿಂಗದಲ್ಲಿ ಪ್ರಸಿದ್ಧವ ಜಂಗಮದಲ್ಲಿ ಕಂಡೆ. ಅರಿದೆ, ನಚ್ಚಿದೆ, ಮಚ್ಚಿದೆ. ಎನ್ನ ಸರ್ವ ಸ್ವಾಯತವನೊಚ್ಚತಗೊಟ್ಟೆ. ನಿನ್ನ ಗಣಸಮೂಹಕ್ಕೆ ಪ್ರಾಪ್ತನಾದೆ. ನಿನ್ನ ಭಕ್ತರ ಸಲುಗೆಗೆ ಸಂದೆ ಕಪಿಲಸಿದ್ಧಮಲ್ಲಿಕಾರ್ಜುನತಂದೆ. ॥೯[illegible]॥

ಮತ್ತಂ, ಸೋಹಂ ನೀನೆ ಎಲೆ ಅಯ್ಯ. ಕೋಹಂ ತತ್ವ ತೂರ್ಯಾರ್ಥವು ನೀನೆ ಅಯ್ಯ. ನಾಹಂ ನಾಹಂ ನೀನೆ ಅಯ್ಯ. ಆನೆಂಬುದೊಂದು

ಭ್ರಾಂತು ಉಂಟೆ ? ಕಪಿಲಸಿದ್ಧಮಲ್ಲಿಕಾರ್ಜುನಯ್ಯಾ ಗುರುವಿನ ಕೈಯ್ಯಲು ನಾನು ಸತ್ತು ಹುಟ್ಟಿದ ಬಳಿಕ ಆನು ನೀನೆಂಬ ಸಂದಳಿದೆ. ॥೯೯॥

ಇದಕ್ಕೆ ಪ್ರಭುದೇವರು ಪರವು ಹರುಷವನ್ನೈದಿ ನಿರೂಪಿಸಿದ ಪ್ರಸ್ತಾವದ ವಚನ.

ಪರಿಣಾಮದೊಳಗೆ ಮನದ ಪರಿಣಾಮವೇ ಚಲುವು. ಸಂಗದೊಳಗೆ ಶರಣರ ಸಂಗವೇ ಚಲುವು. ಕಾಯುಗೊಂಡು ಹುಟ್ಟಿದ ಮೂಢರೆಲ್ಲ ಸಾಯುದ ಸಂಚವನರಿವುದೆ ಚಲುವು ಗುಹೇಶ್ವರಾ. ॥೧೦೧॥

ಇದಕ್ಕೆ ಸಿದ್ಧರಾಮಯ್ಯದೇವರು ಹರುಷಂದಳೆದು ಚನ್ನಬಸವರಾಜ ದೇವರೊಡನೆ ಪ್ರಭುದೇವರ ಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ.

ಅಂಗಯ್ಯ ನೋಟದೊಳು ಕಂಗಳು ನಟ್ಟು ಕಂಗಳ ತೇಜ ಹಿಂಗದು. ಲಿಂಗಪ್ರಭೆಯೊಳಗೆ ಅಂಗವೆಲ್ಲ ಲೀಯ್ಯವಾಗಿ ಸಂಗ ನಿಸ್ಸಂಗವೆಂಬ ದಂದುಗವ ಹರಿದು, ಹಿಂದು ಮುಂದೆಂಬ ಭಾವವಳಿದು ನಿಂದ ನಿಜದಲ್ಲಿ ನಿರಾಳದಲ್ಲಿ ಪ್ರಾಣ ಸಮರತಿಯಾಗಿ ಕಪಿಲಸಿದ್ಧಮಲ್ಲಿಕಾರ್ಜುನನಲ್ಲಿ ಪ್ರಭುದೇವರ ಪಾದಕ್ಕೆ ನಮೋ ನಮೋ ಎಂದು ಬದುಕಿದೆನು ಕಾಣಾ ಚನ್ನಬಸವಣ್ಣಾ ॥೧೦೨॥

ಇದಕ್ಕೆ ಚನ್ನಬಸವರಾಜದೇವರು ಸಿದ್ಧರಾಮಯ್ಯದೇವರೊಡನೆ ಪ್ರಭುದೇವರ ಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ.

ಕಾಯವೆಂಬ ಕನ್ನಡವಿಲ್ಲ ಪ್ರಾಣವಿಲ್ಲವಾಗಿ. ಮನವೆಂಬ ನೆನಹಿಲ್ಲ ಅನುಭಾವವಿಲ್ಲವಾಗಿ. ಅರಿವೆಂಬ ಕುರುಹಿಲ್ಲ ಪ್ರತಿ ಇಲ್ಲವಾಗಿ. ಕೂಡಲ ಚನ್ನಸಂಗಮದೇವರಲ್ಲಿ ಪ್ರಭುದೇವರ ಪಾದಕ್ಕೆ ನಮೋ ನಮೋ ಎಂದು ಬದುಕಿದೆನು ಕಾಣಾ ಸಿದ್ಧರಾಮಯ್ಯ ॥೧೦೩॥

ಇದಕ್ಕೆ ಪ್ರಭುದೇವರು ಚಿಕ್ಕದಣ್ಣಾಯಕರ ಸ್ತೋತ್ರಮಂ ಮಾಡುವ ಪ್ರಸ್ತಾವದ ವಚನ.

ಗಗನ ಪವನದ ಮೇಲೆ ಉಭಯ ಮುಖದನುಭಾವ ಪದಮದಗಜವ ನಿಲಿಸುವ ಮಾವತಿಗ ಬಂದ. ಅಷ್ಟದಳ ಕಮಲದೊಳು ಸೃಷ್ಟಿಯಂಕುರದ ಬೀಜವ ಮೆಟ್ಟಿ ನಿಂದಾತ ಪರಮಯೋಗಿಯಾಗದೆ ಮಾಣ. ಬಯಲ ಬಣ್ಣಕ್ಕೆ ತಂದು ನೆಳಲ ಶೃಂಗಾರವ ಮಾಡಿದ ಗುಹೇಶ್ವರನ ಶರಣ ಚನ್ನಬಸವಣ್ಣಂಗೆ ಶರಣೆನುತಿರ್ದೆನು. ॥೧೦೪॥

ಹೀಗೆಂದು ಪ್ರಭುದೇವರು ಚಿಕ್ಕದಣ್ಣಾಯಕರ ಸ್ತ್ರೋತ್ರಮಂ ಮಾಡು ತ್ತಿರಲು, ಸಿದ್ಧರಾಮಯ್ಯದೇವರು ತಾವು ಚಿಕ್ಕದಣ್ಣಾಯಕರ ಸ್ತ್ರೋತ್ರಮಂ ಮಾಡುವ ಪ್ರಸ್ತಾವದ ವಚನ.

ವಾಣಿ ನಾಲ್ಕರ ಮೇಲೆ ಮಾಣದೆ ನುಡಿವ ನಿರ್ವಾಣಿಯ ಸಂಭಾಷ ಣೆಯ ಮಾಡಬಲ್ಲರೆ ನಿರ್ವಾಣ. ವರ್ಣವೇಳರೊಳಗೆ ಪರಿಪೂರ್ಣವಾಗಿಪ್ಪ ಮಹಾವರ್ಣವ ತನ್ಮಯ ಮಾಡಬಲ್ಲರೆ ನಿರ್ವಾಣ. ಸ್ಥಾನ ಹತ್ತರಲ್ಲಿ ಆನಂದ ಸಿಂಹಾಸನದ ನಾನಾ ಬೆಳಗಿನ ಬೀಜದ ತಿರುಳನನುಭವಿಸಬಲ್ಲರೆ ಲಿಂಗಾನುಭಾವಿ. ಪ್ರಣವ ಹತ್ತರಲ್ಲಿ ಧ್ಯಾನ ಚತುಷ್ಟಯ ಕೂಡಿದಲ್ಲಿಯ ಕೀಲ ಬಲ್ಲರೆ ಲಿಂಗೈಕ್ಯ. ಇದುಕಾರಣ ಕಪಿಲಸಿದ್ಧಮಲ್ಲಿಕಾರ್ಜುನಯ್ಯ ನಿಮ್ಮ ಚನ್ನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು ||೧೨೫||

ಮತ್ತಂ|| ಸಿದ್ಧರಾಮಯ್ಯದೇವರು ಬಸವಣ್ಣ ಚನ್ನಬಸವಣ್ಣ ಪ್ರಭು ದೇವರು ಮೂವರನು ಕೂಡಿ ಸ್ತ್ರೋತ್ರಮಂ ಮಾಡುವ ಪ್ರಸ್ತಾವದ ವಚನ.

ಭಕ್ತಿರೂಪು ಬಸವಣ್ಣ, ಕ್ಷಮಾರೂಪು ಬಸವಣ್ಣ, ಗುರುರೂಪು ಚನ್ನ ಬಸವಣ್ಣ, ಪ್ರಸಾದರೂಪು ಚನ್ನಬಸವಣ್ಣ, ಕಪಿಲಸಿದ್ಧಮಲ್ಲಿಕಾರ್ಜುನಯ್ಯ ಪ್ರಭುವಾಗಿ ಬಂದು ಬಸವಣ್ಣ ಚನ್ನಬಸವಣ್ಣನ ಒಕ್ಕುದ ಕೊಂಡು ಜಂಗಮ ವಾದನು ||೧೨೬||

ಮತ್ತಂ|| ಮರ್ಮವನರಿತು, ಅಯ್ಯ ನಿಮ್ಮ ಕಾಂಬುವರು ಸುಲಭವೆ? ಲೋಕದಲ್ಲಿ ಲಿಂಗಭಕ್ತಿ ಜಂಗಮಭಕ್ತಿ ಗುರುಭಕ್ತಿ ಸುಲಭವೆ? ಲಿಂಗ ಭಕ್ತ ಪ್ರಭುದೇವರು, ಜಂಗಮಭಕ್ತ ಬಸವಣ್ಣನು, ಗುರು ಮೊದಲಾದ ಪ್ರಸಾದ ಸರ್ವಕ್ಕೆ ಅನುಭಾವಿ ಚನ್ನಬಸವಣ್ಣ. ಕಪಿಲಸಿದ್ಧಮಲ್ಲಿಕಾರ್ಜುನಯ್ಯ, ಇಂತಿ ವರ ಪಾದಕ್ಕೆ ನಮೋ ನಮೋ ಎಂಬೆನು. ||೧೨೭||

ಮತ್ತಂ|| ಸಿದ್ಧರಾಮಯ್ಯದೇವರು ಗುರುಸ್ತ್ರೋತ್ರಮಂ ಮಾಡುವ ಪ್ರಸ್ತಾ ವದ ವಚನ.

ಗುರುವಿನ ಕೃಪೆಯಿಂದೆ ಸಾಧಾರಣ ತನುವ ಮರೆದೆ. ಗುರುವಿನ ಕೃಪೆ ಯಿಂದೆ ಮಲತ್ರಯದ ಪಂಕವ ಕಳೆದೆ. ಗುರುವಿನ ಕೃಪೆಯಿಂದೆ ದೀಕ್ಷಾತ್ರ ಯದಿಂದ ಅನುಭಾವಿಯಾದೆ. ಗುರುವಿನ ಕೃಪೆಯಿಂದೆ ಶುದ್ಧ, ಸಿದ್ಧ, ಪ್ರಸಿದ್ಧ, ಪ್ರಮಾಣವನರಿದೆ. ಎನಗಧಿಕವಪ್ಪ ವಸ್ತು ಬೇರೊಂದಿಲ್ಲ. ಅದೇನು ಕಾರಣ? ಅವ ನಾನಾದೆಯಾಗಿ. ಗುರುವೆನ್ನ ತನುವಿಂಗೆ ಲಿಂಗದೀಕ್ಷೆಯ ಮಾಡಿ, ಎನ್ನ

ಜ್ಞಾನಕ್ಕೆ ಸ್ವಾನುಭಾವ ದೀಕ್ಷೆಯ ಮಾಡಿ ಎನ್ನ ತನುಮನಧನದಲ್ಲಿ ವಂಚನೆ ಇಲ್ಲದೆ ಮಾಡಲೆಂದು ಜಂಗಮದೀಕ್ಷೆಯು ಮಾಡಿ, ಎನ್ನ ಸರ್ವಾಂಗವು ನಿನ್ನ ವಿಶ್ರಾಮಸ್ಥಾನಶುದ್ಧಮಂಟಪವಾದ ಕಾರಣ ಲೋಕವ್ಯಾಪ್ತಿಯನರಿಯದೆ ಲೋಕ ಎನ್ನೊಳಗಾಯಿತ್ತು, ಆ ಲೋಕಕ್ಕೆ ಹೊರಗಾದೆನಾಗಿ. ಅದೇನುಕಾರಣ ? ಜನನ ಮರಣ ಪ್ರಳಯಕ್ಕೆ ಹೊರಗಾದೆನಾಗಿ. ಗುರುವೆ ಸದ್ಗುರುವೆ ಎನ್ನ ಭವದ ಬೇರೆ ಹರಿದೆ. ಗುರುವೆ ಭವಪಾಶ ವಿಮೋಚನ ಅವ್ಯಯ ಮನದ ಸರ್ವಾಂಗ ಲೋಲುಪ್ತ ಭುಕ್ತಿ ಫಲಪ್ರದಾಯಕ ಗುರುವೆ ಬಸವಣ್ಣ ಕಪಿಲ ಸಿದ್ಧಮಲ್ಲಿಕಾರ್ಜುನ ಚನ್ನಬಸವಣ್ಣನಾಗಿ ಪ್ರಭು ಮೊದಲಾಗಿ ಅಸಂಖ್ಯಾತರೆಲ್ಲರನು ತೋರಿದ ಗುರುವೆ ||೧೦೪||

ಇತಿ ಶ್ರೀಮತ್ಸಕಲಗಣ ಪುರಾತನರೊಳ್ ಪ್ರಭುದೇವರು ಮಹಾನುಭಾವ ಸದ್ಗೋಷ್ಠಿಯಂ ಮಾಡಿದ ಶೂನ್ಯಸಂಪಾದನೆಯೊಳ್ ಸಿದ್ಧರಾಮಯ್ಯದೇವರ ಗುರುಕಾರುಣ್ಯದ ದಶಮೋಪದೇಶ ಸಮಾಪ್ತ.

# ಸಿದ್ಧರಾಮಯ್ಯನ ಗುರುಕರುಣ.

(ದಶಮೋಪದೇಶ)

# ಭಾವಾರ್ಥ.

ಈ ಸಂಪಾದನೆಯಲ್ಲಿ ಸಿದ್ಧರಾಮೇಶ್ವರನಿಗೆ ಚನ್ನಬಸವೇಶ್ವರನು ಲಿಂಗಧಾರಣೆ ಮಾಡಿದ್ದುದರ ವಿವರಣೆಯು ಇದೆ. ಇದರಲ್ಲಿ ಇಷ್ಟಲಿಂಗವೆಂದರೇನೆಂಬುದನ್ನು ಅಲ್ಲಮಪ್ರಭುವು ಮೊದಲಾದಶಿವಶರಣರು ಸಿದ್ಧರಾಮನಿಗೆ ಬೋಧಿಸಿ ಅವನು ಲಿಂಗಧಾರಣೆಯನ್ನು ಹೊಂದಲು ಅವನ ಮನವೊಲಿಸಿದ್ದುದರ ವಿಷಯವು ಇರುತ್ತದೆ.

ಸಿದ್ಧರಾಮೇಶ್ವರನು ಕಲ್ಯಾಣಕ್ಕೆ ಬಂದಾಗ್ಗೆ ಶಿವಾನುಭವ ಸದ್ಗೋಷ್ಠಿಗಳು ಬಸವೇಶ್ವರನ ಸಮ್ಮುಖದಲ್ಲಿ ನಡೆದಾಗ್ಗೆ ಅಲ್ಲಮಪ್ರಭು, ಬಸವರಾಜ, ಚನ್ನಬಸವ, ಮಡಿವಾಳಮಾಚಿತಂದೆ ಮೊದಲಾದ ಶಿವಶರಣರು ಅಲ್ಲಿ ಸಭೆಯಲ್ಲಿದ್ದರು. ಆಗ ಸಿದ್ಧರಾಮನು ಪ್ರಭುದೇವರಿಗೆ— ನೀವು ಇಷ್ಟ ಲಿಂಗದ ನಿಜವನ್ನು ಬಸವರಾಜದೇವರ ಕಡೆಯಿಂದ ನನಗೆ ಹೇಳಿಸುವೆವೆಂದು ನೀವು ನನ್ನನ್ನು ಇಲ್ಲಿಗೆ ಕರೆದುಕೊಂಡು ಬಂದಿರಿ. ಆ ಲಿಂಗದ ಸ್ವರೂಪನ್ನು ನನಗೆ ತಿಳಿಸುವಂತೆ ಮಾಡಿರೆಂದು ಹೇಳಿಕೊಂಡನು. ಅದು ಹೇಗೆಂದರೆ:—

## ಲಿಂಗವೆಂದರೇನು?

ಪ್ರಭುವೇ, ಲಿಂಗದ ನಿಜವನ್ನು ತಿಳಿಸುವ ಪೂರ್ವದಲ್ಲಿ ಈ ಕಾಯವು ಲಿಂಗವೋ, ಕಾಯದಲ್ಲಿರುವ ಲಿಂಗವು ಲಿಂಗವೋ, ಪ್ರಾಣವು ಲಿಂಗವೋ, ಅಥವಾ ಪ್ರಾಣದಲ್ಲಿರುವ ಲಿಂಗ ಲಿಂಗವೋ, ಜ್ಞಾನವು ಲಿಂಗವೋ, ಈ ಜ್ಞಾನದ ಮೊನೆಯಲ್ಲಿ ಹೊಳೆಯುವ ಲಿಂಗ ಲಿಂಗವೋ, ಇದನ್ನು ನನಗೆ ತಿಳಿಸುವಂತೆ ಮಾಡು. ಅಲ್ಲದೆ ಲಿಂಗ, ಪ್ರಾಣ ಹೇಗೆಂದರೇನು? ಪ್ರಾಣಲಿಂಗವೆಂದರೇನು? ಇವೂ ಕೂಡ ನನಗೆ ತಿಳಿಯವು. ಇದನ್ನು ಸಹ ನನಗೆ ತಿಳಿಸಿಸಬೇಕು. ನಿಮ್ಮ ಕಾಯದ ಕರಸ್ಥಲದಲ್ಲಿ ಸಾರಿರುವ ಲಿಂಗವು ಪ್ರಾಣದೊಳಗೆ ತೋರುವ ರೀತಿಯನ್ನು ಸಹ ದಯಮಾಡಿ ನನಗೆ ಉಪದೇಶಿಸಬೇಕು. ಹೀಗೆ ಅಲ್ಲಮಪ್ರಭುವಿಗೆ ಸಿದ್ಧರಾಮನು ಹೇಳಿಕೊಂಡನು. (೧)

ಹೀಗೆ ಸಿದ್ಧರಾಮನು ಪ್ರಭುದೇವರಿಗೆ ಬಿನ್ನಹಮಾಡಿಕೊಳ್ಳಲು ಪ್ರಭುದೇವರು ಬಸವೇಶ್ವರನಿಗೆ ಈ ವಿಷಯವನ್ನು ಸಿದ್ಧರಾಮಯ್ಯನಿಗೆ ತಿಳಿಸಿಕೊಡೆಂದು ಬಿನ್ನಹ ಮಾಡಿಕೊಂಡನು. ಅದು ಹೇಗೆಂದರೆ—

ಎಲೋ ಬಸವೇಶ್ವರನೇ, ಈ ಲಿಂಗದಲ್ಲಿ ನಾದ ಬಿಂದು ಕಳೆಗಳಲ್ಲಿ ಯಾವುದೊಂದೂ ಕೂಡ ಇಲ್ಲವೆಂದು ಹೇಳುತ್ತಾರೆ. ಈ ಲಿಂಗವು ತಂದೆ ಇಲ್ಲದ ಕಂದನಂತಿದ್ದಾನೆ. ಅಂದರೆ ಈ ಲಿಂಗವು ಯಾರಿಂದಲೂ ಜನಿಸಿಲ್ಲ. ಈ ಲಿಂಗವು ಮಾತೆ ಇಲ್ಲದ ಅಜಾತನೂ ಇದ್ದಾನೆ. ಈ ಲಿಂಗವು ಅಗಮ್ಯನಾಗಿದ್ದಾನೆ. ಅಂದರೆ ಅದನ್ನು ತಿಳಿಯಲಿಕ್ಕೆ ಯಾರಿಗೂ ಬರಲಾರದು. ಈ ಲಿಂಗಕ್ಕೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಲಿಕ್ಕೂ ಬರುವದಿಲ್ಲ. ಈ ಲಿಂಗದ ರೀತಿಯು ಈ ತೆರನಾಗಿದೆ. ಹೀಗೆ ಇದಕ್ಕೆ ಒಬ್ಬ ಮುಗ್ಧನ ಸ್ವಭಾವವು ಬಂದಿದೆ. ಇಂಥ ಲಿಂಗದ ರೀತಿಯನ್ನು, ಎಲೋ ಬಸವಣ್ಣನೇ, ಸಿದ್ಧರಾಮನಿಗೆ ತಿಳಿಸಿ ಹೇಳು, ಎಂದು ಅಲ್ಲಮಪ್ರಭುವು ಬಸವೇಶ್ವರನಿಗೆ ಬಿನ್ನೈಸುತ್ತಾನೆ. (೨)

ಆಗ ಬಸವೇಶ್ವರನಿಗೆ ಈ ಸಿದ್ಧರಾಮನ ಅಂಗದ ಮೇಲೆ ಲಿಂಗವಿಲ್ಲವೆಂಬುದು ಗೊತ್ತಾಗಿ ಬಸವೇಶ್ವರನು ಪ್ರಭುದೇವರಿಗೆ ನಮಸ್ಕಾರವನ್ನು ಮಾಡುತ್ತ ನುಡಿದುದು ಏನೆಂದರೆ:—

## ತನ್ನಲ್ಲಿಯೇ ಶಿವಶರಣರನ್ನು ಕಾಣುವದು

ಎಲೋ ಅಲ್ಲಮಪ್ರಭುವೇ, ಸಿದ್ಧರಾಮನ ಅಂಗದಲ್ಲಿ ಲಿಂಗವಿಲ್ಲ. ಇದು ನನಗೆ ಒಪ್ಪದು. ನನ್ನ ಕಾಯದಲ್ಲಿ, ಮನದಲ್ಲಿ, ಅರಿವಿನಲ್ಲಿ ಶಿವಶರಣರನ್ನು ಕಾಣುತ್ತಿದ್ದೇನೆ. ನನಗೆ ಇದು ಒಳಗಿನದು, ಇದು ಹೊರಗಿನದು ಎಂಬ ಭೇದಭಾವವಿಲ್ಲ. ಶಿವಶರಣರು ನನ್ನನ್ನು ಪವಿತ್ರ ಮಾಡಿದ್ದಾರೆ. ಇದರ ಪರಿಣಾಮವು ಹಾಗೆ ಇದೆ, ಹೀಗೆ ಇದೆ, ಎಂದು ನನಗೆ ಹೇಳಲಿಕ್ಕೆ ಬರಲಾರದು. ಶಿವಶರಣರನ್ನು ನಾನು ಭಕ್ತಿಯಿಂದ ಕಂಡು ಅವರಿಗೆ ನಾನು ನಮಸ್ಕಾರ ಮಾಡುತ್ತೇನೆ. ಶರಣರು ನನ್ನಲ್ಲಿ ಹೇಗೆ ಇದ್ದಾರೆಂದರೆ, ಅಲ್ಲಮನನ್ನು ನನ್ನ ಕರಸ್ಥಲದಲ್ಲಿ ಕಾಣುತ್ತಿದ್ದೇನೆ. ಚನ್ನಬಸವಣ್ಣನನ್ನು ನನ್ನ ಮನಸ್ಥಲದಲ್ಲಿ ಕಾಣುತ್ತಿದ್ದೇನೆ. ಮಡಿವಾಳಯ್ಯನನ್ನು ನನ್ನ ಅರಿವಿನಲ್ಲಿ ಕಾಣುತ್ತಿದ್ದೇನೆ. ಅದು ಹೇಗೆಂದರೆ, ಇವರ ನಡೆಗಳು ನನ್ನ ಕರ ಮನ ಅರಿವುಗಳಲ್ಲಿ ತುಂಬಿವೆ. ಆದ್ದರಿಂದ ಅವರು ನನ್ನಲ್ಲಿಯೇ ಇದ್ದಾರೆಂದು ನನಗೆ ಭಾಸವಾಗುತ್ತದೆ. (೩)

ಸಿದ್ಧರಾಮನು ನನ್ನಪನೆಂದು ನನಗೆ ತೋರಿದರೂ ಅವನಿಗೆ ಲಿಂಗವಿಲ್ಲ. ಅವನು ಹೀಗಿದ್ದರೆ ಅದಕ್ಕೆ ನನ್ನ ಮನಸ್ಸು ಒಪ್ಪದು. ಈ ರೀತಿ ನಾನು ಮೃದುವಾಗಿ ಒಹು ವಿನಯದಿಂದ ನುಡಿಯುತ್ತಿದ್ದೇನೆ. ಬೇಕಾದರೆ ನೀನು ನನ್ನನ್ನು ಕೊಂದುಹಾಕಬಹುದು. ಇಲ್ಲವೆ ಕಾಯುಬಹುದು. ಅವನು ನನ್ನವನೆಂದು ಕೇಳಲು ನನ್ನ ಮನಸ್ಸು ಒಪ್ಪದು, ಎಂದು ಬಸವೇಶ್ವರನು ನುಡಿದನು. (೪)

ಆಗ ಸಿದ್ಧರಾಮನು ಉತ್ತರ ಕೊಟ್ಟುದು ಏನೆಂದರೆ:— ನಾನು ಮಡಿವಾಳಯ್ಯನೆಂಬ ಪರಬ್ರಹ್ಮವನ್ನು ನನ್ನ ಅಂತರಂಗದಲ್ಲಿ ಕಂಡು ಅವನಲ್ಲಿ ನಾನು ಮನ ಮಗ್ನನಾಗಿದ್ದೇನೆ. ಬೆಳಗು ಬೆಳಗು ಕೂಡಿದಲ್ಲಿ ಕತ್ತಲೆ ಉಳಿಯುವ ಬಗೆ ಹೇಗೆ? ಶರಣರು ಮಹಾನುಭಾವ ಗೋಷ್ಠಿಯಲ್ಲಿ ಇದ್ದಾಗ್ಗೆ ನಾನು ಅವರ ಸನ್ನಿಧಿಯಲ್ಲಿ ಇರಲಾಗಿ ನನ್ನಲ್ಲಿ ಅಜ್ಞಾನವೆಂಬುದು ಹೋಗಿಬಿಡುತ್ತದೆ. ಮತ್ತು ಅವರ ಸಂಗದಿಂದ ನಿಜವನ್ನೈದುತ್ತೇನೆ. ನಿಮ್ಮ ಮಹಾನುಭಾವರನ್ನು ನಾನು ಸೋಂಕಲಾಗಿ ನನಗೆ ಪರಮ ಸುಖವೆನಿಸುತ್ತದೆ. ಈ ಪ್ರಕಾರ ನಾನು ಮಡಿವಾಳನಲ್ಲಿ ಮನವುಗ್ನನಾಗಿದ್ದೇನೆ, ಎಂದು ಸಿದ್ಧರಾಮನು ನುಡಿದನು. (೫) ಇದಕ್ಕೆ ಚನ್ನಬಸವಣ್ಣನು ಉತ್ತರ ಕೊಟ್ಟದ್ದು ಏನೆಂದರೆ:—

## ತ್ರಿಶರೀರಗಳಲ್ಲಿ ತ್ರಿಲಿಂಗಗಳು.

ಸಿದ್ಧರಾಮನೇ, ನೀನು ಹೇಳಿದ್ದು ನಿಜವಿರಬಹುದು. ಆದರೆ ನಿನ್ನ ಅಂಗದ ಮೇಲೆ ಲಿಂಗವಿರದಿದ್ದರೆ ನಿನ್ನ ಮೇಲೆ ಪ್ರಾಣಲಿಂಗವು ಪರಿಣಾಮ ಮಾಡಲಾರದು. ಯಾಕಂದರೆ:— ಮನುಷ್ಯನಲ್ಲಿ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳೆಂದು ಮೂರು ಶರೀರಗಳಿರುತ್ತವೆ. ಇವುಗಳ ಕ್ರಿಯೆಗಳು ಒಂದನ್ನೊಂದು ಬಿಟ್ಟು ನಡೆಯಲಾರವು. ವಾಕ್, ಪಾಣಿ, ಪಾದ ಈ ಮೊದಲಾದ ಕರ್ಮೇಂದ್ರಿಯಗಳು ಸ್ಥೂಲಶರೀರಕ್ಕೆ ಸಂಬಂಧಿಸಿವೆ. ನಾಸಿಕ, ಜಿಹ್ವೆ, ಅಕ್ಷಿ ಮೊದಲಾದ ಜ್ಞಾನೇಂದ್ರಿಯಗಳು ಸೂಕ್ಷ್ಮ ಶರೀರಕ್ಕೆ ಸಂಬಂಧಿಸಿವೆ. ಚಿತ್ತ, ಅಹಂಕಾರ, ಮೂಲಾತ್ಮ ಇವೇ ಮೊದಲಾದವುಗಳು ಕಾರಣ ಶರೀರಕ್ಕೆ ಸಂಬಂಧಿಸಿವೆ. ಈ ಶರೀರಗಳು ಒಂದನ್ನೊಂದು ಬಿಟ್ಟು ವ್ಯವಹರಿಸಲಾರವು. ಆದ್ದರಿಂದ ಬಾಹ್ಯ ಶರೀರದಲ್ಲಿ ಲಿಂಗವಿಲ್ಲದಿದ್ದರೆ, ಪ್ರಾಣದಲ್ಲಿ ಅದು ಹೇಗೆ ತೋರಬೇಕು? ಈ ಕಾರಣ ಅಂಗತ್ರಯವುಳ್ಳವರು ಲಿಂಗತ್ರಯವುಳ್ಳವರಾಗಲೇಬೇಕು. ಅವುಗಳಲ್ಲಿ ಒಂದಂಗವಿರಹಿತರಾಗುವದುಂಟೇ? ಒಂದಂಗವನ್ನು ಬಿಟ್ಟು ಮತ್ತೊಂದು ಅಂಗವು ವ್ಯವಹರಿಸಲಾರದು. ಹೀಗೆ. ಸಂದು ಭೇದ

ವಿಲ್ಲದಿರುವ ಮಡಿವಾಳಮಾಚಿದೇವನ ನಿಲವು ನಿನಗೆ ಹೇಗೆ ಸಾಧಿಸಬಹುದು, ಎಂದು ಚನ್ನಬಸವನು ಸಿದ್ಧರಾಮೇಶ್ವರನಿಗೆ ಪ್ರಶ್ನೆಮಾಡುತ್ತಾನೆ. (೬)

ಹೀಗೆ ಚನ್ನಬಸವನು ಕೇಳಲು ಸಿದ್ಧರಾಮನು ಅವನಿಗೆ ಉತ್ತರ ಕೊಟ್ಟದ್ದು ಏನೆಂದರೆ—

ಮೂರು ಅಂಗಗಳಲ್ಲಿ ಮೂರು ಲಿಂಗಗಳು ನನ್ನಲ್ಲಿ ಸಮನ್ವಯವಾಗಿರುತ್ತವೆ. ಅದು ಹೇಗೆಂದರೆ— ನನಗೆ ತನುವು ಇದೆ. ಆದರೆ ಆ ಭಾವವು ನನ್ನ ಮನದಲ್ಲಿ ಇಲ್ಲ. ಮನವು ಇದೆ. ಆದರೆ ಆ ಭಾವವು ನನ್ನ ಅರಿವಿನಲ್ಲಿಲ್ಲ. ಈ ಅರಿವು ನನ್ನಲ್ಲಿ ಇದೆ. ಆದರೆ ಅದು ನನ್ನ ನುಡಿಯಲ್ಲಿ ಇಲ್ಲ. ಈ ರೀತಿ ತನು ಮನ ಜ್ಞಾನವೆಂಬ ತ್ರಿವಿಧಗಳು ಒಂದಾದ ಬಳಿಕ ಆ ತನುವಿನ ಮೇಲೆ ಲಿಂಗವು ತಾನಾಗಿಯೇ ಸ್ಥಾಪಿತವಾಗುತ್ತದೆ. ಅಂದರೆ ಭಾವನೆಯಿಂದ ಆಯಾ ಲಿಂಗಗಳು ತಾವಾಗಿಯೇ ಅಲ್ಲಲ್ಲಿ ಪ್ರಕಟವಾಗುತ್ತವೆ. ಹೀಗಾದಲ್ಲಿ ನನ್ನ ಕಾಯವು ಬಸವಣ್ಣನು, ನನ್ನ ಪ್ರಾಣವು ಅಲ್ಲಮಪ್ರಭುವು, ಎಂದು ಭಾವಿಸಿದಲ್ಲಿ ಅಲ್ಲಿ ಒಳಗು ಹೊರಗು ಎಂಬ ಭೇದವು ಹೇಗೆ ಉಳಿಯಬೇಕು ? ಅದು ಉಳಿಯಲಾರದು. ಅವೆರಡೂ ಒಂದೇ ಆಗುವವು. ಒಳಗು ಹೊರಗು ಎಂಬುದಿಲ್ಲ. (೭) ನನ್ನಲ್ಲಿ ಪ್ರಾಣಲಿಂಗವಿರುವದರಿಂದ ಬೇರೆ ಬಾಹ್ಯ ಲಿಂಗವೇಕೆ ಎಂದು ಹೇಳುವದೇ ಸಿದ್ಧರಾಮನ ಮುಖ್ಯ ಅಭಿಪ್ರಾಯವು ಇಲ್ಲಿ ಇದೆ.

ಇದಕ್ಕೆ ಚನ್ನಬಸವನ ಉತ್ತರವೇನೆಂದರೆಃ— ಪ್ರಾಣಲಿಂಗವು ನನ್ನಲ್ಲಿ ಇದೆ, ಎಂದು ನೀನು ಭಾವಿಸಿರುತ್ತೀ. ಆದರೆ ನಿನೆಗೆಲ್ಲಿಯ ಪ್ರಾಣಲಿಂಗ ಸಂಬಂಧ ? ಅದು ನಿನಗಿಲ್ಲವೆಂಗು ನಾನು ಹೇಳುತ್ತೇನೆ.

ಇದರ ವಿವರಣೆ ಏನೆಂದರೆಃ—

### ಉಳಿಸಿ ಅಳಿಸುವದೇ ಶೂನ್ಯಸಂಪಾದನೆ.

ಶಿವಶರಣರು ಇಲ್ಲ, ಉಂಟು, ಎಂಬುದಕ್ಕೆ ಕೆಲವೊಂದು ವಿಶೇಷಾರ್ಥವನ್ನು ಕಲ್ಪಿಸಿ ತಮ್ಮ ವಚನಗಳಲ್ಲಿ ಹೇಳುವದುಂಟು. ಒಬ್ಬ ವ್ಯಕ್ತಿಯು ತನ್ನಲ್ಲಿ ಉಂಟು, ತನ್ನಲ್ಲಿ ಇಲ್ಲ, ಎಂದು ಭಾವಿಸಿ ಹೇಳುತ್ತಾನೆ. ಇಂಥ ತಿಳುವಳಿಕೆಗಳನ್ನು ಉಂಟುಮಾಡುವ ಜ್ಞಾನವನ್ನು ಅವನು ಮೊದಲು ದೂರ ಮಾಡಬೇಕು. ಅಂದರೆ ಪೂರ್ವ ಗ್ರಹಗಳನ್ನು ದೂರಮಾಡಿ ಮನಸ್ಸಿನಲ್ಲಿ ಏನೂ ಇಲ್ಲದಂಥ ಸ್ಥಿತಿಯು ಇರಬೇಕು. ಹೀಗಿರದೆ ಉಂಟು ಇಲ್ಲ, ಎಂದು

ಹೇಳುವದು. ಆ ಬಗ್ಗೆ ಶಂಕೆಇದ್ದ ಸ್ಥಿತಿಯು ಎಂದು ವಚನಕಾರರ ಅಭಿಪ್ರಾಯವು.

ಈ ಸ್ಥಿತಿಯು ಉಂಟಾದ ಬಳಿಕ ಮುಂದೆ ನಿಜವಾದ ಭಾವನೆಗಳನ್ನು ತನ್ನಲ್ಲಿ ಉಳಿಸುವ ಕಾರ್ಯವನ್ನು ಮಾಡಬೇಕು. ಇದು ಹೇಗೆಂದರೆ:—

ಒಬ್ಬ ವ್ಯಕ್ತಿಯು ಜ್ಞಾನ ಪಡೆದುಕೊಂಡ ಬಳಿಕ ಅಷ್ಟಕ್ಕೆ ಅವನು ನಿಲ್ಲದೆ ಅವನು ಅದಕ್ಕೂ ಮುಂದೆ ಹೋಗಿ ಆ ಜ್ಞಾನವನ್ನು ವಿಶ್ವದಲ್ಲಿರುವ ವಸ್ತುಗಳಿಗೆ, ಶಕ್ತಿಗಳಿಗೆ, ಕ್ರಿಯೆಗಳಿಗೆ ಸಂಬಂಧಿಸಹತ್ತಬೇಕು. ಹೀಗೆ ಸಂಬಂಧಿಸಿದಲ್ಲಿ ಅವನ ಮೊದಲಿನ ವಿಚಾರಗಳು ಹೋಗಿ ನಿಜವಾದ ಅನುಭವವು ಉಂಟಾಗುತ್ತದೆ. ಹೀಗಾದ ಕೂಡಲೆ ಇದೇ ಆ ಜ್ಞಾನದ ಉಳಿವು ಎಂದು ತಿಳಿಯಬೇಕು. ಇದು ಶಾಶ್ವತವು. ಆದ್ದರಿಂದ ವಚನಕಾರರು ಅನ್ನುವದೇನೆಂದರೆ, 'ಇಲ್ಲ' ಎಂಬುದಕ್ಕೆ 'ಇದೆ' ಎಂಬುದೇ ಮರಹು. 'ಇದೆ' ಎಂಬುದಕ್ಕೆ 'ಇಲ್ಲ' ಎಂಬುದೇ ಮರಹು. ಇವೆರಡೂ ಹೋಗಿ ಯಾವದು ಉಳಿಯುತ್ತದೋ ಅದೇ ಪರಿಪಕ್ವಸ್ಥಿತಿಯು. ಆದ್ದರಿಂದ ಚನ್ನಬಸವನು ಸಿದ್ಧರಾಮನಿಗೆ ಹೇಳುವದೇನೆಂದರೆ, ನೀನು ನನ್ನಲ್ಲಿ ಪ್ರಾಣಲಿಂಗವಿದೆ, ಎಂದು ಅದರ ಅಸ್ತಿತ್ವವನ್ನು ಹೇಳುತ್ತೀ. ಆದರೆ ಹೀಗೆ ಅದು ನಿನ್ನಲ್ಲಿ ಇದೆ, ಎಂಬುದು ನಿಜವಲ್ಲ. ಯಾಕಂದರೆ ನೀನು ಅದನ್ನು ಇನ್ನೂ ತಿಳಿದಿಲ್ಲ. ಮತ್ತು ಇದನ್ನು ಮೊದಲು ಅಳಿದ ಬಳಿಕ ಅದನ್ನು ಮುಂದೆ ಉಳಿಸಿಲ್ಲ. ಹೀಗಿರುವದರಿಂದ ಪ್ರಾಣಲಿಂಗವು ನಿನ್ನಲ್ಲಿ ಇದೆ ಎಂದು ಅನ್ನುವದು ನಿನ್ನ ತಪ್ಪು ತಿಳವಳಿಕೆಯು, ಎಂದು ಅವನು ಅನ್ನುತ್ತಾನೆ. (೮)

ಇದಕ್ಕೆ ಸಿದ್ಧರಾಮನು ಉತ್ತರ ಕೊಟ್ಟದು ಏನೆಂದರೆ:— ನನಗೆ ತನುವಿದೆ. ಆದರೆ ಅದು ಇಲ್ಲದಂತೆ ನನ್ನಲ್ಲಿ ಇದೆ. ನನಗೆ ಮನವೂ ಇದೆ. ಆದರೆ ಅದು ಇಲ್ಲದಂತೆ ನನ್ನಲ್ಲಿ ಇದೆ. ನನಗೆ ಭಾವವೂ ಇದೆ. ಆದರೆ ಅದೂ ಇಲ್ಲದಂತೆ ನನ್ನಲ್ಲಿ ಇದೆ. ಆದ್ದರಿಂದ ನಾನು ಅನ್ನುವದೇನೆಂದರೆ— ನೀನು ಚನ್ನಬಸವನೆಂಬ ಭಾವ ನನ್ನಲ್ಲಿ ಇದೆ. ಹೀಗಾದರೆ ನಾನು ನಿನ್ನ ಕೂಡ ಭೃತ್ಯನಂತೆ ವರ್ತಿಸುವದಿಲ್ಲ. 'ನಾನು' ಎಂಬ ಭಾವವೂ ನನ್ನಲ್ಲಿ ಇಗೆ. ಆದ್ದರಿಂದ ನನ್ನಲ್ಲಿ ಅಹಂ ಭಾವವಿಲ್ಲ. ಒಟ್ಟಾರೆ ಹೇಳಬೇಕಾದರೆ ನನ್ನಲ್ಲಿ ಲಿಂಗ ಸಂಗವು ನಿರ್ಲೇಪ ಅಂದರೆ ಸಂಬಂಧವಿಲ್ಲದೆ ಉಳಿದಿರುವದು. ಅದರಿಂದ ನಾನು ಅದನ್ನು ಭಿನ್ನವಾಗಿಟ್ಟುಕೊಂಡು ನುಡಿಯಬಾರದು ಎಂದು ಸಿದ್ಧರಾಮನು ಹೇಳುತ್ತಾನೆ. (೯),

ಒಟ್ಟಿಗೆ ಪ್ರಾಣಲಿಂಗವು ತನ್ನಲ್ಲಿ ಇದೆ ಎಂದು ಹೇಳುವದೇ ಅವನ ಮುಖ್ಯ ಅಭಿಪ್ರಾಯವು. ಅಂದರೆ ಅಳಿದುಳಿಯುವದೇ ಮನುಷ್ಯನ ಧ್ಯೇಯ ವಾಗಿರಬೇಕು. ಅಳಿದುಳಿಯುವದೇ ಶೂನ್ಯಸಂಪಾದನೆಯು. ಇದೇ ಪರಮಾತ್ಮನಲ್ಲಿ ಸಾಮರಸ್ಯವನ್ನು ಹೊಂದುವ ಬಗೆಯು, ಎಂಬ ಭಾವವು ಇದರಲ್ಲಿದೆ.

## ಕ್ರಿಯೆಗಳಿಗೆ ಕುರುಹಿನ ಅವಶ್ಯಕತೆ.

ಈ ಪ್ರಕಾರ ಸಿದ್ಧರಾಮ ಮತ್ತು ಚನ್ನಬಸವ ಇವರು ಪರಸ್ಪರವಾಗಿ ನಡಿಸಿದ ಸೂಕ್ಷ್ಮ ಮತ್ತು ಆಳವಾದ ವಿಚಾರಗಳನ್ನು ಕೇಳಿ ಅಲ್ಲಮಪ್ರಭುವಿನ ಮನಸ್ಸಿಗೆ ಬಾರದೆ ಹೋಯಿತು. ಆಗ ಅವನು ಸ್ಪಷ್ಟ ಮತ್ತು ಸರಳ ಭಾಷೆಯಿಂದ ತನ್ನ ವಿಚಾರಗಳನ್ನು ಪ್ರಕಟಿಸಬೇಕೆಂದು ಮನಸ್ಸು ಮಾಡಿ ಮೊದಲು ಸಿದ್ಧರಾಮನ ಪಕ್ಷವನ್ನು ವಹಿಸಿ ಚನ್ನಬಸವನಿಗೆ ನುಡಿದುದು ಏನೆಂದರೆ:—

ಪರಮಾತ್ಮನನ್ನು ಅರಿತ ಶರಣನು ಲಿಂಗಪೂಜೆಯನ್ನು ಮಾಡುವ ಶ್ರಮವನ್ನು ಏಕೆ ವಹಿಸಬೇಕು? ಹೀಗೆ ಅವನು ಪ್ರಶ್ನೆ ಮಾಡಿ ಇವಕ್ಕೆ ಅವನು ಕೆಲವು ಉದಾಹರಣೆಗಳನ್ನು ಕೊಡುತ್ತಾನೆ. ಬಂಗಾರವು ಶುಭ್ರವಾಗಿ ಹೊಳೆಯುತ್ತಿರಲು ಅದನ್ನು ಒರೆಗಲ್ಲಿಗೆ ಹಚ್ಚಿ ತಿಕ್ಕಿ ನೋಡುವದೇಕೆ? ಒಬ್ಬ ಹುಚ್ಚನು ಸ್ತ್ರೀಲೋಲುಪನಾಗಿರಲು ಅವನಿಗೆ ಲಜ್ಜೆ ಎಂಬುದು ಎಲ್ಲಿಯದು? ಒಬ್ಬನು ತನ್ನ ಪ್ರಿಯತಮೆಯೊಡನೆ ಆನಂದಪಡುತ್ತಿರುವಾಗ್ಗೆ ಅವನಿಗೆ ಹಾಸಿಕೆ ಏಕೆ ಬೇಕು? ಹಾಗೆ ಪರಬ್ರಹ್ಮ ವಸ್ತುವು ಸಿದ್ಧರಾಮನಿಗೆ ಪ್ರಾಣವಾಗಿದ್ದ ಬಳಿಕ ಅವನು ಕೆಲವೊಂದು ಕುರುಹು ಅಥವಾ ಮೂರ್ತಿಯನ್ನು ಏಕೆ ಪೂಜಿಸಬೇಕು? (೧೦)

ಅಲ್ಲಮಪ್ರಭುವು ಮತ್ತೂ ನುಡಿದುದು ಏನೆಂದರೆ:— ಒಬ್ಬಾನೊಬ್ಬನು ಆಕಾಶದಲ್ಲಿ ಉಡ್ಡಾಣ ಮಾಡಲು ಸಮರ್ಥನಿರಲು ಅವನಿಗೆ ನಿಚ್ಚಣಿಕೆ ಏಕೆ ಬೇಕು? ಒಬ್ಬನು ಸಮುದ್ರವನ್ನು ದಾಟಲು ಸಮರ್ಥನಿರಲು, ಅವನಿಗೆ ಸಂಗಡಿಕಾಯಿಗಳ ಹರಿಗೋಲು ಏಕೆ ಬೇಕು? ಸೀಮೆಯನ್ನು ಮೀರಿದ ನಿಸ್ಸೀಮನಾಗಿರಲು ಅವನು ಸೀಮೆ ಅಂದರೆ ಹದ್ದು ಎಲ್ಲಿ ಇದೆ ಎಂಬುದನ್ನು ಶೋಧಿಸುತ್ತ ಹೋಗುವ ಅಗತ್ಯವೇನು? ಸಿದ್ಧರಾಮನು ಪರಮಾತ್ಮನಲ್ಲಿ ನಿಸ್ಸೀಮ ಸ್ಥಿತಿಯನ್ನು ಹೊಂದಿದ್ದಾನೆ. ಇಂಥವನಿಗೆ ಇಷ್ಟಲಿಂಗವೇಕೆ ಬೇಕು ಹೇಳು (೧೧)

## ಇಷ್ಟಲಿಂಗದ ಅವಶ್ಯಕತೆ.

ಹೀಗೆ ಅಲ್ಲಮಪ್ರಭುವು ಚನ್ನಬಸವನಿಗೆ ಸ್ಪಷ್ಟ ಶಬ್ದಗಳಿಂದ ಪ್ರಶ್ನೆ ಮಾಡಿದನು.

ಈ ಪ್ರಶ್ನೆಗಳಿಗೆ ಚನ್ನಬಸವನು ಉತ್ತರ ಕೊಡುತ್ತ ಹೇಳಿದುದು ಏನೆಂದರೆ:—

ಗಾಳೀಪಟವು ಆಕಾಶದಲ್ಲಿ ಹಾರಾಡುತ್ತಿದ್ದರೂ ಅದಕ್ಕೆ ಒಂದು ದಾರವನ್ನು ಕಟ್ಟಿ ಆ ದಾರದ ಒಂದು ತುದಿಯನ್ನು ನೆಲದ ಮೇಲೆ ನಿಂತುಕೊಂಡು ಅದನ್ನು ಹಿಡಿದು ಹಾರಿಸಬೇಕಾಗುತ್ತದೆ. ಆಗ ಮಾತ್ರ ಅದು ಆಕಾಶದಲ್ಲಿ ಹಾರಾಡುತ್ತದೆ. ಶೂರರು ಎಷ್ಟು ಶೂರರಾಗಿದ್ದರೂ ಅವರು ಖಡ್ಗವನ್ನು ಹಿಡಿದು ಹೋರಾಡಬೇಕು. ಖಡ್ಗವಿರದಿದ್ದರೆ ಅವರ ಶೂರತನವು ವ್ಯರ್ಥವಾಗುತ್ತದೆ. ಪ್ರವಾಸ ಮಾಡಲು ಬಂಡಿ ಇದ್ದರೂ ಆ ಬಂಡಿಗೆ ಹೋಗಲಿಕ್ಕೆ ನೆಲವು ಬೇಕು. ನೆಲವಿಲ್ಲದಿದ್ದರೆ ಆ ಬಂಡಿಯು ಹೇಗೆ ನಡಿಯಬೇಕು? ಎಲೋ ಅಲ್ಲಮಪ್ರಭುವೇ, ಇದರಂತೆ ಇಷ್ಟಲಿಂಗವನ್ನು ಆಧಾರವಾಗಿಟ್ಟುಕೊಳ್ಳದ ಹೊರ್ತು ಇಹಲೋಕದ ಸಂಗವನ್ನು ತಪ್ಪಿಸಲಿಕ್ಕೆ ಬರಲಾರದು. (೧೨)

ಚನ್ನಬಸವನು ಇವೇ ವಿಚಾರಗಳನ್ನು ಮುಂದುವರಿಸುತ್ತ ನುಡಿದುದು ಏನೆಂದರೆ:—

ಗಾಳೀಪಟವು ಆಕಾಶದಲ್ಲಿ ಹಾರಾಡುತ್ತಿದ್ದರೂ ಅದರ ಸೂತ್ರವು ಕೆಳಗೆ ನೆಲದ ಮೇಲೆ ಇರುತ್ತದೆ. ಸೂರ್ಯ ಚಂದ್ರರು ಆಕಾಶದಲ್ಲಿ ಚಲಿಸುತ್ತಿದ್ದರೂ ಅವರು ಮೇರುಪರ್ವತವನ್ನು ಆಶ್ರಯಿಸಿಕೊಂಡು ಚಲಿಸುತ್ತಾರೆ. ಯಾವನಾವರೊಬ್ಬನು ತಾನು ಭೂಮಿಯ ಸಹಾಯವಿಲ್ಲದೆ ಗಗನಕ್ಕೆ ಹಾರುತ್ತೇನೆಂದು ಮೇಲೆ ಜಿಗಿದರೆ ಅಲ್ಲಿ ಅವನು ನಿಲ್ಲಲಿಕ್ಕೆ ಸ್ಥಳವೆಲ್ಲಿ ಇದೆ? ಅವನು ಕೆಳಕ್ಕೆಯೇ ಬೀಳುತ್ತಾನೆ. ಕೆಲವೊಂದು ಹಣ್ಣು ಫಲವು ತನಗೆ ಮಣ್ಣಾಗಲಿ ಮರನಾಗಲಿ ಏನೂ ಬೇಡ, ಅವುಗಳನ್ನು ನಾನು ಬಿಟ್ಟು ಇರುವೆನು ಎಂದರೆ, ಆ ಹಣ್ಣಿಗೆ ಅದರ ಹಣ್ಣುತನ ಮತ್ತು ಅದರ ರುಚಿಯು ಎಲ್ಲಿಂದ ಬರಬೇಕು? ಇದರಂತೆ ಸಿದ್ಧರಾಮನು ನಾನು ಶರಣರ ಸಹವಾಸದಲ್ಲಿದ್ದೇನೆ. ಹೀಗೆ ಇದ್ದುಕೊಂಡು ನಾನು ಸೀಮೆಯನ್ನು ಮೀರಿದ ನಿಸ್ಸೀಮನು, ಎಂದು ಹೇಳಿಕೊಂಡ ಮಾತ್ರಕ್ಕೆ ಆ ಮಾತು ಶಕ್ಯವಲ್ಲ. ಅದು ಅಲ್ಲಿಯೇ ನಿಂತು ಹೋಗುವದು, ಎಂದು ಚನ್ನಬಸವನು ಉತ್ತರ ಕೊಡುತ್ತಾನೆ. (೧೩)

ಆದರೆ ಅಲ್ಲಮಪ್ರಭುವು ಇದಕ್ಕೆ ಶಾಸ್ತ್ರವನ್ನು ಆಧಾರವಾಗಿಟ್ಟುಕೊಂಡು ಸಿದ್ಧರಾಮನಿಗೆ ಉತ್ತರ ಕೊಡುತ್ತಾನೆ. ಅದು ಹೇಗೆಂದರೆ:—

ಕಾಯವು ಸಕಲ ಲಿಂಗವೆಂತಲೂ, ಪ್ರಾಣವು ಸಕಲ-ನಿಃಕಲ ಲಿಂಗವೆಂತಲೂ, ಭಾವವು ನಿಃಕಲ ಲಿಂಗವೆಂತಲೂ ಶಾಸ್ತ್ರಗಳು ಹೇಳುತ್ತವೆ. ಆದ್ದರಿಂದ ಸಕಲ ಲಿಂಗವು ಕಾಯದಲ್ಲಿದ್ದು ಅದು ಆಯತವೆಂತಲೂ, ಸಕಲ ನಿಃಕಲ ಲಿಂಗವು ಪ್ರಾಣದಲ್ಲಿದ್ದು ಅದು ಸ್ವಾಯತವೆಂತಲೂ, ನಿಃಕಲ ಲಿಂಗವು ಭಾವದಲ್ಲಿದ್ದು ಅದು ಸನ್ನಿಹಿತವೆಂತಲೂ ಷಟ್‌ಸ್ಥಲ ಶಾಸ್ತ್ರವು ಹೇಳುತ್ತಿದೆ. ಮನುಷ್ಯನಲ್ಲಿ ದೇಹ, ದೇಹಿಗಳೆಂಬಿವು ಇದ್ದು, ದೇಹದಲ್ಲಿ ಶಿವನು, ದೇಹಿಯಲ್ಲಿ ಶಿವಶಕ್ತಿ, ಹೀಗೆ ಅವುಗಳಲ್ಲಿ ಸಂಬಂಧವಿದೆ. ಹೀಗಿದ್ದ ಬಳಿಕ ಪರಮಾತ್ಮ ಲಿಂಗವೆಂದು ಬೇರೊಂದು ಕುರುಹನ್ನು ಇಟ್ಟುಕೊಂಡು ಅದರ ಮೂಲಕ ಪರಮಾತ್ಮನನ್ನು ಕಾಣುತ್ತೇನೆಂಬುದು ಏಕೆ? ಈ ಕುರುಹು ಅಂದರೆ ಇಷ್ಟಲಿಂಗವು ಅನಾವಶ್ಯಕವೆಂದು ಅಲ್ಲಮಪ್ರಭುವು ತನ್ನ ಈ ಆಕ್ಷೇಪವನ್ನು ಮುಂದು ಮಾಡುತ್ತಾನೆ. (೧೪)

ಇದಕ್ಕೆ ಚನ್ನಬಸವನು ಕೊಟ್ಟ ಉತ್ತರವೇನೆಂದರೆ:— ಇಷ್ಟಲಿಂಗವು ಒಂದು ಅಚೇತನ ವಸ್ತುವಲ್ಲ. ಸದಾಚಾರದಿಂದ ನಡೆಯುವದೇ ಇಷ್ಟಲಿಂಗವು. ಆದ್ದರಿಂದ ಪ್ರಾಣಲಿಂಗವು ಇಂಥ ಇಷ್ಟಲಿಂಗವನ್ನು ತನಗೆ ಆಧಾರವಾಗಿಟ್ಟುಕೊಂಡಿರುತ್ತದೆ. ಪ್ರಾಣಲಿಂಗವು ಈ ರೀತಿ ಇರುವದರಿಂದ ಅದು ಉದಿಸಿದಲ್ಲದೆ ಇಷ್ಟಲಿಂಗವನ್ನು ಕಾಣಬಾರದು. ಇಷ್ಟಲಿಂಗ, ಪ್ರಾಣಲಿಂಗ ಇವುಗಳಲ್ಲಿರುವ ಈ ಸಂಬಂಧವನ್ನು ಅರಿತರೆ ಮಾತ್ರ ಲಿಂಗೈಕ್ಯವು, ಎಂದು ಚನ್ನಬಸವೇಶ್ವರನು ಉತ್ತರ ಕೊಡುತ್ತಾನೆ. (೧೫)

ಇದೇ ವಿಷಯವನ್ನು ಚನ್ನಬಸವನು ಮುಂದುವರಿಸುತ್ತ ನುಡಿದುದು ಏನೆಂದರೆ— ತಿಳಿದುಪ್ಪ ಗಟ್ಟಿದುಪ್ಪಕ್ಕೆ ಭೇದವು ಉಂಟೇ? ದೀಪಕ್ಕೆ ಮತ್ತು ದೀಪದ ದೀಪ್ತಿ ಅಂದರೆ ಪ್ರಕಾಶಕ್ಕೆ ಭಿನ್ನತೆಯುಂಟೇ? ಆತ್ಮನಿಗೆ ಮತ್ತು ದೇಹಕ್ಕೆ ಹೆಂಗೆಂಬುದು ಇದೆಯೇ? ಹಾಲಿಗೆ ಮತ್ತು ಹಾಲಿನ ರುಚಿಗೆ ಭಿನ್ನತೆಯುಂಟೇ? ಆದ್ದರಿಂದ ಸಾಕಾರವೇ ನಿರಾಕಾರವೆಂದು ತಿಳಿದು ಕರಗಳ ಮೂರ್ತಿ ಇಷ್ಟಲಿಂಗವನ್ನು ಧಾರಣ ಮಾಡದೆ ಇದ್ದವರ ಸಹವಾಸವು ಭಂಗವೆಂದು ತಿಳಿದು ಅದನ್ನು ಶರಣರು ಮೆಚ್ಚಲಾರರು ಎಂದು ನುಡಿದನು. (೧೬)

ತಾರೀಖು
ಕ್ರಮಾಂಕ
ಶಿವಬಸವ ನಗರ
ಬೆಳಗಾವಿ ೧೦

ಆಗ ಈ ವಿಷಯವನ್ನು ಕುರಿತು ಅಲ್ಲಿ ಕೂಡಿದಂಥ ಮೋಳಿಗಯ್ಯ ಮೊದಲಾದ ಶಿವಶರಣರ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕೆಂದು ಚನ್ನ ಬಸವನು ಅವರ ಮುಖವನ್ನು ನೋಡುತ್ತ ನುಡಿದುದು ಏನೆಂದರೆ—

ಸತಿಸಂಗವು ಸುಖವಾದುದೆಂದು ತಿಳಿದರೆ ಏನು ಉಪಯೋಗ ? ಸತಿ ಯೊಡನೆ ಗಣಸಾಕ್ಷಿಯಾಗಿ ಮೊದಲು ವಿವಾಹವಾಗಬೇಕು. ಕಣ್ಣಿನಲ್ಲಿ ನೋಡುವ ಶಕ್ತಿ ಇದೆ ಎಂದರೇನು ಉಪಯೋಗ ? ದೀಪವಿಲ್ಲದ ಹೊರ್ತು ಅದು ಕತ್ತಲೆಯಲ್ಲಿ ಪದಾರ್ಥಗಳನ್ನು ಕಾಣಬಲ್ಲುದೇ ? ಜನರು ಸೂರ್ಯನ ಪ್ರಕಾಶದಲ್ಲಿ ಪದಾರ್ಥಗಳನ್ನು ಮೊದಲು ನೋಡಿ ಆಮೇಲೆ ಗುರುತು ಹಿಡಿ ಯುತ್ತಾರೆ. ಆದರೂ ಅವುಗಳನ್ನು ನಾವೇ ಕಾಣುತ್ತೇವೆಂದು ಅವರು ಹೇಳಿದ ತೆರನಂತೆ ಇದು ಇರುತ್ತದೆ. ಆತ್ಮನು ಲಿಂಗವನ್ನು ಬಿಟ್ಟು ಇರಲಾರನು. ಹಾಗೆಯೇ ಭಕ್ತಿ ಎಂಬುದು ಇರದಿದ್ದರೆ ಶಿವನೂ ಕೂಡ ಇರುವದು ಹೇಗೆ ? ಆದ್ದರಿಂದ ಮನುಷ್ಯನಲ್ಲಿ ಸ್ಥೂಲ ಶರೀರ, ಸೂಕ್ಷ್ಮ ಶರೀರ ಮತ್ತು ಕಾರಣ ಶರೀರ ಎಂಬ ಮೂರು ಶರೀರಗಳಿದ್ದು ಅವುಗಳಿಗೆ ಅನುಕ್ರಮವಾಗಿ ಇಷ್ಟ ಲಿಂಗ, ಪ್ರಾಣಲಿಂಗ, ಭಾವಲಿಂಗ ಎಂಬ ಲಿಂಗತ್ರಯಗಳು ಏಕೆ ಬೇಕು ? ಅವು ಬೇಡವೆಂದು ನುಡಿದರೆ ಅದನ್ನು ಪ್ರಮಥರು ಒಪ್ಪಲಾರರು. ಆದ್ದರಿಂದ ಎಲೋ ಪ್ರಭುವೇ, ಸ್ಥೂಲ ಶರೀರದಲ್ಲಿ ಯಾರಿಗೆ ಇಷ್ಟಲಿಂಗವಿಲ್ಲವೋ ಅವರ ಮುಖವನ್ನು ನಾನು ನೋಡಲಾರೆನು, ಎಂದು ಚನ್ನಬಸವನು ನುಡಿದನು. (೧೭)

ಹೀಗೆ ಚನ್ನಬಸವನು ನುಡಿಯುತ್ತ ಅಲ್ಲಿ ನೆರೆದಿದ್ದ ಅಸಂಖ್ಯಾತ ಮಹಾಗಣಂಗಳ ಮುಖವನ್ನು ನೋಡಲಾಗಿ ಅವರಲ್ಲಿ ಮೋಳಿಗೆಯ ಮಾರಿತಂದೆ ಮೊದಲಾದ ಗಣಂಗಳಿದ್ದು ಅವರು ಇಷ್ಟಲಿಂಗ ಬೇಡವೆಂದು ಸಿದ್ಧರಾಮನು ಹೇಳಿದ್ದನ್ನು ಕೇಳಿ ಕನಲಿ ಅವರು ಈ ಮಾತನ್ನು ವಿರೋ ಧಿಸಿ ತಮ್ಮ ತಮ್ಮ ವಚನಗಳನ್ನು ನುಡಿದರು. ಅವರಲ್ಲಿ ಮೋಳಿಗಯ್ಯನು ಹೇಳಿದ್ದು ಏನೆಂದರೆ:—

ಹಾವಿಗೆ ವಿಷವಿಲ್ಲದಿದ್ದರೆ ಅದಕ್ಕೆ ಅಂಜುವವರಾರು ? ಕೈಯ್ಯಲ್ಲಿ ಖಡ್ಗವಿಲ್ಲದ ಬಂಟರು ಬರೇ ಗರ್ಜಿಸಿದರೆ ಅವರಿಗೆ ಅಂಜುವವರಾರು ? 'ಇದು ಇಷ್ಟಲಿಂಗ' ಎಂದು ಬರೀ ಬಾಹ್ಯದ ಮಾತುಗಳನ್ನಾಡಿದರೆ ಪ್ರಾಣ ಲಿಂಗಿಯಾಗಬಲ್ಲರೇ ? ಆದರೆ ಸದಾಚಾರವೇ ಇಷ್ಟಲಿಂಗವೆಂದು ತಿಳಿದು ಹಾಗೆ ಆಚರಿಸಬೇಕು. ಆಚರಿಸದಿದ್ದರೆ ಅಲ್ಲಿ ಪ್ರಾಣಲಿಂಗವು ನೆಲೆಗೊಳ್ಳಲಾರದು. (೧೮)

ಪೃಥ್ವಿ ಅಪ್ಪು ಇವುಗಳ ಸಾರವು ಎಲ್ಲ ಸ್ಥಾವರಗಳಿಗೆ ಮೂಲವು. ಈ ಸಾರದಿಂದ ವೃಕ್ಷಗಳು ಚಿಗಿತು ಕಣ್ಣಿಗೆ ತೋರುತ್ತವೆ. ಹೀಗೆಯೇ ಇಷ್ಟ ಲಿಂಗದ ಪೂಜೆಯು ಕಣ್ಣಿಗೆ ತೋರಿ, ಅದು ಮನದಲ್ಲಿ ಬಹಿರಂಗವಾಗಲು ಅದನ್ನು ದೃಢವಾಗಿ ಅಲ್ಲಿ ನಿಲ್ಲಿಸಿದರೆ ಅದೇ ಪ್ರಾಣಲಿಂಗ ಸಂಬಂಧ ಎಂದು ತಿಳಿಯಬೇಕು. (೧೯)

ಹೀಗೆ ಮೋಳಿಗಯ್ಯನು ಹೇಳಿ ಅವನು ಪುನಃ ಅಂದುದೇನೆಂದರೆ:—

ಜನರು ಎಳ್ಳನ್ನು ಮೊದಲು ಅರದು ಅದರಲ್ಲಿಯ ಎಣ್ಣೆಯನ್ನು ಹೊರಗೆ ತೆಗೆದು ಅದನ್ನು ಉಪಯೋಗಿಸುತ್ತಾರೆ. ಹಣ್ಣಿನಲ್ಲಿ ಅಡಗಿದ ರಸವನ್ನು ಮೊದಲು ಹಿಂಡಿ ಅದನ್ನು ಹೊರಗೆ ತೆಗೆದು ಆ ಮೇಲೆ ಅದರ ರುಚಿಯನ್ನು ನೋಡುತ್ತಾರೆ. ಪಡದೆಯನ್ನು ಸರಿಸಿ ಅದರ ಹಿಂದಿರುವ ರೂಪನ್ನು ನೋಡುವಂತೆ, ನಾವು ಇಷ್ಟಲಿಂಗದ ಮರೆಯಲ್ಲಿರುವ ಪ್ರಾಣಲಿಂಗವನ್ನು ಕಂಡು ಅದನ್ನು ಅನುಭವಿಸಿ ನಿಶ್ಚಯಿಸಿದಲ್ಲಿ ಅದೇ ಪ್ರಾಣಲಿಂಗ ಸಂಬಂಧ ಎಂದು ಮೋಳಿಗೆ ಮಾರಯ್ಯನು ವಿಸ್ತರಿಸಿ ನುಡಿದನು. (೨೦)

ಅವನ ತರುವಾಯ ದೇವರದಾಸಿಮಯ್ಯನು ಅಂದುದು ಏನೆಂದರೆ:— ಇಷ್ಟಲಿಂಗವೆಂದರೆ ಕರಸ್ಥಲದಲ್ಲಿ ಹಿಡಿದ ಬೆಳಕು. ಅದು ಮೇಲೆ ಉಬ್ಬಾಗಿ ತೋರುವಂತೆ ಎರಕಹೊಯ್ದ ಬೆಸಗಿಯಂತೆ ಇದೆ. ಅದರ ನೆಲೆಯನ್ನು ತಿಳಿದರೆ ಆ ತಿಳಿವಳಿಕೆಯು ನಿಜವಾದ ಆನಂದವನ್ನು ಕೊಡುವಂತಹದು. ಒಳಗಿನ ಈ ಮರ್ಮವನ್ನು ತಿಳಿಯಲು ಆಗುವದಿಲ್ಲ. ಆದರೂ ಇಂಥ ನಿಸ್ಸೀಮನ ರೀತಿಯನ್ನು ತಿಳಿದುಕೊಂಡು ಯಾವನು ಅವನಲ್ಲಿ ಕೂಡುತ್ತಾನೋ ಅವನೇ ಪರಮಾತ್ಮನು ಎಂದು ನುಡಿದನು. (೨೧)

ಮುಂದೆ ಮೆರೆಮಿಂಡದೇವನೆಂಬ ಮತ್ತೊಬ್ಬ ಶಿವಶರಣನು ಹೇಳಿದುದು ಏನೆಂದರೆ:—

ತೀಕ್ಷ್ಣ ಶಸ್ತ್ರದಿಂದ ಇರಿಯಬೇಕಾದರೆ ಮೊದಲು ಅದನ್ನು ಕೈಯ್ಯಿಂದ ಹಿಡಿದಲ್ಲದೆ ಇರಿಯುವದು ಆಗದು. ಮನಸ್ಸಿಗೆ ತಿಳಿಯಬೇಕಾದರೆ ಮೊದಲು ಕುರುಹು ಎಲ್ಲಿ ಇದೆಯೋ ಅದನ್ನು ಗಟ್ಟಿಯಾಗಿ ಹಿಡಿಯದ ಹೊರತು ತಿಳಿವಳಿಕೆಯು ಆಗಲಾರದು. ಅದರಂತೆ ಮೊದಲು ಕ್ರಿಯೆಯ ಅನುಭವವನ್ನು ಹೊಂದಿ ಶುದ್ಧನಾಗಬೇಕು. ಹೀಗೆ ಶುದ್ಧನಾಗದ ಹೊರತು ಪರಮಾತ್ಮನು ದೊರೆಯಲಾರನು.

ಆಮೇಲೆ ಉರಿಲಿಂಗಪೆದ್ದಿಯು ಹೇಳಿದುದು ಏನೆಂದರೆ:—

ಸಾಕಾರವನ್ನು ಹಿಡಿದು ಅರ್ಚನೆ ಪೂಜನೆ ಮಾಡಬೇಕು. ನಿರಾಕಾರವನ್ನು ನಂಬಬಾರದು. ಶ್ರೀಗುರುವು ಪ್ರಾಣಲಿಂಗವು ಮೊದಲು ಕರಸ್ಥಲಕ್ಕೆ ಬರುವಂತೆ ಮಾಡುತ್ತಾನೆ. ಇದಕ್ಕನುಸರಿಸಿ ಭಕ್ತನು ಆಚರಿಸಿದಲ್ಲಿ ಅದು ವಜ್ರದ ಲೇಪದಂತೆ ಅಲ್ಲಿ ಗಟ್ಟಿಯಾಗಿ ನಿಲ್ಲುತ್ತದೆ. ಹೀಗಾದ ಬಳಿಕ ಅದರಲ್ಲಿ ಬಯಲನ್ನು ಹುಡುಕಿದರೆ ಬಯಲು ಸಿಕ್ಕಬಹುದೇ ? (೨೩)

ಅಂದರೆ ಇಷ್ಟಲಿಂಗದ ಮೂಲಕ ಪ್ರಾಣಲಿಂಗವನ್ನು ಸಾಧಿಸಿದಲ್ಲಿ ಅದರಲ್ಲಿ ಪೊಳ್ಳು ಎಂಬುದು ಏನೂ ಉಳಿಯುವದಿಲ್ಲೆಂಬ ಅಭಿಪ್ರಾಯವು ಇದರಲ್ಲಿ ಇದೆ.

ರಾಯಸದ ಮಂಚಣ್ಣನೆಂಬ ಇನ್ನೊಬ್ಬ ಶಿವಶರಣನು ತನ್ನ ಅಭಿಪ್ರಾಯವನ್ನು ಕೆಳಗಿನಂತೆ ಹೇಳಿದ್ದಾನೆ. ಅದು ಏನೆಂದರೆ:—

ಇಷ್ಟಲಿಂಗವು ನಮಗೆ ಬೇಡವೆಂದು ಹೇಳುವವನ ಸ್ಥಿತಿಯು ಎಂಥದೆಂದರೆ ಇವನು ಸುಗ್ರಾಸ ಭೋಜನ ಮಾಡಬೇಕೆಂದು ಒಬ್ಬರ ಮನೆಗೆ ಊಟಕ್ಕೆ ಹೋಗುತ್ತಾನೆ. ಅವನು ಮನೆಗೆ ಬಂದಬಳಿಕ ಅವನು- ನಾನೇನು ಮಾಡಲಿ? ನಾನು ನನ್ನ ಬಾಯಿಯನ್ನು ಮನೆಯಲ್ಲಿ ಮರೆತುಬಂದಿದ್ದೇನೆ. ಎಂದು ಅಲ್ಲಿ ದುಃಖಮಾಡಹತ್ತುತ್ತಾನೆ. ಇಷ್ಟಲಿಂಗ ಬೇಡವೆನ್ನುವವರ ಸ್ಥಿತಿಯು ಇವರಂತೆಯೇ ಇದೆ. ಇಂಥವರಿಗೆ ನೀವು ಪರಮಾತ್ಮನ ಜ್ಞಾನವನ್ನು ಹೊಂದಿರಿ, ಎಂದು ಇಷ್ಟಲಿಂಗವನ್ನು ಕೊಟ್ಟರೆ ಇವರು ನಾವು ಆ ಇಷ್ಟಲಿಂಗವನ್ನು ಮರೆತು ಬಂದಿದ್ದೇವೆ. ಆದರೂ ಪರಮಾತ್ಮನ ಜ್ಞಾನವನ್ನು ನಮಗೆ ಕೊಡಿರಿ, ಎಂದು ಕೇಳುತ್ತಾರೆ. ಇವರದು ನಾವು ಮೇಲೆ ಹೇಳಿದ ಕುರುಬನ ಸ್ಥಿತಿಯಂತೆಯೇ ಇದೆ, ಎಂದು ಈ ವಚನಕಾರನು ಬಹು ಸ್ವಾರಸ್ಯವಾಗಿ ಇಲ್ಲಿ ಹೇಳಿದ್ದಾನೆ. (೨೪)

ಢಕ್ಕೆಯ ಬೊಮ್ಮಣ್ಣನೆಂಬ ಇನ್ನೊಬ್ಬ ಶಿವಶರಣನು ಹೇಳುವದೇನೆಂದರೆ- ನೀತಿಯ ಮಾತುಗಳನ್ನು ಬರೆದಿಡದ ಹೊರತು ಅವುಗಳ ಲಕ್ಷಣಗಳು ಚನ್ನಾಗಿ ತಿಳಿಯುವದಿಲ್ಲ. ಬರೀ ಮಾತಿನಿಂದ ಅವು ಮನಸ್ಸಿನಲ್ಲಿ ನಿಲ್ಲಲಾರವು. ಶಿವನನ್ನು ಪೂಜಿಸತಕ್ಕ ವಸ್ತುವಾದ ಇಷ್ಟಲಿಂಗದಲ್ಲಿ ಭಕ್ತನು ಲಕ್ಷವಿಡಲೇಬೇಕು. ಹೀಗೆ ಲಕ್ಷವಿಡದಿದ್ದರೆ ಅದರ ಮೇಲಿನ ವಸ್ತುವಾದ

ಪ್ರಾಣಲಿಂಗವನ್ನು ಅವನು ಸಾಧಿಸಲಾರನು. ಈ ಪ್ರಾಣಲಿಂಗವು ಸಾಧ್ಯವಾಗುವ ವರೆಗೆ ಇಷ್ಟಲಿಂಗ ಮತ್ತು ಪ್ರಾಣಲಿಂಗ ಈ ಎರಡೂ ಲಿಂಗಗಳ ಆಚರಣೆಗಳನ್ನು ಮನುಷ್ಯನು ಆಚರಿಸುತ್ತಿರಬೇಕು. ಭಕ್ತನು ತನ್ನ ಪ್ರಾಣವಿರುವ ವರೆಗೂ ಈ ಪ್ರಕಾರ ಪರಮಾತ್ಮನನ್ನು ಪೂಜಿಸಲೇ ಬೇಕು ಎಂದು ಈ ವಚನಕಾರನು ಹೇಳುತ್ತಾನೆ. (೨೫)

ಅಮುಗಿದೇವನೆಂಬ ಇನ್ನೊಬ್ಬ ಶಿವಶರಣನು ಅನ್ನುವದೇನೆಂದರೆ:—

ಬರೇ ಜ್ಞಾನವನ್ನು ತಿಳಿದರೇನಾಯಿತು ? ಅವನಲ್ಲಿ ಸತ್ಕ್ರಿಯಾಚರಣೆ ಬೇಕು. ಮನಸ್ಸಿನಲ್ಲಿ ಪರಮಾತ್ಮನನ್ನು ನೆನೆದ ಮಾತ್ರಕ್ಕೆ ಅವನು ಕಾಣಬಹುದೇ ? ಅವನನ್ನು ಕಾಣಬೇಕಾದರೆ ದೇಹದಲ್ಲಿಯ ಕಣ್ಣೂ ಅವನಿಗೆ ಬೇಕು. ಕುರುಡನಿಗೆ ಕಣ್ಣಿಲ್ಲಾದ್ದರಿಂದ ಅವನಿಗೆ ದಾರಿ ಕಾಣಿಸದು. ಹೆಳವನಿಗೆ ಕಾಲು ಇಲ್ಲದ್ದರಿಂದ ಅವನಿಗೆ ದಾರೀ ನಡೆಯಲು ಬರಲಾರದು. ಹೀಗೆ ಒಂದು ಅವಯವವಿಲ್ಲದಿದ್ದರೆ ಕ್ರಿಯೆಯು ಆಗಲಾರದು. ಇದೇ ಪ್ರಕಾರ ಜ್ಞಾನವಿಲ್ಲದ ಕ್ರಿಯೆಯು ಜಡವಾದದ್ದು. ಕ್ರಿಯೆ ಇಲ್ಲದ ಜ್ಞಾನವು ಭ್ರಾಂತಿಯು. ಆದ್ದರಿಂದ ಪರಮಾತ್ಮನ ಸಾಧನೆಗೆ ಕ್ರಿಯೆ ಮತ್ತು ಜ್ಞಾನ ಇವೆರಡೂ ಬೇಕು. (೨೬)

ಶಿವನಾಗಮಯ್ಯನೆಂಬ ಇನ್ನೊಬ್ಬ ಶಿವಶರಣನು ಅನ್ನುವದೇನೆಂದರೆ:— ಅಂಗದ ಮೇಲೆ ಲಿಂಗವಿದ್ದ ಬಳಿಕ ಲಿಂಗಕ್ಕೆ ಒಳಗಾಗಿ ಕಾರ್ಯ ಮಾಡಬೇಕಲ್ಲದೆ ಕೇವಲ ಬಾಹ್ಯ ಶರೀರಕ್ಕೆ ಒಳಗಾಗಿ ಕಾರ್ಯ ಮಾಡಬಾರದು. ಲಿಂಗಸಂಬಂಧಿಗಳಾದ ಬಳಿಕ ಬರೀ ಕಾಯದ ಸಹಾಯದಿಂದ ಕ್ರಿಯೆಗಳನ್ನು ಮಾಡಿದಲ್ಲಿ ಪರಮಾತ್ಮನು ಅಂಥವರಿಂದ ದೂರಿರುತ್ತಾನೆ. (೨೭)

ತೆಲುಗು ಜೊಮ್ಮಯ್ಯನೆಂಬ ಇನ್ನೊಬ್ಬ ಶಿವಶರಣನು ಈ ವಿಷಯದಲ್ಲಿ ಹೇಳಿರುವದೇನೆಂದರೆ:—

ಗುರುಕಾರುಣ್ಯವನ್ನು ಹೊಂದಬೇಕು. ಗುರುಕಾರುಣ್ಯವಾದುದಕ್ಕೆ ಇಷ್ಟಲಿಂಗವಿದ್ದುದೇ ಚಿನ್ಹ. ಇಷ್ಟಲಿಂಗವಿಲ್ಲದೆ ಗುರುಕಾರುಣ್ಯವಾಯಿತೆಂದು ಹೇಳಿದರೆ ಅದು ಹೇಗೆ ಸಾಧ್ಯ ? ಇಷ್ಟಲಿಂಗ ವಿಹೀನನಿಗೆ ಗುರುಕಾರುಣ್ಯವಿರಲಾರದು. ಆದ್ದರಿಂದ ಇಷ್ಟಲಿಂಗಧಾರಣ ಮಾಡುವದೇ ಸದಾಚಾರ. ಅದು ಇರದಿದ್ದರೆ ಅನಾಚಾರ, ಎಂದು ನುಡಿದನು. (೨೮)

ಈ ಪ್ರಕಾರ ಅಲ್ಲಿದ್ದ ಶಿವಶರಣರೆಲ್ಲರು ಇಷ್ಟಲಿಂಗವು ಬೇಕೆಂದು ಸಿದ್ಧರಾಮೇಶ್ವರನನ್ನು ವಿಡಂಬಿಸಿ ನುಡಿಯಲಾಗಿ ಚನ್ನಬಸವನು ಅಲ್ಲಮಪ್ರಭು

ವಿಗೆ ಉದ್ರೇಕದಿಂದ ನುಡಿದುದೇನೆಂದರೆ:— ಅಂಗದ ಮೇಲೆ ಲಿಂಗವಿಲ್ಲದ ಈ ಸಿದ್ಧರಾಮನನ್ನು ಇಲ್ಲಿಗೆ ಏಕೆ ಕರೆದುಕೊಂಡು ಬಂದೆ, ಎಂದು ನುಡಿದನು. ಆಗ ಅವನು ಅಂದುದೇನೆಂದರೆ: —

ಹಣೆಯ ಮೇಲೆ ಕಣ್ಣುಳ್ಳವರಾದರೂ ಚಿಂತೆ ಇಲ್ಲ; ಅವರಿಗೆ ಇಷ್ಟ ಲಿಂಗವಿರದಿದ್ದರೆ ಅವರ ಮನೆಯಲ್ಲಿ ಮಾಡಿದ ಅಡಿಗೆಯು ನಾಯಿಯ ಮಾಂಸಕ್ಕೆ ಸಮಾನ. ಅದನ್ನು ತಿಳಿದವರು ಸ್ವೀಕರಿಸಲಾರರು. ಶಿವಭಕ್ತ ರಲ್ಲದವರ ಮನೆಯಲ್ಲಿ ಉಂಡರೆ ಜನ್ಮಜನ್ಮಾಂತರದಲ್ಲಿ ನಾಯಿಯ ಯೋನಿ ಯಲ್ಲಿ ಹುಟ್ಟಿ ಹುಟ್ಟಿ ಬರುವದು ತಪ್ಪಲಾರದು. ಎಲೋ ಪರಮಾತ್ಮನೇ, ಯಾರ ಮನೆಯಲ್ಲಿ ನೀನು ಇಲ್ಲವೋ ಅಂಥವರಲ್ಲಿ ಯಾರಾದರೂ ಊಟ ಮಾಡಿದರೆ ಅದು ನನ್ನ ಮನಸ್ಸಿಗೆ ಬರಲಾರದು ಎಂದು ನುಡಿದನು. (೨೯)

ಮತ್ತೂ ಅವನು ಅಂದದ್ದೇನೆಂದರೆ:— ಇಷ್ಟಲಿಂಗವಿಲ್ಲದೆ ನಡೆಯುವವನ, ಅದು ಇಲ್ಲದೆ ನುಡಿಯುವವನ ಮತ್ತು ಲಿಂಗವಿಲ್ಲದೆ ಉಗುಳು ನುಂಗಿದವನ ಕ್ರಿಯೆಗಳು ಅಪವಿತ್ರವಾದವುಗಳು. ನಾನು ಏನು ಹೇಳಲಿ? ಲಿಂಗವಿಲ್ಲದೆ ನಡೆಯುವವನ, ಲಿಂಗವಿಲ್ಲದೆ ನುಡಿಯುವವನ ಅಂಗವನ್ನು ಮುಟ್ಟಲಾಗದು. ಇಂಥವನು ಉಚ್ಚರಿಸುವ ಶಬ್ದಗಳನ್ನು ಕೇಳಿದರೆ ಅದು ಸೂತಕವು. ಲಿಂಗ ವಿಲ್ಲದೆ ಗಮಿಸಿದಲ್ಲಿ ಅಂಥವನು ನಡೆನುಡಿಗೊಮ್ಮೆ ವ್ರತಗೇಡಿಯು, ಎಂದು ಚನ್ನಬಸವನು ಹೇಳಿದನು. (೩೦)

ಹೀಗೆ ಚನ್ನಬಸವನು ವಿಡಂಬನ ಮಾಡಲಾಗಿ ಬಸವನೂ ಅದೇ ರೀತಿ ಯಲ್ಲಿ ವಿಡಂಬಿಸಿ ನುಡಿದುದು ಏನೆಂದರೆ:—

ಗುರು ತೋರಿದ ಇಷ್ಟಲಿಂಗವು ಮನದಲ್ಲಿ ಪ್ರಾಣಲಿಂಗವಾಗಿ ನೆಲೆ ಗೊಳ್ಳಲು ಸಿದ್ಧರಾಮೇಶ್ವರನು ತಿಳಿದುಕೊಂಡಂತೆ ಶ್ವಾಸವನ್ನು ನಿರೋಧಿಸಿ ಇದನ್ನು ಸಾಧಿಸಿದೆನೆಂದರೆ, ಅದು ಗುರುದ್ರೋಹವು. ಹಾಗೆಯೇ ಈಡಾ ಪಿಂಗಳ ಸುಷುಮ್ನ ನಾಡಿಗಳನ್ನು ಬಂಧಿಸಿ ಪ್ರಾಣಲಿಂಗವನ್ನು ಸಾಧಿಸಿದ್ದೇ ನೆಂದರೆ, ಪರಮಾತ್ಮನು ಅಂಥವರ ಮೂಗನ್ನು ಕೊಯ್ಯದೆ ಬಿಡುವನೇ? (೩೧)

ಈ ಮಾತನ್ನು ಚನ್ನಬಸವನು ಸಮರ್ಥಿಸಿ ನುಡಿದುದು ಏನೆಂದರೆ:— ಶರೀರದಲ್ಲಿ ಇದ್ದುಕೊಂಡು ಅದರ ಸುಖಭೋಗಗಳನ್ನು ಹೊಂದಬೇಕೆಂದು ಕೇವಲ ಕ್ರಿಯೆಗಳನ್ನು ಮಾಡಿದ್ದಾದರೆ ಅವನು ಕ್ರಿಯೆಯಲ್ಲಿಯೇ ಮುಕ್ತನು. ಜೀವಕ್ಕೆ ಮಹತ್ವಕೊಟ್ಟು ಜೀವಕ್ಕೆ ಸಂಬಂಧಿಸಿದ ಭೋಗಗಳನ್ನು ಭೋಗಿ

ಸುತ್ತಿದ್ದರೆ ಇವರು ಜೀವದಲ್ಲಿಯೇ ಮುಕ್ತರು. ಪ್ರಾಣಕ್ಕೆ ಮಹತ್ವಕೊಟ್ಟು ಅದಕ್ಕೆ ಸಂಬಂಧಿಸಿದ ಸುಖಗಳಲ್ಲಿ ಲೋಲುಪ್ತರಾದಲ್ಲಿ ಅವರು ಪ್ರಾಣದಲ್ಲಿಯೇ ಮುಕ್ತರು. ಪವನ ಅಂದರೆ ಶ್ವಾಸವನ್ನು ನಿರೋಧಿಸಿ ಅದರಿಂದಾಗುವ ಹಿತಗಳನ್ನು ಹೊಂದುವಲ್ಲಿ ತೊಡಗಿದ್ದುದಾದರೆ ಅವರು ಪವನದಲ್ಲಿಯೇ ಮುಕ್ತರು. ಇಂಥವರು ಲಿಂಗಾನುಭಾವಿಗಳಿಗೆ ಸರಿ ಹೇಗಾದಾರು? ಲಿಂಗಾನುಭಾವಿಗಳು ನಿರವಯರೂ ಸ್ವಯಂಜ್ಯೋತಿಪ್ರಕಾಶವುಳ್ಳವರೂ ಆಗಿರುತ್ತಾರೆ. ಇಂಥವರಿಗೆ ಇವರು ಹೇಗೆ ಸಮಾನರಾಗುವರು ಎಂದು ನುಡಿದನು, (೩೨)

ಈ ಪ್ರಕಾರ ವೇದಾಂತ, ಸಿದ್ಧಾಂತ, ದ್ವೈತಕ್ರಿಯೆ ಶಿವಜ್ಞಾನ ಇವುಗಳ ಸಹಾಯದಿಂದ ಆತ್ಮಜ್ಞಾನವನ್ನು ಹೊಂದಿ ಪರಮಾತ್ಮನನ್ನು ಬೆರೆಯಬೇಕೆಂದು ಶಿವಶರಣರು ಹೇಳುತ್ತಾರೆ. ಆದರೆ ಇಂಥ ಜ್ಞಾನದಿಂದ ನಾವು ಶಿವನನ್ನು ಕಾಣುವೆವೆಂಬುದು ಭ್ರಾಂತಿಯು. ಈ ಪ್ರಕಾರ ಬಸವರಾಜ, ಚನ್ನಬಸವ, ಮೋಳಿಗೆಯ ಮಾರಿತಂದೆ ಇವರೇ ಮೊದಲಾದ ಅಮರಗಣಂಗಳು ಸಿದ್ಧರಾಮನು ಆಚರಿಸುತ್ತಿದ್ದ ಅಷ್ಟಾಂಗಯೋಗವನ್ನು ಜರಿದು, ಅದನ್ನು ಖಂಡಿಸಿ ನಿರಸನ ಮಾಡುತ್ತ, ಅಲ್ಲಮಪ್ರಭುವಿಗೆ ಹೇಳುತ್ತಿರಲು, ಅಲ್ಲಮಪ್ರಭುವು, ಚನ್ನಬಸವ ಮುಂತಾದ ಗಣಂಗಳು ನಿನಗೆ ಅಂಗದಮೇಲೆ ಇಷ್ಟಲಿಂಗವಿಲ್ಲದೆ ಹೋದಲ್ಲಿ ಶರಣರು ಅವನ್ನು ಒಪ್ಪಲಾರರೆಂದು ಹೇಳಿದರು. ಆಗ ಅವರು ಅಂದುದು ಏನೆಂದರೆ:—

ಪ್ರಕಾಶದಲ್ಲಿ ಪ್ರಕಾಶವು ಕೂಡಿದರೆ ಬೇರೊಂದು ಪ್ರಕಾಶವು ಹೇಗೆ ಹೊಡಬಹುದು? ಹಾಗೆಯೇ ಘನವಸ್ತುವಾದ ಲಿಂಗದಲ್ಲಿ ಇನ್ನೊಂದು ಘನಲಿಂಗವು ಕೂಡಿದರೆ ಮತ್ತೊಂದು ಘನಲಿಂಗವು ಹೇಗಾದೀತು? ಸಮೀಪದರ ಮೇಲೆ ಸಮೀಪವಾದುದು ದಾಳಿಮಾಡಿದಂತೆ ಇದು ಸರಿ, ಎಂದು ನುಡಿದನು. (೩೩)

ಎಳ್ಳಿಗೆ ಪರಿಮಳವನ್ನು ವೇಧಿಸಿದರೆ ಮಾತ್ರ ಅದರೊಳಗಿನ ಎಣ್ಣೆಗೆ ಆ ಪರಿಮಳವು ವೇಧಿಸುತ್ತದೆ. ಅದರಂತೆ ದೇಹದಲ್ಲಿ ಇಷ್ಟಲಿಂಗವನ್ನು ಸ್ಥಾಪಿಸದ ಹೊರ್ತು ಪ್ರಾಣಲಿಂಗವು ಅಲ್ಲಿ ಉಂಟಾಗಲಾರದು. ಆದ್ದರಿಂದ ಇಷ್ಟಲಿಂಗ ಸಂಬಂಧಿಯಾಗದ ಹೊರ್ತು ಪ್ರಾಣಲಿಂಗವು ಸಂಬಂಧಿಸುವದಿಲ್ಲ. (೩೪)

## ಸಿದ್ಧರಾಮನು ಇಷ್ಟಲಿಂಗವನ್ನು ಅಪೇಕ್ಷಿಸಿದ್ದು.

ಹೀಗೆ ಪ್ರಭುದೇವರು ನಿರೂಪಿಸಲು ಸಿದ್ಧರಾಮನು ನಿರುತ್ತರನಾಗಿ ಜಜ್ಜನೆ ಜರಿದನು, ಬಿಬ್ಬನೆ ಬಿರಿದನು. ಅವನಿಗೆ ಪ್ರಾಣ ಹೋದಂತಾಯಿತು. ಅವನು ಆ ಸಮಯದಲ್ಲಿ ಭಯಪಟ್ಟು ನಡನಡುಗಿದನು. ಆಗ ಅವನು ಪ್ರಭುದೇವರ ಪಾದದಮೇಲೆ ಬಿದ್ದು, ಎಲೋ ಪ್ರಭುವೇ ನಿಮ್ಮ ಶರಣರುಗಳು ನನ್ನನ್ನು ಕರುಣಿಸುವಂತೆ ಮಾಡು, ಎಂದು ಮನ ನೊಂದು ಕೆಳಗಿನಂತೆ ನುಡಿದನು.

ನನಗೆ ಮೊದಲು ಪುಣ್ಯ ಪಾಪಗಳೇನೆಂಬುದು ಗೊತ್ತಾಗಿದ್ದಿಲ್ಲ. ಆಗ ನಾನು ಅನೇಕ ಜನ್ಮಗಳನ್ನು ತಾಳಿ ನಿಮ್ಮ ನಿಲವನ್ನು ಅರಿಯದೆ ಕೆಟ್ಟೆನು. ಈಗ ನಾನು ನಿಮಗೆ ಶರಣಾಗತನಾಗಿದ್ದೇನೆ. ನಾನು ನಿಮ್ಮನ್ನು ಅಗಲದಂತೆ ಮಾಡು. ಇದು ನಿಮ್ಮ ಧರ್ಮ, ನಿಮ್ಮ ಧರ್ಮ. ನನ್ನ ಕರ್ಮಬಂಧನವು ಹೋಗುವಂತೆ ಮಾಡು. ಇದೊಂದನ್ನು ಮಾತ್ರ ನಾನು ಈಗ ನಿಮ್ಮಲ್ಲಿ ಬೇಡಿಕೊಳ್ಳುತ್ತೇನೆ. (೩೫)

ಮತ್ತೇನೆಂದರೆ, ನಾನು ನಿಮ್ಮ ಗಣಂಗಳ ಸಮುದಾಯದಲ್ಲಿ ಎಂದಿರುವೆನು, ನಿಮ್ಮವರ ನಡುವೆ ಎಂದಿರುವೆನು? ನೀವು ಒಗೆದು ಬಿಟ್ಟ ವಸ್ತುಗಳನ್ನು ನಾನು ಕಾಯುತ್ತ ಎಂದಿರುವೆನು, ನಾನು ನಿಮ್ಮ ಕಿಂಕರನಾಗಿ ಎಂದಿರುವೆನು; ನಿಮ್ಮ ಹೆಸರಿನ ಮೇಲೆ ಸೇವಕನಾಗಿ ಎಂದಿರುವೆನು, ಎಂದು ಆರ್ತ ಸ್ವರದಿಂದ ಶೋಕಿಸಿದನು. (೩೬) ಅವನು ಮತ್ತೂ ಅಂದುದು ಏನೆಂದರೆ:—

ನಾನು ನಿಮ್ಮ ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಗಳಲ್ಲಿ ಪ್ರವೇಶಿಯಾಗಿ ಎಂದಿರುವೆನು ? ದೀಕ್ಷಾತ್ರಯದಲ್ಲಿ ಸಂಪನ್ನನಾಗಿ ಎಂದಿರುವೆನು ? ನಾನು ಲಿಂಗತ್ರಯದಲ್ಲಿ ಪ್ರಸಾದವನ್ನು ಅನುಭವಿಸುತ್ತ ಎಂದಿರುವೆನು ? ಎಲೋ ಪರಮಾತ್ಮನೇ, ನಿಮ್ಮವರ ನಡುವೆ ಹೌದೆನಿಸಿಕೊಂಡು ಎಂದಿರುವೆನು? ಹೀಗೆ ನುಡಿಯುತ್ತ ದು:ಖಿಸಿದನು. (೩೭)

ಮತ್ತೆ ಅವನು ನುಡಿದುದೇನೆಂದರೆ, ಒಡೆಯರುಳ್ಳ ತೊತ್ತಿನಂತೆ ನಾನು ಇದ್ದೇನೆ. ತಾಯಿ ಇದ್ದ ಶಿಶುವಿನಂತೆ ನಾನು ಇದ್ದೇನೆ. ಇವರಿಗೆ ಹೇಗೆ ಸ್ವಾತಂತ್ರ್ಯವಿರಲಾರದೋ, ಹಾಗೆ ನನಗೆ ಸ್ವಾತಂತ್ರ್ಯವೆಂಬುದು ಇರಲಾರದು

ನಿನ್ನವರು ನನ್ನನ್ನು ಒಲ್ಲರು. ಆದರಿಂದ ನನಗಾದ ದುಃಖವನ್ನು ಹೇಗೆ ಮರೆಯಲಿ ? ಇನ್ನು ಮೇಲೆ ನಾನು ನಿನ್ನ ಆಜ್ಞೆಯನ್ನು ಮೀರುವದಿಲ್ಲ, ನಿನ್ನಾಣೆ. ಎಂದು ಎನ್ನುತ್ತಾನೆ. (೩೮)

ಅವನು ಪುನಃ ನುಡಿದುದೇನೆಂದರೆ:— ಯಾವಾಗಲೂ ನಿಮ್ಮವರುಗಳು ನೀನೇ ಎಂದು ನನ್ನ ಮನವು ತಿಳಿಯುವಂತೆ ಮಾಡು. ಇಂಥ ಶ್ರೇಷ್ಠ ವ್ರತವನ್ನು ನನಗೆ ದಯಪಾಲಿಸು, ಎಂದು ಬೇಡಿಕೊಳ್ಳುತ್ತಾನೆ. ನಿನ್ನ ಲಿಂಗ ಚಿನ್ಹವನ್ನು ಕಂಡು ಅದರಲ್ಲಿ ಎಲ್ಲದರ ಸಾರವಿದೆ, ಎಂದು ನನ್ನ ಮನಸ್ಸು ನಂಬುವಂತೆ ಮಾಡು. ಇಂಥ ಮಂಗಳವನ್ನು ನನಗೆ ದಯಪಾಲಿಸು. ನಿನ್ನ ವರು ಯಾರು ಇದ್ದಾರೋ ಅವರ ಕೀಳ ವಸ್ತುಗಳನ್ನು ನಾನು ಕಾಯುತ್ತಿರುವಂಥ ಸುಕೃತವನ್ನು ನನಗೆ ತಪ್ಪದೆ ದಯಪಾಲಿಸು ಎಂದು ಸಿದ್ಧರಾಮೇಶ್ವರನು ಪರಮಾತ್ಮನನ್ನು ಕುರಿತು ಬೇಡಿಕೊಳ್ಳುತ್ತಾನೆ. (೩೯)

ಮತ್ತೂ ಅವನು ಅಂದುದೇನೆಂದರೆ, ನಾನು ಈ ವರೆಗೆ ಶೈವ ಯೋಗಾಭ್ಯಾಸದ ಭಿನ್ನ ಕ್ರಿಯೆಗಳನ್ನು ಆಚರಿಸುತ್ತ ಬಂದೆನು. ಅವುಗಳನ್ನು ನಾನು ಇನ್ನುಮೇಲೆ ಅಲ್ಲಗಳೆಯುವೆನು. ಮತ್ತು ನನ್ನ ಮೇಲೆ ಶರಣರ ಕಾರುಣ್ಯವು ಉಂಟಾಗುವಂತೆ ಮಾಡು, ಎಂದು ಅಲ್ಲಮಪ್ರಭುವಿಗೆ ಬೇಡಿಕೊಳ್ಳುತ್ತಾನೆ. ಅದು ಹೇಗೆಂದರೆ:—

ನಾನು ನನ್ನ ಅಜ್ಞಾನದ ಮೂಲಕ ಈ ವರೆಗೆ ಹೀಗೆ ಇಚ್ಛಿಸಿಮಾಡಿದೆನು. ಈ ನನ್ನ ತಿಳಿಗೇಡಿತನವನ್ನು ನೋಡಬೇಡ. ನಾನು ಕೆರೆ, ಭಾವಿ, ಹೂದೋಟ, ಚೌಕ ಛತ್ರಗಳನ್ನು ಮಾಡಿಸಿದ್ದರಿಂದ ನಾನು ದಯಾವಂತನೆಂದು ಜನರು ಭಾವಿಸಿ, ನಾನು ದಾನಿ ಎಂದು ಕರೆದರು. ನಾನು ದಾನಿಯಲ್ಲ. ಆದರೂ ನನಗೆ ಪ್ರೇರಣೆಯುಂಟಾದಂತೆ ನಾನು ಮಾಡಿದೆನು. ಆದರೆ ಈಗ ನೀನು ಬರಹೇಳಿದ್ದರಿಂದ ನಾನು ಇಲ್ಲಿಗೆ ಈಗ ಬಂದೆನು. ಇನ್ನುಮೇಲೆ ನೀನು ಇರಿಸಿದಂತೆ ನಾನು ಇರುವೆನು. ನಿನ್ನ ಇಚ್ಛೆಯನ್ನು ನಾನು ಮೀರುವದಿಲ್ಲ. ಫಲಪದವನ್ನು ನಾನು ಅಪೇಕ್ಷಿಸಿ, ಇನ್ನು ಮುಂದೆ ನಾನು ಪುನಃ ಹುಟ್ಟಬೇಕೆಂದು ಬಯಸಿದೆನಾದರೆ, ಪರಮಾತ್ಮನೇ ನಿಮ್ಮಾಣೆ. ನಾನು ಪುನಃ ಭವಕ್ಕೆ ಬರದಂತೆ ಮಾಡು, ನಿನ್ನ ಧರ್ಮ ನಿನ್ನ ಧರ್ಮ. (೪೦)

ಮತ್ತೂ ಏನೆಂದರೆ:— ನಿಮ್ಮವರ ಸಂಗವು ನನಗೆ ಉಂಟಾಗುವಂತೆ ಮಾಡು. ನಿಮ್ಮವರ ಆನಂದವನ್ನು ನನಗೆ ಉಂಟುಮಾಡು. ನಿಮ್ಮವರು

ಹೇಗೆ ಇದ್ದಾರೋ, ಹಾಗೆ ನಾನು ಇರುವಂತೆ ಮಾಡು. ನಿನ್ನವರ ಕೂಡ ನಾನು ಇರುವದನ್ನು ನಾನು ನೋಡುವಂತೆ ಮಾಡು. ನನ್ನ ಕಡೆಯಿಂದ ಬಚ್ಚಬರಿಯ ಭಕ್ತಿಯನ್ನು ಮಾಡಿಸು. ನನಗೆ ಪಾದೋದಕ ಪ್ರಸಾದವು ದೊರಕುವಂತೆ ಮಾಡು. ನಾನು ನಿಮ್ಮವರಲ್ಲಿ ಸಿಲ್ಕಿರುವಂತೆ ಮಾಡು. ನಿನ್ನವರ ಪಾದದಡಿಯಲ್ಲಿ ಯಾವಾಗಲೂ ನಾನು ಇರುವಂತೆ ಮಾಡು. ನಾನು ಎಷ್ಟು ಜನ್ಮಗಳಲ್ಲಿ ಹುಟ್ಟಿಬಂದರೂ ನಾನು ಪರಮಾತ್ಮನಲ್ಲಿಯೇ ಇರುವೆನು. ಈ ಪ್ರಕಾರ ನನ್ನ ಭವದ ಹುಟ್ಟನ್ನು ನೀನು ಕೆಡಿಸಿಬಿಡು, ಎಂದು ಪರ ಮಾತ್ಮನನ್ನು ಕುರಿತು ಬೇಡಿಕೊಳ್ಳುತ್ತಾನೆ. (೪೧)

ಅದ್ವೈತದ ತತ್ವಗಳನ್ನು ಒಂದು ಕೋಟಿ ವೇಳೆ ನುಡಿಯಬಹುದು. ಆದರೆ ನಿಶ್ಚಲ ಮನಸ್ಸಿನವನಾಗಿ, ಸದ್ಭಕ್ತಿಯೇ ಆಚಾರವಾಗಿ ಒಮ್ಮೆಯಾದರೂ ನಡೆಯಬಹುದೇ ? ಮಾತಿನಂತೆ ನಡೆಯುವಂಥ, ನಡೆದಂತೆ ನುಡಿಯುವಂಥ, ಸದ್ಭಕ್ತಿ ಸದಾಚಾರಯುಕ್ತರಾದಂಥ, ಮಹಾತ್ಮರ ಪಾದವನ್ನು ನಾನು ಹಿಡಿಯುವಂತೆ ಮಾಡು. ಎಲೋ ಪರಮಾತ್ಮನೇ, ಈ ಪ್ರಕಾರ ನಾನು ಬದುಕುವಂತೆ ಮಾಡು, ಎಂದು ಬೇಡಿಕೊಳ್ಳುತ್ತಾನೆ. (೪೨)

## ಧ್ಯಾನಯೋಗವು ನಿಷ್ಫಲವಾದದ್ದು.

ಹೀಗೆ ಸಿದ್ಧರಾಮನು ನುಡಿಯಲು ಅದಕ್ಕೆ ಅಲ್ಲಮಪ್ರಭುವು ನೀನು ಅಂತರ್ಲಕ್ಷದ ಅನುಸಂಧಾನ ಮಾಡುತ್ತ ಧ್ಯಾನಯೋಗದಿಂದ ಪರಮಾತ್ಮನನ್ನು ಕಾಣಬೇಕೆನ್ನುತ್ತೀ, ಇದರಿಂದ ಇದು ಸಾಧ್ಯವಾಗಲಾರದು. ಆದರೆ ನೀನು ನನ್ನ ಗುರುವಾದ ಅನುಮಿಷದೇವನಂತೆ ಕರಸ್ಥಲದಲ್ಲಿ ಇಷ್ಟಲಿಂಗವನ್ನು ಧಾರಣ ಮಾಡಿ ಬಹಿರ್ಲಕ್ಷವನ್ನು ಅದರಲ್ಲಿಟ್ಟು ಅನುಸಂಧಾನ ಮಾಡಿದಲ್ಲಿ ನೀನು ಪರಮಾತ್ಮನನ್ನು ನಿಶ್ಚಯವಾಗಿ ಕಾಣುವಿ ಎಂದು ಹೇಳುತ್ತಾನೆ. ಆ ವಚನವು ಆವುದೆಂದರೆ:—

ಶ್ರುತಿಗಳನ್ನು ನೀನು ನಂಬಬೇಡ. ಇವುಗಳು ಪರಮಾತ್ಮನನ್ನು ಕಾಣದೆ ಅವನನ್ನು ಹುಡುಕುತ್ತ ಹುಡುಕುತ್ತ ಬಳಲುತ್ತಿವೆ. ಶ್ರುತಿಗಳು ಹೇಳುವಂತೆ ಬರೇ ಜ್ಞಾನದಲ್ಲಿದ್ದುಕೊಂಡು ಬಳಲಬೇಡ. ಏನೂ ಇಲ್ಲದಲ್ಲಿ ಹುಡುಕುತ್ತ ಭ್ರಮಿಸಬೇಡ. ಪರಮಾತ್ಮನು ಹೃದಯದಲ್ಲಿದ್ದಾನೆಂದು ನೀನು ಭಾವಿಸ ಬೇಡ. ಅವನು ಹಣೆಯಲ್ಲಿದ್ದಾನೆಂತಲೂ ತಿಳಿಯಬೇಡ. ನೀನು ಪರಮಾತ್ಮ

ನನ್ನು ನಿಶ್ಚಯವಾಗಿ ಕಾಣುವೆನೆಂದರೆ, ನೀನು ನನ್ನ ಸದ್ಗುರುವಾದ ಅನು ಮಿಷನಂತೆ ನಿನ್ನ ಇಷ್ಟಲಿಂಗದಲ್ಲಿ ಅವನನ್ನು ನಿಶ್ಚಯಿಸಿಕೊಂಡು ಅವನಲ್ಲಿ ಐಕ್ಯವನ್ನು ಹೊಂದು, ಎಂದು ಅಲ್ಲಮಪ್ರಭುವು ಸಿದ್ಧರಾಮನಿಗೆ ಬೋಧಿಸಿದನು. (೪೩)

## ಪ್ರಾಣಲಿಂಗದ ತಿಳಿವಳಿಕೆ.

ಅಲ್ಲಮಪ್ರಭುವು ಮತ್ತೂ ಹೇಳಿದ್ದೇನೆಂದರೆ, ನಾನು ಅನುಮಿಷನ ಕೃಪೆಯಿಂದ ಇಷ್ಟಲಿಂಗವನ್ನು ಹೊಂದಿದ್ದರಿಂದ ನನಗೆ ಪ್ರಾಣಲಿಂಗದ ತಿಳಿವಳಿಕೆಯಾಯಿತು. ನಿನಗೆ ಇಷ್ಟಲಿಂಗಸಂಬಂಧವಿರದೆ ಹೋದರೆ, ನಿನಗೆ ಪ್ರಾಣಲಿಂಗವು ಸಾಧ್ಯವಲ್ಲ. ಈ ಬಗ್ಗೆ ವಚನವು ಕೆಳಗಿನಂತೆ ಇದೆ.

ಅಂಗವು ಲಿಂಗ, ಪ್ರಾಣವು ಲಿಂಗ, ಮನವು ಲಿಂಗ ಹೀಗೆ ಇವುಗಳ ಸ್ವರೂಪವಿದೆ. ಆದರೆ ಅಂಗವು ಲಿಂಗವಾದರೂ ಅದು ಬಾಹ್ಯದ ನಡೆ ನುಡಿ ಗತಿಯನರಿಯದು. ಪ್ರಾಣವು ಲಿಂಗವಾದರೂ ಅದು ನವನಾಳದಲ್ಲಿಯ ಸಂಚಾರವನ್ನರಿಯದು. ಮನವು ಲಿಂಗವಾದರೂ ಅದಕ್ಕೆ ನೆನಹು ಅಂದರೆ ಧ್ಯಾನದ ಅರಿವು ಇರುವದಿಲ್ಲ. ಅನುಭಾವವು ಲಿಂಗವಾದರೂ ಅಲ್ಲಿ ವಿಚಾರವು ಸ್ತಬ್ಧವಾಗಿರುತ್ತದೆ. ಭಾವವು ಲಿಂಗವಾದರೂ ಅಲ್ಲಿ ಭಾವನೆಯು ಅಳಿದಿದೆ. ಹೀಗೆ ಕ್ರಿಯೆಗಳೆಲ್ಲ ಲಿಂಗಗಳಾದರೂ ಮಾರ್ಗಕ್ರಿ ಎಂದರೆ ಬಾಹ್ಯ ಕ್ರಿಯೆಗಳು ತಮ್ಮ ನಿಜವನ್ನರಿಯವು. ಅರಿವು ಕೂಡ ಲಿಂಗವಾಗಲು ಅದಕ್ಕೆ ಮರಹು ಸಹ ಇಲ್ಲವಾಯಿತು. ಅಂತರಂಗವು ಲಿಂಗವಾದರೂ ಅದು ಬಹಿರಂಗವೆಂದರಿಯದು. ಬಹಿರಂಗವು ಲಿಂಗವಾದರೂ ಅದು ಅಂತರಂಗದ ಸುದ್ದಿಯನ್ನರಿಯದು. ಸರ್ವಾಂಗವು ಲಿಂಗವಾದರೂ ಇಂದ್ರಿಯಗಳ ಕ್ರಿಯೆಗಳು ನಿಂತುಹೋದವು. ಮಹಾಘನವು ಇವುಗಳನ್ನೆಲ್ಲ ವ್ಯಾಪಿಸಿದ್ದರಿಂದ ನಿವೃತ್ತಿ ಎಂಬುದು ಬಯಲಾಯಿತು. ಈ ಪ್ರಕಾರ ಪರಮಾತ್ಮನಲ್ಲಿ ಪ್ರಾಣಲಿಂಗವು ಸಂಬಂಧವನ್ನು ಹೊಂದಿತು, ಎಂದು ಅಲ್ಲಮಪ್ರಭುವು ಇಲ್ಲಿ ಹೇಳುತ್ತಾನೆ. ಅಂತಿಮ ಸಾಮರಸ್ಯ ಸ್ಥಿತಿಯ ಒಂದು ರೀತಿಯ ವರ್ಣನೆಯು ಇದಾಗಿದೆ. ಎಲ್ಲವೂ ಸಾಮರಸ್ಯವನ್ನು ಹೊಂದಿದ್ದರಿಂದ ಈ ಎಲ್ಲವುಗಳ ವ್ಯಾಪಾರಗಳನ್ನು ಗುರುತಿಟ್ಟು ಹೇಳಲಿಕ್ಕೆ ಬರಲಾರದು. ಆಗ ಮನ, ವಾಕ್ಕು, ಅರಿವು ಮೊದಲಾದವುಗಳು ಪೂರ್ಣತೆಯನ್ನು ಹೊಂದಿ ಎಲ್ಲ ತರದ ಅನುಭವಗಳನ್ನು ತನ್ನಲ್ಲಿ ಅಡಗಿಸಿಕೊಂಡು ಶೂನ್ಯ ಸ್ಥಿತಿಯನ್ನು ಹೊಂದುತ್ತದೆಂಬ ಭಾವವು ಇದರಲ್ಲಿದೆ. (೪೪)

ಮುಂದೆ ಅಮುಗಿದೇವಯ್ಯನೆಂಬ ಇನ್ನೊಬ್ಬ ಶಿವಶರಣನು ಅಲ್ಲಮ ಪ್ರಭುವಿನ ಮೇಲಿನ ವಿಚಾರಗಳನ್ನು ಸಮರ್ಥಿಸುತ್ತ ಅಂದುದು ಏನೆಂದರೆ:-

ಬಹು ಜನರು ನೀರಡಿಕೆ ಹಸಿವೆಗಳು ಆಗಬಾರದೆಂದು ನೀರು ಕುಡಿಯುವದಿಲ್ಲ ಮತ್ತು ಉಪವಾಸವಿರುತ್ತಾರೆ. ಇಂಥವರಿಗೆ ಭಕ್ತರೆನ್ನಬೇಕೇ? ಅನ್ನಬಾರದು. ಬಹು ಜನರು ಸಿದ್ಧಿಗಳನ್ನು ಸಾಧಿಸಿ ಆಕಾಶದಲ್ಲಿ ಸಂಚಾರ ಮಾಡುತ್ತಾರೆ. ಅಥವಾ ಇಲ್ಲಿಯೇ ತಮ್ಮ ಮನಸ್ಸಿಗೆ ಬಂದತ್ತ ಹೋಗುವ ಸಾಮರ್ಥ್ಯವುಳ್ಳವರಿರುತ್ತಾರೆ. ಇವರಿಗೆ ಭಕ್ತರೆನ್ನಬೇಕೇ? ಅವರಿಗೆ ಅನ್ನಬಾರದು. ಕೆಲವರು ಅಷ್ಟಮಹಾಸಿದ್ಧಿಗಳನ್ನು ಪಡೆದಿರುವರು. ಬೇರೆ ಕೆಲವರು ಚತುರ್ವಿಧ ಪದಗಳನ್ನು ಪಡೆದು ಕೈಲಾಸದಲ್ಲಿ ವಾಸಿಸುವ ಸಾಮರ್ಥ್ಯದನ್ನು ಹೊಂದಿರುತ್ತಾರೆ. ಬೇರೆ ಕೆಲವರು ಮಹತ್ವಗಳನ್ನು ಮಾಡುವ ಸಾಮರ್ಥ್ಯವನ್ನು ಹೊಂದಿರುತ್ತಾರೆ. ಆದರೆ ಇವರೆಲ್ಲರೂ ಭಕ್ತರೇ? ಇವರು ಭಕ್ತರಲ್ಲವೆಂದು ಅಮುಗಿದೇವನ ಅಭಿಪ್ರಾಯವು. ಆದರೆ ಭಕ್ತಿಯ ರೀತಿಯು ಹೇಗೆಂದರೆ, ಮನುಷ್ಯನಿಗೆ ಕಾರ್ಯಮಾಡಲು ಮೂರು ಶರೀರಗಳಿದ್ದು ಇವುಗಳಲ್ಲಿ ಮೂರು ಲಿಂಗಗಳಾದ ಇಷ್ಟ, ಪ್ರಾಣ, ಭಾವಲಿಂಗಗಳನ್ನು ಅನುಕ್ರಮವಾಗಿ ಅನುಗೊಳಿಸಿ ಗುರುಲಿಂಗಜಂಗಮಗಳನ್ನು ಆರಾಧಿಸುತ್ತ ಈ ಲಿಂಗತ್ರಯಗಳಲ್ಲಿ ಇವುಗಳನ್ನು ಸಮವೇಧಿಸಿ ಇವುಗಳ ಪ್ರಸಾದವನ್ನು ಹೊಂದಬೇಕು. ಹೀಗೆ ಹೊಂದದೆ ಹೋದರೆ ಅವರು ಭಕ್ತರಲ್ಲವೆಂದು ಅಮುಗಿದೇವನು ಹೇಳುತ್ತಾನೆ.

ಅವನು ಮತ್ತೂ ಅಂದುದೇನೆಂದರೆ:— ಗುರುಕಾರುಣ್ಯವನ್ನು ಹೊಂದಿ ಲಿಂಗದಲ್ಲಿ ಮನುಷ್ಯನು ಬೆರೆತಿರಬೇಕು. ಹೀಗೆ ಬೆರೆಯದೆ, ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಗಳ ವಿಚಾರವಿಲ್ಲದೆ, ಕೇವಲ ಜ್ಞಾನಯೋಗಿಯಾಗಿ ಶೂನ್ಯದಲ್ಲಿ ಅನುಭಾವಿಯಾದವನಿಗೆ ಗುರುಭಕ್ತಿ ಇರಲಾರದು. ಗುರುಭಕ್ತಿ ಇರದಿದ್ದರೆ, ಲಿಂಗ ಭಕ್ತಿಯು ಇಲ್ಲ. ಲಿಂಗ ಭಕ್ತಿಯು ಇಲ್ಲದಿದ್ದರೆ ಜಂಗಮ ಭಕ್ತಿಯೂ ಇಲ್ಲ. ಜಂಗಮ ಭಕ್ತಿಯು ಇಲ್ಲವಾಗಿ ಪ್ರಸಾದವಿಲ್ಲ. ಪ್ರಸಾದವಿಲ್ಲವಾಗಿ ಮೋಕ್ಷವಿಲ್ಲ. ಇದು ಕಾರಣ ಪರಮಾತ್ಮನಲ್ಲಿ ಗುರುವಿನ ಮೂಲಕ ಜನ್ಮವನ್ನು ಹೊಂದಿ ಲಿಂಗಾಂಗ ಸಂಬಂಧಿಗಳಾಗಿ ಆಚರಿಸುವವರು ಬಹು ದುರ್ಲಭವೆಂದು ಅಮುಗಿದೇವನು ಹೇಳುತ್ತಾನೆ. (೪೭)

ಹೀಗೆ ಅಮುಗಿದೇವನು ಪ್ರಭುದೇವರಿಗೆ ತಿಳಿಸಲು ಸಿದ್ಧರಾಮನು ಬಸವೇಶ್ವರ ಮೊದಲಾದ ಅಸಂಖ್ಯಾತ ಮಹಾ ಗಣಂಗಳನ್ನು ಮುಂದೆ ಮಾಡಿಕೊಂಡು ಚನ್ನಬಸವೇಶ್ವರನ ಕಡೆಯಿಂದ ತನಗೆ ಲಿಂಗಾನುಗ್ರಹವನ್ನು ಕರುಣಿಸಬೇಕೆಂದು ಅಲ್ಲಮಪ್ರಭುವಿಗೆ ಬಿನ್ನವಿಸಿಕೊಂಡನು. ಅದು ಹೇಗೆಂದರೆ:—

ಸೂರ್ಯ ಮಂಡಲದಲ್ಲಿ ಸೂರ್ಯನ ಕಿರಣಗಳು ಅಡಗಿರುವಂತೆ, ಹಣ್ಣಿನ ಬೀಜದಲ್ಲಿ ವೃಕ್ಷವು ಅಡಗಿರುವಂತೆ, ಚಂದ್ರಕಾಂತ, ಸೂರ್ಯಕಾಂತ ಕಲ್ಲುಗಳಲ್ಲಿ ನೀರು ಮತ್ತು ಅಗ್ನಿ ಇವುಗಳು ಅನುಕ್ರಮವಾಗಿ ಅಡಗಿರುವಂತೆ. ಹಾಲಿನಲ್ಲಿ ಮೊಸರು, ಬೆಣ್ಣೆ, ಮಜ್ಜಿಗೆ, ತುಪ್ಪ ಇವುಗಳು ಕಾಣದಂತೆ ಇರುವಂತೆ, ಇಷ್ಟಲಿಂಗವು ಅಂಗದ ಮೇಲೆ ಸಾಹಿತ್ಯವಾಗಬೇಕು. ಆಗ ತನ್ನಲ್ಲಿ ಲಿಂಗವನ್ನು ಮತ್ತು ಆ ಲಿಂಗದೊಳಗೆ ತನ್ನನ್ನು ಮತ್ತು ತನ್ನೊಳಗೆ ಸಮಸ್ತ ವಿಸ್ತಾರವೆಲ್ಲವನ್ನು ಕಾಣಬೇಕು. ಆಗ ಜಂಗಮದ ಮುಖವೇ ಲಿಂಗವಾಗುತ್ತದೆ. ಮತ್ತು ಲಿಂಗಕ್ಕೆ ಜಂಗಮವೇ ಪ್ರಾಣವಾಗುತ್ತದೆ. ಅಂಗದಲ್ಲಿ ಲಿಂಗವೇ ಆಚಾರವಾಗಿ ಅಳವಡುತ್ತದೆ. ಈ ವಿವರವನ್ನು ಮತ್ತು ಲಿಂಗಾಂಗ ಸಂಬಂಧದ ಸ್ಥಳ ಕುಳಗಳು ಅಭಿನ್ನವಾಗಿರುವದನ್ನು ಕಾಣಬೇಕು. ಅಲ್ಲದೆ ಕಣ್ಣುಗಳ ನೋಟಕ್ಕೆ ಗುರಿಯಾದ ಇಷ್ಟಲಿಂಗವು ಅಂಗವನ್ನೆಲ್ಲ ವ್ಯಾಪಿಸಿಬಿಡುವದನ್ನು ಸಹ, ಎಲೋ ಸಂಗನಬಸವೇಶ್ವರನೇ, ಚನ್ನಬಸವನ ಕಡೆಯಿಂದ ನನಗೆ ಕಾಣುವಂತೆ ದಯಮಾಡಿ ಮಾಡು, ಎಂದು ಬೇಡಿಕೊಳ್ಳುತ್ತಾನೆ. (೪೭)

ಈ ಪ್ರಕಾರ ಸಿದ್ಧರಾಮನು ತನಗೆ ಬಸವ ಚನ್ನಬಸವ ಇವರಿಂದ ಲಿಂಗಧಾರಣ ಮಾಡಿಸೆಂದು ಅಲ್ಲಮಪ್ರಭುವಿಗೆ ಬಿನ್ನೈಸಲು ಅಲ್ಲಮಪ್ರಭುವು ಇನ್ನು ಮೇಲೆ ಸಿದ್ಧರಾಮನಿಗೆ ಲಿಂಗಧಾರಣ ಮಾಡಬೇಕೆಂದು ಚನ್ನಬಸವನಿಗೆ ತಿಳಿಸಿದನು. ಆಗ ಅವನು ನುಡಿದ ವಚನವೇನೆಂದರೆ:—

ರತ್ನದ ಪ್ರಕಾಶವಾಗಿದ್ದರೇನು ಫಲ ? ರತ್ನವು ಕುಂದಣದಲ್ಲಿ ಸೇರಿರಬೇಕು. ಕೆಲವೊಂದು ಫಲವು ಸ್ವಾದುಳ್ಳದ್ದಾಗಿದ್ದರೇನು ? ಸ್ವಾದವನ್ನು ಉತ್ಪನ್ನಮಾಡುವಂಥ ವೃಕ್ಷವು ಅದಕ್ಕೆ ಆಧಾರವಾಗಿರಬೇಕು. ಇಂಥ ಗಿಡದಿಂದ ಆ ಹಣ್ಣು ರುಚಿಯಾಗುತ್ತದೆ. ಚಿತ್ರವು ನೋಡಲಿಕ್ಕೆ ಸುಂದರವಾದರೇನು ? ಆ ಚಿತ್ರವನ್ನು ಗೋಡೆಯಮೇಲೆ ಬರೆಯಬೇಕು. ಆಗ ಅದರ ಸೌಂದರ್ಯವು ಕಣ್ಣಿಗೆ ಕಾಣುತ್ತದೆ. ಅಂಜನ ಸಿದ್ಧಿಯಿಂದ ನೆಲದೊಳಗಿನ ದ್ರವ್ಯವನ್ನು ನೋಡಿದರೇನಾಯಿತು ? ಮೊದಲು ಸಾಧನ ಕ್ರಿಯೆಗಳಿಂದ

ಅಂಥ ಅಂಜನವನ್ನು ಸಾಧ್ಯಮಾಡಿಕೊಳ್ಳಬೇಕು. ಇದರಂತೆ ಶರೀರದ ಕರ ಸ್ಥಲದಲ್ಲಿ ಇಷ್ಟಲಿಂಗವನ್ನು ಸಾಧ್ಯ ಮಾಡಿಕೊಳ್ಳದಿದ್ದರೆ ನಿರವಯವಾದ ಜ್ಞಾನ ಯೋಗದ ಕೂಟ ಸಾಧ್ಯವಾಗಲಾರದು. ಆದ್ದರಿಂದ ಇಷ್ಟಲಿಂಗವನ್ನು ಧಾರಣ ಮಾಡುವದೇ ಭಕ್ತನಿಗೆ ಯೋಗ್ಯವು. ಇದರಿಂದಲೇ ಮಹಾ ಘನವು ಲಭಿ ಸುತ್ತದೆ. ಆದ್ದರಿಂದ ಶರಣರ ಮನಸ್ಸಿಗೆ ಬರುವಂತೆ ಸಿದ್ಧರಾಮನಿಗೆ ನೀನು ಇಷ್ಟಲಿಂಗವನ್ನು ದಯಪಾಲಿಸೆಂದು ಅಲ್ಲಮಪ್ರಭುವು ಚನ್ನಬಸವನಿಗೆ ಬಿನ್ನ ವಿಸಿದನು. (೪೮)

## ೨೧. ದೀಕ್ಷೆಗಳು

ಈ ಪ್ರಕಾರ ಪ್ರಭುದೇವನು ಸಿದ್ಧರಾಮನಿಗೆ ಉಪದೇಶ ಮಾಡಬೇಕೆಂದು ಚನ್ನಬಸವನಿಗೆ ಹೇಳಲು ಚನ್ನಬಸವನು ಅವನಿಗೆ ದೀಕ್ಷೆಯನ್ನು ಮಾಡಿದನು. ಅದರ ಕ್ರಮವು ಹೇಗೆಂದರೆ—

ಆಣವ ಮಲ, ಮಾಯಾಮಲ, ಕಾರ್ಮಿಕ ಮಲವೆಂಬ ಮಲತ್ರಯ ಗಳನ್ನು ಮೊದಲು ದೂರ ಮಾಡಿ ಆಜ್ಞಾ ದೀಕ್ಷೆ, ಉಪಮಾದೀಕ್ಷೆ, ಸ್ವಸ್ತಿ ಕಾರೋಹಣ, ಕಳಶಾಭಿಷೇಕ, ವಿಭೂತಿಪಟ್ಟ, ಲಿಂಗಾಯತ, ಲಿಂಗ ಸ್ವಾಯತ ಈ ಏಳನ್ನು ಕಾಯಕ್ಕೆ ಉಪದೇಶ ಮಾಡುವದು. ಸಮಯ, ನಿಸ್ಸಂಸಾರ, ನಿರ್ವಾಣ, ತತ್ವ ದೀಕ್ಷೆ, ಅಧ್ಯಾತ್ಮಿಕ, ಅನುಗ್ರಹ, ಸತ್ಯ ಶುದ್ಧ ಈ ಏಳನ್ನು ಪ್ರಾಣಕ್ಕೆ ಉಪದೇಶ ಮಾಡುವುದು. ಏಕಾಗ್ರ ಚಿತ್ತ, ದೃಢವ್ರತ, ಪಂಚೇಂದ್ರಿ ಯಾರ್ಪಿತ, ಅಹಿಂಸೆ, ಮನೋಲ್ಲಯ, ಲಿಂಗ ನಿಜ, ಸದ್ಯೋನ್ಮುಕ್ತಿ ಈ ಏಳನ್ನು ಮನಕ್ಕೆ ಉಪದೇಶ ಮಾಡುವುದು. ಈ ಕ್ರಮವನ್ನು ಅರಿದು ದೀಕ್ಷೆ ಮಾಡುವದೇ ಸಹಜ ದೀಕ್ಷೆಯಾಗಿರುತ್ತದೆ. (೪೯)

ಈ ಕ್ರಮಕ್ಕೆ ಅನುಸರಿಸಿ ಚನ್ನಬಸವನು ಸಿದ್ಧರಾಮನ ಕಾಯ, ಪ್ರಾಣ, ಮನ ಇವುಗಳಿಗೆ ೨೧ ದೀಕ್ಷೆಯನ್ನು ಮಾಡಿ ಅವನಿಗೆ ತ್ರಿವಿಧಲಿಂಗ ಧಾರಣ ವನ್ನು ಸಂಬಂಧಿಸಿದನು. ಆಗ ಸಿದ್ಧರಾಮನು ಆನಂದಭರಿತನಾಗಿ ಬಿನ್ನೈಸಿದ ವಚನವಾವುದೆಂದರೆ:—

### ಶಿವಯೋಗ

ನೀವು ಅಧ್ಯಾತ್ಮ ಅಧ್ಯಾತ್ಮವೆಂದೆನ್ನುತ್ತೀರಿ. ಆದರೆ ಅಧ್ಯಾತ್ಮವಾರಿಗೆ? ಗುರುವು ಅತ್ಯುನ್ನತವಾದ ಶಿವಲಿಂಗವನ್ನು ಸೂಕ್ಷ್ಮವನ್ನಾಗಿ ಮಾಡಿ, ಕರ ಸ್ಥಲಕ್ಕೆ ಕೊಟ್ಟ ಬಳಿಕ ಅದನ್ನು ಬಿಟ್ಟು ನನಗೆ ಬೇರೊಂದು ಯೋಗಸಾಧನ

ವಿಲ್ಲ. ಗುರುವು ತನ್ನ ಹಸ್ತವನ್ನು ಮಸ್ತಕದಲ್ಲಿರಿಸಿ ಮೊದಲು ವಾಯು ಪ್ರಾಣಿಯಾದವನನ್ನು ಲಿಂಗಪ್ರಾಣಿಯನ್ನಾಗಿ ಮಾಡುತ್ತಾನೆ. ಆ ಬಳಿಕ ಐದಕ್ಷರಗಳುಳ್ಳ ಪಂಚಾಕ್ಷರದಲ್ಲಿ ಮುಕ್ತನನ್ನಾಗಿ ಮಾಡಿದನು. ಇದಾದ ಬಳಿಕ ಶಿವಯೋಗವನ್ನು ಬಿಟ್ಟು ಬೇರೊಂದು ಯೋಗ ಉಂಟೇ ? ನಾನು ಲಿಂಗಾರ್ಚನೆಯನ್ನು ಮಾಡಿ ಜಂಗಮಪ್ರಸಾದವನ್ನು ತೆಗೆದುಕೊಂಡ ಬಳಿಕ ಬೇರೆಯ ಯೋಗಕ್ಕೆ ನನ್ನ ಅರಿವು ಒಡಂಬಡುವದೇ ? ನನ್ನನ್ನು ಇಂತಹ ಶಿವಯೋಗಿಯನ್ನಾಗಿ ಚನ್ನಬಸವಣ್ಣನು ಮಾಡಿದ್ದಾನೆ. ಆದ್ದರಿಂದ ನಾನು ಚನ್ನಬಸವಣ್ಣನ ಕೃಪೆಯಿಂದ ಅಭ್ಯಾಸ ಯೋಗವನ್ನು ಅಳಿಗಳೆದು ಶಿವಯೋಗ ದಲ್ಲಿ ನಿತ್ಯನಾಗಿ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ ಶರಣ, ಐಕ್ಯ ಎಂಬ ಷಟ್‌ಸ್ಥಲಗಳಿಗೆ ಅಧಿಕಾರಿಯಾದೆನು. ಮತ್ತು ನಿನ್ನವರ ಪ್ರೇಮಕ್ಕೆ ಪಾತ್ರನಾದೆನು. ಚನ್ನಬಸವಣ್ಣನ ಕೃಪೆಯು ನನ್ನನ್ನು ಹೀಗೆ ಮಾಡಿವೆ ಎಂದು ನುಡಿದನು. (೫೦)

ಅವನು ಮತ್ತೂ ಹೇಳಿದ್ದೇನೆಂದರೆ— ಲಿಂಗದ ಹೆಸರು ಹೇಳಲಿಕ್ಕೆ ಬರಲಾರದು. ಆದರೂ ಚನ್ನಬಸವಣ್ಣನು ಅದು ಕ್ರಿಯಾಲಿಂಗವೆಂದು ಹೇಳಿ ಅದನ್ನು ಕರಸ್ಥಲಕ್ಕೆ ಕೊಟ್ಟನು. ಆ ಲಿಂಗದ ಹೆಸರು ಏನೆಂದರೆ:—

ಕಮಲದ ದೇಟಿನ ಹಣೆಯಲ್ಲಿ ಎಲ್ಲ ಪದಾರ್ಥಗಳು ವಶ್ಯವೆಂಬುದನ್ನು ತೋರಿಸಲು ಅದಕ್ಕೆ ಐದು ಅಕ್ಷರಗಳಿರುತ್ತವೆ. ಇವು ಆತನ ಮೊದಲನೆಯ ಹೆಸರು. ಅವನಿಗೆ ಆರು ಅಕ್ಷರಗಳಿದ್ದು ಆತನು ಎಂದೂ ನಾಶವಾಗದಂತೆ ನನ್ನ ಕರದಲ್ಲಿ ಇದ್ದಾನೆ. ಇದನ್ನು ಅವು ತೋರಿಸುತ್ತವೆ. ಇದು ಆತನ ಎರಡನೆಯ ಹೆಸರು. ಆತನ ಮಸ್ತಕದಲ್ಲಿ ಅವ್ಯಯವಾದ ಅಕ್ಷರವಿದ್ದು, ಇದು ಆತನ ಆಚಾರ್ಯ ಅಂದರೆ ಗುರುವಿನ ಹೆಸರು. ಹೀಗೆ ಆತನಿಗೆ ಮೂರು ಹೆಸರುಗಳಿದ್ದು ಅಂಥ ಲಿಂಗವನ್ನು ಸ್ಮರಿಸುತ್ತ ಧ್ಯಾನಾರೂಢರಾಗಿ ರುವವರು ಎಲ್ಲಿಗಾದರೂ ಒಬ್ಬರು. ಬಸವಣ್ಣ ಮೊದಲಾದ ಪುರಾತನರು ಅವ್ಯಯರಿದ್ದು ಅವರ ಅನುಮತದಿಂದ ಇವರು ಲಿಂಗಾರ್ಚನೆಯನ್ನು ಮಾಡುತ್ತ ನಿತ್ಯಪದವನ್ನು ಹೊಂದುತ್ತಾರೆ. ಇಂಥ ಶರಣರ ಉಪದೇಶವನ್ನು ನಾನು ಕೇಳಿ ನನ್ನ ಗತಿ ಮುಂದೇನು ಎಂಬ ಚಿಂತೆಯನ್ನು ಬಿಟ್ಟುಕೊಟ್ಟು ಪರ ಮಾತ್ಮನನ್ನು ನನ್ನ ಕೈಯಲ್ಲಿ ಹಿಡಿದಿದ್ದೇನೆಂದು ಹೇಳುತ್ತಾನೆ. (೫೧)

## ಇಷ್ಟಲಿಂಗದ ಸ್ವರೂಪ

ಮತ್ತೂ ಏನೆಂದರೆ— ಪರಮಾತ್ಮನಿಗೆ ಆದಿ ಆಧಾರಗಳಿಲ್ಲ. ಅವನಿಗೆ ಸೀಮೆ ಸಂಬಂಧಗಳಿಲ್ಲ. ಮತ್ತು ಅವನಿಗೆ ಸಾದಾಖ್ಯ ಅಂದರೆ ಪದಾರ್ಥ

ಗಳ ಹುಟ್ಟುವಿಕೆಗೆ ಸಾಧನಗಳಾದ ವಸ್ತುಗಳಲ್ಲ. ಹೀಗೆ ಪರಮಾತ್ಮನು ಅನಾದಿಯಿಂದಲೂ ಸುಸಿದ್ಧನಾಗಿರುತ್ತಾನೆ. ಇಂಥವನನ್ನು ನನ್ನ ಗುರುವಾದ ಚನ್ನಬಸವನು ಪ್ರತ್ಯಕ್ಷ ಮಾಡಿ ತೋರಿಸಿ ಇದಕ್ಕೆ ಇಷ್ಟಲಿಂಗವೆಂದು ಹೆಸರಿಟ್ಟು ನನ್ನ ಕರಸ್ಥಲಕ್ಕೆ ಅದನ್ನು ತಂದು ಕೊಟ್ಟನು. (೫೨)

ಮತ್ತೂ ಏನೆಂದರೆ, ಇಂಥ ಗುರುವಿನ ಹಸ್ತದಲ್ಲಿ ಇಹಲೋಕ ಪರಲೋಕವೆಂಬ ಭೇದವು ಅಳಿದು ಹೋಗಿಬಿಡುತ್ತದೆ. ಸತ್ತು ಅಂದರೆ ಇರುವಿಕೆಯೇ ಸ್ವಭಾವವುಳ್ಳ ಪಂಚಾಕ್ಷರ ಮಂತ್ರದಿಂದ ನಾನು ಶುದ್ಧನಾದೆನು. ನಾನು ನಿತ್ಯವೂ ಲಿಂಗಾರ್ಚನೆ ಮಾಡುವದರಿಂದ ಮತ್ತು ಯಾವಾಗಲೂ ವಿಭೂತಿ, ರುದ್ರಾಕ್ಷಿ ಧಾರಣ ಮಾಡುವದರಿಂದ, ಇಹಲೋಕ ಪರಲೋಕವೆಂಬ ಭೇದವು ಹೋಗಿಬಿಟ್ಟಿತು. ಹೀಗೆ ಈ ಭೇದವು ಹೋದಬಳಿಕ ಮತ್ತು ಮಲ ಮಾಯೆಗಳನ್ನು ಹರಿದ ಬಳಿಕ ನನಗೂ ನಿನಗೂ ಸಮರಸವು ಪ್ರಾಪ್ತವಾಗುತ್ತದೆ. ಹೀಗೆ ಭಕ್ತರು ಸರ್ವಾಂಗ ಲಿಂಗ ತನುವುಳ್ಳವರಾಗಿ ಅವರು ವಾಸಿಸುವಂಥ ಲೋಕವೇ ರುದ್ರಲೋಕವು. ಎಲೋ ಪರಮಾತ್ಮನೇ, ಗುರುವು ತನ್ನ ಹಸ್ತವನ್ನು ನನ್ನ ಮಸ್ತಕದ ಮೇಲೆ ಇಟ್ಟ ಕೂಡಲೆ ನನಗೆ ಈ ಸ್ಥಿತಿಯು ಪ್ರಾಪ್ತವಾಯಿತೆಂದು ಸಿದ್ಧರಾಮನು ಇಲ್ಲಿ ಹೇಳುತ್ತಾನೆ. (೫೩)

## ಪ್ರಸಾದಗಳು

ಚನ್ನಬಸವಣ್ಣನು ಪ್ರಸಾದಿ ಸ್ಥಲದ ಈ ರೀತಿಯನ್ನು ಚನ್ನಾಗಿ ಬಲ್ಲವನು. ಮನುಷ್ಯನಿಗೆ ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳಲ್ಲಿ ಇಷ್ಟ ಪ್ರಾಣ ಭಾವ ಲಿಂಗಗಳು ಇದ್ದು ಅವು ಗುರು ಲಿಂಗ ಜಂಗಮ ಪ್ರಸಾದಗಳ ಮೂಲಕ ಆಯಾ ಶರೀರಗಳಲ್ಲಿ ಸಂಬಂಧ ಪಡುತ್ತವೆ. ಗುರು ಪ್ರಸಾದದ ಹೆಸರು ಶುದ್ಧವು. ಲಿಂಗ ಪ್ರಸಾದದ ಹೆಸರು ಸಿದ್ಧವು. ಜಂಗಮ ಪ್ರಸಾದದ ಹೆಸರು ಪ್ರಸಿದ್ಧವು. ಹೀಗೆ ಚನ್ನಬಸವನು ನನಗೆ ದೀಕ್ಷೆಯನ್ನು ಮಾಡಿದ್ದರಿಂದ ನನ್ನ ಜನ್ಮದ ಕರ್ಮವು ನಿವೃತ್ತಿಯಾಯಿತೆಂದು ಸಿದ್ಧರಾಮನು ಹೇಳುತ್ತಾನೆ. (೫೪

ಮತ್ತೂ ಏನೆಂದರೆ, ಹೃದಯದಲ್ಲಿ ಅಷ್ಟದಳ ಕಮಲವಿದೆ. ಅದರ ಮಧ್ಯದಲ್ಲಿ ಸೂರ್ಯನು, ಆ ಸೂರ್ಯನ ಮಧ್ಯದಲ್ಲಿ ಚಂದ್ರನು, ಆ ಚಂದ್ರನ ಮಧ್ಯದಲ್ಲಿ ಅಗ್ನಿಯು, ಆ ಅಗ್ನಿಯ ಮಧ್ಯದಲ್ಲಿ ಕಾಂತಿಯು, ಆ ಕಾಂತಿಯ ಮಧ್ಯದಲ್ಲಿ ಸುಜ್ಞಾನವು. ಸುಜ್ಞಾನದ ಮಧ್ಯದಲ್ಲಿ ಚಿದಾತ್ಮನು, ಆ ಚಿದಾತ್ಮನ ಮಧ್ಯದಲ್ಲಿ ಚಿತ್‌ಪ್ರಕಾಶ ಸ್ವರೂಪನಾದ ಪರಶಿವನು ಹೀಗೆ ಇರುತ್ತಾರೆ.

ಇಂಥ ಪರಶಿವನು ನನ್ನ ಸುಜ್ಞಾನ ಕಾಯದ ಮಸ್ತಕದ ಮೇಲೆ ಹಸ್ತವ ನ್ನಿರಿಸಿ ಮನ, ಭಾವ, ಕರಣಗಳನ್ನು ತನ್ನ ಸ್ವರೂಪುಳ್ಳವಾಗಿ ಮಾಡಿ ಚಕ್ಷುವಿನ ದ್ವಾರಾ ಹಸ್ತದಲ್ಲಿ ಇಷ್ಟಲಿಂಗವನ್ನು ಕೊಟ್ಟಂಥ ಚನ್ನಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂದು ನಾನು ಬದಕಿದೆನು. (೫೫)

ಈ ವಾಕ್ಯವನ್ನು ಚನ್ನಬಸವನು ಕೇಳಿ ಸಂತೋಷಿಸಿ ಸಿದ್ಧರಾಮುನನು ಕೆಳಗಿನಂತೆ ಸ್ತುತಿಸಿದನು. ಅದು ಏನೆಂದರೆ—

## ತ್ರಿಲಿಂಗಸಾಧನೆ

ಇಷ್ಟಲಿಂಗದ ಮೇಲೆ ನೆಟ್ಟಂಥ ಚಕ್ಷುವು ಮನಸ್ಸಿನಲ್ಲಿ ನೆಲಿಸಿ ಅದರಲ್ಲಿ ಏಕತ್ವವನ್ನು ಹೊಂದಿತು. ಭಾವದಲ್ಲಿ ಲಿಂಗವು ಒಡನೂಡಿತು. ಆಗ ಅಲ್ಲಿ ಉಂಟಾದ ಐಕ್ಯ ಸ್ಥಿತಿಯು ತನ್ನಿಂದ ತಾನೇ ಅಲ್ಲಿ ಉಂಟಾಯಿತು. ನನ್ನಲ್ಲಿ ಅರಿವು ಉಂಟಾದರೂ ಐಕ್ಯ ಸ್ಥಿತಿಯ ಮೂಲಕ ನಾನು ಅಂತೆನೆಂಬ ಜ್ಞಾನವು ಸಹ ಇಲ್ಲವಾಗಿ ಅದು ತಾನೆಯಾಗಿ ಉಳಿಯಿತು. ಹೀಗೆ ಚನ್ನ ಬಸವನು ಸಿದ್ಧರಾಮುನನ್ನು ಕೊಂಡಾಡಿದನು. (೫೬)

ಹೀಗೆ ಚನ್ನಬಸವನು ಕೊಂಡಾಡಲು ಅವನಂತೆಯೇ ಪ್ರಭುದೇವರು ಸಹ ಅವನನ್ನು ಕೊಂಡಾಡಿದನು. ಅದು ಹೇಗೆಂದರೆ:—

ಸ್ವಾನುಭಾವದ ಬೆಳಗಿನಲ್ಲಿ ಒಂದು ಬೆಕ್ಕು ಅಂದರೆ ಜೀವವು ಹುಟ್ಟಿತು. ಆ ಬೆಕ್ಕಿನ ತಲೆಯ ಮೇಲೆ ಒಂದು ಗಿಳಿ ಅಂದರೆ ಜ್ಞಾನವು ಹುಟ್ಟಿತು. ಆ ಗಿಳಿಯ ಮೇಲೆ ಎರಡು ರತ್ನಗಳು ಅಂದರೆ ಲಿಂಗಗಳು ಹುಟ್ಟಿದವು. ಆ ರತ್ನಗಳನ್ನು ಹುಡುಕುತ್ತ ಬರಲು ಅವು ತನ್ನನ್ನೇ ನುಂಗಿದವು. ಅವುಗಳಲ್ಲಿ ಒಂದು ರತ್ನವು ಇಷ್ಟಲಿಂಗವು. ಈ ಇಷ್ಟಲಿಂಗವನ್ನು ಮತ್ತೊಂದು ರತ್ನ ಅಂದರೆ ಪ್ರಾಣಲಿಂಗವು ಅವಗ್ರಹಿಸಿತು. ಈ ಎರಡು ಲಿಂಗಗಳ ಪ್ರಭೆಯೇ ತಾನಾದ ಸಿದ್ಧರಾಮುನಿಗೆ ನಾನು ನಮಸ್ಕಾರ ಮಾಡುತ್ತೇನೆ. ಈ ಪ್ರಕಾರ ಒಂದು ಬೆಡಗಿನ ವಚನದ ಮೂಲಕ ಇಷ್ಟ, ಪ್ರಾಣ, ಲಿಂಗಗಳು ಅಂಗ ಮತ್ತು ಪ್ರಾಣಗಳಲ್ಲಿ ನೆಲಿಸಿದವೆಂಬುದನ್ನು ಅಲ್ಲಮಪ್ರಭುವು ಹೇಳುತ್ತಾನೆ(೫೭)

ಆಮೇಲೆ ಚನ್ನಬಸವನು ಪುನಃ ಅಂದುದೇನೆಂದರೆ:—

ಅಹುದಹುದು. ಅಂಗದಲ್ಲಿ ಲಿಂಗವನ್ನು ಹುಡುಕಬೇಕಲ್ಲದೆ, ಲಿಂಗ ದಲ್ಲಿ ಅಂಗವನ್ನು ಹುಡುಕಲು ಹೋಗಬೇಕೇ? ಪ್ರಾಣವು ಜ್ಞಾನವನ್ನು

ಪಡೆಯಲು ಹೋಗಬೇಕಲ್ಲದೆ, ಜ್ಞಾನವು ಜ್ಞಾನವನ್ನು ಹುಡುಕಲಿಕ್ಕೆ ಹೋಗಬೇಕೇ ? ಬೇರೆ ಬೇರೆಯಾಗಿರುವ ಪದಾರ್ಥಗಳನ್ನು ಒಂದುಗೂಡಿಸಲು ಹೋಗುವದುಂಟು. ಆದರೆ ಒಂದೇ ಇದ್ದ ಪದಾರ್ಥವನ್ನು ಎರಡು ಮಾಡಲು ಯಾರೂ ಹೋಗುವದಿಲ್ಲ. ಹೀಗೆ ಚನ್ನಬಸವನು ನುಡಿದನು. (೫೮)

ಅವನಂತೆಯೇ ಅಲ್ಲಮಪ್ರಭುವು ಸಿದ್ಧರಾಮಯ್ಯನನ್ನು ಕೊಂಡಾಡಿದನು. ಅದು ಹೇಗೆಂದರೆ:—

ಪಂಚ ಭೂತಗಳಲ್ಲಿರುವ ತ್ರಿಗುಣಗಳು ಅಂದರೆ ಸತ್ವ, ರಜ, ತಮೋ ಗುಣಗಳು ಸಂಚಾರವಾಗುವಂತೆ ಮಾಡಿ ಸೂರ್ಯ ಚಂದ್ರರು ಕೂಡದ ಮಣ್ಣಿನ ಬೀಜವು ಬದ್ಧಬಂಧವಾಯಿತು. ಸಿದ್ಧರಾಮನು ಜೋಡು ಇಲ್ಲದವನು ಇದ್ದಾನೆ. ಆದರೂ ವಾಯುವಿನಂತೆ ಅವನ ಗತಿಯಲ್ಲ. ಅಂದರೆ ಸ್ಥಿರ ಬುದ್ಧಿಯು ಅವನಲ್ಲಿ ಇದೆ. ಲೋಕವೆಲ್ಲ ಇದು ಹೇಗೆಂದು ವಿಚಾರ ಮಾಡುತ್ತಾ ಇವೆ. ಆತನು ಮಣ್ಣಿನ ಬೀಜವಲ್ಲದ ಬಯಲಿನಿಂದ ಬದ್ಧನಾಗಿದ್ದಾನೆ. ಇನ್ನು ನಾನು ಸಿದ್ಧರಾಮನ ನಾಮವು ಯಾತರಂತೆ ಇದೆ ಎಂದು ಹೇಳಲಿ! ಈ ಪ್ರಕಾರ ಅಲ್ಲಮಪ್ರಭುವು ಒಂದು ಬೆಡಗಿನ ವಚನದ ಮೂಲಕ ಸಿದ್ಧರಾಮನನ್ನು ವರ್ಣಿಸುತ್ತಾನೆ. (೫೯)

## ಲಿಂಗೈಕ್ಯ ಸ್ಥಿತಿಯು

ಅವನು ಮತ್ತೂ ಅನ್ನುವದೇನೆಂದರೆ:— ಕಾಮನನ್ನು ಸಂಹಾರ ಮಾಡುವಲ್ಲಿ, ಯಜ್ಞದ ಹೋಮವನ್ನು ಸುಡುವಲ್ಲಿ, ತ್ರಿಪುರ ಸಂಹಾರವನ್ನು ಹೇಗೆ ಮಾಡಬೇಕೆಂಬುದರ ಮರ್ಮವನ್ನು ತಿಳಿಯುವಲ್ಲಿ, ಆತನು ಯೋಗಿಯೆಂದೆನಬೇಡ. ಅಥವಾ ಭೋಗಿ ಎಂತಲೂ ಎನ್ನಬೇಡ. ಆತನು ಅಚ್ಚ ಲಿಂಗೈಕ್ಯನು. ಹಸಿವನ್ನು ಮರೆತಲ್ಲಿ ವ್ಯಸನವನ್ನು ಹೋಗಲಾಡಿಸುವಲ್ಲಿ ಸಿದ್ಧರಾಮನು ಪರಮಾತ್ಮ ಸ್ವರೂಪನೇ ಆಗಿರುತ್ತಾನೆ. (೬೦)

ಹೀಗೆ ಅಲ್ಲಮಪ್ರಭುವು ಸಿದ್ಧರಾಮನನ್ನು ಸ್ತುತಿಸುತ್ತಿರಲು ಚನ್ನಬಸವನು ಸಿದ್ಧರಾಮನನ್ನು ಪುನಃ ಕೊಂಡಾಡಿದ್ದು ಹೇಗೆಂದರೆ:—

ಕಾಯದಲ್ಲಿ ಕಲ್ಪಿತಗಳಿವೆ. ಈ ಕಲ್ಪಿತಗಳಿಂದ ಭೋಗಾದಿ ಭೋಗಗಳನ್ನು ಭೋಗಿಸಬಲ್ಲುದೇ ದೇವಲೋಕವಾಗಿದೆ. ಇದೇ ಪರ್ವತವಾಗಿದ್ದು ಇಲ್ಲಿ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯವೆಂಬ ಪದಗಳನ್ನು ಅನುಭವಿಸಬಹುದು. ಆದರೆ ಶಿವನ ಪ್ರಸಾದವು ಇವುಗಳಿಗಿಂತಲೂ ಮಿಗಿ

ಲಾವದ್ದು. ಈ ಪ್ರಸಾದದಲ್ಲಿ ಇರುವದು ನಿನಗೆ ತಿಳಿದರೆ ಅದೇ ಕೈಲಾಸವು, ಅದೇ ಕಲ್ಯಾಣವು. ಅಲ್ಲಿ ಲಿಂಗವೇ ತಾನು, ತಾನೇ ಲಿಂಗವಾಗಿರುವ ದನು. ತಿಳಿದ ಶಿವಯೋಗಿ ಸಿದ್ಧರಾಮನ ಶ್ರೀಪಾದದ ಸಮೀಪದಲ್ಲಿ ಎಂದಿ ರುವೆನು ಹೇಳು, ಎಂದು ಚನ್ನಬಸವನು ಪ್ರಭುವಿನನ್ನು ಕೇಳುತ್ತಾನೆ. (೬೧)

ಹಸು ಎಂದರೆ ಆಕಳು ಹಾಲು ಕೊಡಲಿಕ್ಕೆ ಹತ್ತಿತು. ಆ ಹಸುವು ಮನೆಗೆ ಬರಲು ಅದನ್ನು ಕಟ್ಟಲಿಕ್ಕೆ ಹೋದರೆ, ಅದು ಎಲ್ಲರನ್ನೂ ತುಳಿದು ಬಿಟ್ಟಿತು. ಆದರೆ ಈ ಹಸುವನ್ನು ಕಟ್ಟಿದಾತ ಸಿದ್ಧರಾಮಯ್ಯನೊಬ್ಬನೇ ಎಂದು ಚನ್ನಬಸವನು ಹೇಳುತ್ತಾನೆ. ಹಸುವು ಎಂದರೆ ಲಿಂಗವು. ಅದನ್ನು ಧರಿಸುವೆನೆಂದರೆ ಅದನ್ನು ಸಾಧ್ಯಮಾಡಿದವರಿಲ್ಲ. ಆದರೆ ಅದನ್ನು ಸಾಧಿಸಿ ಕೊಂಡವನು ಸಿದ್ಧರಾಮನೊಬ್ಬನೇ ಎಂಬ ಭಾವವು ಇದರಲ್ಲಿದೆ. (೬೨)

ಮತ್ತೂ ಏನೆಂದರೆ, ಪರಮಾತ್ಮನು ತನ್ನ ನಿಜರೂಪ ತೋರಿಸಲು ಮೊದಲು ಗುರುವಾದನು. ಗುರುವಾದ ಬಳಿಕ ಆ ಗುರುವೇ ಕರಸ್ಥಲದಲ್ಲಿ ಇಷ್ಟಲಿಂಗವಾದನು. ಮನಸ್ಥಲಕ್ಕೆ ಮಂತ್ರವಾದನು. ತನುಸ್ಥಲಕ್ಕೆ ಪ್ರಸಾದ ಮತ್ತು ಪ್ರಾಣ ಸ್ಥಲಕ್ಕೆ ಜಂಗಮವಾದನು. ಪರಮಾತ್ಮನಲ್ಲಿ ಶಿವಯೋಗಿ ಸಿದ್ಧರಾಮನು ತಾನೊಬ್ಬನೇ ತಾನಾದನು. (೬೩)

ಕಬ್ಬನ್ನು ನುರಿಸುವ ಗಾಣದಲ್ಲಿ ಕಬ್ಬನ್ನು ಹಾಕಿ ಹಾಲನ್ನು ಹಿಂಡಿದರೆ ಆ ಹಾಲಿನ ಸವಿಯನ್ನು ಆ ಗಾಣವು ತಿಳಿಯಬಲ್ಲುದೇ ? ಆಕಾಶದ ಸಮೀಪ ದಲ್ಲಿ ಪಕ್ಷಿಯು ಹಾರಾಡುತ್ತಿದ್ದರೂ ಪಕ್ಷಿಯು ಸೂರ್ಯನ ನಿಲವನ್ನು ತಿಳಿಯ ಬಹುದೇ ? ಆಡಂಬರದ ಸಲುವಾಗಿ ಲಿಂಗ ಪೂಜೆ ಮಾಡುವವರಿಗೆ ಶರಣರ ರೀತಿಯು ಗೊತ್ತಾಗಬಹುದೇ ? ಲಿಂಗದ ನಿಜವು ತಿಳಿಯದ ವರೆಗೆ ಮುಪ್ಪಿ ನಿಂದ ನಡುಮುರಿದು ಮೊಣಕಾಲದ ಮೇಲೆ ಕೈಯಿಟ್ಟು ಎದ್ದರೇನು ? ಹೀಗೆ ತುಪ್ಪುವುದು ನಿಷ್ಪ್ರಯೋಜನವಾದದ್ದು. ಲಿಂಗದ ಚೈತನ್ಯ ಮತ್ತು ತನ್ನ ಪ್ರಾಣ ಒಂದಾಗದ ಹೊರತು ಬರೀ ಜಪವನ್ನು ಮಾಡಿದರೆ ಏನು ಪ್ರಯೋ ಜನ ? ಇಂಥವರೆಲ್ಲರೂ ಅಭ್ಯಾಸಕ್ಕೆ ಬೇಕಾಗುವ ಶಕ್ತಿಯನ್ನು ಹೊಂದಿದ ವರು ಮಾತ್ರ. ಆದರೆ ಸಿದ್ಧರಾಮಯ್ಯನು ಹೀಗಿರದೆ ಮಾಯಾ ಕೋಳಾಹಳ ನಾಗಿದ್ದಾನೆ. ಆದ್ದರಿಂದ ನಾನು ಇಂಥವನಿಗೆ ಅಹೋರಾತ್ರಿ ನಮೋ ನಮೋ ಎನ್ನುತ್ತ ಬದುಕುತ್ತೇನೆಂದು ಚನ್ನಬಸವಣ್ಣನು ಸಿದ್ಧರಾಮನನ್ನು ಕೊಂಡಾಡಿದನು. (೬೪)

ಚನ್ನಬಸವನು ಸಿದ್ಧರಾಮನನ್ನು ಹೀಗೆ ಕೊಂಡಾಡಲು ಸಿದ್ಧರಾಮುನಿಗೆ ಅತ್ಯಂತ ಭೀತಿಯುಂಟಾಯಿತು. ಆಗ ಅವನು ಬಿನ್ನವಿಸಿಕೊಂಡದ್ದೇನೆಂದರೆ–

## ಸಿದ್ಧರಾಮನ ಪ್ರಾರ್ಥನೆ

ನಾನು ಈ ಪರಿಗೆ ಆಣವ ಮಲ, ಮಾಯಾಮಲ, ಕಾರ್ಮಿಕ ಮಲ ಇವುಗಳಲ್ಲಿ ತೊಳಲಾಡುತ್ತಿದ್ದೆನು. ನಾನು ಕಾಮನ ಬಾಧೆಗೆ ಗುರಿಯಾಗಿದ್ದೆನು. ಈ ಸ್ಥಿತಿಯನ್ನು ದೂರ ಮಾಡಿ ನನ್ನನ್ನು ತನ್ನಂತೆ ಮಾಡಿದವನು ಗುರುವಾದ ನೀನು ಇರುವಿ. ಹದಿನಾಲ್ಕು ಲೋಕಗಳಿಗೆ ಮೀರಿ ಪ್ರಪಂಚಕ್ಕೆ ಒಳಗಾಗದಂತೆ ಸದ್ಯೋನ್ಮುಕ್ತನನ್ನಾಗಿ ಮಾಡಿದವನು ನನ್ನ ಗುರುವಾದ ನೀನು ಇರುವಿ. ಎಲೋ ಗುರುವೇ, ಪರಮ ಗುರುವೇ, ಪುನರ್ಭವಕ್ಕೆ ನಾನು ಬರದಹಾಗೆ ನನ್ನನ್ನು ನಿನ್ನವರಲ್ಲಿ ಒಬ್ಬನು ಎಂದು ಎಣಿಸುವಂತೆ ಮಾಡಿದ ಎಲೋ ಗುರುವೇ, ಪರಮ ಗುರುವೇ, ಎಂದು ಪ್ರಾರ್ಥಿಸಿದನು. ಕಾಲನ ಹಿಡಿತಕ್ಕೆ ಗುರಿಯಾದ ನನ್ನನ್ನು ಉಳಿಸಿ ಗುರು ಲಿಂಗ ಜಂಗಮಕ್ಕೆ ಮತ್ತು ತ್ರಿಲಿಂಗಗಳಿಗೆ ನನ್ನನ್ನು ನೀನು ಯೋಗ್ಯನನ್ನಾಗಿ ಮಾಡಿದೆ. ಇನ್ನುಮೇಲೆ ನಾನು ಭವಕ್ಕೆ ಬರುವದಿಲ್ಲ. ನಿನ್ನವರು ಹೇಗೆ ಇದ್ದರೋ ಹಾಗೆ ಇರುವೆನು. ಎಲೋ ಪರಮಾತ್ಮನೇ, ನನ್ನನ್ನು ಮೀರಿದ ಪದವು ಒಂದೂ ಕೂಡ ಇಲ್ಲ, ಎಂದು ಪ್ರಾರ್ಥಿಸಿದನು. (೬೫)

ಚನ್ನಬಸವೇಶ್ವರನು ರೂಪಿಗೆ ರೂಪು, ಜ್ಞಾನಕ್ಕೆ ಜ್ಞಾನ, ಪ್ರಾಣಕ್ಕೆ ಪ್ರಸಾದ ಇವುಗಳನ್ನು ತ್ರಿಲಿಂಗಗಳೆಂಬ ಬಾಣದ ಹೆದೆಯಿಂದ ಎಸೆದು ಅವುಗಳನ್ನು ಕೈವಶ ಮಾಡಿಕೊಂಡು ಅವರವರ ಕರದಲ್ಲಿ ಕೊಟ್ಟು ದೀಕ್ಷೆಯನ್ನು ಮಾಡಿದನು. (೬೬)

ಶಿವಪದವು ನನಗೆ ಎಂದು ಸಾಧ್ಯವಾಗುವದೋ ಎಂದು ನಾನು ಚಿಂತಿಸುತ್ತಿರಲು ಪರಮ ಪ್ರಸಾದದ ಬೀಡು ನಿನ್ನಿಂದ ನನಗೆ ತೋರಹತ್ತಿತು. ಆ ಬೀಡನ್ನು ಕಂಡು ಶಿವಗಣಂಗಳ ಸಹಾಯದಿಂದ ಚನ್ನಬಸವನ ಪಾದಾರವಿಂದವನ್ನು ಅಂತು ಅವನ ಕೃಪಾವಲೋಕನದಿಂದ ನಾನು ಪರಮಾತ್ಮನ ಪಾದವನ್ನು ಕಂಡೆನು. (೬೭)

ಇನ್ನುಮೇಲೆ ನನಗೆ ಜನ್ಮವಿಲ್ಲ. ಭಿನ್ನಭಾವನನ್ನು ನಾನು ಮೊದಲಿಗೆಯೇ ದೂರ ಮಾಡಿದೆನು. ಚನ್ನಬಸವನ ಕರುಣದಿಂದೆ ಪರಮಾತ್ಮನ

ರೂಪನ್ನು ಹೊಂದಿದನು. ಇನ್ನು ನನಗೆ ಅರಿವು ಅಂದರ ಜ್ಞಾನವು ಬೇರೆ ಯಾಗಿ ಉಳಿಯದೆ, ಅದು ನನ್ನೊಳಗೆ ಬೆರೆತುಕೊಂಡಿದೆ. (೧೮)

ಸಿದ್ಧರಾಮನು ಪುನಃ ಅಂದದ್ದೇನೆಂದರೆ:— ಚನ್ನಬಸವನು ನನ್ನನು ತನ್ನವನನ್ನಾಗಿ ಮಾಡಿದನು. ಅದರಿಂದ ಅವನ ಭಕ್ತಿಯಲ್ಲಿ ನಾನು ಸನ್ನಿ ಹಿತನಾದೆನು. ನನ್ನ ಜ್ಞಾನಮಯವಾದ ದೇಹವನ್ನು ಅವನು ತನ್ನಂತೆ ಮಾಡಿದನು. (೧೯)

ಹೀಗೆ ಚನ್ನಬಸವನನ್ನು ಸ್ತುತಿಸಿ ತಾನು ಹೊಂದಿದ ಲಿಂಗಾಂಗಸಮರಸ ಭಾವವನ್ನು ಪ್ರಭುದೇವರಿಗೆ ಕೆಳಗಿನಂತೆ ತಿಳಿಸಿ ಹೇಳಿದನು. ಅದು ಹೇಗೆಂದರೆ:—

## ಲಿಂಗಾಂಗ ಸಾಮರಸ್ಯ

ನಾನು ಪರಮಾತ್ಮನಲ್ಲಿ ನೆರೆವೆನು, ನೆರೆವೆನು ಎಂದರೆ ನಾನೇನು ನೆರೆವೆನು ? ಶ್ರೀ ಗುರುವು ನಿನ್ನನ್ನು ನನ್ನ ಕರಸ್ಥಲದಲ್ಲಿ ಸ್ಥಾಪಿಸಿದ ಬಳಿಕ ಜ್ಯೋತಿರ್ಮಯನಾದೆನು. ಆಗ ನನ್ನಲ್ಲಿ ತಮಸ್ಸು ಉಳಿಯುವದೇ ? ಪರಮಾತ್ಮನು ಮಹಾ ಸಾಗರದಂತೆ ಇದ್ದು ಅವನಲ್ಲಿ ಕೂಡಿದ ಬಳಿಕ ನನಗೆ ಇಂಥದೊಂದು ನದಿ ಎಂಬ ಬೇರೆ ಹೆಸರು ಹೇಗೆ ಉಳಿದೀತು ? (೨೦)

ಮತ್ತೂ ಏನೆಂದರೆ:— ನನ್ನ ಕರ್ಮೇಂದ್ರಿಯಗಳ ಒಲವುಗಳನ್ನು ನಿಯಂತ್ರಿಸಲಾಗಿ ನನ್ನ ಅಸ್ತಿತ್ವವೆಂಬ ಬ್ರಹ್ಮವು ತಾನೇ ನಿಜದಲ್ಲಿ ಉಳಿ ಯಿತು. ಆತ್ಮನೊಡನೆ ಕೂಡಿದ ಈ ಇರವು ನಿಮ್ಮಲ್ಲಿ ನಿಜವನ್ನು ಹೊಂದಿತು. ಈ ನಿಜವು ಚನ್ನಬಸವಣ್ಣನ ಕೃಪೆಯಿಂದ ನನಗೆ ಸಾಧ್ಯವಾಯಿತು. (೨೧)

ಹೀಗೆ ಸಿದ್ಧರಾಮನು ಬಿನ್ನೈಸಲು ಪ್ರಭುದೇವರು ತಮ್ಮ ಲಿಂಗಾಂಗ ಸಮರಸದ ಪರಿಣಾಮವು ಸಿದ್ಧರಾಮನಿಂದ ತಮಗೆ ತಿಳಿಯಿತೆಂದು ಹೇಳಿದರು. ಮುಂದೆ ಅವರು ಪುನಃ ಅಂದುದೇನೆಂದರೆ:—

ಲಿಂಗವನರಿಯದೆ ಬೇರೆ ಯಾವುದನ್ನು ಅರಿತರೂ ಫಲವಿಲ್ಲ. ಲಿಂಗ ವನ್ನು ತಿಳಿದ ಬಳಿಕ ಬೇರೆ ಮತ್ತಾವ ವಸ್ತುವನ್ನರಿತರೂ ಫಲವಿಲ್ಲ. ನನ್ನ ಕರಣಗಳೆಲ್ಲವು ಲಿಂಗವಾಗಿ ಲಿಂಗವನ್ನೇ ಚನ್ನಾಗಿ ಅರಿತು ಲಿಂಗ ಸಂಗದಲ್ಲಿ ನಾನಿರುವೆನು. ಈ ಲಿಂಗ ಸಂಗ ಸುಖದಲ್ಲಿ ನಾನು ಓಲಾಡುವೆನು.

ಹೀಗೆ ಪ್ರಭುದೇವರು ನಿರೂಪಿಸಲು ಸಿದ್ಧರಾಮನು ಪ್ರಭುವಿನ ಸ್ತೋತ್ರ ವನ್ನು ಮಾಡಿದುದು ಹೇಗೆಂದರೆ:—

ನನ್ನ ಭವದ ಬೇರನ್ನು ಹರಿಯಲಿಕ್ಕೆ ಪರಮಾತ್ಮನು ಪ್ರಭುವಾಗಿ ಬಂದನು. ನನ್ನ ಮಲತ್ರಯಗಳನ್ನು ದೂರ ಮಾಡಲಿಕ್ಕೆ ಮತ್ತು ಅಜ್ಞಾನಿಗಳಿಗೆ ಸುಜ್ಞಾನವನ್ನು ತೋರಿಸಲಿಕ್ಕೆ ಪ್ರಭುವಾಗಿ ಬಂದನು. (೭೩)

ಆಗ ಚನ್ನಬಸವನು ಸಿದ್ಧರಾಮನಿಗೆ ಲಿಂಗಧಾರಣ ಮಾಡಿದರೂ ಕೂಡ ಅವನು ಸಿದ್ಧರಾಮನ ಸ್ತೋತ್ರಗಳನ್ನು ಮಾಡಹತ್ತಿದನು.

ಈ ಹಾಡುಗಳು ಪುಟ ೨೦ರಲ್ಲಿ ಇವೆ. ಇವುಗಳನ್ನು ವಾಚಕರು ಮೂಲದಲ್ಲಿಯೇ ನೋಡಬೇಕು.

ಹೀಗೆ ಚನ್ನಬಸವನು ಸ್ತುತಿಸುತ್ತಿರಲು ಸಿದ್ಧರಾಮನೂ ಚನ್ನಬಸವನನ್ನು ಸ್ತುತಿಸತೊಡಗಿದನು. ಇದು ಈ ಕಾಲದಲ್ಲಿ ಶರಣರಲ್ಲಿದ್ದ ಸಮಾನ ಭಾವವನ್ನು ವ್ಯಕ್ತಪಡಿಸುತ್ತದೆ.

ಕಣ್ಣುಗಳೇ ಮನೆಯಾಗಿ ಕಣ್ಣುಗಳೇ ಕರಣಗಳಾಗಿ ಅರ್ಪಣ ಮಾಡುವ ರೀತಿಯನ್ನು ಚನ್ನಬಸವಣ್ಣನ ಹೊರ್ತು ಯಾರು ಬಲ್ಲರು?

ತನು ಮತ್ತು ಪ್ರಾಣ ಇವುಗಳನ್ನು ಇಷ್ಟಲಿಂಗಕ್ಕೆ ಸಂಬಂಧಿಸಿ, ಪಂಚೇಂದ್ರಿಯಗಳು ಲಿಂಗಕ್ಕೆ ಮುಖಗಳಾಗಿ ಲಿಂಗಕ್ಕೆ ಅರ್ಪಣ ಮಾಡುವ ರೀತಿಯನ್ನು ಚನ್ನಬಸವಣ್ಣನ ಹೊರ್ತು ಬೇರೆ ಯಾರು ಬಲ್ಲರು?

ಆನಂದ ಸ್ಥಾನ ಅಂದರೆ ಸಾಮರಸ್ಯ ಸ್ಥಿತಿಯಲ್ಲಿ ಅನುಮಿಷ ದೃಷ್ಟಿಯಿಂದ ಸಂಯೋಗ ಮಾಡಿ ಅರ್ಪಣ ಮಾಡುವ ಪ್ರಸಾದದ ರೀತಿಯನ್ನು ಚನ್ನಬಸವನೇ ಬಲ್ಲನು. ಉಳಿದವರಿಗೆ ಅದು ಅಸಾಧ್ಯವು. (೭೭)

ಹೀಗೆ ಸಿದ್ಧರಾಮನು ಚನ್ನಬಸವನನ್ನು ಹೊಗಳಿದನು.

## ಮೂವತ್ತಾರು ಸ್ಥಲಗಳ ವಿವೇಚನೆ

ಆ ಮೇಲೆ ಷಟ್‌ಸ್ಥಲಗಳಲ್ಲಿಯ ೩೬ ಸ್ಥಲಗಳ ವಿಷಯದನ್ನು ಎತ್ತುತ್ತ ಸಿದ್ಧರಾಮನು ಅನ್ನುವದೇನೆಂದರೆ:

ಪ್ರಸಾದಿಯು ಭಕ್ತಿವಿಡಿದು ಭಕ್ತನಾದನು. ಅದೇ ಪ್ರಸಾದಿಯು ಧೈರ್ಯವಿಡಿದು ಆ ಭಕ್ತನಿಗೆ ಮಾಹೇಶ್ವರನಾದನು. ಅದೇ ಪ್ರಸಾದಿಯು ಅವಧಾನ ಭಕ್ತಿಯನ್ನು ಅವಲಂಬಿಸಿ ಆ ಭಕ್ತನಿಗೆ ಪ್ರಸಾದಿಯಾದನು. ಅದೇ ಪ್ರಸಾದಿಯು ಅನುಭಾವ ಭಕ್ತಿಯನ್ನು ಹಿಡಿದು ಕರ್ಮ ರಹಿತನಾಗಿ, ಕಾಲ

ಕಲ್ಪಿತವಿಲ್ಲದೆ ಆ ಭಕ್ತನಿಗೆ ಪ್ರಾಣಲಿಂಗಿಯಾದನು. ಅದೇ ಪ್ರಸಾದಿಯು ಸುಜ್ಞಾನ ಭಕ್ತಿಯನ್ನು ಹಿಡಿದು ಶಿವಪತಿಗಳಂತೆ ಆಚರಿಸುತ್ತ ಎಲ್ಲ ಆಸೆಗಳನ್ನು ದೂರ ಮಾಡಿ ಆ ಭಕ್ತನಿಗೆ ಶರಣನಾದನು. ಅದೇ ಪ್ರಸಾದಿಯು ಸಮರಸ ಭಕ್ತಿಯುಳ್ಳವನಾಗಿ ಉರಿ ಕರ್ಪೂರ ಸಂಯೋಗದಂತೆ ಭಕ್ತನಿಗೆ ಐಕ್ಯನಾದನು. ಹೀಗೆ ಚನ್ನಬಸವನೆಂಬ ಅಚ್ಚ ಪ್ರಸಾದಿಯು ಎಲ್ಲಕ್ಕೂ ಚೈತನ್ಯನಾಗಿ ಆಚರಿಸಿದನೆಂದು ಸಿದ್ಧರಾಮನು ಅವನನ್ನು ಕೊಂಡಾಡಿದನು. (೭೮)

ಹೀಗೆ ಸಿದ್ಧರಾಮನು ಚನ್ನಬಸವನ ಸ್ತೋತ್ರವನ್ನು ಮಾಡುತ್ತಿರಲು ಅಲ್ಲಮಪ್ರಭುವು ಸಿದ್ಧರಾಮಯ್ಯನ ಆಚರಣೆಗಳನ್ನು ಕಂಡು ಶರಣನಾದ ಮಡಿವಳನೆಂಬ ಪರಬ್ರಹ್ಮನನ್ನು ಕಂಡು ಅವನಲ್ಲಿ ಬೆರಸಿ ನಿರವಯಲಾದೆನೆಂದು ನಿರೂಪಿಸಿದ ವಚನವು ಕೆಳಗಿನಂತೆ ಇದೆ.

ಹಲವು ಮಕ್ಕಳನ್ನು ಹಡೆದ ತಾಯಿಯು ಮಕ್ಕಳ ಮಲವನ್ನು ನೋಡಿ ಹೇಸದೆ ಅವರನ್ನು ಜೋಕೆ ಮಾಡುತ್ತಾಳೆ. ಇಂಥ ಸಾಮರ್ಥ್ಯವು ನಿನಗಲ್ಲದೆ ಬೇರೆ ಯಾರಿಗೆ ಇದೆ ? ಹೀಗೆ ಆಚರಿಸುವದು ನನ್ನ ಸ್ವಾಧೀನವೇ ? ನಿನ್ನನ್ನು ತಿಳಿಯಲು ಹಿಂದಿನ ಪುಣ್ಯವು ಬೇಕು. ಇದು ಇರದಿದ್ದರೆ ನಿನ್ನನ್ನು ತಿಳಿಯುವದು ಆಗದು. ಇನ್ನು ಮೇಲೆ ನೀನು ನನ್ನನ್ನು ಹಿಂದಕ್ಕೆ ನೂಕದೆ ನಾನು ನಿನವನೆಂದು ತಿಳಿದು ನನ್ನನ್ನು ನಿನ್ನ ಕಡೆಗೆ ತೆಗೆದುಕೋ. ನಾನು ನಿಮ್ಮ ಶರಣ ಮಡಿವಾಳ ಮಾಚಿದೇವಯ್ಯನಿಂದ ಬಯಲಾದೆನು, ಮುಕ್ತನಾದೆನು ಎಂದು ಅಲ್ಲಮಪ್ರಭುವು ನುಡಿದನು (೭೯)

ಇದಕ್ಕೆ ಅಲ್ಲಿದ್ದ ಮಡಿವಾಳ ಮಾಚಿದೇವನು ತಾನು ಬಸವ, ಚನ್ನಬಸವ, ಪ್ರಭುದೇವ ಇವರಿಂದ ಬದುಕಿದೆನೆಂದು ಹೇಳುತ್ತಾನೆ. ಅದು ಹೇಗೆಂದರೆ:—

ಯಾರಾದರೂ ಬಸವಣ್ಣ, ಚನ್ನಬಸವಣ್ಣ, ಪ್ರಭುದೇವ ಅಥವಾ ಮಹಾದೇವ ಎಂದು ಮಹಾ ಸ್ಥಾನದಲ್ಲಿದ್ದು ಕರೆದರೆ ನಾನು ಅದಕ್ಕೆ "ಓ" ಎಂಬ ಉತ್ತರ ಕೊಡುವೆ. ಅಂದರೆ ನಾನು ಈ ಮಹಾನುಭಾವರಿಗೆ ಅಂಕಿತನಾಗಿ ನಡೆಯುವೆನೆಂಬ ಭಾವವು ಇದರಲ್ಲಿದೆ. (೮೦)

## ಲಿಂಗವೆಂದರೇನು ?

ಇದಕ್ಕೆ ಚನ್ನಬಸವನು ಉತ್ತರ ಕೊಟ್ಟಿದ್ದು ಏನೆಂದರೆ:—

ಅವನು ಆಗ ಲಿಂಗದ ಶಬ್ದದ ಅರ್ಥವನ್ನು ಹೇಳಿದನು. ಅದು ಹೇಗೆಂದರೆ— 'ಲಿ' ಅಂದರೆ ಶೂನ್ಯ, ಅದರ ಮುಂದಿನ ಸೊನ್ನೆಯು ಪರಮಾತ್ಮನ ಲೀಲೆಯು, 'ಗ' ಎಂದರೆ ಚಿತ್ತು. ಈ ಮೂರನ್ನು ಬೆಂಸಿ ಹೇಳಿದಲ್ಲಿ ಅದು ಲಿಂಗವೆಂದಾಗುತ್ತದೆ. ಈ ಲಿಂಗದ ಮರ್ಮವನ್ನು ತಿಳಿದಾತನು ಲಿಂಗಸಂಗಿ. ಇಂಥ ಲಿಂಗಾನುಭಾವಿಗಳ ಶ್ರೀ ಚರಣಕ್ಕೆ ನಾನು ನಮೋ, ನಮೋ ಎಂದು ಅವರನ್ನು ನಮಸ್ಕರಿಸುತ್ತೇನೆ, ಎಂದು ಚನ್ನಬಸವನು ನುಡಿದನು.(೮೧)

## ತ್ರಿಲಿಂಗಗಳ ಸಂಬಂಧ

ಇದಕ್ಕೆ ಸಿದ್ಧರಾಮನು ಕೊಟ್ಟ ಉತ್ತರ:— ಇಷ್ಟ, ಪ್ರಾಣ, ಭಾವ ಲಿಂಗಗಳಿಗೆ ಮೂಲ ಮಂತ್ರವಾದಾತನು ಗುರುವು. ಈ ಮೂರು ವಿದ್ಯೆಗಳಿಗೆ ವಿದ್ಯಾರೂಪಾದಾತನು ಗುರುವು. ತನಗುಂಟಾದ ಪ್ರಪಂಚವನ್ನು ಅಅಗಳೆದು ರೂಪಿಗೆ ರೂಪಾದಾತನು ಗುರುವು. ಲೋಕತ್ರಯಕ್ಕೆ ಪರಮಾತ್ಮನೇ ನಿಜವಾದ ಗುರುವು. (೮೨)

ಮತ್ತೂ ಏನೆಂದರೆ:— ಎಲೋ ಪರಮಾತ್ಮನೇ, ನೀನು ಪಂಚ ಬ್ರಹ್ಮಗಳಲ್ಲಿ ಅತಿಶಯ ಜ್ಯೋತಿರ್ಮಯನಾಗಿ ಪ್ರಕಾಶಿಸುತ್ತಾ ಇದ್ದೀ. ನಿನ್ನ ಆನಂದ ಸ್ಥಾನದಲ್ಲಿ ನೀನೇ ಅತಿಶಯವಾಗಿ ನಿತ್ಯತ್ವದಿಂದ ತುಂಬಿಕೊಂಡಿರುವಿ. ಹೊರಗೂ ಒಳಗೂ ನೀನು ಪರಿಪೂರ್ಣನು. ನಿನ್ನ ಆದಿ ಅಂತ್ಯಗಳನ್ನು ತಿಳಿಯಲು ಆಗಮಗಳಿಗೆ ಸಹ ಅಸಾಧ್ಯವು. ಆದರೆ ನೀನು ಗುರುಕರುಣದಿಂದ ನನ್ನ ಕರಸ್ಥಲದಲ್ಲಿ ಸಿಕ್ಕಿರುವಿ, ಎಂದು ಸಿದ್ಧರಾಮನು ನುಡಿದನು. (೮೩)

ತಿಳಿಯಲಿಕ್ಕೆ ಅಸಾಧ್ಯನಾದ ಶಿವನೇ, ನಿನ್ನನ್ನು ನನ್ನ ಗುರುವು ನನ್ನ ತಿಳಿವಳಿಕೆಗೆ ತಂದು ಕೊಟ್ಟಿದ್ದಾನೆ. ಇನ್ನು ಮೇಲೆ ನಾನು ನಿನ್ನನ್ನು ಬಿಡುವೆನೇ ? ನಾನು ಬಿಡುವುದಿಲ್ಲ, ಎಂದೂ ಬಿಡುವದಿಲ್ಲ. ನಿನ್ನ ಪಾದೋದಕಕ್ಕೆ ಮೆಚ್ಚಿದ್ದೇನೆ. ನಿನ್ನ ಪ್ರಸಾದವನ್ನು ನಾನು ನಂಬಿದ್ದೇನೆ ಎಂದು ಅನ್ನುತ್ತಾನೆ. (೮೪)

ಆಗ ಬಸವರಾಜನು ಸಿದ್ಧರಾಮನ ಮಹಾತ್ಮೆಯನ್ನು ತಿಳಿದು ಅವನನ್ನು ಕೆಳಗಿನಂತೆ ಕೊಂಡಾಡುತ್ತಾನೆ. ಅದು ಹೇಗೆಂದರೆ:—

## ಶರಣರ ನಿವಾಸವೇ ದಿವ್ಯ ಕ್ಷೇತ್ರ

ಸಿದ್ಧರಾಮನು ಇದ್ದಲ್ಲಿ ಹೆಜ್ಜೆ ಹೆಜ್ಜೆಗೆ ಪಾವಿತ್ರ್ಯದ ನಿಧಿಯು ಇದೆ. ಹೆಜ್ಜೆ ಹೆಜ್ಜೆಗೆ ದಿವ್ಯ ಕ್ಷೇತ್ರವು, ಹೆಜ್ಜೆ ಹೆಜ್ಜೆಗೆ ನಿಧಿಯು ಮತ್ತು ದ್ರವ್ಯವು

ಇವೆ. ಆತನ ವಾಸಸ್ಥಳವೇ ವಾರಣಾಸಿಯು, ಅವಿಮುಕ್ತ ಕ್ಷೇತ್ರವು. ಯಾಕಂದರೆ ಸಿದ್ಧರಾಮನು ಶರಣನು ಮತ್ತು ಸ್ವತಂತ್ರನು. ಅವನು ಪರಾವಲಂಬಿಯಲ್ಲ, ಸ್ವತಂತ್ರನು. (೮೫)

ಹೀಗೆ ಬಸವನು ಸಿದ್ಧರಾಮನನ್ನು ಕೊಂಡಾಡಲು ಸಿದ್ಧರಾಮನು ಅದಕ್ಕೆ ಪ್ರತಿಯಾಗಿ ಬಸವನನ್ನು ಕೊಂಡಾಡಿದ್ದು ಹೇಗೆಂದರೆ:—

## ಬಸವನ ಮಹತ್ವ

ಸೀಮೆ ಸಂಬಂಧಕ್ಕೆ ಮೀರಿದ ಮಂತ್ರಗಳಲ್ಲಿ ಪಂಚಾಕ್ಷರಿಯೇ ರಾಜ ಮಂತ್ರವಾಗಿದೆ. ಬಸವಾಕ್ಷರ ತ್ರಯವು ಇಂಥ ಪಂಚಾಕ್ಷರೀ ಮಂತ್ರದ ಗುಣ ವನ್ನು ಹೊಂದಿದೆ. ಈ ಬಸವಾಕ್ಷರ ತ್ರಯದ ಧ್ಯಾನ ಮತ್ತು ಅವರಲ್ಲಿ ಮೌನ ಇವುಗಳಿಂದುಂಟಾದ ಸತ್ವವನ್ನು ಹಿಡಿದು ಆನಂದ ರೂಪ ತ್ರಿಲಿಂಗ ವಾಗಿದೆ. ಈ ತ್ರಿಲಿಂಗಕ್ಕೆ ಬಸವಾಕ್ಷರವೇ ಮಾತೆಯು. ಅಂದರೆ ಬಸವಾಕ್ಷರ ದಿಂದಲೇ ಈ ಮಂತ್ರಗಳು ಉದ್ಭವಿಸಿರುತ್ತವೆಂಬ ಭಾವವು ಇದರಲ್ಲಿದೆ. (೮೬)

ಮತ್ತೂ ಏನೆಂದರೆ: ಎಂಟು ದಿಕ್ಕುಗಳಲ್ಲಿಯೂ ನಿನ್ನ ಹೆಸರು ಹಬ್ಬಿದೆ. ಜಗತ್ತೆಲ್ಲವೂ ಹೆಣ್ಣು ಎಂದು ಭಾವಿಸಿದಲ್ಲಿ ಅದಕ್ಕೆ ನೀನೇ ಪತಿಯು. ಸಕಲ ಬ್ರಹ್ಮಾಂಡವು ಬಸವಾಕ್ಷರ ತ್ರಯದಿಂದಲೇ ಉದ್ಭವಿಸಿದೆ. (೮೭)

ಮತ್ತೂ ಏನೆಂದರೆ:— ಸೂರ್ಯ ಚಂದ್ರರು ಉದ್ಭವಿಸದ ಮುನ್ನ, ಬ್ರಹ್ಮ ವಿಷ್ಣುಗಳು ಉಂಟಾಗದ ಮುನ್ನ, ಎಂಟು ಮೂರ್ತಿಗಳು ಒಂದಾಗದ ಮುನ್ನ, ನಿನ್ನ ತನು ಮಧ್ಯವಲಯದಲ್ಲಿ ಸಕಲ ಬ್ರಹ್ಮಾಂಡವು ಜಲಮಯ ವಾಗಿದ್ದಾಗ, ನೀನು ಭಕ್ತಿಕಾರಣನಾದ ಬಸವಣ್ಣನನ್ನು ಒಳಕೊಂಡಿದ್ದಿ. ಆಗ ನೀನು ಎಲ್ಲಿದ್ದೆ ಹೇಳು. ಇದನ್ನು ನೀನೇ ಬಲ್ಲೆ. ಎಲೋ ಪರಮಾ ತ್ಮನೇ ನೀನು ಆಗ ಕುರುಹುಗೆಟ್ಟು ನಿಶ್ಚಿಂತ ಸ್ಥಿತಿಯಲ್ಲಿದ್ದಿ. (೮೮)

ಮತ್ತೂ ಏನೆಂದರೆ:— ಬಸವೇಶ್ವರನು ಎಂಥವನೆಂದರೆ, ಅವನು ಇಂದ್ರಾದಿ ದೇವತೆಗಳ ಸಮೂಹಕ್ಕೆ ಅವರವರಿಗೆ ಪದವನ್ನಿತ್ತವನು. ಬ್ರಹ್ಮ, ವಿಷ್ಣು ಮೊದಲಾದ ದೇವತೆಗಳಿಗೂ ಕೂಡ ಪದವನ್ನಿತ್ತವನು. ಶಿವಲಿಂಗ ಭಕ್ತರಿಗೆ ಜಂಗಮ ಲಿಂಗದ ಆಚರಣೆಯನ್ನು ಪರ್ಯಾಯದಿಂದ ಅರುಹಿದ ಗುರುವು, ಇಹಲೋಕ ಪರಲೋಕಗಳಲ್ಲಿರುವ ದೇವತೆಗಳನ್ನರಿತಾತನು, ಹೀಗೆ ಬಸವಣ್ಣನಿದ್ದಾನೆಂದು ಸಿದ್ಧರಾಮನು ಅವನನ್ನು ಕೊಂಡಾಡಿದನು. (೮೯)

ಮತ್ತೂ ಏನೆಂದರೆ:— ಪ್ರಸಾದಗಳು ಐದು ಮತ್ತು ಆರು ಇವೆ. ಪಾದೋದಕಗಳು ಎರಡು ಮತ್ತು ಐದು ಇವೆ. ಅವನ ಮೊದಲನೆಯ ಅಕ್ಷರದಲ್ಲಿ ದೀಕ್ಷಾತ್ರಯಗಳು ಇವೆ. ಅವು ನಾದದಿಂದ ತೂಗಿ ಬಂದರೂ ಸ್ವಸ್ಥಾನಕ್ಕೆ ಬಾರದೆ ಇರುತ್ತವೆ. ಬಸವನು ಆಧಾರ ಸ್ಥಾನದಿಂದ ಆಚೆಗೆ ಇರುವಂಥ ಮೂಲ ಸ್ಥಾನದಲ್ಲಿರುವ ಮುನ್ನೂರು ಕಮಲಗಳಿಗೆ ಆದಿ ಭ್ರಮರ ನಾದವನು ಇದ್ದಾನೆ. ಈ ಪ್ರಕಾರ ಸಿದ್ಧರಾಮನು ಅವನನ್ನು ಹೊಗಳುತ್ತಾನೆ. (೯೦)

ಮತ್ತೂ ಅವನು ಅವನ ವಿಷಯವಾಗಿ ಹೇಳುವದೇನೆಂದರೆ:— ಬಸವಣ್ಣನನ್ನು ನೋಡಿರಿ. ಅವನು ಲೋಕದ ಜನರ ಮತ್ತು ಜಗದ ಕಣ್ಣಿನ ಮದವನ್ನು ದೂರ ಮಾಡುತ್ತಾನೆ. ಅವನು ಪರಮಾತ್ಮನು ಇರುವ ಸ್ಥಳವನ್ನು ತೋರಿಸುತ್ತಾನೆ. ಆದರೆ ಅವನು ವಾಕ್ಕಿಗೂ ಮನಸ್ಸಿಗೂ ಅಗೋಚರನು. ಅವತಾರಗಳು ಕೇವಲ ವೇಷಗಳೆಂದು ತಿಳಿದು ಅವುಗಳನ್ನು ಅವನು ಸ್ವೀಕರಿಸುವದಿಲ್ಲ. ಅವನು ಸತ್ಯ ಶುದ್ಧ ನಿರ್ಮಳನೂ, ವಾಙ್ಮನಕ್ಕಗೋಚರನೂ ಆಗಿದ್ದಾನೆ. ಅವನು ಶುದ್ಧ ಪ್ರಸಾದ, ಸಿದ್ಧ ಪ್ರಸಾದ, ಪ್ರಸಿದ್ಧ ಪ್ರಸಾದ ಇವುಗಳು ಮೂರೂ ಶರೀರಗಳಲ್ಲಿರುವದನ್ನು ತೋರಿಸಿದನು. ಅವನು ಷಟ್‌ಸ್ಥಳಗಳಲ್ಲಿ ಆಂದೋಲನವನ್ನಾಡುತ್ತಾನೆ. ಆರು ವ್ರತಗಳಲ್ಲಿ ನಿಪುಣನಾಗಿದ್ದಾನೆ. ಭಕ್ತನು ಮೊದಲು ಒಂದೇ ಒಂದು ಇದ್ದು ಮುಂದೆ ಮೂರಾದನು. ಈ ಮೂರು ಪುನಃ ಒಂದಾದವು. ಎಲೋ ಬಸವಣ್ಣನೇ ಇದಕ್ಕೂ ಹೆಚ್ಚಿನದು ಯಾವದೂ ಇಲ್ಲ. ಆಗ ನಾನು ಬಸವನ ಮೇಲ್ವಯ್ದು ಹರಿಯುತ್ತೇನೆ. ನಾನು ಎಲ್ಲವನ್ನು ಭರದಿಂದ ಗೆಲ್ಲುತ್ತೇನೆ. ಮೂವತ್ತಾರು ತತ್ವಗಳಾಚೆ ಇರುವ 'ತತ್ವಮಸಿ' ವಾಕ್ಯವನ್ನು ಸಹ ನಾನು ಸಾಧಿಸುವೆನು. ಎಲೋ ಪರಮಾತ್ಮನೇ ನನಗೆ ಬಸವನ ಪ್ರಸಾದವು ಒದಗಿದ್ದರಿಂದ ಈ ಎಲ್ಲವನ್ನು ಸಾಧಿಸುತ್ತೇನೆ. ನಾನು ಹೀಗೆ ಮಾಡುವದು ಅರಿದಲ್ಲ, ಎಂದು ಸಿದ್ಧರಾಮನು ಹೇಳುತ್ತಾನೆ. (೯೧)

ಮತ್ತೂ ಏನೆಂದರೆ:— ಲೌಕಿಕರೆಲ್ಲ ನೀವು ಕೇಳಿರಿ. ಹುಟ್ಟನೇ ಹುಟ್ಟನಾದ ರುದ್ರನ ಅವತಾರವು ಎಂತಹದೆಂಬುದನ್ನು ನೀವು ತಿಳಿಯಿರಿ. ನಾವು ಶಿವನನ್ನು ನೋಡಿ ನಂಬಿದೆವೆಂಬಿರಿ. ಆದರೆ ಶಿವನು ಬಸವಣ್ಣನಾದನು. ಬಸವಣ್ಣನು ಗುರುವಾದ, ಬಸವಣ್ಣನು ಲಿಂಗವಾದ, ಬಸವಣ್ಣನು ಚರವಾದ,

ಕ್ರಮಾಂಕ
ಶಿವಬಸವ ನಗರ

ಬಸವಣ್ಣನು ಪರಮ ಪ್ರಸನ್ನಪರನಾದ, ಬಸವಣ್ಣನು ಮೂಲ ಮಂತ್ರವಾದ, ಬಸವಣ್ಣನು ಎರಡು ಭಕ್ತಿ ಮತ್ತು ಮೂರು ಭಕ್ತಿಯುಳ್ಳವನಾದನು. ಮುಂದೆ ಅವನು ಆರರ ಮೇಲೆ ತೋರಿದನು. ಎಲೋ ಪರಮಾತ್ಮನೇ ನಾನು ಬಸವಣ್ಣನ ಪ್ರಸಾದವನ್ನು ತೆಗೆದುಕೊಂಡು ಭವವನ್ನು ಕಳೆದುಕೊಂಡೆನು. (೯೨)

ಎಲೋ ಬಸವಣ್ಣನೇ, ಜಗತ್ತಿನಲ್ಲಿ ಸೀಮೆ ಎಂಬುದು ಇದ್ದು, ನೀನು ಅದನ್ನು ಮೀರಿದ ಸಂಬಂಧವುಳ್ಳವನಾಗಿರುವಿ. ಈ ತೆರದ ಸಂಬಂಧವನ್ನು ನೀನು ಇಟ್ಟುಕೊಂಡು ನನ್ನನ್ನು ಕಾಪಾಡುವಂಥ ಗುರು ಲಿಂಗ ಜಂಗಮ ಪಾದೋದಕ ಪ್ರಸಾದಕ್ಕೆ ನನ್ನನ್ನು ಅರ್ಹನನ್ನಾಗಿ ಮಾಡಿದೆ. ಪರಮಾತ್ಮನೇ, ನೀನು ಬಸವನಾಗಿ ಬಂದು ನಿಮ್ಮ ಶರಣರ ಸಹವಾಸದಲ್ಲಿರಲು ನನ್ನನು ಯೋಗ್ಯನನ್ನಾಗಿ ಮಾಡಿದೆ, ನನ್ನ ಭವವನ್ನು ತಪ್ಪಿಸಿದೆ, ಎಂದು ಸಿದ್ಧರಾಮನು ಬಸವನನ್ನು ಕೊಂಡಾಡುತ್ತಾನೆ. (೯೩)

ಮತ್ತೂ ಏನೆಂದರೆ:— ಬಸವಣ್ಣನೇ, ನೀನು ಗುರುವಾಗಿ ಬಂದು ನನಗೆ ದೀಕ್ಷೆಯನ್ನು ಮಾಡಿದಿ, ಲಿಂಗವಾಗಿ ಬಂದು ನನ್ನ ಮನಸ್ಸಿನ ಮಾಲಿನ್ಯವನ್ನು ಕಳೆದೆ, ಜಂಗಮವಾಗಿ ಬಂದು ನನ್ನ ಪ್ರಪಂಚುಕತನವನ್ನು ದೂರ ಮಾಡಿ ನನ್ನಗೋಸ್ಕರ ಶ್ರೇಷ್ಠವಾದ ಸೀಮೆಯನ್ನು ಕಲ್ಪಿಸಿದಿ, ನೀನು ಬಸವಣ್ಣನಾಗಿ ಬಂದು ನನಗೆ ಪ್ರಸಾದವನ್ನು ನೀಡಿ ಸಲಹಿದಿ. ಇನ್ನು ಮೇಲೆ ಪರಮಾತ್ಮನೇ ಇದಕ್ಕೂ ಹೆಚ್ಚಿನದು ನನಗೇನೂ ಬೇಡ. (೯೪)

ಅವನು ಪುನಃ ಅಂದುದೇನೆಂದರೆ:— ಪ್ರಸಾದದಲ್ಲಿರುವ ಅರ್ಪಿತ ಅವಧಾನಗಳು ಎಲ್ಲರಿಗೂ ಸುಲಭವೇ ? ಅವು ಅನಾದಿಯಿಂದಲೂ ಸಂಸಿದ್ಧನಾಗಿ ಬಂದ ಬಸವಣ್ಣನಿಗೆ ಮಾತ್ರ ಸಾಧ್ಯವು. ಉಳಿದವರಿಗೆ ಅವು ಸಾಧ್ಯವಲ್ಲ. ತ್ರಿಲಿಂಗಗಳಿಗೆ ಮೂಲ ಮಂತ್ರವೊಂದಿದ್ದು ಅದಕ್ಕೆ ಬಸವಣ್ಣನೇ ರೂಪಾಗಿದ್ದಾನೆ. ಲಿಂಗ ಪ್ರಸಾದಕ್ಕೆ ಬಸವಣ್ಣನೇ ಯೋಗ್ಯನು. ತ್ರಿಲಿಂಗಗಳು ಒಂದಾದ ಮೂರ್ತಿಯು ಬಸವಣ್ಣನಿದ್ದಾನೆ. ಬಸವಣ್ಣನನ್ನು ಯಾರು ಯಾರು ನೆನೆಯುತ್ತಾರೋ ಅವರು ಪರಮಾತ್ಮ ಸ್ವರೂಪರಾಗುತ್ತಾರೆ. ಈ ಪ್ರಕಾರ ಸಿದ್ಧರಾಮನು ಬಸವನನ್ನು ಹೊಗಳುತ್ತಾನೆ. (೯೫)

ಮತ್ತೂ ಏನೆಂದರೆ:— ಪ್ರಥಮ ನಾಮಕ್ಕೆ ಬಸವಾಕ್ಷರವೇ ಬೀಜವಾಗಿದೆ. ಗುರುನಾಮದ ಮೂಲಕ್ಕೆ ಅಕ್ಷರಾಂಶ ಬಸವಣ್ಣನೇ ಮೂಲನಾಗಿದ್ದಾನೆ. ಬಸವಣ್ಣ, ಬಸವಣ್ಣ, ಎಂದು ನಾನು ಬಸವನ ಹೆಸರನ್ನು ಉಚ್ಚರಿಸುತ್ತ ದೆಸೆಗೆಟ್ಟೆನು, ಎಂದು ಸಿದ್ಧರಾಮನು ಅನ್ನುತ್ತಾನೆ. (೯೬)

ಹೀಗೆ ಸಿದ್ಧರಾಮನು ಬಸವನನ್ನು ಕೊಂಡಾಡುತ್ತಿರಲು ಅವನ ಈ ಕೊಂಡಾಟವನ್ನು ಚನ್ನಬಸವ, ಸಿದ್ಧರಾಮಯ್ಯ ಮೊದಲಾದ ಅಸಂಖ್ಯಾತ ಮಹಾ ಗಣಂಗಳು ಸಮರ್ಥಿಸುತ್ತಿರಲು, ತಾನು ಅವರೆಲ್ಲರ ಅನುಭಾವವನ್ನು ತಾಳಿ ಅವರ ಅನುಭಾವದ ಆಚರಣೆಯಿಂದ ತನಗೆ ತ್ರಿವಿಧ ಲಿಂಗವು ಸಾಧ್ಯವಾಯಿತೆಂದು ಸಿದ್ಧರಾಮನು ಮುಂದೆ ಹೇಳುತ್ತಾನೆ. ಅದು ಹೇಗೆಂದರೆ:—

ಅನೇಕರು ಅಡವಿ ಅರಣ್ಯಗಳಿಗೆ ಹೋಗಿ ಅನಂತ ಕಾಲ ತಪಸ್ಸು ಮಾಡಿದರು. ಇದಕ್ಕಿಂತಲೂ ಒಂದು ದಿವಸ ಗುರುಚರಣ ಸೇವೆ ಮಾಡಿದರೆ ಸಾಕು, ಅನಂತ ಕಾಲ ಗುರುಚರಣ ಸೇವೆಯನ್ನು ಮಾಡುವದಕ್ಕಿಂತಲೂ ಒಂದು ದಿನ ಲಿಂಗ ಪೂಜೆ ಮಾಡಿದರೆ ಸಾಕು. ಅನಂತಕಾಲ ಲಿಂಗ ಪೂಜೆ ಮಾಡುವದಕ್ಕಿಂತಲೂ ಒಂದು ದಿನ ಜಂಗಮ ತೃಪ್ತಿ ಮಾಡಿದರೆ ಸಾಕು. ಅನಂತ ಕಾಲ ಜಂಗಮ ತೃಪ್ತಿಯನ್ನು ಮಾಡುವದಕ್ಕಿಂತ ಒಂದು ನಿಮಿಷ ಶರಣರ ಅನುಭಾವದಲ್ಲಿದ್ದರೆ ಸಾಕು. ಹೀಗೆ ವಚನಕಾರರು ಶಿವಶರಣರ ಅನುಭಾವಕ್ಕೆ ಮಹತ್ವ ಕೊಟ್ಟಿದ್ದಾರೆ. (೯೭)

ಟಿಪ್ಪು:. ವಚನ ವಾಙ್ಮಯವನ್ನು ತಿಳಿಯುವದೇ ಅನುಭಾವವೆಂದೆನಿಸಿಕೊಳ್ಳುತ್ತದೆ

ಇದಕ್ಕೆ ಸಿದ್ಧರಾಮನು, ಚನ್ನಬಸವ ಮುಂತಾದ ಅಸಂಖ್ಯಾತ ಮಹಾ ಗಣಂಗಳ ಸಹಾಯದಿಂದ ತನಗೆ ಎಲ್ಲವೂ ಸಾಧ್ಯವಾಯಿತೆಂದು ಹೇಳಿದುದು ಹೇಗೆಂದರೆ:—

ಶುದ್ಧ ಸಿದ್ಧ ಪ್ರಸಿದ್ಧ ಪ್ರಸಾದಗಳ ನೆಲೆಗಳನ್ನು ತಿಳಿಯಬೇಕೆಂದು ನಾನು ಶ್ರಮಪಟ್ಟು ಇಲ್ಲಿದೆ ಬಂದೆನು. ಗಿರಿ ಗಂಹರಗಳೊಳಗೂ ತಿರುಗಿದೆನು. ಆದರೆ ಅವುಗಳ ಜ್ಞಾನವು ನನಗೆ ಆಗಲಾರದೆಂಬ ಸಂಶಯವು ನನ್ನಲ್ಲಿ ಉಂಟಾಯಿತು. ಅದೇಕೆಂದರೆ ನಾನು ನಿಮ್ಮ ಶರಣರ ಸಮೂಹದಲ್ಲಿದ್ದುಕೊಂಡು ಅವರಿಂದ ಅವುಗಳ ಮರ್ಮವನ್ನು ತಿಳಿದುಕೊಳ್ಳಲಿಲ್ಲ. ಎಲೋ ಪರಮಾತ್ಮನೇ, ಸದ್ಭಕ್ತರು ನಿನ್ನ ದೇಹವಾಗಿದ್ದರಿಂದ ಅವರಲ್ಲಿ ನೀನಿರುವೆ. ನೀನು ಗಿರಿ ಗಂಹರಗಳಲ್ಲಿ ಇರುವ ತಾಣವನ್ನು ನಾನು ಗುರುವಿನ ಕರುಣದಿಂದ ಅರಿತೆನು. ಶುದ್ಧವನ್ನು ಗುರುವಿನಲ್ಲಿ, ಸಿದ್ಧವನ್ನು ಲಿಂಗದಲ್ಲಿ, ಪ್ರಸಿದ್ಧವನ್ನು ಜಂಗಮದಲ್ಲಿ ಕಂಡೆನು. ಅವುಗಳನ್ನು ನಾನು ನಂಬಿದೆನು, ಮೆಚ್ಚಿದೆನು, ನನ್ನ ಸರ್ವಸ್ವವನ್ನೆಲ್ಲ ಇವುಗಳಿಗೆ ಅರ್ಪಿಸಿದೆನು. ಆಗ ನಾನು

ನಿನ್ನ ಗಣ ಸಮೂಹದ ವಿಶ್ವಾಸಕ್ಕೆ ಪಾತ್ರನಾದೆನು. ನಿನ್ನ ಭಕ್ತರ ಪ್ರೀತಿಗೆ ಸಲ್ಲಿದೆನು. ಈ ಪ್ರಕಾರ ಸಿದ್ಧರಾಮನು ಶರಣರನ್ನು ಕುರಿತು ನುಡಿಯುತ್ತಾನೆ. (೯೮)

ಎಲೋ ಪರಮಾತ್ಮನೇ, "ಸೋಹಂ" ನೀನೇಯಾಗಿರುವಿ. "ಕೋಹಂ ತತ್ವ ತೂರ್ಯಾರ್ಥ" ನೀನೇ ಆಗಿರುವಿ. "ನಾಹಂ, ನಾಹಂ" ಎಂಬುದು ಸಹ ನೀನೇ ಇದ್ದೀ. ಅಂದ ಬಳಿಕ "ನಾನು" ಎಂಬುದೊಂದು ಭ್ರಾಂತಿಯು ಹೇಗೆ ಉಳಿಯಬೇಕು ? ಎಲೋ ಪರಮಾತ್ಮನೇ ನಾನು ಗುರುವಿನ ಕೈಯ್ಯಿಕ್ಕಿ ಪುನರ್ಜನ್ಮವನ್ನು ಹೊಂದಿದ ಬಳಿಕ "ನಾನು" "ನೀನು" ಎಂಬ ಭೇದ ಭಾವವನ್ನು ಅಳಿದುಬಿಟ್ಟೆನು. (೯೯)

ಈ ತತ್ವಗಳನ್ನು ಸಿದ್ಧರಾಮೇಶ್ವರನು ನಿರೂಪಿಸಲಾಗಿ ಅಲ್ಲಮಪ್ರಭುವು ಪರಮ ಹರುಷವನ್ನು ತಾಳಿ ನುಡಿದುದು ಏನೆಂದರೆ:—

ಪರಿಣಾಮಗಳಲ್ಲಿ ಮನಸ್ಸಿನ ಮೇಲೆ ಆದ ಪರಿಣಾಮವೇ ಚೆಲುವಾದದ್ದು. ಸಂಗದೊಳಗೆ ಶರಣರ ಸಂಗವೇ ಚೆಲುವಾದದ್ದು. ಕಾಯದಲ್ಲಿ ಹುಟ್ಟಿದಂಥವರು ಮುಂದೆ ತಾವು ಎಂದೂ ಸಾಯಬಾರದು ಎಂಬ ಹಂಚಿಕೆ ಮಾಡಿಕೊಳ್ಳುವುದೇ ಚೆಲುವಾದದ್ದು. (೧೦೦)

ಆಗ ಸಿದ್ಧರಾಮನು ಹರುಷ ತಾಳಿ ಪ್ರಭುದೇವರನ್ನು ಸ್ತುತಿಸಿದ್ದು ಹೇಗೆಂದರೆ:—

ನನ್ನ ಅಂಗಯ್ಯಲ್ಲಿರುವ ಇಷ್ಟಲಿಂಗದಲ್ಲಿ ನನ್ನ ದೃಷ್ಟಿಯು ನೆಟ್ಟ ಬಳಿಕ ನನ್ನ ಕಣ್ಣಿನ ತೇಜವು ಕುಂದಲಾರದು. ನನ್ನ ಶರೀರವೆಲ್ಲ ಲಿಂಗದ ಪ್ರಭೆಯಲ್ಲಿ ಲೀನವಾಗುತ್ತದೆ. ಆಗ ಇದು ಸಂಗ, ಇದು ನಿಸ್ಸಂಗ ಎಂಬ ಗೊಂದಲವು ದೂರಾಗುತ್ತದೆ. ಇದು ಹಿಂದು, ಇದು ಮುಂದು, ಎಂಬ ಭಾವವು ಸಹ ಅಳಿಯುತ್ತದೆ. ಆಗ ನಿಜದಲ್ಲಿ, ಅಥವಾ ನಿರಾಳದಲ್ಲಿ ನನ್ನ ಪ್ರಾಣವು ಸಮರಸವಾಗುತ್ತದೆ. ಈ ಸ್ಥಿತಿಯುಂಟಾಗಲು, ನಾನು ದೇವರ ಪಾದಕ್ಕೆ ಬಿದ್ದು 'ನಮೋ' 'ನಮೋ' ಎಂದೆನ್ನುತ್ತ ಬದುಕುತ್ತೇನೆ. (೧೦೧)

ಆಗ ಚನ್ನಬಸವನು ಸಹ ಪ್ರಭುದೇವರ ಸ್ತೋತ್ರವನ್ನು ಮಾಡುತ್ತಾನೆ. ಅದು ಹೇಗೆಂದರೆ:—

ಪ್ರಾಣದ ಗುಣ ನನಗೆ ಇಲ್ಲದ್ದರಿಂದ ನನಗೆ ಪ್ರಾಣವೆಂಬುದಿಲ್ಲ. ಪಾಪವಿಲ್ಲದ್ದರಿಂದ ಕಾಯವೆಂಬುದೂ ಇಲ್ಲ. ನನಗೆ ಅನುಭಾವವೆಂಬುದಿಲ್ಲಾ

ದ್ದರಿಂದ ಮನವೆಂಬ ನೆನಹೂ ಇಲ್ಲ. ನನಗೆ ಪ್ರತಿ ಪದಾರ್ಥವೂ ಇಲ್ಲದ್ದರಿಂದ ಅರುಹೆಂಬ ಕುರುಹೂ ಇಲ್ಲ. ಈ ಸ್ಥಿತಿಯಲ್ಲಿ ನಾನು ಅಲ್ಲಮಪ್ರಭುವಿಗೆ 'ನಮೋ' 'ನಮೋ' ಎಂದೆನ್ನುತ್ತ ಬದುಕುತ್ತೇನೆ. (೧೦೨)

ಮುಂದೆ ಅಲ್ಲಮಪ್ರಭುವು ಚನ್ನಬಸವನ ಸ್ತೋತ್ರವನ್ನು ಮಾಡುತ್ತಾನೆ. ಅದು ಹೇಗೆಂದರೆ:—

ವಾಯು ಮತ್ತು ಆಕಾಶ ಇವುಗಳ ಮೇಲೆ ಎರಡು ಮುಖವುಳ್ಳ ಅನುಭಾವವೆಂಬ ಮದಗಜವಿದ್ದು ಅದನ್ನು ಅಂಕಿತ ಮಾಡಿಕೊಂಡಂಥ ಚನ್ನಬಸವನು ಇಲ್ಲಿ ಇದ್ದಾನೆ. ಅವನ ಹೃದಯದಲ್ಲಿ ಅಷ್ಟ ದಳ ಕಮಲವಿದ್ದು ಅದರಲ್ಲಿ ಸೃಷ್ಟಿಯನ್ನು ಹುಟ್ಟಿಸುವ ಬೀಜವೊಂದಿದ್ದು ಅದನ್ನು ಮೆಟ್ಟಿದಂಥ ಚನ್ನಬಸವನು ಒಬ್ಬ ಪರಮಯೋಗಿಯೇ ಸರಿ. ಬಯಲನ್ನು ಬಣ್ಣಕ್ಕೆ ತಂದು ನೆಳಲನ್ನು ಶೃಂಗಾರ ಮಾಡಿದಂಥ ಗುಹೇಶ್ವರನ ಶರಣನಾದ ಚನ್ನಬಸವನಿಗೆ ನಾನು 'ಶರಣು' 'ಶರಣು' ಎಂದೆನ್ನುತ್ತೇನೆ. (೧೦೩)

ಆ ಮೇಲೆ ಸಿದ್ಧರಾಮನೂ ಕೂಡ ಚನ್ನಬಸವನ ಸ್ತೋತ್ರ ಮಾಡುತ್ತಾನೆ. ಅದು ಹೇಗೆಂದರೆ:—

ಚನ್ನಬಸವನು ನಿರ್ವಾಣವನ್ನು ಹೊಂದಿದವನೆಂತಲೂ ಲಿಂಗಾನುಭಾವಿ ಎಂತಲೂ ಲಿಂಗೈಕ್ಯನೆಂತಲೂ ಕೆಲವು ಒಡಪುಗಳ ಮೂಲಕ ಸಿದ್ಧರಾಮನು ವರ್ಣನೆ ಮಾಡುತ್ತಾನೆ. (೧೦೪)

ಆ ಮೇಲೆ ಸಿದ್ಧರಾಮನು ಬಸವಣ್ಣ, ಚನ್ನಬಸವಣ್ಣ, ಪ್ರಭುದೇವರು ಇವರೆಲ್ಲರನ್ನು ಸಂಯುಕ್ತವಾಗಿ ಸ್ತೋತ್ರ ಮಾಡುತ್ತಾನೆ. ಅದು ಹೇಗೆಂದರೆ:—

ಭಕ್ತಿ ರೂಪು, ಕ್ಷಮಾ ರೂಪು ಬಸವಣ್ಣನು. ಗುರು ರೂಪು, ಪ್ರಸಾದ ರೂಪು ಚನ್ನಬಸವಣ್ಣನು. ಪರಮಾತ್ಮನು ಪ್ರಭುವಾಗಿ ಬಂದು ಬಸವಣ್ಣ ಚನ್ನಬಸವಣ್ಣ ಇವರು ಒಕ್ಕದನ್ನು ಅವನು ಸ್ವೀಕರಿಸಿ ಜಂಗಮವಾದನು, ಎಂದು ಹೇಳುತ್ತಾನೆ. (೧೦೫)

ಮತ್ತೂ ಏನೆಂದರೆ:— ನಿನ್ನ ಗೂಢ ತತ್ವಗಳನ್ನು ಅರಿತುಕೊಂಡು ನಿನ್ನನ್ನು ಕಾಣುವದು ಸುಲಭವೇ? ಅದು ಸುಲಭವಲ್ಲ. ಲೋಕದಲ್ಲಿ ಲಿಂಗ ಭಕ್ತಿ, ಜಂಗಮ ಭಕ್ತಿ, ಗುರು ಭಕ್ತಿ ಇವುಗಳು ಬಹು ಕಠಿಣವಾದವು

ಗಳು. ಅಲ್ಲಮಪ್ರಭುವು ಲಿಂಗಭಕ್ತನು. ಬಸವಣ್ಣನು ಜಂಗಮ ಭಕ್ತನು. ಚನ್ನಬಸವಣ್ಣನು ಗುರು ಮೊದಲಾದವರ ಪ್ರಸಾದವನ್ನು ಅನುಭವಿಸಿ ಅನುಭಾವಿಯಾದವನು. ಇವರ ಪಾದಕ್ಕೆ ನಾನು ನಮಸ್ಕರಿಸುತ್ತೇನೆ, ಎಂದು ಸಿದ್ಧರಾಮನು ನುಡಿಯುತ್ತಾನೆ. (೧೦೬)

ಸಿದ್ಧರಾಮನು ಹೀಗೆ ನುಡಿದು ಗುರು ಸ್ತೋತ್ರವನ್ನು ಮಾಡಹತ್ತಿದನು. ಅದು ಹೇಗೆಂದರೆ:—

## ದೀಕ್ಷಾತ್ರಯಗಳು

ಗುರುವಿನ ಕೃಪೆಯಿಂದ ಬಾಹ್ಯ ತನುವನ್ನು ಮರೆತೆನು, ಮಲತ್ರಯಗಳನ್ನು ಕಳೆದೆನು. ಮೂರು ಬಗೆಯ ದೀಕ್ಷೆಗಳನ್ನು ಹೊಂದಿ ಅನುಭಾವಿಯಾದೆನು, ಶುದ್ಧ, ಸಿದ್ಧ, ಪ್ರಸಿದ್ಧ ಪ್ರಸಾದಗಳನ್ನರಿತೆನು. ಹೀಗಾದ ಬಳಿಕ ನನಗಿಂತ ಅಧಿಕರಾದವರು ಯಾರೂ ಇಲ್ಲ. ಯಾಕೆಂದರೆ ಗುರುವು ನನ್ನ ತನುವಿಗೆ ಲಿಂಗ ದೀಕ್ಷೆಯನ್ನೂ, ನನ್ನ ಜ್ಞಾನಕ್ಕೆ ಸ್ವಾನುಭಾವ ದೀಕ್ಷೆಯನ್ನೂ, ತನು ಮನ ಧನದಲ್ಲಿ ನಾನು ವಂಚಿಸಬಾರದೆಂದು ಜಂಗಮ ದೀಕ್ಷೆಯನ್ನೂ ಮಾಡಿ, ನನ್ನ ಸರ್ವಾಂಗವನ್ನೆಲ್ಲ ಪರಮಾತ್ಮನು ವಾಸಿಸಲಿಕ್ಕೆ ಯೋಗ್ಯವಾದ ಶುದ್ಧ ಮಂಟಪವನ್ನಾಗಿ ಮಾಡಿದನು. ಇದು ಕಾರಣ ನಾನು ಲೋಕದ ವಿಸ್ತಾರವನ್ನರಿಯದಿದ್ದರೂ ಲೋಕದ ಜನನ ಮರಣ ಪ್ರಳಯಕ್ಕೆ ಹೊರಗಾದೆನು. ಆದ್ದರಿಂದ ಲೋಕವು ನನ್ನೊಳಗಾಯಿತು. ಎಲೋ ಗುರುವೇ, ಸದ್ಗುರುವೇ, ನನ್ನ ಭವಪಾಶವನ್ನು ದೂರ ಮಾಡಿದ ಗುರುವೇ, ಅಯ್ಯಯನೇ, ಸರ್ವಾಂಗಕ್ಕೆಲ್ಲ ಭುಕ್ತಿ ಮುಕ್ತಿ ಫಲಗಳನ್ನು ಕೊಡುವಂಥ ಗುರುವೇ, ಬಸವಣ್ಣನೇ, ಚನ್ನಬಸವಣ್ಣ ಪ್ರಭು ಮೊದಲಾದ ಶಿವಶರಣರನ್ನು ನನಗೆ ತೋರಿದಂಥವನೇ, ಎಂದು ಸಿದ್ಧರಾಮನು ಪರಮಾತ್ಮನನ್ನು ಆಹ್ವಾನ ಮಾಡುತ್ತ ಸ್ತೋತ್ರವನ್ನು ಮಾಡಿದನು. (೧೦೭)

ಹೀಗೆ ಎಲ್ಲ ಪುರಾತನರಲ್ಲಿ ಅಲ್ಲಮ ಮಹಾಪ್ರಭುವು ಮಹಾನುಭಾವ ಸದ್‌ಗೋಷ್ಠಿಯನ್ನು ಮಾಡಿದ್ದನ್ನು ತಿಳಿಸುವ ಶೂನ್ಯ ಸಂಪಾದನೆಯಲ್ಲಿ ಸಿದ್ಧರಾಮಯ್ಯದೇವರ ಗುರುಕಾರುಣ್ಯದ ೧೧ನೇ ಉಪದೇಶವು ಇಲ್ಲಿಗೆ ಸಮಾಪ್ತವಾಯಿತು.

---

1577